ವಿಶ್ವವಾಣಿ
ವಿಶ್ವಾಸವೇ ವಿಶ್ವ

ರೇಣುಕಾಸ್ವಾಮಿ ಅವರ ಆತ್ಮಕ್ಕೆ ಶಾಂತಿ ಸಿಗಲಿ, ಈ ಹತ್ಯೆಗೆ ಕಾನೂನಾತ್ಮಕವಾಗಿ ನ್ಯಾಯ ಸಿಗುತ್ತದೆಂಬ ಭರವಸೆ ನನಗಿದೆ. ನನ್ನನ್ನು ಚಿತ್ರರಂಗಕ್ಕೆ ಪರಿಚಯಿಸಿದ ನಟ ದರ್ಶನ್ ಅವರು ಗುರು ಸಮಾನರು, ನನ್ನ ಜೀವನದ ತಪ್ಪುಗಳನ್ನು ತಿದ್ದಿ ಮಾರ್ಗದರ್ಶನ ನೀಡಿದ ವ್ಯಕ್ತಿ. ಇಂತಹ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನುವುದು ನಂಬಲು ಸ್ವಲ್ಪ ಕಷ್ಟವಾಗುತ್ತಿದೆ. ಏನಿದ್ದರೂ ಪೊಲೀಸ್ ತನಿಖೆಯಿಂದ ಸತ್ಯ ನಮ್ಮ ಮುಂದೆ ಬರಲಿದೆ. **– ರಚಿತಾರಾಮ್**, ನಟಿ



ಪುಟ ತೆರೆದಂತೆ...

ಶಿಶ್ನ ಮರುಜೋಡಣೆಗೆ ಜಿಗಣೆಯ ಜೊಲ್ಲು!
ಹಿಂದಿರುಗಿ ನೋಡಿದಾಗ
ಡಾ.ನಾ.ಸೋಮೇಶ್ವರ
ಸಂ.ಪುಟ | 6

ಯೋಗದ ವ್ಯಾಸ, ಜಗದಗಲ ವೃದ್ಧಿಸಿದ ಎಸ್-ವ್ಯಾಸ!
ಯೋಗಾ ಯೋಗ
ರವೀ ಸಜಂಗದ್ದೆ
ಸಂ.ಗಮ | 7

ಮಾತಂದ್ರೆ ಮಾತು

ಕಾಂಗ್ರೆಸ್ ಪಕ್ಷದ ಕಚೇರಿಗೆ ಸಾಹಿತಿಗಳನ್ನು ಕರೆದಿದ್ದು ನಾನೇ, ಇದರಲ್ಲಿ ತಪ್ಪೇನಿದೆ ? ಅಕಾಡೆಮಿಯ ನೇಮಕಗಳೂ ಸಹ ನಿಗಮ ಮತ್ತು ಮಂಡಳಿಗಳ ನೇಮಕದಂತೆ ಪಕ್ಷದ ಹಿತಾಸಕ್ತಿಯ ನೇಮಕವೇ ಆಗಿದೆ. ಸಾಹಿತಿಗಳೂ ಕೂಡ ಪಕ್ಷ ರಾಜಕಾರಣಿಗಳೇ.ಬಾಯಿ ಬಿಟ್ಟು ಹೇಳಿಕೊಳ್ಳುವುದಿಲ್ಲ ಅಷ್ಟೇ. ಅಕಾಡೆಮಿಗಳ ಸ್ವಾಯತ್ತೆ ಅಂಥಾ ಏನೂ ಇಲ್ಲ, ಎಲ್ಲಾ ಸರ್ಕಾರದ ನೇಮಕಾತಿಗಳೇ. ಹೀಗಾಗಿ ಎಲ್ಲಿ ಬೇಕಾದರೂ ಸಭೆ ಕರೆಯಬಹುದು.

ಡಿ.ಕೆ.ಶಿವಕುಮಾರ್
ಉಪ ಮುಖ್ಯಮಂತ್ರಿ

ದಾರಿದೀಪೋಕ್ತಿ

ಜೀವನದಲ್ಲಿ ಏನೇ ಆಗಲಿ, ಯಾವ ಸಂದರ್ಭದಲ್ಲೂ ನಿಮ್ಮ ಮನಸ್ಸಿನ ಇಚ್ಛೆಗೆ ವಿರುದ್ಧವಾಗಿ ನಡೆದುಕೊಳ್ಳಬಾರದು. ಅಂಥ ಪ್ರಸಂಗ ಬಂದೇ ಬರುತ್ತದೆ. ಆಗ ಒತ್ತಡಕ್ಕೆ ಒಳಗಾಗಬಾರದು. ನಿಮ್ಮ ಮನಸ್ಸು ಏನನ್ನು ಹೇಳುತ್ತದೋ ಹಾಗೇ ಮಾಡಿ.

ವಕ್ರತುಂಡೋಕ್ತಿ

ಸ್ವಚ್ಛವಾದ ಬಟ್ಟೆಯನ್ನೇ ಧರಿಸಬೇಕು. ಆದರೆ ಈ ಮಾತು ಜೀನ್ಸ್ ಪ್ಯಾಂಟಿಗೆ ಅನ್ವಯಿಸುವುದಿಲ್ಲ.

ಹೊಂಡಕ್ಕೆ ಬಿದ್ದು ಮೂವರ ಸಾವು

ವಿಜಯಪುರ: ಜಮೀನಿನಲ್ಲಿದ್ದ ನೀರು ತುಂಬಿದ್ದ ಆಳವಾದ ಗುಂಡಿಗೆ ಬಿದ್ದು ಮೂವರು ಮೃತಪಟ್ಟ ಘಟನೆ ವಿಜಯಪುರ ಜಿಲ್ಲೆ ಮುದ್ದೇಬಿಹಾಳ ತಾಲೂಕಿನ ಹಡಲಗೇರಿಯಲ್ಲಿ ಸಂಭವಿಸಿದೆ. ನೀಲಮ್ಮ ಖಿಲಾರಹಟ್ಟಿ (16), ಮುತ್ತಪ್ಪ ಖಿಲಾರಹಟ್ಟಿ (24) ಹಾಗೂ ಶಿವು ಯಾಳವಾರ (25) ಮೃತರು. ಹಡಲಗೇರಿಯ ಚಿನ್ನಪ್ಪ ತಳವಾರ ಎಂಬುವರ ಜಮೀನಿನಲ್ಲಿ ಜಾನು ವಾರು ಮೇಯಿಸಲು ಹೋಗಿದ್ದ ಬಾಲಕಿ ನೀಲಮ್ಮ ಎಮ್ಮೆಗೆ ನೀರು ಕುಡಿಸಲು ನೀರ ಹೊಂಡದ ಬಳಿಗೆ ಹೋದಾಗ ಕಾಲು ಜಾರಿ ಬಿದ್ದಿದ್ದಳು. ಈಕೆಯ ರಕ್ಷಣೆಗೆ ಧಾವಿಸಿದ ಸಂಬಂಧಿಕರಾದ ಮುತ್ತಪ್ಪ ಖಿಲಾರಹಟ್ಟಿ ಮತ್ತು ಶಿವು ಯಳವಾರ ಸಹ ನೀರಿನ ಆಳದಲ್ಲಿ ಸಿಲುಕಿ ಮೃತಪಟ್ಟರು.

ನೀರಿನ ದರ ಏರಿಕೆ ಖಚಿತ?

ಬೆಂಗಳೂರು: ಕುಡಿಯುವ ನೀರಿನ ಶುಲ್ಕವನ್ನು ಹೆಚ್ಚಿಸುವ ಜಲಮಂಡಳಿ ಪ್ರಸ್ತಾಪಕ್ಕೆ ಸರಕಾರ ಅನುಮೋದನೆ ನೀಡುವ ಸಾಧ್ಯತೆ ಇದೆ.

ಮಂಗಳವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಡಿಸಿಎಂ ಶಿವಕುಮಾರ್, ಬೆಂಗಳೂರಿನಲ್ಲಿ ಕುಡಿಯುವ ನೀರಿನ ಶುಲ್ಕವನ್ನು 14 ವರ್ಷದಿಂದ ಏರಿಕೆ ಮಾಡಿಲ್ಲ. ವಿದ್ಯುತ್ ಬಿಲ್ ಕಟ್ಟಲು ಆಗುತ್ತಿಲ್ಲ, ಸಿಬ್ಬಂದಿಗೆ ಸಂಬಳ ಕೊಡುವುದಕ್ಕೂ ಕಷ್ಟವಾಗಿದೆ. ದರ ಹೆಚ್ಚಳ ಅನಿವಾರ್ಯ ಎಂದು ಹೇಳಿದರು.

ಫನ್‌ತರಂಗ
- ರಘುಪತಿ ಶೃಂಗೇರಿ -

ಮಂಗಳ ಗ್ರಹದ ಗುಂಡಿಗಳಿಗೆ ಭಾರತೀಯರ ಹೆಸರು ನಾಮಕರಣ
ಸುದ್ದಿ



ಪಟ್ಟಣಗೆರೆ ಶೆಡ್‌ನಲ್ಲಿ ಹಲವರ ರಕ್ತದ ಕಲೆ ಪತ್ತೆ, ಸೆಟ್ಲ್‌ಮೆಂಟ್ ಅಡ್ಡಾದ ಬಗ್ಗೆ ತನಿಖೆ ಸಂಭವ

ದಾಸನಿಗೆ ಮತ್ತಷ್ಟು ಸಂಕಷ್ಟ: ಆನೇಕಲ್ ಫಾರ್ಮ್ ಮ್ಯಾನೇಜರ್ ಸಾವಿನ ಬಗ್ಗೆ ಅನುಮಾನ

ತನಿಖೆಗೆ ಆಗ್ರಹ, ರಾಜ ಕಾಲುವೆ ಒತ್ತುವರಿ: ಆರ್‌ಆರ್ ನಗರದ ಮನೆಗೆ ಮತ್ತೆ ಸಂಚಕಾರ

ಬ್ಲಡ್ ಶೆಡ್

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದ ಜಾಡು ಹಿಡಿದು ಹೊರಟ ಪೊಲೀಸರಿಗೆ ಇದೀಗ, ನಿತ್ಯ ಒಂದೊಂದು ವಿಷಯ ಬಯಲಾಗುತ್ತಿದೆ. ಪಟ್ಟಣಗೆರೆ ಶೆಡ್‌ನಲ್ಲಿ ರೇಣುಕಾಸ್ವಾಮಿ ಮೇಲೆ ಪೈಶಾಚಿಕ ರೀತಿಯಲ್ಲಿ ಹಲ್ಲೆ ನಡೆಸಿರುವುದಷ್ಟೇ ಅಲ್ಲದೇ, ಇನ್ನು ಹಲವರ ಮೇಲೆ ಈ ಹಿಂದೆ ನಡೆಸಿರುವುದಕ್ಕೆ 'ರಕ್ತ'ದ ಕಲೆಗಳು ಸಾಕ್ಷಿಯಾಗಿವೆ.

ಸಾಲ ಪಡೆದು ಕಾರು ಖರೀದಿಸಿ, ಇಎಂಐ ಕಟ್ಟದ ಕಾರುಗಳನ್ನು ಈ ಶೆಡ್‌ನಲ್ಲಿ ನಿಲ್ಲಿಸಲಾಗುತ್ತಿತ್ತು ಎಂದು ಹೇಳಲಾಗಿತ್ತು. ಆದರೀಗ ದುಡ್ಡ ಕಟ್ಟದ ಅಮಾಯಕರನ್ನು ಕರೆ ತಂದು ಮಾರಣಾಂತಿಕ ಹಲ್ಲೆ ನಡೆಸಿ ಅವರ ಕಾರುಗಳನ್ನು ಸ್ವಾಧೀನಕ್ಕೆ ಪಡೆದುಕೊಳ್ಳುತ್ತಿದ್ದ ವರದಿಗಳು ಬಂದಿದ್ದು, ಪೊಲೀಸರು ಈ ನಿಟ್ಟಿನಲ್ಲಿಯೂ ತನಿಖೆ ನಡೆಸುತ್ತಿದ್ದಾರೆ.

ವಿನಯ್, ಧನರಾಜ್, ಪವನ್ ಸೇರಿದಂತೆ ದರ್ಶನ್ ಗ್ಯಾಂಗ್‌ನ ಹಲವರು ಬಡ್ಡಿಗೆ ದಂಧೆಯಲ್ಲಿ ತೊಡಗಿದ್ದರು. ಹಣ ಪಡೆದವರು ಮರು ಪಾವತಿ ಮಾಡದಿದ್ದರೆ, ಪಟ್ಟಣಗೆರೆ ಶೆಡ್‌ಗೆ ಕರೆತಂದು ಹಿಂಸಿಸುತ್ತಿದ್ದರು ಎನ್ನಲಾಗಿದೆ. ಇದೀಗ ಪೊಲೀಸರು ಹಾಗೂ ಎಫ್‌ಎಸ್‌ಎಲ್ ತಂಡ ಪಟ್ಟಣಗೆರೆ ಶೆಡ್‌ನಲ್ಲಿ ರೇಣುಕಾಸ್ವಾಮಿ ರಕ್ತದ ಕಲೆ ಹೊರತಾಗಿ, ಸಿಗುತ್ತಿರುವ ರಕ್ತದ ಮಾದರಿಯನ್ನು ಕಲೆಹಾಕುತ್ತಿದ್ದಾರೆ. ಈ ರಕ್ತದ ಕಲೆ ಯಾರದ್ದು, ಮಾರಣಾಂತಿಕ ಹಲ್ಲೆಗೆ ಒಳಗಾದವರು ಈಗೆಲ್ಲಿದ್ದಾರೆ? ದುರುಳರ ಈ ಪೈಶಾಚಿಕ ಹಲ್ಲೆಯಿಂದ ಯಾರಾದರೂ ಮೃತಪಟ್ಟಿದ್ದಾರೆಯೇ ಎನ್ನುವ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದಾರೆ ಎನ್ನಲಾಗಿದೆ.

ದರ್ಶನ್ ವಿರೋಧಿಗಳ ಮೇಲೂ ಹಲ್ಲೆ?

ಕೇವಲ ಸಾಲ ಮರುಪಾವತಿ ಮಾಡದವರಷ್ಟೇ ಅಲ್ಲದೇ, ಇದೇ ಶೆಡ್‌ನಲ್ಲಿ ದರ್ಶನ್ ವಿರೋಧಿಗಳನ್ನೂ ಕರೆಸಿ ಹಲ್ಲೆ ನಡೆಸಿದ ಸಾಕ್ಷ್ಯಗಳು ಪೊಲೀಸರಿಗೆ ಸಿಕ್ಕಿವೆ. ಈ ಬಗ್ಗೆ ವಿಚಾರಣೆ ವೇಳೆ ಬಂಧಿತ ಆರೋಪಿಗಳೇ ಬಾಯಿಬಿಟ್ಟಿದ್ದಾರೆ ಎನ್ನಲಾಗಿದೆ. ಆದರೆ ಹಲ್ಲೆಗೊಳಗಾದ ಬಗ್ಗೆ ಇದುವರೆಗೆ ಯಾರೂ ದೂರು ನೀಡಲು ಮುಂದೆ ಬಂದಿಲ್ಲ.

→ 4

- ಈವರೆಗೆ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ 27 ಮಂದಿಯ ವಿಚಾರಣೆ
- ಪಟ್ಟಣಗೆರೆ ಶೆಡ್‌ಗೆ ಕೆಲ ನಿರ್ಮಾಪಕರನ್ನು ಕರೆಸಿ ಕೊಂಡು ಥಳಿಸಿದ ಆರೋಪ
- ರಾಜಕಾಲುವೆ ಮೇಲೆ ದರ್ಶನ್ ಅನಧಿಕೃತ ಮನೆ; ತೆರವಿಗೆ ಬಿಬಿಎಂಪಿ ಸಿದ್ಧತೆ
- ಪಟ್ಟಣಗೆರೆ ಶೆಡ್‌ನಲ್ಲಿದ್ದ ಸಿಸಿ ಟಿವಿ ಫೂಟೇಜ್ ಡಿಲೀಟ್ ಮಾಡಿದ ಆರೋಪಿಗಳು

ಮೈಸೂರಿನಲ್ಲಿ ಮಹಜರು

ಕೊಲೆ ಕೃತ್ಯ ನಡೆದ ಮರುದಿನ ದರ್ಶನ್, ಮೈಸೂರಿನಲ್ಲಿ ಉಳಿದುಕೊಂಡ ರ‍್ಯಾಡಿಸನ್ ಬ್ಲೂ ಹೋಟೇಲಿನಲ್ಲಿ ಬುಧವಾರ ಮಹಜರು ನಡೆಸಲಾಯಿತು. ಭದ್ರತೆ ದೃಷ್ಟಿಯಿಂದ ಮೈಸೂರಿಗೆ ದರ್ಶನ್ ಅವರನ್ನು ಕರೆದೊಯ್ದಿರಲಿಲ್ಲ. ಇಬ್ಬರು ಸಹಚರರ ಸಮ್ಮುಖದಲ್ಲಿ ಮಹಜರು ನಡೆಸಲಾಯಿತು.

ದರ್ಶನ್ ಮ್ಯಾನೇಜರ್ ಆತ್ಮಹತ್ಯೆ: ಮರುತನಿಖೆ ಸಂಭವ

ದರ್ಶನ್ ಸಿನಿಮಾ ವ್ಯವಸ್ಥಾಪಕರಾಗಿದ್ದ ಮಲ್ಲಿಕಾರ್ಜುನ್ ನಾಪತ್ತೆಯ ಬೆನ್ನಲ್ಲೇ ಇದೀಗ ಮತ್ತೊರ್ವ ಮ್ಯಾನೇಜರ್ ಶ್ರೀಧರ್, ಕಳೆದ ಏಪ್ರಿಲ್‌ನಲ್ಲಿ ದರ್ಶನ್‌ಗೆ ಸೇರಿದ್ದ ಆನೇಕಲ್‌ನ ಫಾರ್ಮ್‌ಹೌಸ್‌ನಲ್ಲಿ ರಕ್ತಕಾರಿ ಮೃತಪಟ್ಟಿರುವುದು ತಡವಾಗಿ ಬೆಳಕಿಗೆ ಬಂದಿದೆ. ತಾನು ಖಿನ್ನತೆಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆಂದು ಈತ ಬರೆದಿರುವ ಡೆತ್‌ನೋಟ್ ಬಗ್ಗೆಯೇ ಹಲವು ಅನುಮಾನಗಳು ವ್ಯಕ್ತವಾಗಿದೆ. 'ನನ್ನ ಸಾವಿನ ಬಗ್ಗೆ ತನಿಖೆ ಮಾಡಬೇಡಿ' ಎಂದು ಮೂರ‍್ನಾಲ್ಕು ಬಾರಿ ಉಲ್ಲೇಖಿಸಿರುವುದು ಸಂಶಯಕ್ಕೆ ಕಾರಣವಾಗಿದ್ದು ಪ್ರಕರಣದ ಮರುತನಿಖೆ ನಡೆಯುವ ಸಾಧ್ಯತೆಯಿದೆ ಎನ್ನಲಾಗಿದೆ.

ಸ್ವಲ್ಪ ನಿರ್ಲಕ್ಷ್ಯ ವಹಿಸಿದ್ದರೂ ಪ್ರಕರಣ ಬೇರೆ ದಾರಿ ಹಿಡಿಯುತ್ತಿತ್ತು. ಪೊಲೀಸರ ಸಮಯಪ್ರಜ್ಞೆಯಿಂದ ಪ್ರಕರಣ ಹೊರಬಂದಿದೆ. ವ್ಯಕ್ತಿಯ ಕೊಲೆ ಮಾಡಿರುವುದು ಹೀನ, ಅತ್ಯಂತ ಹೇಯಕೃತ್ಯ. ರೇಣುಕಾಸ್ವಾಮಿ ಕುಟುಂಬಕ್ಕೆ ನಾವು ನ್ಯಾಯ ಒದಗಿಸಿಕೊಡಬೇಕು. ಆದ್ದರಿಂದ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವ ಕೆಲಸವಾಗುತ್ತದೆ.

-ಬಿ.ದಯಾನಂದ್, ಬೆಂ.ನಗರ ಪೊಲೀಸ್ ಆಯುಕ್ತ

ದರ್ಶನ್ ನಟರಾಗಿರುವುದರಿಂದ ಬಹಳಷ್ಟು ಮಂದಿ ಅವರ ಜತೆ ಸಂಪರ್ಕದಲ್ಲಿದ್ದಾರೆ. ತನಿಖೆಯ ಹಂತದಲ್ಲಿ ದೊರೆಯುವ ಸಾಕ್ಷ್ಯಗಳನ್ನು ಮುಂದಿಟ್ಟುಕೊಂಡು ವಿಚಾರಣೆ ಮುಂದುವರಿಸುತ್ತಾರೆ. ಅಗತ್ಯವಾದರೆ ಸಂಪರ್ಕದಲ್ಲಿದ್ದವರನ್ನು ವಿಚಾರಣೆಗೊಳಪಡಿಸಲಾಗುವುದು.

- ಡಾ.ಜಿ. ಪರಮೇಶ್ವರ್, ಗೃಹ ಸಚಿವ

ಖರ್ಚಾಗದೆ ಉಳಿದ ವಾಲ್ಮೀಕಿ ಅಭಿವೃದ್ಧಿ ನಿಗಮದ 263 ಕೋಟಿ ರು. ಖಜಾನೆಗೆ ಜಮೆ, ಅಕ್ರಮದ ಮಾಹಿತಿ ಪಡೆದ ಸಿಎಂ

ಬಳಕೆಯಾಗದ ಪರಿಶಿಷ್ಟರ ಕಲ್ಯಾಣ ನಿಧಿ: ಸಿಎಂ ಗರಂ

ಬೆಂಗಳೂರು: ಪರಿಶಿಷ್ಟ ಪಂಗಡ ಸಮುದಾಯದ ಅಭಿವೃದ್ಧಿಗೆಂದು ಮೀಸಲಿಟ್ಟಿದ್ದ 263 ಕೋಟಿಯಲ್ಲಿ ಒಂದು ರುಪಾಯಿಯನ್ನೂ ಬಳಕೆ ಮಾಡದಿರುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರ ಅಕ್ಷೇಪ ವ್ಯಕ್ತಪಡಿಸಿದ್ದು, ಕೂಡಲೇ ಈ ಹಣವನ್ನು ಖಜಾನೆಗೆ ಜಮೆ ಮಾಡುವಂತೆ ಸೂಚನೆ ನೀಡಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ, 2023-24ನೇ ಸಾಲಿನಲ್ಲಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಲಭ್ಯವಿದ್ದ 263 ಕೋಟಿ ಬಳಕೆಯಾಗದೇ ಉಳಿದಿದ್ದರಿಂದ ಆರ್ಥಿಕ ಇಲಾಖೆಯ ಸೂಚನೆಯಂತೆ, ಖಜಾನೆಗೆ ಜಮ ಮಾಡಲಾಗಿದೆ ಎಂದು ಅಧಿಕಾರಿಗಳು ಹೇಳಿದರು. ಇದಕ್ಕೆ ಸಿಟ್ಟಾದ ಸಿದ್ದರಾಮಯ್ಯ, ಅರ್ಹ ಫಲಾನುಭವಿಗಳಿಗೆ ಸಹಾಯಧನ ನೀಡಲು ಮೀಸಲಿಟ್ಟಿದ್ದ ಹಣವನ್ನು ಏಕೆ ಬಳಸಿಲ್ಲ ಎಂದು ಪ್ರಶ್ನಿಸಿದರು.

ಯಾವುದೇ ಯೋಜನೆಯಡಿ ಫಲಾನುಭವಿಗಳ ಆಯ್ಕೆಯಾಗಿಲ್ಲ. ಪ್ರತಿವರ್ಷ ಮಾಡಬೇಕಿರುವ ಆಯ್ಕೆ ಪ್ರಕ್ರಿಯೆನ್ನು ಏಕೆ ಕೈಗೊಂಡಿಲ್ಲ ಎಂದು ಪ್ರಶ್ನಿಸಿದಾಗ ''ಶಾಸಕರು ಫಲಾನುಭವಿಗಳ ಪಟ್ಟಿ ನೀಡಿಲ್ಲ' ಎಂದು ಅಧಿಕಾರಿಗಳು ಉತ್ತರಿಸಿದ್ದಾರೆ. ಪಟ್ಟಿ ನೀಡದಿರಲು ಕಾರಣವೇನೆಂದು ಮರುಪ್ರಶ್ನಿಸಿದಾಗ, 'ಆಯ್ಕೆ ಮಾಡಬೇಕಾದ ಫಲಾನುಭವಿಗಳ ಸಂಖ್ಯೆ ಅತ್ಯಂತ ಕಡಿಮೆ ಇರುವುದರಿಂದ ಸಂದಿಗ್ಧ ಪರಿಸ್ಥಿತಿ ಎದುರಾಗುವ ಹಿನ್ನೆಲೆಯಲ್ಲಿ ಶಾಸಕರು ಆಯ್ಕೆ ಮಾಡಲು ಆಸಕ್ತಿ ತೋರಿಸುತ್ತಿಲ್ಲ' ಎಂದು ಅಧಿಕಾರಿಗಳು ಹೇಳಿದ್ದಾರೆ. ಆದ್ದರಿಂದ ಮುಂದಿನ ದಿನದಲ್ಲಿ ಫಲಾನುಭವಿಗಳ ಸಂಖ್ಯೆ ಹೆಚ್ಚಿಸುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸಿಎಂ ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದಲಿತರಿಗೆ ಸೌಲಭ್ಯ ನೀಡದಿದ್ದರೆ ಸೇವೆಯಲ್ಲಿರೋಕೆ ಅನ್‌ಫಿಟ್: ''ನೀವು ಬಡವರು, ದಲಿತರ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳಲು ಆಗದಿದ್ದರೆ ನೀವು ಸೇವೆಯಲ್ಲಿರಲು ಅನ್‌ಫಿಟ್. ವಸತಿಶಾಲೆಗಳು ಬಡ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಬೇಕು. ಕೇವಲ ಬುದ್ಧಿವಂತರನ್ನು ಇನ್ನಷ್ಟು ಬುದ್ಧಿವಂತ ರಾಗಿಸುವುದು ಮಾತ್ರವಲ್ಲ. ಕಲಿಕೆಯಲ್ಲಿ ಹಿಂದುಳಿದವರನ್ನೂ ಬುದ್ಧಿವಂತರನ್ನಾಗಿಸಬೇಕು'' ಎಂದು ಸಿಎಂ ಖಡಕ್ ಸೂಚನೆ ನೀಡಿದರು.

→ 4

ವಾರಾಣಸಿಗೆ ಮೋದಿ ಭೇಟಿ ಕಿಸಾನ್ ಸಮ್ಮಾನ್ ನಿಧಿ ಬಿಡುಗಡೆ

ದೆಹಲಿ: ತಾವು ಪ್ರತಿನಿಧಿಸುವ ಲೋಕಸಭಾ ಕ್ಷೇತ್ರ ವಾರಾಣಸಿಗೆ 3ನೇ ಬಾರಿ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ಮಂಗಳವಾರ ಭೇಟಿ ನೀಡಿದ ನರೇಂದ್ರ ಮೋದಿ, ಕಾಶಿ ವಿಶ್ವನಾಥನ ದರ್ಶನ ಪಡೆದರು. ಬಳಿಕ ರೈತ ಸಮ್ಮಾನ-ಸಂವಾದ ಕಾರ್ಯಕ್ರಮದಲ್ಲಿ ಭಾಗಿಯಾದ ಪ್ರಧಾನಿ, ಕಿಸಾನ್ ಸಮ್ಮಾನ್ ನಿಧಿಯ ಹಣದ 17ನೇ ಕಂತನ್ನು ಬಿಡುಗಡೆ ಮಾಡಿದರು. ಇಲ್ಲಿಯ ವರೆಗೆ ಒಟ್ಟು 3.24 ಲಕ್ಷ ಕೋಟಿ ರು.ಗಳನ್ನು ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಬಿಡುಗಡೆ ಮಾಡಲಾಗಿದೆ. ಈ ಯೋಜನೆಯಡಿ 5 ಎಕರೆಗೂ ಕಡಿಮೆ ಜಮೀನು ಹೊಂದಿರುವ ಸಣ್ಣ ರೈತರಿಗೆ ವಾರ್ಷಿಕ 6 ಸಾವಿರ ರು. ಸಂದಾಯವಾಗುತ್ತಿದೆ.

ಮತ್ತೆ ಮನ್ ಕಿ ಬಾತ್

ಜೂ.30ರಂದು ಮೋದಿ ಅವರ 3ನೇ ಅವಧಿಯ ಮೊದಲ ಮನ್ ಕೀ ಬಾತ್ ಪ್ರಸಾರವಾಗಲಿದೆ. ಲೋಕ ಚುನಾವಣೆಗೂ ಮುನ್ನ ಫೆ.25ಕ್ಕೆ 110ನೇ ಮನ್ ಕೀ ಬಾತ್ ಪ್ರಸಾರ ವಾಗಿತ್ತು. 'ಮನ್ ಕೀ ಬಾತ್' ಸಂದೇಶ ರೂಪಿಸಲು ಉತ್ತಮ ವಿಚಾರ ಗಳನ್ನು ಕಳುಹಿಸಿಕೊಡಿ ಎಂದು ಮೋದಿ ದೇಶದ ಜನರಲ್ಲಿ ಮನವಿ ಮಾಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಯವರು ಕಾಶಿಯ ದಶಾಶ್ವಮೇಧ ಘಾಟ್‌ನಲ್ಲಿ ಮಂಗಳವಾರ ಸಂಜೆ ಗಂಗಾಮಾತೆಗೆ ಪೂಜೆ ಸಲ್ಲಿಸಿ ಆರತಿ ಬೆಳಗಿದರು.

ಉಗ್ರರ ನಂಟು: ಶಿರಸಿಯ ವ್ಯಕ್ತಿ ಸೆರೆ

ಶಿರಸಿ: ಆನ್‌ಲೈನ್ ಮೂಲಕ ಭಯೋತ್ಪಾದಕ ಸಂಘಟನೆ ಜೊತೆ ಸಂಪರ್ಕ ಹಾಗೂ ಪಾಸ್ ಪೋರ್ಟ್‌ನಲ್ಲಿ ನಕಲಿ ದಾಖಲೆ ನೀಡಿರುವ ಆರೋಪದಡಿ ದುಬೈನಿಂದ ಶಿರಸಿ ತಾಲೂಕಿನ ಬನವಾಸಿ ವ್ಯಾಪ್ತಿಯ ದಾಸನಕೊಪ್ಪಕ್ಕೆ ಬಕ್ರಿದ್ ಹಬ್ಬದ ನಿಮಿತ್ತ ಆಗಮಿಸಿದ್ದ ಅಬ್ದುಲ್ ಸುಕ್ಕೂರ್ ಎಂಬಾತನನ್ನು ಮಂಗಳವಾರ ಬೆಳಗ್ಗೆ ಎನ್‌ಐಎ ತಂಡ ವಶಕ್ಕೆ ಪಡೆದು ತನಿಖೆ ಕೈಗೊಂಡಿದೆ. ಬೆಂಗಳೂರಿನಿಂದ ಎನ್‌ಐಎ ತಂಡ ಶಿರಸಿಗೆ ಆಗಮಿಸಿ ಬನವಾಸಿ ಠಾಣಾ ವ್ಯಾಪ್ತಿಯ ದಾಸನಕೊಪ್ಪಕ್ಕೆ ತೆರಳಿದ್ದು ಅಬ್ದುಲ್ ಸುಕ್ಕೂರ್ ನನ್ನು ವಶಕ್ಕೆ ಪಡೆದಿದೆ.

ತೈಲದರ ಏರಿಕೆ: ನಾಳೆ ಬಿಜೆಪಿಯಿಂದ ರಸ್ತೆ ತಡೆ

ಬೆಂಗಳೂರು: ಪೆಟ್ರೋಲ್ -ಡೀಸೆಲ್ ದರ ಏರಿಕೆ ಖಂಡಿಸಿ ಬಿಜೆಪಿ ಪ್ರತಿಭಟನೆ ನಡೆಸಿದ ಬೆನ್ನಲ್ಲೇ, ಮಂಗಳವಾರ ಜೆಡಿಎಸ್ ಪ್ರತಿಭಟನೆ ನಡೆಸಿದೆ. ಇದೀಗ ಗುರುವಾರ ರಾಜ್ಯಾದ್ಯಂತ ರಸ್ತೆತಡೆ ಚಳವಳಿ ನಡೆಸಲು ಬಿಜೆಪಿ ಮುಂದಾಗಿದೆ.

ಈಗಾಗಲೇ ಪ್ರತಿಭಟನೆ ನಡೆಸಿರುವ ಬಿಜೆಪಿ ರಾಜ್ಯಾದ್ಯಂತ ರಸ್ತೆತಡೆ ನಡೆಸಲಿದ್ದು, ಈ ಮೂಲಕ ಸರಕಾರಕ್ಕೆ ಬಿಸಿಮುಟ್ಟಿಸುವ ಪ್ರಯತ್ನ ನಡೆಸಿದೆ. ಈ ಬಗ್ಗೆ ಮಾತನಾಡಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟ ತೆರಿಗೆಯನ್ನು ಹೆಚ್ಚಳ ಮಾಡಿರುವ ಸರಕಾರದ ಕ್ರಮವನ್ನು ವಿರೋಧಿಸಿ ಜೂ. 20ರಂದು ರಾಜ್ಯಾದ್ಯಂತ ರಸ್ತೆ ರೋಖೋ ಚಳವಳಿ ನಡೆಸಲಿದೆ ಎಂದು ಎಚ್ಚರಿಕೆ ಕೊಟ್ಟರು.

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ವಿರೋಧಿಸಿ ಪ್ರತಿಭಟನೆ ನಡೆಸಿದ್ದೇವೆ. ರಾಜ್ಯದಲ್ಲಿ ಭಂಡ ಸರಕಾರ ಅಧಿಕಾರದಲ್ಲಿದೆ. ಹಾಗಾಗಿ ಹೋರಾಟವನ್ನು ಮುಂದುವರೆಸುವ ಅನಿವಾರ್ಯತೆ ಇರುವುದರಿಂದ ಗುರುವಾರ ರಸ್ತೆ ರೋಖೋ ಚಳವಳಿಯನ್ನು ರಾಜ್ಯಾದ್ಯಂತ ಹಮ್ಮಿಕೊಂಡಿದ್ದೇವೆ ಎಂದರು.

ಪದೇಪದೇ ಎಲ್ಲದಕ್ಕೂ ಕೇಂದ್ರ ಸರಕಾರವನ್ನು ದೂಷಿಸುತ್ತೀರಿ, ನಾವು ಪ್ರತಿಭಟನೆ ಮಾಡಿದರೆ ನಮ್ಮ ಮೇಲೆ ಭ್ರಷ್ಟಾಚಾರದ ಆರೋಪ ಮಾಡುತ್ತೀರಿ? ಪೆಟ್ರೋಲ್, ಡೀಸೆಲ್ ದರ ಹೆಚ್ಚಳದಿಂದ ರೈತರಿಗೆ, ಜನಸಾಮಾನ್ಯರಿಗೆ ಅನ್ಯಾಯವಾಗುತ್ತಿದೆ. ಮುಖ್ಯಮಂತ್ರಿಗಳು ಇದನ್ನು ಗಮನಿಸಬೇಕು. ರಾಜ್ಯದಲ್ಲಿ ರೈತರು ಸಂಕಷ್ಟದಲ್ಲಿದ್ದಾರೆ. ಮುಖ್ಯಮಂತ್ರಿಗಳು ಉಡಾಫೆ ಉತ್ತರ ಕೊಡುವುದನ್ನು ಬಿಟ್ಟು ತೈಲಬೆಲೆ ಇಳಿಕೆ ಮಾಡುವತ್ತ ಗಮನ ಹರಿಸಬೇಕು ಎಂದು ವಿಜಯೇಂದ್ರ ಆಗ್ರಹಿಸಿದರು.

→ 4

ರಾಜ್ಯ ಸರಕಾರ ತೈಲಬೆಲೆ ಏರಿಸಿದ್ದನ್ನು ಖಂಡಿಸಿ ಜೆಡಿಎಸ್ ಕಾರ್ಯಕರ್ತರು ಬೆಂಗಳೂರಿನಲ್ಲಿ ಮಂಗಳವಾರ ಕುದುರೆ ಸವಾರಿ ಮಾಡುವ ಮೂಲಕ ವಿನೂತನವಾಗಿ ಪ್ರತಿಭಟಿಸಿದರು.

ಪ್ರಜ್ವಲ್ ಕಸ್ಟಡಿ ವಿಸ್ತರಣೆ, ಭವಾನಿಗೆ ಜಾಮೀನು

ಬೆಂಗಳೂರು: ದೇಶಾದ್ಯಂತ ಸಂಚಲನ ಸೃಷ್ಟಿಸಿದ ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ, ಮಾಜಿ ಸಂಸದ ಪ್ರಜ್ವಲ್ ರೇವಣ್ಣರನ್ನು ಮತ್ತೆ 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಕೋರ್ಟ್ ಆದೇಶಿಸಿದೆ.

ನ್ಯಾಯಾಂಗ ಬಂಧನ ಅವಧಿ ಮಂಗಳವಾರಕ್ಕೆ ಮುಗಿದ ಹಿನ್ನೆಲೆಯಲ್ಲಿ ಅವರನ್ನು ಕೋರ್ಟ್ ಮುಂದೆ ಹಾಜರುಪಡಿಸಲಾಗಿದ್ದು, ಮತ್ತೆ 14 ದಿನ ನ್ಯಾಯಾಂಗ ಬಂಧನಕ್ಕೆ ನೀಡಿ 42ನೇ ಎಸಿಎಂಎಂ ಕೋರ್ಟ್ ನ್ಯಾಯಾಧೀಶ ಕೆ.ಎನ್ ಶಿವ ಕುಮಾರ್ ಆದೇಶ ಹೊರಡಿಸಿದರು.

→ 4

ಪುರುಷತ್ವ ಪರೀಕ್ಷೆಗೆ ಒಲ್ಲೆ ಎಂದ ಪ್ರಜ್ವಲ್

'' ನಾನು ಈಗಾಗಲೇ ಎರಡು ಪ್ರಕರಣಗಳಲ್ಲಿ ಪುರುಷತ್ವ ಪರೀಕ್ಷೆ ಮಾಡಿಸಿಕೊಂಡಿದ್ದೇನೆ. ಮತ್ತೆ ಅದೇ ಪರೀಕ್ಷೆ ಮಾಡಿಸಿಕೊಳ್ಳಲು ಮುಜುಗರವಾಗುತ್ತದೆ. ನನಗೆ ಮುಜುಗರ ಹುಟ್ಟಿಸಲೆಂದೇ ಇದನ್ನು ಮಾಡುತ್ತಿರುವಂತೆ ಕಾಣುತ್ತಿದೆ'' ಎಂದು ಪ್ರಜ್ವಲ್ ರೇವಣ್ಣ ನ್ಯಾಯಾಧೀಶರ ಮುಂದೆ ಅಲವತ್ತುಕೊಂಡರು. ಅಗತ್ಯ ವೈದ್ಯಕೀಯ ಪರೀಕ್ಷೆಗಳನ್ನು ಮಾತ್ರ ಮಾಡಿಸುವಂತೆ ನ್ಯಾಯಾಧೀಶರು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು.

ಬಾವಿಗೆ ಬಿದ್ದು ಕಾಡಾನೆ ಸಾವು

ಮಡಿಕೇರಿ: ಕಾಡಾನೆಯೊಂದು ತೆರೆದ ಬಾವಿಗೆ ಆಕಸ್ಮಿಕವಾಗಿ ಬಿದ್ದು ಮೃತಪಟ್ಟ ಘಟನೆ ವಿರಾಜಪೇಟೆ ತಾಲೂಕಿನ ಪಾಲಂಗಾಲ ಗ್ರಾಮದಲ್ಲಿ ನಡೆದಿದೆ.

ಕೆದಮುಳ್ಳೂರು ಗ್ರಾ.ಪಂ. ನಿಂದ ಉದ್ಯೋಗ ಖಾತ್ರಿ ಯೋಜನೆಯಡಿ ಬಾವಿ ನಿರ್ಮಿಸಲಾಗುತ್ತಿತ್ತು. 20 ಅಡಿ ಗಳಷ್ಟು ಆಳವಿದ್ದ ಬಾವಿಗೆ ಸೋಮವಾರ ಮಧ್ಯರಾತ್ರಿ ಕಾಡಾನೆ ಬಿದ್ದಿದ್ದು, ಸ್ಥಳದಲ್ಲೇ ಮೃತಪಟ್ಟಿದೆ.

ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ವಿಚಾರ ಸಂಕಿರಣ

ಕೆಂಪೇಗೌಡರ ಜಯಂತಿ: ಪ್ರತೀ ತಾಲೂಕಿಗೆ ಲಕ್ಷ ರು. ಅನುದಾನ

ಬೆಂಗಳೂರು: ರಾಜ್ಯದ ಎಲ್ಲ ತಾಲೂಕು ಕೇಂದ್ರಗಳಲ್ಲಿ ಕೆಂಪೇ ಗೌಡರ ಜಯಂತಿ ಆಚರಿಸಲು ಒಂದು ಲಕ್ಷ ರೂ. ನೀಡಲು ತೀರ್ಮಾನಿಸಲಾಗಿದೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವ ಕುಮಾರ್ ನೇತೃತ್ವ ದಲ್ಲಿ ನಡೆದ ನಾಡ ಪ್ರಭು ಕೆಂಪೇಗೌಡರ 515ನೇ ಜಯಂತ್ಯುತ್ಸವ ಪೂರ್ವಭಾವಿ ಸಭೆ ಯ ಬಳಿಕ ಮಾತನಾಡಿದ ಅವರು, ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಕೆಂಪೇಗೌಡರ ಬಗ್ಗೆ ವಿದ್ಯಾರ್ಥಿಗಳಿಗೆ ವಿಚಾರಸಂಕಿರಣ ಏರ್ಪಡಿಸಲು ಕ್ಷೇತ್ರ ಶಿಕ್ಷಣಾಧಿಕಾರಿ ಗಳಿಗೆ ಒಂದು ಲಕ್ಷ ರು. ಲಕ್ಷ ನೀಡಲಾಗುವುದು ಎಂದು ತಿಳಿಸಿದರು.

ಶಾಲಾ ಮಕ್ಕಳಿಗೆ ಕೆಂಪೇಗೌಡರ ಕುರಿತು ಚರ್ಚಾಸ್ಪರ್ಧೆ ಏರ್ಪಡಿಸಲಾಗುವುದು. ಸಾಂಸ್ಕೃತಿಕ ಕಾರ್ಯಕ್ರಮ ಗಳಿಗೆ 20 ಸಾವಿರ, ತಾಲ್ಲೂಕು ಕೇಂದ್ರಗಳಿಗೆ 20 ಸಾವಿರದ ಜೊತೆಗೆ ಹೆಚ್ಚುವರಿಯಾಗಿ 1 ಲಕ್ಷ ನೀಡಲಾಗು ವುದು. ಜಿಲ್ಲಾ ಕೇಂದ್ರಗಳಿಗೆ 50 ಸಾವಿರ ನೀಡಲಾಗುತ್ತಿದ್ದು ಹೆಚ್ಚು ಮಾಡಲು ಚಿಂತನೆ ನಡೆಸಲಾಗುವುದು. ಬಿ.ಎಲ್.ಶಂಕರ್ ನೇತೃತ್ವದಲ್ಲಿ ಕೆಂಪೇ ಗೌಡ ಪ್ರಶಸ್ತಿ ಆಯ್ಕೆ ಸಮಿತಿ ರಚನೆ ಮಾಡಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಿಡಿಎ, ಬಿಬಿಎಂಪಿಯಿಂದ ಕೆಂಪೇಗೌಡ ಪ್ರಶಸ್ತಿ ನೀಡಲು ಯೋಜಿಸಲಾಗಿದೆ ಎಂದು ಹೇಳಿದರು.

ದೆಹಲಿ ವಿಮಾನ ನಿಲ್ದಾಣದಲ್ಲೂ ಸೆಲ್ಫ್ ಸರ್ವಿಸ್ ಬ್ಯಾಗ್ ಡ್ರಾಪ್

30 ಸೆಕೆಂಡ್‌ಗೆ ಲಗೇಜ್ ಚೆಕ್ ಇನ್, ಬೋರ್ಡಿಂಗ್ ಪಾಸ್ !

ದೆಹಲಿ: ದೇಶದಲ್ಲೇ ಮೊದಲ ಬಾರಿಗೆ ಸ್ವಯಂ ಸೇವೆಯ ಲಗೇಜ್ ಚೆಕ್ ಇನ್, ಕ್ಷಿಪ್ರಗತಿ ಬೋರ್ಡಿಂಗ್ ಪಾಸ್ ವ್ಯವಸ್ಥೆ ಜಾರಿಗೆ ಬಂದಿದೆ. ದೆಹಲಿಯ ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಲಗೇಜ್ ಚೆಕ್ ಇನ್ ಹಾಗೂ ಬೋರ್ಡಿಂಗ್ ಪಾಸ್‌ಗೆ ಸ್ವಸಹಾಯ ವ್ಯವಸ್ಥೆ ಅಳವಡಿಸಲಾಗಿದೆ. ಇದರಿಂದ ಪ್ರಯಾಣಿಕರಿಗೆ ಒಂದೇ ಸ್ಥಳದಲ್ಲಿ ಕೇವಲ 30 ಸೆಕೆಂಡ್‌ಗಳಲ್ಲಿ ಬ್ಯಾಗ್ ಚೆಕ್ ಇನ್ ಹಾಗೂ ಬೋರ್ಡಿಂಗ್ ಪಾಸ್ ಪಡೆಯುವ ಸೌಲಭ್ಯ ದೊರೆಯುತ್ತದೆ.

ಇಂತಹದೊಂದು ಆಧುನಿಕ ವ್ಯವಸ್ಥೆ ಹೊಂದಿದ ದೇಶದ ಮೊದಲ ಹಾಗೂ ವಿಶ್ವದ ಎರಡನೇ ವಿಮಾನ ನಿಲ್ದಾಣ ಎಂಬ ಹೆಗ್ಗಳಿಕೆಗೆ ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪಾತ್ರವಾಗಿದೆ. ಈ ಮೊದಲು ಟರ್ಮಿನಲ್ ಮೂರರಲ್ಲಿ ಮಾತ್ರ ಈ ವ್ಯವಸ್ಥೆ ಕಲ್ಪಿಸಲಾಗಿತ್ತು ಆದರೆ ಈಗ 1ರಿಂದ 3ನೇ

ಟರ್ಮಿನಲ್‌ವರೆಗೂ 'ಸೆಲ್ಫ್ ಸರ್ವಿಸ್ ಬ್ಯಾಗ್ ಡ್ರಾಪ್' ಸೌಲಭ್ಯ ವಿಸ್ತರಿಸಲಾಗಿದೆ. ಮೊದಲು ಕೆನಡಾದ ಟೊರೊಂಟೋ ವಿಮಾನ ನಿಲ್ದಾಣದಲ್ಲಿ ಈ ಸೌಲಭ್ಯ ಪರಿಚಯಿಸಲಾಗಿತ್ತು. ಸ್ವ ಸಹಾಯ ಪದ್ಧತಿಯ ಕಿಯೋಸ್ಕ್ ಬಳಿ ತೆರಳಿ ಬೋರ್ಡಿಂಗ್ ಪಾಸ್ ಪಡೆದು ಬಯೋಮೆಟ್ರಿಕ್ ಕ್ಯಾಮೆರಾಗಳ ಸಹಾಯದಿಂದ ಲಗೇಜ್ ಚೆಕ್ ಇನ್ ಮಾಡಬಹುದಾಗಿದೆ. ಈ ಪ್ರಕ್ರಿಯೆ ಕೆಲವೇ ಕ್ಷಣಗಳಲ್ಲಿ ಪೂರ್ಣಗೊಳ್ಳಲಿದೆ.

ಮಾಲೂರಿನ ಸಂಜನಾ ಆಸ್ಪತ್ರೆ, ವೈದ್ಯ ದಂಪತಿ ವಿರುದ್ಧ ಕ್ರಿಮಿನಲ್ ಕೇಸ್ ದಾಖಲು

ಕೋಲಾರದಲ್ಲೂ ಭ್ರೂಣಹತ್ಯೆ ಪ್ರಕರಣ ಬೆಳಕಿಗೆ

ಕೆ.ಎಸ್.ಮಂಜುನಾಥ ರಾವ್

ಕೋಲಾರ: ರಾಜ್ಯದಲ್ಲಿ ಮಂಡ್ಯ ಮತ್ತು ಬೆಳಗಾವಿ ನಂತರ ಕೋಲಾರ ಜಿಲ್ಲೆಯಲ್ಲೂ ಭ್ರೂಣಹತ್ಯೆಯಪ್ರಕರಣದ ಬೆಳಕಿಗೆ ಬಂದಿದ್ದು, ಮಾಲೂರಿನ ವೈದ್ಯ ದಂಪತಿ ವಿರುದ್ಧ ಆರೋಗ್ಯ ಇಲಾಖೆ ಕ್ರಿಮಿನಲ್ ಪ್ರಕರಣ ದಾಖಲಿಸಿದೆ.

ಮಾಲೂರಿನ ಸಂಜನಾ ಆಸ್ಪತ್ರೆಯ ವೈದ್ಯ ದಂಪತಿ ಡಾ.ಜೆ.ಮೋಹನ್ ಚಕ್ರವತಿ ಹಾಗೂ ಡಾ.ಆರ್. ಗೀತಾಕುಮಾರಿ ವಿರುದ್ಧ ಭ್ರೂಣ ಹತ್ಯೆ ಸಂಬಂಧ ಪ್ರಕರಣ ದಾಖಲಾಗಿದೆ.

ಮೇ 6ರಂದು ಕೆಜಿಎಫ್ ಸಮೀಪದ ಅಡಂಪಲ್ಲಿಯ ಮುರುಗೇಶ್ ಅವರ ಗರ್ಭಿಣಿ ಪತ್ನಿ ಅನಿತಾ ಅವರನ್ನು ಮಾಲೂರಿನ ಸಂಜನಾ ಆಸ್ಪತ್ರೆಗೆ ಸ್ಕ್ಯಾನಿಂಗ್‌ಗೆಂದು ಕರೆತರಲಾಗಿತ್ತು. ವೈದ್ಯರು ಹೊಟ್ಟೆಯಲ್ಲಿ ಹೆಣ್ಣು ಮಗುವಿದ್ದು 75 ಸಾವಿರ ರೂ.ಕೊಟ್ಟರೆ ಗಂಡು ಮಗುವಾಗಿ ಮಾರ್ಪಡಿಸಿ ಕೊಡುವುದಾಗಿ ಹೇಳಿದ್ದರು ಎನ್ನಲಾಗಿದೆ. ಆದರೆ ಅಷ್ಟು ಹಣ ಕೊಡಲು ಸಾಧ್ಯವಾಗದಿದ್ದಾಗ ಕೆಲ ಮಾತ್ರೆಗಳನ್ನು ಕೊಟ್ಟಿದ್ದು ಇದರಿಂದ ಗರ್ಭಪಾತವಾಗಿತ್ತು. 3 ತಿಂಗಳ ಭ್ರೂಣ ಹೊರಗೆ ಬಂದಿದ್ದು ಮಗು

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ನಾಗಣ್ಣಗೌಡ ಮಾಲೂರು ಸಂಜನಾ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು.

ಗಂಡಾಗಿದ್ದರೂ ಹಣದ ಆಸೆಗೆ ಹೆಣ್ಣುಮಗು ಎಂದು ವೈದ್ಯರು ಹೇಳಿದ್ದಾರೆ. ವೈದ್ಯ ದಂಪತಿ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಮುರುಗೇಶ್ ಪೊಲೀಸರು ಮತ್ತು ಆರೋಗ್ಯ ಇಲಾಖೆಗೆ ದೂರು ನೀಡಿದ್ದರು.

ಅನಧಿಕೃತ ಸ್ಕ್ಯಾನಿಂಗ್: ಈ ಸಂಬಂಧ ತನಿಖೆ ನಡೆಸಿದ ಡಿಎಚ್‌ಒ ಡಾ.ಜಗದೀಶ್ ತಂಡಕ್ಕೆ ಹಲವಾರು ನ್ಯೂನತೆಗಳು ಕಂಡುಬಂದಿದೆ. ಮಾಲೂರು ಕೋರ್ಟ್‌ಗೆ ಸಲ್ಲಿಸಿದ ಆರೋಪ ಪಟ್ಟಿಯಲ್ಲಿ ಅನೇಕ ರೋಚಕ ಸಂಗತಿಗಳು ಬಯಲಾಗಿವೆ. ಸಂಜನಾ ಆಸ್ಪತ್ರೆಯಲ್ಲಿ ಗರ್ಭಿಣಿಯರಿಗೆ ಸ್ಕ್ಯಾನ್ ಮಾಡಲು ಮಾತ್ರವೇ ಆರೋಗ್ಯ ಇಲಾಖೆಯಿಂದ ಅನುಮತಿ ಪಡೆಯಲಾಗಿದ್ದರೂ ಅನಧಿಕೃತವಾಗಿ ಭ್ರೂಣಹತ್ಯೆ ಮಾಡಲಾಗಿದೆ ಎಂಬುದು ಪ್ರಮುಖ ಆರೋಪವಾಗಿದ್ದು ಇದಕ್ಕೆ ಪೂರಕವಾಗಿ ಸ್ಕ್ಯಾನಿಂಗ್ ಯಂತ್ರದ ಬಳಿ ಗರ್ಭಪಾತ ಮಾಡಲು ಬಳಸುವ ಎಂವಿಎ ಸಿರಿಂಜ್ ಸೇರಿದಂತೆ ಹಲವು ಎಂಟಿಪಿ ಸಲಕರಣೆಗಳು ಪತ್ತೆಯಾಗಿವೆ.

→ 4

ಫಾರಿನ್‌ನಲ್ಲಿ ಡಾಕ್ಟ್ರಮ್ಮ: ಸ್ಕ್ಯಾನಿಂಗ್‌ನಲ್ಲಿ ನರ್ಸಮ್ಮ

ಸ್ಕ್ಯಾನಿಂಗ್ ಸೆಂಟರ್ ಅನುಮತಿ ಪಡೆದಿದ್ದ ವೈದ್ಯೆಯೊಬ್ಬರು ವಿದೇಶ ಪ್ರವಾಸದಲ್ಲಿದ್ದಾಗ ಆಸ್ಪತ್ರೆಯ ನರ್ಸ್ ಸ್ಕ್ಯಾನಿಂಗ್ ಮಾಡುತ್ತಿದ್ದ ಸಂಗತಿಯನ್ನು ಪತ್ತೆ ಮಾಡಿರುವ ಆರೋಗ್ಯ ಇಲಾಖೆ ಅಧಿಕಾರಿಗಳು ಕ್ರಿಮಿನಲ್ ಕೇಸ್ ದಾಖಲಿಸಿ ಕೇಂದ್ರಕ್ಕೆ ಬೀಗ ಜಡಿದಿದ್ದಾರೆ.

ಪ್ರಕರಣಕ್ಕೆ ಸಂಬಂಧವಿಲ್ಲದ ಕೆಲವರ ರಕ್ತದ ಕಲೆಗಳು ಪತ್ತೆ | ಪಟ್ಟಣಗೆರೆಯ ಶೆಡ್‌ನ ಭೀಕರ ಸತ್ಯಗಳು ಅನಾವರಣ

ದರ್ಶನ್ ಕರಾಳಮುಖ ರಕ್ತದ ಕಲೆಗಳಿಂದ ಬೆಳಕಿಗೆ!

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ನಟ ದರ್ಶನ್ ವಿಚಾರಣೆಯ ಜತೆಗೆ ಹಲ್ಲೆ ನಡೆಸಲಾಗಿರುವ ಪಟ್ಟಣಗೆರೆಯ ಶೆಡ್‌ನ ಬಗ್ಗೆ ಇನ್ನಷ್ಟು ಭೀಕರ ಸತ್ಯಗಳು ಅನಾವರಣವಾಗಿದೆ.

ಶೆಡ್‌ನಲ್ಲಿ ಕೊಲೆ ಈ ಪ್ರಕರಣಕ್ಕೆ ಸಂಬಂಧವಿಲ್ಲದ ಕೆಲವರ ರಕ್ತದ ಕಲೆಗಳು ಪತ್ತೆಯಾಗಿದ್ದು, ಇನ್ನಷ್ಟು ಹಲ್ಲೆ- ಕೊಲೆ ಪ್ರಕರಣಗಳು ಇಲ್ಲಿ ನಡೆದಿರಬಹುದು ಎಂಬ ತರ್ಕಕ್ಕೆ ಪುಷ್ಟಿ ನೀಡಿವೆ. ದರ್ಶನ್ ಮತ್ತು ಗ್ಯಾಂಗ್‌ನ ಕರಾಳ ಹಿನ್ನೆಲೆಗೆ ಶೆಡ್‌ನಲ್ಲಿ ಸಿಗುತ್ತಿರುವ ಸಾಕ್ಷ್ಯಗಳು ಮತ್ತಷ್ಟು ಪೂರಕವಾಗಲಿವೆ. ಪಟ್ಟಣಗೆರೆ ಶೆಡ್‌ನಲ್ಲಿ ವಿಧಿವಿಜ್ಞಾನ ಪರಿಶೀಲನೆಗೆ ಎಫ್‌ಎಸ್‌ಎಲ್ ತಂಡ ಹೋದಾಗ ಬೇರೆಯವರ ರಕ್ತದ ಕಲೆಗಳು ಸಿಕ್ಕಿದ್ದು, ಇವು ಯಾರವು ಎಂದು ಪತ್ತೆ ಹಚ್ಚುವ ತಲೆನೋವು ಕೂಡ ಎಸ್‌ಐಟಿ ಹೆಗಲೇರಿದೆ.

ಈ ಹಿಂದೆ ಇದೇ ಶೆಡ್‌ನಲ್ಲಿ ದರ್ಶನ್, ತನ್ನ ಇತರ ವಿರೋಧಿಗಳನ್ನೂ ಕರೆಸಿ ಹಲ್ಲೆ ನಡೆಸಿರುವ ಬಗ್ಗೆ ಸಾಕ್ಷಿಗಳು ಇದ್ದು, ಕರಾಳಮುಖ ಬೆಳಕಿಗೆ ಬಂದಿದೆ. ಕೊಲೆ ಪ್ರಕರಣದಲ್ಲಿ ಬಂಧಿತ ಆರೋಪಿಗಳಲ್ಲೇ ಹಲವರು ಈ ವಿಚಾರ ಬಾಯ್ಬಿಟ್ಟಿದ್ದಾರೆ. ಹೀಗಾಗಿ, ವಿನಯ್ ಮತ್ತವರ ತಂಡ ಈ ಶೆಡ್‌ನಲ್ಲಿ ರೇಣುಕಾಸ್ವಾಮಿ ಅಲ್ಲದೆ ಬೇರೆಯವರ ಮೇಲೆಯೂ ಹಲ್ಲೆ ನಡೆದಿತ್ತು. ವ್ಯವಹಾರದ ವಿಚಾರವಾಗಿ ಹಲವರ ಮೇಲೆ ಹಲ್ಲೆ ಮಾಡಿದ್ದರ ಬಗ್ಗೆಯೂ ಪೊಲೀಸರು ಮಾಹಿತಿ ಸಂಗ್ರಹಿಸುತ್ತಿದ್ದಾರೆ. ರೇಣುಕಾಸ್ವಾಮಿಯ ರಕ್ತದ ಕಲೆಗಳಲ್ಲದೆ, ಮೂರರಿಂದ ನಾಲ್ಕು ತಿಂಗಳ ಹಿಂದಿನ ರಕ್ತದ ಗುರುತುಗಳು ಕೂಡ ಪತ್ತೆಯಾಗಿವೆ. ಆದರೆ ಹಲ್ಲೆಗೊಳಗಾದ ಬಗ್ಗೆ ಯಾರೂ ಸಹ ದೂರು ನೀಡಲು ಮುಂದೆ ಬಂದಿಲ್ಲ. ಹಲ್ಲೆಗೊಳಗಾಗಿದ್ದರೂ ದರ್ಶನ್‌ಗೆ ಹೆದರಿಕೊಂಡು ಸುಮ್ಮನಿದ್ದಾರೆ ಎಂದು ಹೇಳಲಾಗುತ್ತಿದೆ. ಈ ಬಗ್ಗೆಯೂ ಆರೋಪಿಗಳನ್ನು ಪೊಲೀಸರು ವಿಚಾರಣೆ ಮಾಡುತ್ತಿದ್ದಾರೆ.

ಹಣ ಕೊಡದ ನಿರ್ಮಾಪಕರ ಮೇಲೂ ಹಲ್ಲೆ

ರೇಣುಕಾಸ್ವಾಮಿ ಕೊಲೆಯಾದ ಪಟ್ಟಣಗೆರೆಯ ಆ ಶೆಡ್ ಬಗ್ಗೆ ಇದೀಗ ಇನ್ನಿತರ ಕೆಲವು ಭಯಾನಕ ಸತ್ಯಗಳು ಹೊರಬೀಳುತ್ತಿವೆ. ಇಲ್ಲಿ ಅದೆಷ್ಟೋ ಕನ್ನಡ ಚಿತ್ರ ನಿರ್ಮಾಪಕರು ಕೂಡ ಗೂಸಾ ತಿಂದಿದ್ದಾರೆ ಎಂಬುದು ಬಯಲಾಗಿದೆ. ತನಗೆ ಆಗದವರು, ತನ್ನ ವಿರೋಧಿಗಳು ಹಾಗೂ ಹಣ ಪಾವತಿ ಮಾಡದ ನಿರ್ಮಾಪಕರ ಮೇಲೆ ದಾಳಿ ಮಾಡಲು ದರ್ಶನ್ ಬಳಸುತ್ತಿದ್ದ ಜಾಗವೇ ಈ ಶೆಡ್ ಎಂಬುದು ತಿಳಿದುಬಂದಿದೆ. ನಟ ದರ್ಶನ್ ಎಷ್ಟೋ ಮಂದಿಗೆ ಶೆಡ್‌ನಲ್ಲಿ ಹಲ್ಲೆ ಮಾಡಿ, 2ರಿಂದ 3 ದಿನಗಳ ಕಾಲ ಇಲ್ಲೇ ಇರಿಸಿಕೊಳ್ಳುತ್ತಿದ್ದ. ಕಳಿಸಿಕೊಡುವಾಗ ಬ್ಯಾಂಡೇಜ್ ಹಾಕಿಸಿ ಕೈಗೆ ಹಣ ಕೊಟ್ಟು ಕಳುಹಿಸುತ್ತಿದ್ದ ಎಂದು ಕೆಲವರು ಇದೀಗ ಪೊಲೀಸರ ಮುಂದೆ ಹೇಳಿಕೊಂಡಿದ್ದಾರೆ. ದರ್ಶನ್ ಕಾರು ಇಲ್ಲಿಗೆ ಆಗಾಗ ಬಂದು ಹೋಗುತ್ತಿದ್ದುದನ್ನು ಕೆಲವು ಸ್ಥಳೀಯರು ಗಮನಿಸಿದ್ದಾರೆ. ದರ್ಶನ್‌ಗೆ ಇನ್ನೆಷ್ಟು ಕರಾಳ ಮುಖಗಳಿವೆ ಎಂದು ಪೊಲೀಸರೇ ಇದೀಗ ಬೆಚ್ಚಿ ಬೀಳುವಂತಾಗಿದೆ.

ಪ್ರಮುಖ ಸಾಕ್ಷಿಗಳೇ ನಾಶ, ಸಿಸಿಟಿವಿ ರೆಕಾರ್ಡ್ ಡಿಲೀಟ್!

ರೇಣುಕಾಸ್ವಾಮಿ ಕೊಲೆಯ ನಂತರ ಆಸುಪಾಸಿನ ಸ್ಥಳಗಳಲ್ಲಿದ್ದ ಸಿಸಿ ಕ್ಯಾಮೆರಾದಲ್ಲಿ ದಾಖಲಾಗಿದ್ದ ಎಲ್ಲ ದೃಶ್ಯಗಳನ್ನು ಡಿಲೀಟ್ ಮಾಡಲಾಗಿದೆ ಎಂಬ ಆಘಾತಕಾರಿ ಸಂಗತಿ ಬಯಲಾಗಿದೆ. ದರ್ಶನ್ ನಡೆಸಿದ ಕರಾಳ ಕೃತ್ಯದ ನಂತರ ಕಳೆದ ಒಂದು ವರ್ಷದ ಸಿಸಿಟಿವಿ ದಾಖಲಾತಿಗಳನ್ನು ಡಿಲೀಟ್ ಮಾಡಿರುವ ಬಗ್ಗೆ ಮಾಹಿತಿ ಬೆಳಕಿಗೆ ಬಂದಿದೆ. ಕೊಲೆಯ ಬಳಿಕ, ಸ್ಟೋನಿ ಬ್ರೂಕ್ ರೆಸ್ಟೋರೆಂಟ್ನ ಹಾಗೂ ಹಲ್ಲೆ ನಡೆದ ಪಟ್ಟಣಗೆರೆಯ ಶೆಡ್‌ನ ದೃಶ್ಯಗಳನ್ನು ಡಿಲೀಟ್ ಮಾಡಿಸಲಾಗಿದೆ. ಆರೋಪಿಗಳು ಕಳೆದ ಒಂದು ವರ್ಷದ ಸಿಸಿ ಟಿವಿ ದೃಶ್ಯಗಳನ್ನು ಡಿಲೀಟ್ ಮಾಡಿಸಿದ್ದಾರೆ. ಸಿಸಿ ಟಿವಿ ದೃಶ್ಯಗಳೇ ಕೊಲೆಯ ಪ್ರಮುಖ ಸಾಕ್ಷಿ ಆಗಲಿವೆ ಎಂಬ ಹಿನ್ನೆಲೆಯಲ್ಲಿ, ಇವುಗಳನ್ನು ಪೂರ್ತಿಯಾಗಿ ಡಿಲೀಟ್ ಮಾಡಲು ಆರೋಪಿಗಳು ಅಪರಾಧ ಪರಿಣಿತರ ಸಲಹೆ ಪಡೆದೇ ಈ ಕೃತ್ಯ ಎಸಗಿದ್ದಾರೆ ಎಂದು ತರ್ಕಿಸಲಾಗಿದೆ. ರೇಣುಕಾಸ್ವಾಮಿ ಕೊಲೆಯ ಮೊದಲಿನ ಹಾಗೂ ನಂತರದ ಎಲ್ಲಾ ಸಿಸಿ ಕ್ಯಾಮೆರಾ ದೃಶ್ಯಗಳನ್ನು ಡಿಲೀಟ್ ಮಾಡಿಸಿದ್ದಾರೆ. ದರ್ಶನ್ ಸೇರಿದಂತೆ ಆರೋಪಿಗಳ ಬಂಧನ ಆದ ಬಳಿಕ ಈ ರೆಕಾರ್ಡಿಂಗ್ ಡಿಲೀಟ್ ಮಾಡಲಾಗಿದೆಯೇ ಅಥವಾ ಮೊದಲೇ ಮಾಡಲಾಗಿದೆಯೇ ಎಂಬುದು ಬೆಳಕಿಗೆ ಬರಬೇಕಿದೆ.

ಪೊಲೀಸರು ಸ್ವಲ್ಪ ಎಚ್ಚರ ತಪ್ಪಿದ್ದರೂ ಪ್ರಕರಣ ದಾರಿ ತಪ್ಪುತ್ತಿತ್ತು: ದಯಾನಂದ್

ಬೆಂಗಳೂರು: ಕಾಮಾಕ್ಷಿಪಾಳ್ಯ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಇದುವರೆಗೂ 17 ಜನ ಆರೋಪಿಗಳನ್ನ ಬಂಧಿಸಲಾಗಿದೆ ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತನಿಖಾ ಹಂತದಲ್ಲಿ ಹೆಚ್ಚಿನ ವಿವರಗಳನ್ನ ಹಂಚಿಕೊಳ್ಳಲು ಸಾಧ್ಯವಿಲ್ಲ. ಪೊಲೀಸರ ನಿಷ್ಪಕ್ಷಪಾತ ಸಮಯ ಪ್ರಜ್ಞೆಯಿಂದ ಈ ಹತ್ಯೆ ಪ್ರಕರಣ ಬೆಳಕಿಗೆ ಬಂದಿದೆ. ಸ್ವಲ್ಪ ನಿರ್ಲಕ್ಷ್ಯವಹಿಸಿದ್ದರೂ ಸಹ ಪ್ರಕರಣ ಸಮಸ್ಯಾತ್ಮಕವಾಗಿ ಆಗುವ ಸಂಭವವಿತ್ತು. ಪೊಲೀಸ್ ಅಧಿಕಾರಿಗಳು ಸಮರ್ಪಕವಾಗಿ ಕೆಲಸ ಮಾಡುವ ಮೂಲಕ ತ್ವರಿತ ವಾಗಿ ಅವಶ್ಯಕ ಸಾಕ್ಷ್ಯಗಳನ್ನ ಕಲೆಹಾಕಿದ್ದಾರೆ. ಇದೊಂದು ಅತ್ಯಂತ ಹೀನ ಮತ್ತು ಹೇಯ ಕೃತ್ಯವಾಗಿದ್ದು, ಗಂಭೀರ ಪ್ರಕರಣವಾಗಿದೆ. ಮುಂದಿನ ದಿನಗಳಲ್ಲಿ ಈ ಪ್ರಕರಣ ನ್ಯಾಯಾಲಯದ ಮುಂದೆ ವಿಚಾರಣೆಗೆ ಬಂದಾಗ ಸಮರ್ಪಕವಾಗಿ ಅಗತ್ಯ ಸಾಕ್ಷ್ಯಗಳನ್ನು ಒದಗಿಸಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಠಾಣೆಯ ಸುತ್ತಮುತ್ತ ನಿಷೇಧಾಜ್ಞೆ ಜಾರಿ ಹಾಗೂ ಠಾಣೆಯ ಬಳಿ ಶಾಮಿಯಾನ ಹಾಕಿರುವುದರ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಆಯುಕ್ತರು, ಪ್ರತಿಯೊಂದಕ್ಕೂ ಒಂದು ಕಾರಣವಿರುತ್ತದೆ. ಆರೋಪಿಗಳಲ್ಲಿ ಸೆಲೆಬ್ರಿಟಿಗಳಿದ್ದು ಹೆಚ್ಚಿನ ಕುತೂಹಲ ಕಂಡು ಬರುತ್ತಿರುವುದರಿಂದ ತನಿಖೆಯ ಭಾಗವಲ್ಲದ ಅನೇಕ ಉತ್ಪ್ರೇಕ್ಷೆ, ಊಹಾಪೋಹಗಳಿಗೆ ಎಡೆಮಾಡಿಕೊಟ್ಟಿದೆ ಎಂದರು.

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮು 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮು)				
ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HILAMAL00452677 1. ಮೀನಾಕ್ಷಿ ಯಾದವ್ 2. ನಿರಂಜನ್ ನರೈನ್ ಅಲಿಯಾಸ್ ಎಕೆ ನಿರಂಜನ್ ನರೈನ್ ಅಲಿಯಾಸ್ ಅರ್ಕಾಟ್ ಕೃಷ್ಣಮೂರ್ತಿ ನಿರಂಜನ್ ನರೈನ್ 3. ಯಾದವ್ ಕುಮಾರ್ ಗೋವಿಂದರಾಜನ್ ಅಲಿಯಾಸ್ ಯಾದವ್ ಜಿ ಕುಮಾರ್	13 ವಾಣಿಜ್ಯ ಅಂಗಡಿಗಳು (ನೆಲ ಮಹಡಿಯಲ್ಲಿ 1, 3, 6, 103, 105, 112, ಮೊದಲ ಮಹಡಿಯಲ್ಲಿ ಕೆ 3, 201, 206, ಎರಡನೇ ಮಹಡಿಯಲ್ಲಿ ಕೆ 6, 305, 307, 303 ಮೂರನೇ ಮಹಡಿಯಲ್ಲಿ), ವಾಣಿಜ್ಯ ಕಟ್ಟಡ ಅರ್ಕಾಟ್ ನ್ಯಾಷನಲ್ ಸ್ಟ್ರೀಟ್ ಯುಕೆಎನ್, ಮುನ್ಸಿಪಲ್ ನಂ. 314 (ಹಳೆಯ ಸಂಖ್ಯೆ 262 ಇ), ಬಿಬಿಎಂಪಿ ಪಿಐಡಿ ಸಂಖ್ಯೆ 81-8-314, ಕಮರಾಜ ರಸ್ತೆ (ಹಿಂದೆ ಇದನ್ನು ಚಾವಾಲ್ರಿ ರಸ್ತೆ ಎಂದು ಕರೆಯಲಾಗುತ್ತಿತ್ತು), ಬೆಂಗಳೂರು-560005, ಕರ್ನಾಟಕ	11.05.2024	20.05.2024 ರಂದಿನಂತೆ ರೂ. 3,41,95,197.48/- (ರೂಪಾಯಿ ಮೂರು ಕೋಟಿ ನಲವತ್ತ ಒಂದು ಲಕ್ಷ ತೊಂಬತ್ತ ಐದು ಸಾವಿರದ ನೂರ ತೊಂಬತ್ತ ಏಳು ಮತ್ತು ಪೈಸೆ ನಲವತ್ತ ಎಂಟು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಏಆರ್‌ಎಫ್‌ಏಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಧನಿ ಸಾಲಗಳು ಮತ್ತು ಸೇವೆಗಳು ಲಿಮಿಟೆಡ್ ಪರವಾಗಿ
(ಹಿಂದೆ ಐವಿಎಲ್ ಫೈನಾನ್ಸ್ ಲಿಮಿಟೆಡ್ ಮತ್ತು ಇಂಡಿಯಾಬುಲ್ಸ್ ಕನ್ಸ್ಯೂಮರ್ ಫೈನಾನ್ಸ್ ಲಿಮಿಟೆಡ್)
ಸ್ಥಳ : ಬೆಂಗಳೂರು
ಅಧಿಕೃತ ಅಧಿಕಾರಿ

ಪವನ್ ಮನೆಯಿಂದ ನಾಲ್ಕೂವರೆ ಲಕ್ಷ ಜಪ್ತಿ

ಬೆಂಗಳೂರು: ಚಿತ್ರದುರ್ಗ ಮೂಲದ ರೇಣುಕಾಸ್ವಾಮಿ ಅಪಹರಣ ಹಾಗೂ ಕೊಲೆ ಪ್ರಕರಣದ ತನಿಖೆ ದಿನದಿಂದ ದಿನಕ್ಕೆ ಜಟಿಲವಾಗುತ್ತಿದೆ. ಪ್ರಕರಣ ತನಿಖೆ ನಡೆಸುತ್ತಿರುವ ಪೊಲೀಸರು ಮಂಗಳವಾರ ಆರೋಪಿ ಪವನ್ ಮನೆಯಿಂದ 4 ಲಕ್ಷ 50 ಸಾವಿರ ಹಣವನ್ನು ಜಪ್ತಿ ಮಾಡಿದ್ದಾರೆ. ವಿನಯ್ ತಾಯಿಗೆ ಪವನ್ ಒಂದು ಲಕ್ಷ ಅಡ್ವಾನ್ಸ್ ಹಣ ನೀಡಿದ್ದ. ಬಳಿಕ ವಿನಯ್‌ಗೆ ನೀಡಬೇಕಾಗಿದ್ದ ಹಣವನ್ನು ಪವನ್ ತನ್ನ ಮನೆಯಲ್ಲಿಟ್ಟಿದ್ದ. ಇದೀಗ ಪೊಲೀಸರು ಒಟ್ಟು 4 ಲಕ್ಷ 50 ಸಾವಿರವನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

ಈ ಹಿಂದೆ 30 ಲಕ್ಷ ಜಪ್ತಿ: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣವನ್ನು ಒಪ್ಪಿಕೊಳ್ಳಲು, ಮೃತದೇಹ ಸಾಗಿಸಲು ಮತ್ತು ನಟ ದರ್ಶನ್ ಹೆಸರನ್ನು ಬಾಯಿಬಿಡದಿರಲು ಬಂಧಿತರ ಪೈಕಿ ಐವರಿಗೆ 30 ಲಕ್ಷಕ್ಕೆ ಸುಪಾರಿ ನೀಡಲಾಗಿತ್ತು. ಮೃತದೇಹ ಯಾರಿಗೂ ಸಿಗದಂತೆ ಸಾಗಿಸಲು ಮೂವರು ಆರೋಪಿಗಳಿಗೆ ಮುಂಗಡವಾಗಿ ಒಟ್ಟು 5 ಲಕ್ಷ ಸಂದಾಯ ಮಾಡಲಾಗಿತ್ತು. ಉಳಿದ ಇಬ್ಬರು ಆರೋಪಿಗಳು ಜೈಲಿಗೆ ಹೋದ ಮೇಲೆ ಅವರ ಮನೆಯವರಿಗೆ ಹಣ ತಲುಪಿಸುವುದಾಗಿ ಹೇಳಲಾಗಿತ್ತು. ಈ ವಿಚಾರವನ್ನು ಆರೋಪಿಗಳು ಪೊಲೀಸರ ಮುಂದೆ ಬಾಯ್ಬಿಟ್ಟಿದ್ದರು. ಪ್ರಕರಣ ಸಂಬಂಧ ದರ್ಶನ್ ಆಪ್ತನೊಬ್ಬನ ಮನೆ ಮೇಲೆ ದಾಳಿ ನಡೆಸಿದ ಪೊಲೀಸರು ಹಣವನ್ನು ವಶಕ್ಕೆ ಪಡೆದಿದ್ದಾರೆ. ನಟ ಕೊಟ್ಟಿದ್ದ 30 ಲಕ್ಷ ಹಣವನ್ನು ಆಪ್ತನೊಬ್ಬನ ಮನೆಯಲ್ಲಿ ಇಡಲಾಗಿತ್ತು. ವಿಚಾರಣೆ ವೇಳೆ ಆರೋಪಿಗಳು ಹಣದ ಬಗ್ಗೆ ಬಾಯಿಬಿಟ್ಟಿದ್ದಾರೆ.

ಪವಿತ್ರಾ ಗೌಡ ಆರೋಗ್ಯದಲ್ಲಿ ಏರುಪೇರು

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಎ1 ಆರೋಪಿ ಆಗಿರುವ ಪವಿತ್ರಾ ಗೌಡ ಆರೋಗ್ಯದಲ್ಲಿ ಏರುಪೇರಾಗಿದ್ದು, ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ಕಾಮಾಕ್ಷಿಪಾಳ್ಯ ಪೊಲೀಸರ ಕಸ್ಟಡಿಯಲ್ಲಿದ್ದ ಪವಿತ್ರಾಗೌಡ ಅಸ್ವಸ್ಥರಾಗಿದ್ದ ಕಾರಣ ಮಂಗಳವಾರ ಮಧ್ಯಾಹ್ನ ಅನ್ನಪೂರ್ಣೇಶ್ವರಿ ನಗರ ಠಾಣೆಗೆ ವೈದ್ಯರು ಬಂದಿದ್ದರು. ಪವಿತ್ರಾಗೌಡ ಅಸ್ವಸ್ಥಳಾದ ಹಿನ್ನೆಲೆ ವೈದ್ಯರನ್ನು ಕರೆಸಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಪವಿತ್ರಾಗೌಡಳನ್ನು ಮಲ್ಲತ್ತಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಾಖಲು ಮಾಡಲಾಗಿದೆ. ಚಿಕಿತ್ಸೆ ಕೊಡಿಸಿದ ಬಳಿಕ ಮತ್ತೆ ಪೊಲೀಸ್ ಠಾಣೆಗೆ ಕರೆದೊಯ್ಯಲಾಗಿದೆ.

ರಾಜಕಾಲುವೆ ಮೇಲೆ ದರ್ಶನ್ ಮನೆ: ತೆರವಿಗೆ ಬಿಬಿಎಂಪಿ ಸಿದ್ಧತೆ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧನವಾಗಿರುವ ನಟ ದರ್ಶನ್‌ಗೆ ಮತ್ತೊಂದು ಸಂಕಷ್ಟ ಎದುರಾಗಿದೆ. ಅಕ್ರಮವಾಗಿ ರಾಜಕಾಲುವೆ ಮೇಲೆ ನಿರ್ಮಿಸಿದ ಹಿನ್ನೆಲೆಯಲ್ಲಿ ಮನೆ ಒತ್ತುವರಿ ತೆರವು ಮಾಡಲು ಬಿಬಿಎಂಪಿ ಮುಂದಾಗಿದೆ.

ನಟ ದರ್ಶನ್ ಮನೆ ರಾಜಕಾಲುವೆ ಮೇಲೆ ಇದ್ದರೂ ತೆರವುಗೊಳಿಸಲು ಬಿಬಿಎಂಪಿ ಅಧಿಕಾರಿಗಳು ಹಿಂದೇಟು ಹಾಕಿದ್ದರು. ಇದೀಗ ಒತ್ತುವರಿಗೆ ತೆರವಿಗೆ ಸೂಚನೆ ಹಿನ್ನೆಲೆಯಲ್ಲಿ ಕ್ರಮಕ ಕೈಗೊಳ್ಳಲು ಬಿಬಿಎಂಪಿ ಮುಂದಾಗಿದೆ. ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಕೂಡ ಒತ್ತುವರಿ ವಿಚಾರದಲ್ಲಿ ಕ್ರಮ ಕೈಗೊಳ್ಳುವುದಾಗಿ ಹೇಳಿಕೆ ನೀಡಿದ್ದಾರೆ. ರಾಜಧಾನಿಯಲ್ಲಿ 2016ರಲ್ಲಿ ಪ್ರವಾಹ ಸ್ಥಿತಿ ನಿರ್ಮಾಣವಾದಾಗ ರಾಜ ಕಾಲುವೆಗಳ ಮೇಲೆ ನಿರ್ಮಾಣವಾಗಿರುವ ಕಟ್ಟಡಗಳನ್ನು ತೆರವುಗೊಳಿಸಲು ಅಂದಿನ ಸಿದ್ದರಾಮಯ್ಯ ಸರಕಾರ ಬಿಬಿಎಂಪಿಗೆ ಸೂಚನೆ ನೀಡಿತ್ತು. ಆಗ ಆರ್.ಆರ್. ನಗರದ ದರ್ಶನ್ ಅವರ ನಿವಾಸ ಕೂಡ ರಾಜ ಕಾಲುವೆಯ ಬಫರ್ ಜೋನ್ ಮೇಲೆ ನಿರ್ಮಿಸಿರುವುದು ತಿಳಿದುಬಂದಿತ್ತು.

ಐಡಿಯಲ್ ಹೋಮ್ಸ್, ದರ್ಶನ್, ಶಾಮನೂರು ಅವರ ಆಸ್ಪತ್ರೆ ಸೇರಿ ಹಲವು ಕಟ್ಟಡಗಳನ್ನು ತೆರವುಗೊಳಿಸುವಂತೆ ನೋಟಿಸ್ ನೀಡಲಾಗಿತ್ತು. ನೋಟಿಸ್ ನೀಡಿದ್ದರಿಂದ ದರ್ಶನ್ ಮತ್ತಿತರರು ಸಿವಿಲ್ ನ್ಯಾಯಾಲಯದಿಂದ ತಡೆಯಾಜ್ಞೆ ತಂದು, ಬಳಿಕ 2016 ಅಕ್ಟೋಬರ್‌ನಲ್ಲಿ ತೆರವು ಮಾಡದಂತೆ ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದರು. ಹೀಗಾಗಿ ಅಂದು ಒತ್ತುವರಿ ಕಾರ್ಯಾಚರಣೆ ಸ್ಥಗಿತಗೊಂಡಿತ್ತು. ದರ್ಶನ್ ಇದೀಗ ಬಂಧನವಾಗಿರುವ ಹಿನ್ನೆಲೆಯಲ್ಲಿ ಮನೆ ಒತ್ತುವರಿ ವಿಚಾರ ಮತ್ತೆ ಮುನ್ನೆಲೆಗೆ ಬಂದಿದೆ.

ಆರಂಭದಿಂದಲೇ ಕಿರಿಕ್: ಭಾ.ಮಾ. ಹರೀಶ್

ಬೆಂಗಳೂರು: ಮೆಜೆಸ್ಟಿಕ್ ಸಿನಿಮಾದ ಮೂಲಕ ಚಂದನವನದಲ್ಲಿ ನಾಯಕನಾಗಿ ಗುರುತಿಸಿಕೊಂಡ ದರ್ಶನ್, ಆರಂಭದಿಂದಲೂ ಒಂದಲ್ಲ ಒಂದು ವಿಚಾರಕ್ಕೆ ಕಿರಿಕ್ ಮಾಡಿಕೊಳ್ಳುತ್ತಲೇ ಬಂದಿದ್ದು, ಈ ಕುರಿತು ನಿರ್ಮಾಪಕ ಭಾ.ಮ. ಹರೀಶ್ ನೆನಪು ಮಾಡಿಕೊಳ್ಳುತ್ತಾರೆ. ಅದು ನಿನಗೋಸ್ಕರ ಚಿತ್ರದ ಚಿತ್ರೀಕರಣ ನಡೆಯುತ್ತಿತ್ತು. ಶೂಟಿಂಗ್ ಮುಗಿಸಿದ ದರ್ಶನ್ ನಾನು ಡಬ್ಬಿಂಗ್ ಮಾಡುವುದಿಲ್ಲ ಎಂದು ಹಠ ಹಿಡಿದು ಕೂತರು. ಪಾಪ ಆ ಚಿತ್ರದ ನಿರ್ಮಾಪಕರು ದಿಕ್ಕು ತೋಚದೆ ಪರದಾಡುತ್ತಿದ್ದರು. ಆಗ ಅಂಬರೀಶ್ ಅವರು ದರ್ಶನ್‌ಗೆ ಬುದ್ಧಿವಾದ ಹೇಳಿದ ಮೇಲೆ ದರ್ಶನ್ ಬಂದು ಡಬ್ಬಿಂಗ್ ಮುಗಿಸಿಕೊಟ್ಟರು. ಅದೇ ರೀತಿ ಕರಿಯ ಚಿತ್ರದ ಚಿತ್ರೀಕರಣದ ವೇಳೆಯೂ ದರ್ಶನ್ ಕಿರಿಕ್ ತೆಗೆದಿದ್ದರು. ಜೋಗಿ ಪ್ರೇಮ್ ನಿರ್ದೇಶನದಲ್ಲಿ ಕರಿಯ ಚಿತ್ರದ ಶೂಟಿಂಗ್ ಭರದಿಂದ ಸಾಗಿತ್ತು. ಸಿನಿಮಾದ ಅರ್ಧ ಶೂಟಿಂಗ್ ಮುಗಿಯುತ್ತಿದ್ದಂತೆ ದರ್ಶನ್ ನಾನು ಈ ಚಿತ್ರದ ಚಿತ್ರೀಕರಣಕ್ಕೆ ಬರೋದೇ ಇಲ್ಲ, ಬೇಕಿದ್ದರೆ ಚಿತ್ರದ ರೀಲ್‌ಗಳನ್ನು ಸುಟ್ಟು ಹಾಕಿ ಎಂದು ಬೇಜವಾಬ್ದಾರಿಯಿಂದ ಹೇಳಿದ್ದರು. ಇದರಿಂದ ಪ್ರೇಮ್ ವಿಚಲಿತರಾಗಿ ನನ್ನ ಬಳಿ ಬಂದು ದರ್ಶನ್ ವರ್ತನೆಯ ಬಗ್ಗೆ ಬೇಸರ ವ್ಯಕ್ತಪಡಿಸಿದರು. ಆಗಲೂ ಚಿತ್ರರಂಗದ ಹಿರಿಯರು ಸೇರಿ ದರ್ಶನ್‌ಗೆ ಬುದ್ಧಿವಾದ ಹೇಳಿದ ನಂತರ ಚಿತ್ರೀಕರಣ ಮುಗಿಸಿಕೊಟ್ಟರು ಎಂದು ಭಾ.ಮ.ಹರೀಶ್ ನೆನಪಿಸಿಕೊಳ್ಳುತ್ತಾರೆ.

ರಕ್ತ ಕಾರಿಕೊಂಡು ದರ್ಶನ್ ಫಾರಂ ಹೌಸ್ ಮ್ಯಾನೇಜರ್ ಸಾವು

ಬೆಂಗಳೂರು: ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಪೊಲೀಸ್ ವಿಚಾರಣೆ ಎದುರಿಸುತ್ತಿರುವ ಹೊತ್ತಿನಲ್ಲಿಯೇ, ದರ್ಶನ್‌ಗೆ ಸಂಬಂಧಿಸಿದ ಇನ್ನೊಂದು ಅನುಮಾನಾಸ್ಪದ ಸಾವು ಬಯಲಿಗೆ ಬಂದಿದೆ.

ಶ್ರೀಧರ್ (35) ಆತ್ಮಹತ್ಯೆಮಾಡಿಕೊಂಡ ಮ್ಯಾನೇಜರ್. ಏಪ್ರಿಲ್ 17ನೇ ತಾರೀಖು ಈತ ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾಗಿದ್ದ. ಬೆಂಗಳೂರು ಹೊರವಲಯದ ಆನೇಕಲ್ ತಾಲೂಕಿನ ಬಗ್ಗನದೊಡ್ಡಿಯಲ್ಲಿ ಘಟನೆ ನಡೆದಿದೆ. ದರ್ಶನ್ ಫಾರ್ಮ್‌ಹೌಸ್ ಮ್ಯಾನೇಜರ್ ಆಗಿದ್ದ ಶ್ರೀಧರ್ ಎಂಬಾತ ಶಂಕಾಸ್ಪದವಾಗಿ ರಕ್ತ ಕಾರಿಕೊಂಡು ಸತ್ತಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಪೊಲೀಸರು ಅನುಮಾನಾಸ್ಪದ ಸಾವು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಬಗ್ಗನದೊಡ್ಡಿಯಲ್ಲಿ ನಟ ದರ್ಶನ್‌ಗೆ ಸೇರಿದ ದುರ್ಗ ಫಾರ್ಮ್‌ಹೌಸ್ ಇದ್ದು, ಅಲ್ಲಿ ಈತ ಮ್ಯಾನೇಜರ್ ಆಗಿದ್ದ. ಸಾವಿಗೆ ಮುನ್ನ ವಿಡಿಯೊ ಮಾಡಿದ್ದು, ಡೆತ್ ನೋಟ್ ಕೂಡ ಬರೆದಿಟ್ಟಿದ್ದಾನೆ.

ಎರಡು ತಿಂಗಳ ಹಿಂದೆ ಈ ಆತ್ಮಹತ್ಯೆ ಘಟಿಸಿದ್ದು, ಪೊಲೀಸರು ಅನುಮಾನಾಸ್ಪದ ಸಾವು ದಾಖಲಿಸಿಕೊಂಡಿದ್ದರು. ಫಾರ್ಮ್ ಹೌಸ್ ಪಕ್ಕದಲ್ಲಿಯೇ ಈತ ವಿಷ ಸೇವಿಸಿ ರಕ್ತ ಕಾರಿಕೊಂಡು ಮೃತಪಟ್ಟಿದ್ದಾನೆ. ಬಗ್ಗನದೊಡ್ಡಿಯಲ್ಲಿ ಸುಮಾರು 2 ಎಕರೆ 36 ಗುಂಟೆ ಪ್ರದೇಶದಲ್ಲಿರುವ ಫಾರ್ಮ್‌ಹೌಸ್‌ನಲ್ಲಿ ಒಂದು ವರ್ಷ ಕಾಲ ಈತ ಮ್ಯಾನೇಜರ್ ಆಗಿ ಕೆಲಸ ಮಾಡಿದ್ದ. ಫಾರ್ಮ್‌ಹೌಸ್ ಪಕ್ಕದ ಕಲ್ಲು ಬಂಡೆ ಮೇಲೆ ಶ್ರೀಧರ್ ಮೃತದೇಹ ಪತ್ತೆಯಾಗಿತ್ತು. ಶ್ರೀಧರ್ ಮೃತ ದೇಹ ಕಂಡು ಸ್ನೇಹಿತ ಪೊಲೀಸರಿಗೆ ಮಾಹಿತಿ ನೀಡಿದ್ದ. ಒಂದು ಡೆತ್ ನೋಟ್ ಶ್ರೀಧರ್ ಬರೆದಿಟ್ಟಿದ್ದಾನೆ. ತಾನು ಮಾನಸಿಕ ಖಿನ್ನತೆಗೊಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಅದರಲ್ಲಿ ಬರೆದಿದ್ದಾನೆ. ನನ್ನ ಸಾವಿಗೆ ನಾನೇ ಕಾರಣ. ಒಂಟಿತನ ಕಾಡುತ್ತಿದೆ. ಬದುಕಿದ್ದು ಮನೆ ಕಟ್ಟಬೇಕು ಎಂದು ಆಸೆ ಇತ್ತು. ಆಗಲಿಲ್ಲ. ನಾನು ಸತ್ತಮೇಲೆ ನನ್ನ ಗೋರಿ ಆದರೂ ಕಟ್ಟಿ ಎಂದು ಡೆತ್‌ನೋಟ್‌ನಲ್ಲಿ ಬರೆದಿದ್ದಾನೆ. ಆನೇಕಲ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ಪ್ರಕರಣ ದಾಖಲಾಗಿದೆ.

ನನ್ನ ಮೇಲೆ ಹಲ್ಲೆಗೂ ಸ್ಕೆಚ್ ಹಾಕಲಾಗಿತ್ತು

ಬೆಂಗಳೂರು: ಕೊಲೆ ಪ್ರಕರಣದಲ್ಲಿ ದರ್ಶನ್ ಅಂದರ್ ಆಗುತ್ತಿದ್ದಂತೆ ದರ್ಶನ್ ಅವತಾರಗಳು ಒಂದೊಂದಾಗಿ ಬಯಲಾಗುತ್ತಿವೆ. ದರ್ಶನ್ ಜತೆಗೆ ಆಪ್ತರಾಗಿದ್ದ ನಿರ್ಮಾಪಕ ಉಮಾಪತಿ ಗೌಡ, ದರ್ಶನ್ ಹಾಗೂ ಆತನ ಗ್ಯಾಂಗ್‌ನಿಂದಾದ ತಮಗಾದ ಕಿರುಕುಳದ ಬಗ್ಗೆ ಮಾತನಾಡಿದ್ದಾರೆ. ಹಿಂದೆ ದರ್ಶನ್ ಹೆಸರಿನಲ್ಲಿ ನಾನು ಇಪ್ಪತ್ತೈದು ಕೋಟಿ ರು.ಗಳ ಸಾಲ ಪಡೆಯಲು ಬ್ಯಾಂಕ್‌ಗೆ ಅರ್ಜಿ ಸಲ್ಲಿಸಿದ್ದೇನೆ ಎಂದು ನನ್ನ ಮೇಲೆ ಆರೋಪ ಹೊರಿಸಿದ್ದರು. ಅದು ನನ್ನನ್ನು ಹಣೆಯಲು ದರ್ಶನ್ ಮತ್ತು ಗ್ಯಾಂಗ್ ರಚಿಸಿದ್ದ ವ್ಯೂಹವಾಗಿತ್ತು. ಆಗ ದರ್ಶನ್ ಗ್ಯಾಂಗ್‌ನ ಹುಡುಗರು ನನಗೆ ಕರೆ ಮಾಡಿ ಬೆದರಿಕೆಯೊಡ್ಡಿದ್ದರು. ಒಮ್ಮೆ ನಾನು ಮೈಸೂರಿನಲ್ಲಿದ್ದಾಗ ನನಗೆ ಕರೆ ಮಾಡಿ ಕ್ಲಬ್‌ವೊಂದಕ್ಕೆ ಬರ ಹೇಳಿದರು. ಅಲ್ಲಿಗೆ ಹೋದಾಗ ನನ್ನನ್ನು ನಿಂದಿಸಿದರು. ಟೇಬಲ್ ಮೇಲೆ ಮಾರಕಾಸ್ತ್ರಗಳನ್ನಿಟ್ಟು ಬೆದರಿಸಿದರು. ಅಂದು ನಾನು ಅಲ್ಲಿಂದ ಬದುಕಿ ಬಂದಿದ್ದೆ ಹೆಚ್ಚು. ಕುಡಿತದ ಚಟ ಅವರನ್ನು ಇಲ್ಲಿವರೆಗೆ ತಂದು ನಿಲ್ಲಿಸಿದೆ ಎಂದು ಉಮಾಪತಿ ಹೇಳಿದರು.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಕೆಳಗೆ ಸಹಿ ಮಾಡಲಾಗಿರುವ ಅಧಿಕೃತ ಅಧಿಕಾರಿಯಾಗಿ ಹಣಕಾಸು ಸ್ವತ್ತುಗಳ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ 2002 ರ ಅಡಿಯಲ್ಲಿ **ವಿಸ್ಟ್ರಾ ಐಟಿಸಿಎಲ್ (ಇಂಡಿಯಾ) ಲಿಮಿಟೆಡ್ (CIN : U66020MH1995PLC095507)** ಮತ್ತು ಸೆಕ್ಷನ್ 13 (12) ಅಡಿಯಲ್ಲಿ ಪ್ರದಾನ ಮಾಡಲಾದ ಅಧಿಕಾರಗಳ ಅನುಷ್ಠಾನದಲ್ಲಿ ಭದ್ರತಾ ಆಸಕ್ತಿ (ಜಾರಿ) ನಿಯಮಗಳ ನಿಯಮ 3 ರೊಂದಿಗೆ ಓದಲಾಗುತ್ತದೆ, 2002 ದಿನಾಂಕ **28.02.2024** ರಂದು ಸಾಲಗಾರರಿಗೆ **ಎ.ಎಸ್. ಮುನಿಸ್ವಾಮಿ ರಾಜು ಎಚ್.ಯು.ಎಫ್ ನ ಸದಸ್ಯರಾಗಿ ಬ್ಲೂ ಹಾರಿಜಾನ್ ಹೋಟೆಲ್ಸ್ ಪ್ರೈವೇಟ್ ಲಿಮಿಟೆಡ್, ಶ್ರೀ. ಎ.ಸಿ.ಶ್ರೀನಿವಾಸರಾಜು, ಶ್ರೀ. ಎ.ವಿ. ಸಚ್ಚಿದಾನಂದ ರಾಜು, ಶ್ರೀ. ಎ.ವಿ. ನಿತಿನ್ ರಾಜು, ಶ್ರೀಮತಿ. ಎ.ಆರ್. ಪ್ರೇಮಾ, ಶ್ರೀ. ಎ.ಸಿ.ಶ್ರೀನಿವಾಸ ರಾಜು (ಕರ್ತಾ ಮತ್ತು ವ್ಯವಸ್ಥಾಪಕ); ಶ್ರೀಮತಿ. ಎ.ಸಿ.ಸುಂದರಮ್ಮ; ಶ್ರೀಮತಿ. ಎ. ಎಸ್. ವೀಣ; ಶ್ರೀಮತಿ. ಎ.ಆರ್. ಪ್ರೇಮ; ಶ್ರೀಮತಿ. ಎ.ಆರ್. ಶ್ರುತಿ; ಶ್ರೀ. ಎ.ವಿ. ನಿತಿನ್ ರಾಜು; ಶ್ರೀಮತಿ. ಎ.ವಿ. ಗೀತಾ; ಶ್ರೀಮತಿ. ಎ.ಆರ್. ಗಾಯತ್ರಿ; ಶ್ರೀ. ಎ.ವಿ. ಸಚ್ಚಿದಾನಂದ ರಾಜು; ಶ್ರೀಮತಿ. ಎ.ಸಿ.ಪುಷ್ಪ ರಾಜು; ಶ್ರೀಮತಿ. ಕೆ.ಸಿ. ಸುಧಾ; ಶ್ರೀಮತಿ. ಎಂ.ಜಯಮ್ಮ; ಮತ್ತು ಶ್ರೀಮತಿ. ಕೆ.ಸುಂದರಮ್ಮ, ಮತ್ತು, ವೆಂಟಕಮ್ಮ ಎಂಟರ್‌ಪ್ರೈಸಸ್ ಮತ್ತು ಶ್ರೀಮತಿ. ಎ.ವಿ. ಗೀತಾ** ಅವರ ಮೇಲೆ ಕರೆ ಮಾಡಿರುವಂತೆ, **22.10.2020** ರ ಡಿಬೆಂಚರ್ ಟ್ರಸ್ಟ್ ಡೀಡ್ ಮತ್ತು **28.02.2024** ರಂತೆ ಕಾಲಕಾಲಕ್ಕೆ ತಿದ್ದುಪಡಿ ಮತ್ತು ಪೂರಕವಾಗಿ ವಿರುದ್ಧ ನೋಟಿಸ್ ಸಂಖ್ಯೆ **DT/2023-24/ERP/4936** ರಲ್ಲಿ ನಮೂದಿಸಿರುವ ಮೊತ್ತ **ರೂ. 835,26,90,777/-(ರೂಪಾಯಿ ಎಂಟು ನೂರ ಮೂವತ್ತ ಐದು ಕೋಟಿ ಇಪ್ಪತ್ತ ಆರು ಲಕ್ಷ ತೊಂಬತ್ತು ಸಾವಿರದ ಏಳು ನೂರ ಎಪ್ಪತ್ತ ಏಳು ಮಾತ್ರ)** ಮತ್ತು ಸದರಿ ನೋಟಿಸ್ ನನ್ನು ಸ್ವೀಕರಿಸಿದ ದಿನಾಂಕದಿಂದ 60 ದಿನಗಳ ಒಳಗೆ ಅದರ ಬಡ್ಡಿಯನ್ನು ಸೇರಿಸಿ ಮರುಪಾವತಿಸಲು ಡಿಮ್ಯಾಂಡ್ ನೋಟಿಸ್ ಅನ್ನು ಹೊರಡಿಸಲಾಗಿದೆ.

ಸಾಲಗಾರರು ಸಾಲ ಮರುಪಾವತಿಸಲು ವಿಫಲವಾದ ಕಾರಣ ಕೆಳಗೆ ತಿಳಿಸಿರುವ **ಸಾಂಕೇತಿಕ ಸ್ವಾಧೀನ**ವನ್ನು ಅಧಿಕಾರ ಪ್ರಯೋಗ ಮಾಡುವಿಕೆ ಸೆಕ್ಷನ್ 13(4)ರ ಆಕ್ಟ್‌ನ ನಿಯಮ 8 ರೊಂದಿಗೆ ಓದಿ ತಿಳಿಸಿರುವ ನಿಯಮದ ಪ್ರಕಾರ ದಿನಾಂಕ **14.06.2024** ರಂದು ಮಾಡಲಾಗಿದೆ ಎಂದು ಸಾಲಗಾರನಿಗೆ ಮತ್ತು ಸಾರ್ವಜನಿಕವಾಗಿ ತಿಳಿಯಪಡಿಸಲಾಗುವುದು.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಆಸ್ತಿ ವ್ಯವಹಾರ ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ವಿಸ್ಟ್ರಾ ಐಟಿಸಿಎಲ್ (ಇಂಡಿಯಾ) ಲಿಮಿಟೆಡ್**ನ ಬಾಕಿಇರುವ ಮೊತ್ತ **ರೂ. 835,26,90,777/- (ರೂಪಾಯಿ ಎಂಟು ನೂರ ಮೂವತ್ತ ಐದು ಕೋಟಿ ಇಪ್ಪತ್ತ ಆರು ಲಕ್ಷ ತೊಂಬತ್ತು ಸಾವಿರದ ಏಳು ನೂರ ಎಪ್ಪತ್ತ ಏಳು ಮಾತ್ರ) 28.02.2024** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8)ರ ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಆಸ್ತಿ : 2

ಎಪಿಟೋಮ್ ಎಲಾನ್:- 19 ವಸತಿ ಘಟಕಗಳು, ಕೆಳಗೆ ಹೊಂದಿಸಿದಂತೆ, ಕಂಪನಿಯು ಒಡೆತನದ ಭೂಮಿಯಲ್ಲಿ ಅನುಪಾತದ ಅವಿಭಜಿತ ಆಸಕ್ತಿಯೊಂದಿಗೆ 'ಎಪಿಟೋಮ್ ಎಲಾನ್' ಹೆಸರಿನ ಯೋಜನೆಯ ಭಾಗವಾಗಿದೆ ಎಪಿಟೋಮ್ ಬಿಲ್ಡರ್ಸ್ ಪ್ರೈವೇಟ್ ಲಿಮಿಟೆಡ್‌ನಿಂದ ಅಭಿವೃದ್ಧಿಪಡಿಸಲಾಗಿದೆ: (I) ಭೂಮಿಯ ಸರ್ವೆ ಸಂಖ್ಯೆ 171/3 ಅಳತೆ 2 ಎಕರೆ 7.29 ಗುಂಟೆಗಳು; ಮತ್ತು (II) ಭೂಮಿಯ ಸರ್ವೆ ಸಂಖ್ಯೆ 172/5 ಅಳತೆಯ 9338 ಚದರ ಅಡಿ (ಅಂದರೆ ಸರಿಸುಮಾರು 0.21 ಎಕರೆಗಳಿಗೆ ಸಮನಾಗಿರುತ್ತದೆ), ಎಲ್ಲವೂ ಬೆಂಗಳೂರಿನ ಉತ್ತರಹಳ್ಳಿ ಹೋಬಳಿಯ ಕೊತ್ತನೂರು ಗ್ರಾಮದಲ್ಲಿ ಸ್ಥಿತವಾಗಿದೆ.

ಕ್ರಮ ಸಂಖ್ಯೆ	ಮಹಡಿ	ಘಟಕ ಸಂಖ್ಯೆ	ಮುಖ	ವಿಂಗ್	ಮಾದರಿ	ಹಂತ	ಬೆಡ್ ರೂಮ್ + ಬಾತ್ ರೂಮ್	ಚ.ಅ	ಯುಡಿಎಸ್
1.	ಆರನೆಯದು	ಎ - 601	ದಕ್ಷಿಣ	ವಿಂಗ್ - ಎ	ಪ್ರಕಾರ - ಎ	ಹಂತ 2	3 ಬಿಎಚ್‌ಕೆ + 3 ಬಾತ್ + ಪಿಆರ್	2050	596
2.	ಆರನೆಯದು	ಎ - 602	ಉತ್ತರ	ವಿಂಗ್ - ಎ	ಪ್ರಕಾರ - ಎ	ಹಂತ 2	3 ಬಿಎಚ್‌ಕೆ + 3 ಬಾತ್ + ಪಿಆರ್	2050	596
3.	ಆರನೆಯದು	ಎ - 603	ಪೂರ್ವ	ವಿಂಗ್ - ಎ	ಪ್ರಕಾರ - ಬಿ	ಹಂತ 2	3 ಬಿಎಚ್‌ಕೆ + 2 ಬಾತ್	1650	480
4.	ಆರನೆಯದು	ಬಿ - 606	ಪಶ್ಚಿಮ	ವಿಂಗ್ - ಬಿ	ಪ್ರಕಾರ - ಸಿ	ಹಂತ 2	2 ಬಿಎಚ್‌ಕೆ + 2 ಬಾತ್	1275	371
5.	ಆರನೆಯದು	ಸಿ - 609	ಪಶ್ಚಿಮ	ವಿಂಗ್ - ಸಿ	ಪ್ರಕಾರ - ಡಿ	ಹಂತ 1	3 ಬಿಎಚ್‌ಕೆ + 2 ಬಾತ್	1575	458
6.	ಆರನೆಯದು	ಸಿ - 610	ಪಶ್ಚಿಮ	ವಿಂಗ್ - ಸಿ	ಪ್ರಕಾರ - ಡಿ	ಹಂತ 1	3 ಬಿಎಚ್‌ಕೆ + 2 ಬಾತ್	1575	458
7.	ಆರನೆಯದು	ಸಿ - 612	ಪೂರ್ವ	ವಿಂಗ್ - ಸಿ	ಪ್ರಕಾರ - ಸಿ	ಹಂತ 1	2 ಬಿಎಚ್‌ಕೆ + 2 ಬಾತ್	1275	371
8.	ಆರನೆಯದು	ಡಿ - 613	ಪಶ್ಚಿಮ	ವಿಂಗ್ - ಡಿ	ಪ್ರಕಾರ - ಬಿ	ಹಂತ 1	3 ಬಿಎಚ್‌ಕೆ + 2 ಬಾತ್	1650	480
9.	ಹನ್ನೊಂದನೆಯದು	ಬಿ - 1105	ಪಶ್ಚಿಮ	ವಿಂಗ್ - ಬಿ	ಪ್ರಕಾರ - ಸಿ	ಹಂತ 2	2 ಬಿಎಚ್‌ಕೆ + 2 ಬಾತ್	1275	371
10.	ಹನ್ನೊಂದನೆಯದು	ಬಿ - 1106	ಪಶ್ಚಿಮ	ವಿಂಗ್ - ಬಿ	ಪ್ರಕಾರ - ಸಿ	ಹಂತ 2	2 ಬಿಎಚ್‌ಕೆ + 2 ಬಾತ್	1275	371
11.	ಹನ್ನೊಂದನೆಯದು	ಬಿ - 1107	ಪೂರ್ವ	ವಿಂಗ್ - ಬಿ	ಪ್ರಕಾರ - ಡಿ	ಹಂತ 2	3 ಬಿಎಚ್‌ಕೆ + 2 ಬಾತ್	1575	458
12.	ಹನ್ನೊಂದನೆಯದು	ಬಿ - 1108	ಪೂರ್ವ	ವಿಂಗ್ - ಬಿ	ಪ್ರಕಾರ - ಡಿ	ಹಂತ 2	3 ಬಿಎಚ್‌ಕೆ + 2 ಬಾತ್	1575	458
13.	ಹನ್ನೊಂದನೆಯದು	ಸಿ - 1109	ಪಶ್ಚಿಮ	ವಿಂಗ್ - ಸಿ	ಪ್ರಕಾರ - ಡಿ	ಹಂತ 1	3 ಬಿಎಚ್‌ಕೆ + 2 ಬಾತ್	1575	458
14.	ಹನ್ನೊಂದನೆಯದು	ಸಿ - 1110	ಪಶ್ಚಿಮ	ವಿಂಗ್ - ಸಿ	ಪ್ರಕಾರ - ಡಿ	ಹಂತ 1	3 ಬಿಎಚ್‌ಕೆ + 2 ಬಾತ್	1575	458
15.	ಹನ್ನೊಂದನೆಯದು	ಸಿ - 1112	ಪೂರ್ವ	ವಿಂಗ್ - ಸಿ	ಪ್ರಕಾರ - ಸಿ	ಹಂತ 1	2 ಬಿಎಚ್‌ಕೆ + 2 ಬಾತ್	1275	371
16.	ಹನ್ನೆರಡನೆಯದು	ಎ - 1203	ಪೂರ್ವ	ವಿಂಗ್ - ಎ	ಪ್ರಕಾರ - ಬಿ	ಹಂತ 2	3 ಬಿಎಚ್‌ಕೆ + 2 ಬಾತ್	1650	480
17.	ಹನ್ನೆರಡನೆಯದು	ಎ - 1204	ಪೂರ್ವ	ವಿಂಗ್ - ಎ	ಪ್ರಕಾರ - ಬಿ	ಹಂತ 2	3 ಬಿಎಚ್‌ಕೆ + 2 ಬಾತ್	1650	480
18.	ಹನ್ನೆರಡನೆಯದು	ಡಿ - 1213	ಪಶ್ಚಿಮ	ವಿಂಗ್ - ಡಿ	ಪ್ರಕಾರ - ಬಿ	ಹಂತ 1	3 ಬಿಎಚ್‌ಕೆ + 2 ಬಾತ್	1650	480
19.	ಹನ್ನೆರಡನೆಯದು	ಡಿ - 1214	ಪಶ್ಚಿಮ	ವಿಂಗ್ - ಡಿ	ಪ್ರಕಾರ - ಬಿ	ಹಂತ 1	3 ಬಿಎಚ್‌ಕೆ + 2 ಬಾತ್	1650	480

ದಿನಾಂಕ : 14.06.2024
ಸ್ಥಳ : ಬೆಂಗಳೂರು
ಅಧಿಕೃತ ಅಧಿಕಾರಿ
ವಿಸ್ಟ್ರಾ ಐಟಿಸಿಎಲ್ (ಭಾರತ) ಲಿಮಿಟೆಡ್

Norican Group
Shaping Industry

ಡೀಸಾ ಇಂಡಿಯಾ ಲಿಮಿಟೆಡ್
ನೋಂದಾಯಿತ ಕಚೇರಿ: ವರ್ಲ್ಡ್ ಟ್ರೇಡ್ ಸೆಂಟರ್ (ಡಬ್ಲ್ಯೂಟಿಸಿ), 6ನೇ ಮಹಡಿ, ಯೂನಿಟ್ ಸಂ. ಎಸ್-604, ಬ್ರಿಗೇಡ್ ಗೇಟ್‌ವೇ ಕ್ಯಾಂಪಸ್, 26/1, ಡಾ. ರಾಜ್‌ಕುಮಾರ್ ರಸ್ತೆ, ಮಲ್ಲೇಶ್ವರಂ-ರಾಜಾಜಿನಗರ, ಬೆಂಗಳೂರು-560055.
ಫೋನ್: +91 80 2249 6700, ಫ್ಯಾಕ್ಸ್: +91 80 2249 6750.
ಇ-ಮೇಲ್: investor.relations@noricangroup.com www.disagroup.com
CIN No: L85110KA1984PLC006116

ಸೂಚನೆ
ಸಂಸ್ಥೆಯ ಸಾಮಾನ್ಯ ಷೇರುಗಳನ್ನು ಹೂಡಿಕೆದಾರರ ರಕ್ಷಣೆ ಮತ್ತು ಶಿಕ್ಷಣ ನಿಧಿಗೆ ವರ್ಗಾವಣೆ (ಐಇಪಿಎಫ್) ಕುರಿತು

ಹೂಡಿಕೆದಾರರ ರಕ್ಷಣೆ ಮತ್ತು ಶಿಕ್ಷಣ ನಿಧಿ ಪ್ರಾಧಿಕಾರ (ಲೆಕ್ಕ ಪತ್ರ ಪರಿಶೋಧನೆ, ವರ್ಗಾವಣೆ ಮತ್ತು ಮರುಪಾವತಿ) ನಿಯಮಾವಳಿಗಳು 2016 (''ನಿಯಮಾವಳಿಗಳು'') ಮತ್ತು ಇಂದಿನವರೆಗಿನ ತಿದ್ದುಪಡಿಯ ಅನುಸಾರ **2016-17 ಆರ್ಥಿಕ ವರ್ಷದಲ್ಲಿ ಘೋಷಿಸಲಾದ ಅಂತಿಮ ಲಾಭಾಂಶ,** ಯಾವುದು ಏಳು ವರ್ಷಗಳ ಕಾಲ ನಗದೀಕರಿಸಿಕೊಳ್ಳದೆ ಉಳಿದಿದೆಯೋ ಅದನ್ನು ದಿನಾಂಕ **ಅಕ್ಟೋಬರ್ 4, 2024** ರಂದು ಐಇಪಿಎಫ್‌ಗೆ ವರ್ಗಾಯಿಸಲಾಗುವುದು. ಇದಕ್ಕೆ ಅನುಗುಣವಾಗಿ ಸತತ ಏಳು ವರ್ಷಗಳ ಕಾಲ ನಗದೀಕರಿಸದೆ ಉಳಿದ ಲಾಭಾಂಷಕ್ಕೆ ಸಂಬಂಧಿಸಿದ ಷೇರುಗಳನ್ನೂ ನಿಯಾವಳಿಗಳಲ್ಲಿ ಸೂಚಿಸಿರುವ ಪ್ರಕ್ರಿಯೆಗನುಸಾರ ಐಇಪಿಎಫ್‌ಗೆ ವರ್ಗಾಯಿಸಲಾಗುವುದು.

ನ್ಯಾಯಾಲಯ/ಟ್ರಿಬ್ಯೂನಲ್‌ಗಳು ವರ್ಗಾಯಿಸಬಾರದೆಂದು ನಿರ್ದಿಷ್ಟವಾಗಿ ಸೂಚಿಸಿದ ಷೇರುಗಳನ್ನು ಅಥವಾ ಡಿಪಾಸಿಟರೀಸ್ ಕಾಯಿದೆ 1996ರ ಅನುಸಾರ ಆಧಾರಮಾಡಿದ/ಅಡವಿಟ್ಟ ಷೇರುಗಳನ್ನು ಸಂಸ್ಥೆಯು ಐಇಪಿಎಫ್‌ಗೆ ವರ್ಗಾಯಿಸುವುದಿಲ್ಲ.

ನಿಯಮಾವಳಿಗಳಿಗನುಸಾರವಾಗಿ ಸಂಸ್ಥೆಯು ಐಇಪಿಎಫ್‌ಗೆ ವರ್ಗಾವಣೆಯಾಗಲು ಅರ್ಹವಾದ ಷೇರುಗಳ ವಿವರಗಳನ್ನು ಆಯಾ ಷೇರುದಾರರ ಅವಗಾಹನೆಗೆ ವೈಯಕ್ತಿಕವಾಗಿ ತಂದಿದೆ ಹಾಗೂ ತನ್ನ ಜಾಲಾತಾಣದಲ್ಲಿ ನೀಡಿದೆ. ಸದರಿ ಷೇರುದಾರರು ಕಂಪನಿಯ ಜಾಲತಾಣದ ಈ ಕೊಂಡಿಯನ್ನು https://www.disagroup.com/en-in/investor-relations/investor-grievances ಬಳಸಿಕೊಂಡು ನಗದೀಕರಿಸದ ಲಾಭಾಂಶ ಮತ್ತು ವರ್ಗಾವಣೆಯಾಗುವ ಷೇರುಗಳ ವಿವರಗಳನ್ನು ಪರಿಶೀಲಿಸಬಹುದು.

ಷೇರುದಾರರು 2016-17 ಆರ್ಥಿಕ ವರ್ಷದ ಹಾಗೂ ಆನಂತರದ ವರ್ಷಗಳ ಅಂತಿಮ ಲಾಭಾಂಶವನ್ನು ಐಇಪಿಎಫ್‌ಗೆ ವರ್ಗಾಯಿಸುವ ಮೊದಲು ನಗದೀಕರಿಸಿಕೊಳ್ಳಲು ವಿನಂತಿಮಾಡಲಾಗಿದೆ.

ಐಇಪಿಎಫ್‌ಗೆ ವರ್ಗಾವಣೆಯಾಗಲು ಅರ್ಹವಾಗಿರುವ ಭೌತಿಕ ಷೇರುಗಳನ್ನು ಸಂಸ್ಥೆಯು ಮೂಲ ಷೇರುಗಳ ಬದಲಿಗೆ ದ್ವಿಪ್ರತಿ ಷೇರು ಪ್ರಮಾಣ ಪತ್ರ(ಗಳನ್ನು)ವನ್ನು ಐಇಪಿಎಫ್‌ಗೆ ವರ್ಗಾವಣೆ ಮಾಡುವ ಸಲುವಾಗಿ ಒದಗಿಸುತ್ತದೆ ಮತ್ತು ಸಂಸ್ಥೆಯು ಡಿಪಾಸಿಟರಿಗೆ ಕಾರ್ಪೊರೇಟ್ ಪ್ರಕ್ರಿಯೆಯ ಮೂಲಕ ದ್ವಿಪ್ರತಿ ಷೇರು ಪ್ರಮಾಣಪತ್ರಗಳನ್ನು ಡಿಮ್ಯಾಟ್ ರೂಪಕ್ಕೆ ಬದಲಿಸಿ ಐಇಪಿಎಫ್‌ಗೆ ವರ್ಗಾಯಿಸಲು ತಿಳಿಸುತ್ತದೆ ಎಂಬುದನ್ನು ಗಮನಿಸಬಹುದು. ಮೂಲ ಷೇರುದಾರರ ಹೆಸರಿನಲ್ಲಿ ನೋಂದಾಯಿಸಲಾಗಿರುವ ಮೂಲ ಷೇರು ಪ್ರಮಾಣ ಪತ್ರಗಳು ಸ್ವಯಂಚಾಲಿತವಾಗಿ ರದ್ದುಗೊಳ್ಳುತ್ತವೆ ಮತ್ತು ವಹಿವಾಟಿಗೆ ಅನರ್ಹವಾಗುತ್ತವೆ. ಐಇಪಿಎಫ್‌ಗೆ ವರ್ಗಾವಣೆಯಾಗಲು ಅರ್ಹವಾಗಿರುವ ಡಿಮ್ಯಾಟ್ ರೂಪದಲ್ಲಿರುವ ಷೇರುಗಳನ್ನು ಐಇಪಿಎಫ್ ಡಿಮ್ಯಾಟ್ ಖಾತೆಗೆ ವರ್ಗಾಯಿಸುವಂತೆ ಸಂಸ್ಥೆಯು ಡಿಪಾಸಿಟರಿಗೆ ಕಾರ್ಪೊರೇಟ್ ಪ್ರಕ್ರಿಯೆ ಮೂಲಕ ತಿಳಿಸುತ್ತದೆ.

ಸಂಸ್ಥೆಯು ತನ್ನ ಜಾಲತಾಣದಲ್ಲಿ ಐಇಪಿಎಫ್‌ಗೆ ವರ್ಗಾಯಿಸುವ ಸಲುವಾಗಿ ಒದಗಿಸಿರುವ ಮಾಹಿತಿಯು ಅಗತ್ಯಕ್ಕೆ ಪೂರೈಸುವಷ್ಟಿದೆ ಮತ್ತು ಸಾಕಷ್ಟಿದೆ ಎಂದು ಪರಿಗಣಿಸಿದೆ ಎಂಬುದನ್ನು ಷೇರುದಾರರು ಗಮನಿಸಬಹುದು.

ಒಂದು ವೇಳೆ ಸದರಿ ಷೇರುದಾರರಿಂದ ದಿನಾಂಕ ಸೆಪ್ಟಂಬರ್ 20, 2024ರ ಒಳಗೆ ಯಾವುದೇ ಮಾಹಿತಿ ಬರದಿದ್ದಲ್ಲಿ ನಿಯಮಾವಳಿಯನ್ನು ಅನುಸರಿಸುವ ದೃಷ್ಟಿಯಿಂದ ಸಂಸ್ಥೆಯು ಲಾಭಾಂಶವನ್ನು ಐಇಪಿಎಫ್‌ಗೆ ನಿಗದಿತ ದಿನಾಂಕ ಅಂದರೆ ಅಕ್ಟೋಬರ್ 4, 2024ಕ್ಕೆ ವರ್ಗಾಯಿಸುತ್ತದೆ.

ಸತತ ಏಳು ವರ್ಷಗಳ ಕಾಲ ಯಾವ ಷೇರುಗಳ ಲಾಭಾಂಶಗಳನ್ನು ನಗದೀಕರಿಸಿಲ್ಲವೋ ಅದಕ್ಕೆ ಸಂಬಂಧಿಸಿದ ಷೇರುಗಳನ್ನು ಸಹ ಮುಂದಿನ ಯಾವ ಸೂಚನೆಗಳನ್ನೂ ನೀಡದೆ ಐಇಪಿಎಫ್‌ಗೆ ವರ್ಗಾಯಿಸಲಾಗುವುದು.

ಐಇಪಿಎಫ್‌ಗೆ ವರ್ಗಾವಣೆಯಾದ ನಗದೀಕರಿಸಿಲ್ಲದ ಲಾಭಾಂಶ ಮತ್ತು ಷೇರುಗಳನ್ನು ಕುರಿತು ಯಾವ ಹಕ್ಕು/ಬಾಧ್ಯತೆಗಳೂ ಸಂಸ್ಥೆಯ ವಿರುದ್ಧ ನಿಲ್ಲುವುದಿಲ್ಲ. ಷೇರುದಾರರು ನಿಯಮಾವಳಿಗಳಲ್ಲಿ ಸೂಚಿಸಿರುವ ಪ್ರಕ್ರಿಯೆಯನ್ನು ಅನುಸರಿಸಿ ಐಇಪಿಎಫ್‌ಗೆ ವರ್ಗಾವಣೆಗೊಂಡ ಷೇರುಗಳು, ಲಾಭಾಂಶ ಮತ್ತು ಒಟ್ಟಾಗಿರುವ ಸವಲತ್ತುಗಳು, ಏನಾದರೂ ಇದ್ದಲ್ಲಿ ಐಇಪಿಎಫ್‌ನಿಂದ ಪಡೆದುಕೊಳ್ಳಬಹುದಾಗಿರುತ್ತದೆ.

ಸದರಿ ವಿಷಯ ಕುರಿತಾದ ಯಾವುದೇ ಆಕ್ಷೇಪಗಳಿದ್ದಲ್ಲಿ ಷೇರುದಾರರು ಸಂಸ್ಥೆಯ ರಿಜಿಸ್ಟ್ರಾರ್ ಮತು ಷೇರು ವರ್ಗಾವಣೆ ಏಜೆಂಟ್, ಶ್ರೀ ಹರೀಶ್, ವ್ಯವಸ್ಥಾಪಕರು, ಇಂಟೆಗ್ರೇಟೆಡ್ ರಿಜಿಸ್ಟರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ನಂ.30, ರಮಣಾ ರೆಸಿಡೆನ್ಸಿ, 4ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003, (ದೂರವಾಣಿ: +91-80-23460815-818, ಫ್ಯಾಕ್ಸ್: +91-80-23460819 ಅಥವಾ ಇ-ಮೇಲ್ irg@integratedindia.in) ಮೂಲಕ ಸಂಪರ್ಕಿಸಬಹುದು.

ಡೀಸಾ ಇಂಡಿಯಾ ಲಿಮಿಟೆಡ್ ಪರವಾಗಿ
ಶ್ರೀತಿ ಎಂ ಎಸ್
ಸಂಸ್ಥೆಯ ಕಾರ್ಯದರ್ಶಿ
ಸ್ಥಳ : ಬೆಂಗಳೂರು
ದಿನಾಂಕ : ಜೂನ್ 18, 2024

ಸಮಾಚಾರ ಸಣ್ಣದಲ್ಲ

ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ಬುಧವಾರ ಜೂ.19ರಂದು ನಿರ್ವಹಣಾ ಕಾರ್ಯವನ್ನು ಹಮ್ಮಿಕೊಳ್ಳುತ್ತಿರುವುದರಿಂದ ಬೆಳಗ್ಗೆ 10.00ರಿಂದ ಸಂಜೆ 3.00 ಗಂಟೆಯವರೆಗೆ ಕೆಲ ಭಾಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ. ನಗರದ 66/11ಕೆವಿ ಸೌದೇಲಾ ವಿ.ವಿ.ಕೇಂದ್ರ, ವಿಶ್ವಪ್ರಿಯ ಲೇಔಟ್, ಬೇಗೂರು ಕೊಪ್ಪ ರೋಡ್, ದೇವರಚಿಕ್ಕನಹಳ್ಳಿ,ಅಕ್ಷಯನಗರ, ತೇಜಸ್ವಿನಿ ನಗರ, ಹಿರಾನಂದನಿ ಅಪಾರ್ಟ್‌ಮೆಂಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು ಹಾಗೂ 66/11ಕೆವಿ ಬನ್ನೇರುಘಟ್ಟ ವಿ.ವಿ.ಕೇಂದ್ರವೀವರ್ಸ್ ಕಾಲೋನಿ, ಗೊತ್ತಿಗೆರೆ ಮಂಟಪ, ಪೂರ್ವಂಕರ, ಎ.ಎಂ.ಸಿ. ಕಾಲೇಜ್, ರಾಗಿಹಳ್ಳಿ,ಕಸರಗುಪ್ಪೆ, ಶಿವನಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಸಾರ್ವಜನಿಕರು ತಮ್ಮ ದೂರು ಗಳನ್ನು ದಾಖಲಿಸಲು 1912ಗೆ ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಶೇ.60ರಷ್ಟು ಕನ್ನಡ ನಾಮಫಲಕ ಕಡ್ಡಾಯ

ಬೆಂಗಳೂರು: ರಾಜ್ಯದಲ್ಲಿ ವಹಿವಾಟು ನಡೆಸುತ್ತಿರುವ ಎಲ್ಲಾ ಸರಕಾರಿ, ಸ್ವಾಯತ್ತ ಮತ್ತು ಖಾಸಗಿ ಸಂಸ್ಥೆಗಳ ನಾಮಫಲಕದಲ್ಲಿ ಶೇ.60 ಕನ್ನಡ ಬಳಸುವಂತೆ ಸರಕಾರ ಆದೇಶ ಹೊರಡಿಸಿದೆ.

ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ಅಧಿನಿಯಮ 2024 ರ 17ನೇ ಪ್ರಕರಣದಲ್ಲಿನ 6ನೇ ಉಪಪ್ರಕರಣದ ಅನ್ವಯ ಇನ್ನು ಮುಂದೆ ಶೇ.60 ರಷ್ಟು ಕನ್ನಡ ನಾಮಫಲಕ ಅಳವಡಿಸುವುದು ರಾಜ್ಯಾದ್ಯಂತ ಕಡ್ಡಾಯವಾಗಿದ್ದು, ಸರಕಾರದ ವಿವಿಧ ಇಲಾಖೆಗಳು, ಸ್ವಾಯತ್ತ ಸಂಸ್ಥೆಗಳು, ಸಹಕಾರ ಮತ್ತು ಸಾರ್ವಜನಿಕ ಉದ್ಯಮಗಳು, ಶೈಕ್ಷಣಿಕ ಸಂಸ್ಥೆಗಳು, ಬ್ಯಾಂಕ್‌ಗಳು, ಇತರೆ ಹಣಕಾಸು ಸಂಸ್ಥೆಗಳು, ಖಾಸಗಿ ಕೈಗಾರಿಕೆಗಳು, ವಿಶ್ವವಿದ್ಯಾಲಯಗಳು, ಸ್ಥಳೀಯ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಕಾರ್ಯ ನಿರ್ವಹಿಸುತ್ತಿರುವ ವಾಣಿಜ್ಯ, ಕೈಗಾರಿಕೆ, ವ್ಯಾಪಾರ ಸಂಸ್ಥೆಗಳು, ಪ್ರಯೋಗಾಲಯಗಳು, ಮನರಂಜನಾ ಕೇಂದ್ರ, ಹೋಟೆಲ್ ಮುಂತಾದವುಗಳ ಹೆಸರುಗಳನ್ನು ಪ್ರದರ್ಶಿಸಲು ನಾಮಫಲಕದ ಮೇಲ್ಭಾಗದಲ್ಲಿ ಶೇ. 60 ರಷ್ಟು ಕನ್ನಡ ಕಡ್ಡಾಯವಾಗಿ ಇರಬೇಕು. ಕನ್ನಡದ ಹೊರತಾಗಿ ಬೇರೊಂದು ಭಾಷೆಯನ್ನು ನಾಮಫಲಕದಲ್ಲಿ ಬಳಸಲು ಅಪೇಕ್ಷಿಸಿದರೆ ಕನ್ನಡ ಭಾಷೆಯ ಬಳಕೆಯ ನಂತರ, ಇತರ ಭಾಷೆಯನ್ನು ಶೇ. 40 ರಷ್ಟು ಬಳಸಲು ಅವಕಾಶ ಕಲ್ಪಿಸಲಾಗಿದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಾಯ: ರಾಜ್ಯಾದ್ಯಂತ ಪ್ರಸ್ತುತ ಕೆಲವು ಅಂಗಡಿ ಮಾಲೀಕರು, ವ್ಯಾಪಾರ ಸಂಸ್ಥೆಗಳು, ಸಾರ್ವಜನಿಕರು ನಾಮಫಲಕಗಳಲ್ಲಿ ಕನ್ನಡ ಪದಗಳನ್ನು ತಪ್ಪು ತಪ್ಪಾಗಿ ಬಳಸಿರುವ ಬಗ್ಗೆ, ಸಾಮಾಜಿಕ ಜಾಲತಾಣಗಳಲ್ಲಿ ಸಾರ್ವಜನಿಕರು ಸರಕಾರಕ್ಕೆ ಮತ್ತು ಪ್ರಾಧಿಕಾರಕ್ಕೆ ದೂರುಗಳನ್ನು ಸಲ್ಲಿಸಿರುವುದನ್ನು ಗಂಭೀರವಾಗಿ ಪರಿಗಣಿಸಿದೆ.

ನೀರಿನ ಬೆಲೆ ಏರಿಕೆಯ ಸ್ಪಷ್ಟ ಸೂಚನೆ ನೀಡಿದ ಡಿಸಿಎಂ | ಕಳೆದ 14 ವರ್ಷದಿಂದ ದರ ಏರಿಕೆಯಾಗಿಲ್ಲ

ನೀರಿನ ಬೆಲೆ ಏರಿಕೆ ಅನಿವಾರ್ಯ: ಡಿಕೆಶಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪೆಟ್ರೋಲ್-ಡೀಸೆಲ್ ದರ ಏರಿಕೆಯ ಬೆನ್ನಲ್ಲೇ, ಬೆಂಗಳೂರಿನಲ್ಲಿ ಕುಡಿಯುವ ನೀರಿನ ಬೆಲೆ ಏರಿಕೆಯ ಸಾಧ್ಯತೆಯಿದೆ ಎನ್ನಲಾಗಿತ್ತು. ಇದೀಗ ಈ ಬಗ್ಗೆ ಸ್ಪಷ್ಟ ಸೂಚನೆ ನೀಡಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ನೀರಿನ ಬೆಲೆ ಏರಿಕೆ ಅನಿವಾರ್ಯ ಎಂದಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಕುಡಿಯುವ ನೀರಿನ ಶುಲ್ಕ ಏರಿಕೆಯನ್ನು 14 ವರ್ಷದಿಂದ ಮಾಡಿಲ್ಲ. ವಿದ್ಯುತ್ ಬಿಲ್ ಕಟ್ಟಲು ಆಗುತ್ತಿಲ್ಲ, ಸಿಬ್ಬಂದಿಗೆ ಸಂಬಳ ಕೊಡುವುದಕ್ಕೂ ಕಷ್ಟವಾಗಿದೆ. ಹೀಗಿರುವಾಗ ಬೆಲೆ ಏರಿಸದೇ ಬೇರೆ ದಾರಿಯಿಲ್ಲ ಎಂದಿದ್ದಾರೆ.

ಪ್ರತಿವರ್ಷ ಜಲಮಂಡಳಿಗೆ ನಷ್ಟವಾಗುತ್ತಿದೆ. ಆದರೆ ಬೆಂಗಳೂರಿಗೆ ಕುಡಿಯುವ ನೀರು ಬೇಕು. ನೀರಿನ ದರ ಹೆಚ್ಚು ಮಾಡಬೇಕಾ ಬೇಡವಾ ನೀವೇ ಹೇಳಿ. ಬಿಜೆಪಿಯವರಿದ್ದಾಗ ವಿದ್ಯುತ್ ಬೆಲೆ ಜಾಸ್ತಿ ಮಾಡಿದರು. ನಾವು ಬಂದು ಕಡಿಮೆ ಮಾಡಿದೆವು. ಕಡಿಮೆ ಮಾಡಿದರೆ ಮಾತೇ ಆಡುವುದಿಲ್ಲ . ದರ ಹೆಚ್ಚಿಸಿದರೆ ಮಾತನಾಡುತ್ತೀರಿ. 400 ರು.ಇದ್ದ ಗ್ಯಾಸ್ ಸಿಲಿಂಡರ್ ಒಂದು ಸಾವಿರವಾಯಿತು. 75 ರು.ಇದ್ದ ಪೆಟ್ರೋಲ್ 100 ರು. ಆಯಿತು. ಮೂರು ರು. ಜಾಸ್ತಿನಾ, 30 ರು. ಜಾಸ್ತಿನಾ ಎಂದು ಪ್ರಶ್ನಿಸಿದರು.

20 ಸಾವಿರ ಎಕರೆ ಎಲ್ಲಿದೆ?

ಬೆಂಗಳೂರು ಸುತ್ತಮುತ್ತಲಿನ 20 ಸಾವಿರ ಎಕರೆ ಜಮೀನು ಮಾರಾಟದ ಬಗ್ಗೆ ಕೇಳಿದಾಗ ಇದು ಸುಳ್ಳು ಸುದ್ದಿ. 20 ಸಾವಿರ ಎಕರೆ ಜಮೀನು ಎಲ್ಲಿದೆ. ನಾವು ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣದ ಸಲುವಾಗಿ ಭೂಸ್ವಾಧೀನದ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. 60/40 ಹಂಚಿಕೆಯ ಸೂತ್ರದ ಆಧಾರದ ಮೇಲೆ ನಿರ್ಮಾಣ ಮಾಡಲು ಹೊರಟಿದ್ದೇವೆ. ಇದರಿಂದ ರೈತರಿಗೂ ಹೆಚ್ಚು ಅನುಕೂಲವಾಗಲಿದೆ. ಇದರಿಂದ ರೈತರಿಗೆ ಐದು ಕೋಟಿಯಷ್ಟು ಪರಿಹಾರ ದೊರೆಯುತ್ತದೆ. ಇದರ ಬಗ್ಗೆ ಚರ್ಚೆ ನಡೆಸುತ್ತಿದ್ದೇವೆ ಎಂದು ತಿಳಿಸಿದರು. ಬಿಬಿಎಂಪಿಯ ಜಾಹೀರಾತು ನಿಯಮಾವಳಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ಮುಂದಿನ ಒಂದು ವಾರದೊಳಗೆ ನೂತನ ಜಾಹೀರಾತು ನೀತಿ ಜಾರಿಗೆ ತರಲಾಗುವುದು. ಮೆಟ್ರೋ ಪಿಲ್ಲರ್‌ಗಳನ್ನು ಬಳಸಿಕೊಳ್ಳುವ ಬಗ್ಗೆ ಚಿಂತನೆ ನಡೆಸಲಾಗುವುದು. ಬೃಹತ್ ಹೋರ್ಡಿಂಗ್‌ಗಳಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಪ್ರಥಮ ಹಂತವಾಗಿ ಫ್ಲೆಕ್ಸ್ ನಿಷೇಧಿಸಲಾಗಿದೆ. 15 ಸಾವಿರಕ್ಕೂ ಹೆಚ್ಚು ಫ್ಲೆಕ್ಸ್ ತೆರವುಗೊಳಿಸಿ ದೂರು ದಾಖಲಿಸಿಕೊಳ್ಳಲಾಗಿದೆ ಎಂದರು.

ಬೆಂಗಳೂರು ನಿರ್ಮಾತೃ ಕೆಂಪೇಗೌಡರ 515 ನೇ ಜಯಂತಿ ಆಚರಣೆ ಸಂಬಂಧ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಅದ ಡಿಸಿಎಂ ಡಿ.ಕೆ ಶಿವಕುಮಾರ್ ವಿಧಾನಸೌಧದಲ್ಲಿ ಮಂಗಳವಾರ ನಾನಾ ಸಂಘಟನೆಗಳ ಮುಖಂಡರ ಜತೆ ಸಮಾಲೋಚನೆ ನಡೆಸಿದರು. ಈ ವೇಳೆ ಸಚಿವ ಕೃಷ್ಣ ಬೈರೇಗೌಡ, ಕೆ.ಎಚ್ ಮುನಿಯಪ್ಪ, ಶಾಸಕ ವಿಶ್ವನಾಥ್ ಇದ್ದರು.

ಕೆಂಪೇಗೌಡರ ಜಯಂತಿ ಕೇವಲ ಸರಕಾರಿ ಕಾರ್ಯಕ್ರಮವಲ್ಲ. ಈ ರೀತಿ ನಮ್ಮ ಸರಕಾರ ಬಿಂಬಿಸುವುದಿಲ್ಲ. ಎಲ್ಲ ವರ್ಗದ ಜನರಿಗೂ ಕೆಂಪೇಗೌಡರು ಸಹಕಾರ ನೀಡಿದ್ದಾರೆ. ಬಸವಣ್ಣನ ಜಯಂತಿಯನ್ನು ಕೇವಲ ಲಿಂಗಾಯತರು ಹಾಗೂ ಅಂಬೇಡ್ಕರ್ ಅವರ ಜಯಂತಿಯನ್ನು ಪರಿಶಿಷ್ಟರು ಮಾಡುತ್ತಿದ್ದಾರೆ. ನಾವು ಎಲ್ಲಾ ಸಂಘ -ಸಂಸ್ಥೆಗಳನ್ನು, ಸಮುದಾಯಗಳನ್ನು ಸೇರಿಸಿಕೊಂಡು ಆಚರಣೆ ಮಾಡಬೇಕು.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಶಂಕರ್ ನೇತೃತ್ವದಲ್ಲಿ ಕೆಂಪೇಗೌಡ ಪ್ರಶಸ್ತಿ ಸಮಿತಿ

ಬಿ.ಎಲ್.ಶಂಕರ್ ಅವರ ನೇತೃತ್ವದಲ್ಲಿ ಕೆಂಪೇಗೌಡ ಪ್ರಶಸ್ತಿ ಆಯ್ಕೆ ಸಮಿತಿ ರಚನೆ ಮಾಡಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಿಡಿಎ, ಬಿಬಿಎಂಪಿಯಿಂದ ಕೆಂಪೇಗೌಡ ಪ್ರಶಸ್ತಿ ನೀಡಲು ಯೋಜಿಸಲಾಗಿದೆ. ಪ್ರಶಸ್ತಿಗೆ ನಾನು ಒಂದಷ್ಟು ಹೆಸರು ಸೂಚಿಸಿದ್ದೆ. ವಾರ್ಡ್ ಮಟ್ಟದಲ್ಲಿ ಅಥವಾ ಬೇರೆ ಸ್ವರೂಪದಲ್ಲಿ ಪ್ರಶಸ್ತಿ ನೀಡಬೇಕಾ ಎಂದು ಗೊಂದಲ ಇರುವ ಕಾರಣಕ್ಕೆ ಮುಂದುವರಿ ದಿಲ್ಲ. ಮುಂದಿನ ದಿನಗಳಲ್ಲಿ ಈ ಪ್ರಶಸ್ತಿ ನೀಡಲಾಗುವುದು ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಸಮಾಧಿ, ಕೋಟೆ ಅಭಿವೃದ್ಧಿಗೆ ಕ್ರಿಯಾ ಯೋಜನೆ

ಕೆಂಪೇಗೌಡರ ಮೂಲಸಮಾಧಿ ಸ್ಥಳ, ಕೋಟೆಯನ್ನು ಅಭಿವೃದ್ಧಿಪಡಿಸುವ ಕ್ರಿಯಾಯೋಜನೆ ಸಿದ್ಧಪಡಿಸಲಾಗಿದೆ. ಅವರ ಬಗ್ಗೆ ಮಾಹಿತಿಯೂ ಸಿಗಬೇಕು ಹಾಗೂ ಪ್ರವಾಸಿಸ್ಥಳವಾಗಿಯೂ ಪರಿವರ್ತನೆಯಾಗಬೇಕು. ಸಚಿವ ಕೆ.ಎಚ್.ಮುನಿಯಪ್ಪ ಕ್ಷೇತ್ರದಲ್ಲಿ ಕೆಂಪೇಗೌಡರ ಜನ್ಮಸ್ಥಳ ಅಭಿವೃದ್ಧಿಗೆ 10 ಎಕರೆ ಮಂಜೂರು ಮಾಡಲಾಗಿದೆ. ಶೀಘ್ರ ಸ್ಥಳ ಪರಿಶೀಲನೆ ನಡೆಸಲಾಗುವುದು. ಸುಮನಹಳ್ಳಿಯಲ್ಲಿ ಕೆಂಪೇಗೌಡ ಪ್ರಾಧಿಕಾರದ ಕಚೇರಿಗಾಗಿ 5 ಎಕರೆ ಜಾಗವನ್ನು ಮಂಜೂರು ಮಾಡಲಾಗಿದೆ. ಜಯಂತಿಯಂದೇ ಗುದ್ದಲಿಪೂಜೆಗೆ ಯೋಜಿಸಲಾಗಿದೆ. ಕೆಂಪೇಗೌಡರನ್ನು ಕೇವಲ ಒಂದು ಜಾತಿಗೆ ಸೀಮಿತ ಮಾಡಬಾರದು. ಜಾತ್ಯತೀತ ತತ್ವದಲ್ಲಿ ಆಚರಣೆ ಮಾಡಬೇಕು ಎಂದರು.

ಪತ್ರಿಕಾ ವಿತರಕರ ಬೇಡಿಕೆಗಳನ್ನು ಸರಕಾರ ಪರಿಗಣಿಸಲಿದೆ: ಪ್ರಭಾಕರ್

ಬೆಂಗಳೂರು: ಪತ್ರಿಕಾ ವಿತರಕರ ಬೇಡಿಕೆಗಳನ್ನು ಸರಕಾರ ಸಹಾನುಭೂತಿಯಿಂದ ಪರಿಗಣಿಸಲಿದೆ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರು ತಿಳಿಸಿದ್ದಾರೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮತ್ತು ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯಾಧ್ಯಕ್ಷ ಕೆ. ಶಂಭುಲಿಂಗ ಅವರು ವಿಧಾನಸೌಧದಲ್ಲಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರನ್ನು ಭೇಟಿಮಾಡಿ ಚರ್ಚೆ ನಡೆಸಿದ ಸಂದರ್ಭದಲ್ಲಿ ಅವರು ಈ ಭರವಸೆ ನೀಡಿದರು. ಈಗಾಗಲೇ ನೀಡಿದ್ದ ಭರವಸೆಯಂತೆ ಕಾರ್ಮಿಕ ಇಲಾಖೆಯ ಮೂಲಕ ಪತ್ರಿಕಾ ವಿತರಕರಿಗೆ ಸೌಲಭ್ಯ ಕೊಡಿಸಲು ಕ್ರಮ ಕೈಗೊಳ್ಳಲಾಗಿದೆ. ಪತ್ರಿಕೆ ಹಾಕುವಾಗ ಮೃತಪಟ್ಟವರಿಗೆ ಮತ್ತು ಅಪಘಾತದಲ್ಲಿ ಗಾಯಗೊಂಡ ಪತ್ರಿಕಾ ವಿತರಕರಿಗೆ ನೆರವು ನೀಡುವ ಯೋಜನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅನುಷ್ಠಾನಕ್ಕೆ ತಂದಿದ್ದಾರೆ ಎಂದು ಹೇಳಿದರು. ಚಿತ್ರದುರ್ಗದಲ್ಲಿ ಪತ್ರಿಕಾ ವಿತರಕರಿಗೆ ನಿವೇಶನವನ್ನು ನೀಡಲಾಗಿದ್ದು, ಅದು ತಾಂತ್ರಿಕ ಕಾರಣಕ್ಕಾಗಿ ನನೆಗುದಿಗೆ ಬಿದ್ದಿದೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ವಿನಂತಿಸಿದಾಗ, ತಕ್ಷಣವೇ ಕಂದಾಯ ಇಲಾಖೆ ಸಚಿವಾಲಯಕ್ಕೆ ಕರೆ ಮಾಡಿದ ಕೆ.ವಿ.ಪ್ರಭಾಕರ್, ಸಮಸ್ಯೆಯನ್ನು ಶೀಘ್ರವಾಗಿ ಇತ್ಯರ್ಥಮಾಡಿ ನಿವೇಶನ ನೀಡುವಂತೆ ಸೂಚಿಸಿದರು.

ಪತ್ರಿಕಾ ವಿತರಕರ ದಿನಾಚರಣೆಗೆ ಆಹ್ವಾನ: ಚಿತ್ರದುರ್ಗದಲ್ಲಿ ನಡೆಸಲು ಉದ್ದೇಶಿಸಿರುವ ಪತ್ರಿಕಾ ವಿತರಕರ ದಿನಾಚರಣೆಗೆ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರನ್ನು ಇದೇ ಸಂದರ್ಭದಲ್ಲಿ ಆಹ್ವಾನಿಸಲಾಯಿತು. ಕಳೆದ ಬಾರಿ ತುಮಕೂರಿನ ವಿತರಕರ ದಿನಾಚರಣೆಯಲ್ಲಿ ಭಾಗವಹಿಸಿದ್ದೆ. ಚಿತ್ರದುರ್ಗ ಕಾರ್ಯಕ್ರಮಕ್ಕೂ ಬರುವುದಾಗಿ ಪ್ರಭಾಕರ್ ಭರವಸೆ ನೀಡಿದರು.



ಪತ್ರಿಕಾ ವಿತರಕರ ಬೇಡಿಕೆಗಳ ಬಗ್ಗೆ ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ ಪ್ರಭಾಕರ್ ಅವರಿಗೆ ಕೆಯುಡಬ್ಲ್ಯುಜೆ ಅಧ್ಯಕ್ಷ ಶಿವಾನಂದ ತಗಡೂರು, ವಿತರಕರ ಸಂಘ ರಾಜ್ಯಾಧ್ಯಕ್ಷ ಕೆ. ಶಂಭುಲಿಂಗ ಮನವಿ ಸಲ್ಲಿಸಿದರು.

ಭವಾನಿ ರೇವಣ್ಣಗೆ ನಿರೀಕ್ಷಣಾ ಜಾಮೀನು

ಬೆಂಗಳೂರು: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ಹಗರಣದ ಸಂತ್ರಸ್ತೆಯನ್ನು ಅಪಹರಿಸಿದ ಪ್ರಕರಣದಲ್ಲಿ ಭವಾನಿ ರೇವಣ್ಣ ಸಲ್ಲಿಸಿರುವ ಅರ್ಜಿ ಮಾನ್ಯಮಾಡಿದ ಹೈಕೋರ್ಟ್, ಷರತ್ತುಬದ್ಧ ನಿರೀಕ್ಷಣಾ ಜಾಮೀನು ಮಂಜೂರು ಮಾಡಿ ಆದೇಶಿಸಿದೆ.

ಸಂತ್ರಸ್ತೆ ಅಪಹರಣ ಪ್ರಕರಣದಲ್ಲಿ ಬಂಧನ ಭೀತಿಯಲ್ಲಿದ್ದ ಭವಾನಿ ರೇವಣ್ಣ ಸಲ್ಲಿಸಿದ್ದ ಅರ್ಜಿ ವಿಚಾರಣೆ ಪೂರ್ಣಗೊಳಿಸಿ ತೀರ್ಪು ಕಾಯ್ದಿರಿಸಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ಅಲ್ಲದೇ, ಪೊಲೀಸರು ವಿಚಾರಣೆಗೆ ಕರೆದಾಗ ಹೋಗಬೇಕು. ಅಗತ್ಯವೆನಿಸಿದಲ್ಲಿ ಹಾಸನ ಮತ್ತು ಮೈಸೂರು ಜಿಲ್ಲೆಗಳಿಗೆ ವಿಚಾರಣೆಗೆ ಕರೆದಾಗ ಪೊಲೀಸರೊಂದಿಗೆ ಸಹಕರಿಸಬೇಕು ಎಂಬ ಷರತ್ತುಗಳನ್ನು ವಿಧಿಸಿ ನಿರೀಕ್ಷಣಾ ಜಾಮೀನು ಮಂಜೂರು ಮಾಡಿ ಆದೇಶಿಸಿದೆ.

ಆರೋಪಿಗಳನ್ನು ವಿಚಾರಣೆಗಾಗಿ ಪೊಲೀಸರು ವಶಕ್ಕೆ ಕೋರಿದಾಗ ನ್ಯಾಯಾಲಯ ಅದಕ್ಕೆ ಕಾರಣ ಕೇಳುವಂತಿಲ್ಲ. ಜತೆಗೆ ಯಾವ ಕಾರಣಕ್ಕೆ ವಶಕ್ಕೆ ಪಡೆಯಬೇಕು ಎಂಬುದರ ಕುರಿತು ಪ್ರಶ್ನಿಸುವಂತಿಲ್ಲ ಎಂಬ ಸರಕಾರಿ ವಕೀಲರ ವಾದ ಸುಪ್ರೀಂಕೋರ್ಟ್ ಆದೇಶಗಳಿಗೆ ವಿರುದ್ಧವಾಗಿದೆ ಎಂದು ಪೀಠ ತಿಳಿಸಿದೆ. ಅಲ್ಲದೇ, ಎಸ್‌ಐಟಿ ನಡೆಸುತ್ತಿರುವ ವಿಚಾರಣೆಗೆ ಅರ್ಜಿದಾರರು ಸಹಕರಿಸುತ್ತಿಲ್ಲ ಎಂಬುದಾಗಿ ಸರಕಾರದ ವಾದವಾಗಿದೆ. ಆದರೆ, ಪೊಲೀಸರು ಮೂರುದಿನಗಳ ಅವಧಿಯಲ್ಲಿ ಒಟ್ಟು 85 ಪ್ರಶ್ನೆಗಳನ್ನು ಕೇಳಿದ್ದಾರೆ. ಎಲ್ಲ ಪ್ರಶ್ನೆಗಳಿಗೂ ಅರ್ಜಿ ದಾರರು ಉತ್ತರಿಸಿದ್ದಾರೆ. ಪೊಲೀಸರು ಬಯಸಿದಂತೆ ಆರೋಪಿಗಳು ಉತ್ತರಿಸ ಬೇಕು ಎಂದು ನಿರೀಕ್ಷಿಸುವುದಕ್ಕೆ ಸಾಧ್ಯವಿಲ್ಲ ಎಂದು ಪೀಠ ತನ್ನ ಆದೇಶದಲ್ಲಿ ತಿಳಿಸಿದೆ.

ಮಹಿಳೆಯನ್ನು ಪೊಲೀಸರು ಬಂಧಿಸಿದಲ್ಲಿ ಇಡೀ ಕುಟುಂಬ ತೊಂದರೆಗೆ ಸಿಲುಕಲಿದೆ. ಮನೆಗಳಲ್ಲಿ ಹಿರಿಯರು, ಮಕ್ಕಳು ಇರಲಿದ್ದು, ಆರೋಪಿತ ಮಹಿಳೆಯನ್ನು ಅವಲಂಬಿಸಿರುತ್ತಾರೆ. ಅಂತಹ ಮಹಿಳೆ ಪೊಲೀಸ್ ವಶಕ್ಕೆ ನೀಡಿದಾಗ ಇಡೀ ಕುಟುಂಬಕ್ಕೆ ತೊಂದರೆಯಾಗಲಿದೆ. ಮಹಿಳೆಯನ್ನು ಬಂಧಿಸಲು ವಾರಂಟ್ ಜಾರಿ ಮಾಡಿದ ಬಳಿಕ ಜಾಮೀನು ಕೋರಿ ಅರ್ಜಿ ಸಲ್ಲಿಸುವಂತಿಲ್ಲ ಎನ್ನಲಾಗದು ಎಂದು ಕೋರ್ಟ್ ಅಭಿಪ್ರಾಯಪಟ್ಟಿತು.

ಸಮಾಚಾರ ಸಣ್ಣದಲ್ಲ

ಎಡೆಯೂರು ದೇವಾಲಯದ ಆನೆ ಗಂಗಾ ಇನ್ನಿಲ್ಲ



ಕುಣಿಗಲ್: ಗದಗ ಡಂಬಾಳ ಮಠದಿಂದ ತಾಲೂಕಿನ ಪ್ರಸಿದ್ದ ಶ್ರೀ ಕ್ಷೇತ್ರ ಎಡೆಯೂರು ಸಿದ್ದಲಿಂಗೇಶ್ವರ ಸ್ವಾಮಿ ದೇವಸ್ಥಾನಕ್ಕೆ ನೀಡಿದ ಗಂಗ ಆನೆ ಅನಾರೋಗ್ಯದಿಂದ ಮಂಗಳವಾರ ಮೃತಪಟ್ಟಿದೆ. ಇಲ್ಲಿನ ದೇವಸ್ಥಾನದ ಹೆಣ್ಣಾನೆ ಗಂಗಾ (76) ಅನಾರೋಗ್ಯದಿಂದ ಇಹಲೋಕ ತ್ಯಜಿಸಿದೆ.ಗಂಗಾ ಹೆಣ್ಣಾನೆ ಕಳೆದ ಮೂರು ತಿಂಗಳಿನಿಂದ ಗ್ಯಾಂಗ್ರೀನ್ ರೋಗದಿಂದ ಬಳಲುತ್ತಿತ್ತು. ಇದರ ಚಿಕಿತ್ಸೆಗಾಗಿ ಕೋಲಾರ ಜಿಲ್ಲೆ ಮಾಲೂರು ತಾಲೂಕು ಲಕ್ಷ್ಮಿಸಾಗರ ಮೀಸಲು ಅರಣ್ಯ ವನ್ಯ ಜೀವಿ ರಕ್ಷಣಾ ಮತ್ತು ಪುನರ್ವಸತಿ ಕೇಂದ್ರ (ಡಬ್ಲ್ಯೂಆರ್.ಆರ್.ಸಿ) ಸಂಸ್ಥೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಜು. 18 ರಂದು ಮಂಗಳವಾರ ಮಧ್ಯಾಹ್ನ ಮೃತಪಟ್ಟಿದೆ ಎಂದು ದೇವಾಲಯದ ಮೂಲಗಳು ತಿಳಿಸಿವೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅನುಮಾನ | ಬ್ಯಾಲೆಟ್ ಮತದಾನ ಮತ್ತೆ ಬರಬೇಕು

ಎನ್‌ಡಿಎ ಹೆಚ್ಚು ಸ್ಥಾನ ಗೆಲ್ಲೋಕೆ ಇವಿಎಂ ಕಾರಣ

ಬೆಂಗಳೂರು: ಇವಿಎಂ ಕಾರಣಕ್ಕೆ ಜೆಡಿಎಸ್ ಮತ್ತು ಬಿಜೆಪಿಗೆ ನಿರೀಕ್ಷೆಗಿಂತ ಹೆಚ್ಚು ಸ್ಥಾನಗಳು ಬಂದಿವೆ. ಇದರ ಬಗ್ಗೆ ಮತ್ತೊಮ್ಮೆ ಪರಿಶೀಲನೆ ನಡೆಸಬೇಕಾಗಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅನುಮಾನ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಇವಿಎಂ ತೊಲಗಬೇಕು ಬ್ಯಾಲೆಟ್ ಮತದಾನ ಮತ್ತೆ ಬರಬೇಕು. ಈಗಾಗಲೇ ಫಲಿತಾಂಶ ಬಂದಾಗಿದೆ. ಈಗೇನೂ ಮಾಡಲಾಗುವುದಿಲ್ಲ. ಮತ್ತೊಮ್ಮೆ ಫಲಿತಾಂಶವನ್ನು ಪರಿಶೀಲಿಸಬಹುದು. ಮಧ್ಯಪ್ರದೇಶದಲ್ಲಿ ಬ್ಯಾಲೆಟ್ ಮತದಾನವಿದ್ದಾಗ ಮೂರರಲ್ಲಿ ಎರಡು ಭಾಗದಷ್ಟು ಮತಗಳು ಕಾಂಗ್ರೆಸ್ ಪರವಾಗಿ ಬೀಳುತ್ತಿದ್ದವು. ಇವಿಎಂ ಕಾರಣಕ್ಕೆ ಈಗ ಪರಿಸ್ಥಿತಿ ಬದಲಾಗಿದೆ. ಇದರ ಬಗ್ಗೆ ಮತ್ತಷ್ಟು ಆಳವಾಗಿ ಚಿಂತನೆ ನಡೆಸಬೇಕಿದೆ ಎಂದು ಅಭಿಪ್ರಾಯಪಟ್ಟರು.

ಬಿಬಿಎಂಪಿ ಆಸ್ತಿಗಳನ್ನು ಸರಕಾರ ಅಡವಿಡುತ್ತಿದೆ ಎಂದು ಕೇಳಿದಾಗ ಯಾವ ಅಡಮಾನವೂ ಇಲ್ಲ. ನಮ್ಮ ಬಿಬಿಎಂಪಿಯ ಆಸ್ತಿಯ ರಕ್ಷಣೆ ಹಾಗೂ ಎಷ್ಟು ಆಸ್ತಿಗಳಿವೆ ಎನ್ನುವ ಮರುಸಮೀಕ್ಷೆ, ಗುತ್ತಿಗೆ ನವೀಕರಣ ಸೇರಿದಂತೆ ಇತರೇ ಕೆಲಸಗಳಿಗಾಗಿ ನಮ್ಮ ಅಂದಾಜು ವಿಭಾಗವನ್ನು ಭದ್ರಗೊಳಿಸಿ ದಾಖಲೆಗಳನ್ನು ರಕ್ಷಿಸುವ ಕೆಲಸ ಮಾಡಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

ಮೇಕೆದಾಟು ವಿಚಾರಕ್ಕೆ ತಮಿಳುನಾಡು ಆಕ್ಷೇಪ ವ್ಯಕ್ತಪಡಿಸಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ. ನಮ್ಮ ನೀರು ನಮ್ಮ ಹಕ್ಕು. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ನ್ಯಾಯಲಯ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತದೆ. ಕೇಂದ್ರ ಸರಕಾರ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಇದರಿಂದ ತಮಿಳುನಾಡಿಗೆ ಹೆಚ್ಚು ಅನುಕೂಲವಾಗಲಿದೆ. ಮೇಕೆದಾಟು ಅಣೆಕಟ್ಟಿನಿಂದ ತಮಿಳುನಾಡಿಗೆ ನಿಗದಿಯಾಗಿರುವ ನೀರಿನ ಪಾಲನ್ನು ನೀಡಲು ಅನುಕೂಲವಾಗುತ್ತದೆಯೇ ಹೊರತು ಕರ್ನಾಟಕದ ಉಪಯೋಗಕ್ಕೆ ಬಳಸುವುದಿಲ್ಲ ಎಂದರು.

ನೀಟ್ ಅಕ್ರಮದ ಬಗ್ಗೆ ಕೇಳಿದಾಗ ಕರ್ನಾಟಕ ಸರಕಾರ ನೀಟ್ ವಿರುದ್ಧವಿದೆ. ಅನ್ಯಾಯಕ್ಕೆ ಒಳಗಾದ ವಿದ್ಯಾರ್ಥಿಗಳ ಜೊತೆ ನಾವಿದ್ದೇವೆ. ಕೇವಲ 1,563 ವಿದ್ಯಾರ್ಥಿಗಳಿಗೆ ಮಾತ್ರ ಮರು ಪರೀಕ್ಷೆ ನಡೆಸದೆ ಇಡೀ ದೇಶದಾದ್ಯಂತ ಮತ್ತೊಮ್ಮೆ ಪರೀಕ್ಷೆ ನಡೆಸಬೇಕು.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಕೇಂದ್ರವೇ ಬೆಲೆ ಏರಿಕೆಗೆ ಕಾರಣ

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಗೆ ಕೇಂದ್ರ ಸರಕಾರವೇ ಕಾರಣ. ಈ ಹಿಂದೆ 75 ರಿಂದ 100 ರು.ಗೆ ಬೆಲೆ ಏರಿಕೆ ಮಾಡಿದ್ದು ಬಿಜೆಪಿಯವರಲ್ಲವೇ? ಇತರೇ ರಾಜ್ಯಗಳಲ್ಲಿ ನಮಗಿಂತಲೂ ಹೆಚ್ಚು ಬೆಲೆಯಿದೆ. ಮಹಾರಾಷ್ಟ್ರ, ರಾಜಸ್ಥಾನದಲ್ಲಿ 104, ಬಿಹಾರದಲ್ಲಿ 107 ರು. ಬೆಲೆಯಿದೆ. ಕೇಂದ್ರ ಸರಕಾರ ಅಬಕಾರಿ ಸುಂಕ ಹೆಚ್ಚಳ ಮಾಡಿರುವುದೇ ಬೆಲೆ ಏರಿಕೆಗೆ ಕಾರಣ ಎಂದು ಡಿಸಿಎಂ ತಿರುಗೇಟು ನೀಡಿದರು.

ಸಾಹಿತಿಗಳನ್ನು ಕಾಂಗ್ರೆಸ್ ಕಚೇರಿಗೆ ಕರೆದರೆ ತಪ್ಪೇನು?

ಕಾಂಗ್ರೆಸ್ ಪಕ್ಷದ ಕಚೇರಿಗೆ ಸಾಹಿತಿಗಳನ್ನು ಕರೆದದ್ದು ನಾನೇ, ಅದರಲ್ಲಿ ತಪ್ಪೇನಿದೆ? ಸಾಹಿತಿಗಳು ರಾಜಕಾರಣಿಗಳು ಆಗಬಾರದು ಅಂತೇನಿಲ್ಲವಲ್ಲ. ಅಕಾಡೆಮಿ ಅಧ್ಯಕ್ಷರ ಸಭೆ ನಾನೇ ಕರೆದಿದ್ದು, ಅದರಲ್ಲೇನಿದೆ. ಇದು ಸರಕಾರದ ನೇಮಕ. ಹೀಗಾಗಿ ಎಲ್ಲಿ ಬೇಕಾದರೂ ಕರೆಸಿಕೊಳ್ಳಬಹುದು. ಎಲ್ಲಿ ಬೇಕಾದರೂ ಸಭೆ ಮಾಡಬಹುದು ಎಂದು ಸ್ಪಷ್ಟಪಡಿಸಿದರು.

ಪ್ರಾಧಿಕಾರಗಳು ಸ್ವತಂತ್ರ ಸಂಸ್ಥೆಗಳಲ್ಲ. ಎಲ್ಲರೂ ರಾಜಕಾರಣಿಗಳೇ. ಅವರದ್ದೇ ಆದ ಸಿದ್ಧಾಂತಗಳನ್ನು ಇಟ್ಟುಕೊಂಡು ಅವರೂ ರಾಜಕೀಯ ಮಾಡುತ್ತಾರೆ. ಅದನ್ನು ಕೆಲವೊಬ್ಬರು ಹೇಳಿಕೊಳ್ಳದೇ ಇರಬಹುದು. ನಾನು ಕರೆದಾಗ, ಇಷ್ಟ ಇದ್ದೋರು ಬಂದಿದ್ದಾರೆ. ಕೆಲವರು ಬಂದಿಲ್ಲ ಎಂದರು. ಇದು ನಿಮಗೆ (ಮಾಧ್ಯಮದವರಿಗೆ) ತಪ್ಪು ಎನಿಸಬಹುದು. ಸಾಹಿತಿಗಳೂ ರಾಜಕಾರಣಿಗಳೇ, ಅವರೂ ರಾಜಕಾರಣಕ್ಕೆ ಬರಬಹುದು. ನಿಮ್ಮನ್ನು ಮಾಧ್ಯಮ ಸಲಹೆಗಾರರನ್ನಾಗಿ ನೇಮಕ ಮಾಡಿಕೊಳ್ಳುವುದಿಲ್ಲವೇ, ನೀವು ಬೆಳಗಿಂದ ಸಾಯಂಕಾಲದ ತನಕ ನಮ್ಮ ಹಿಂದೆ ಓಡಾಡುವುದಿಲ್ಲವೇ? ನಮಗೋಸ್ಕರ ಬಡಿದಾಡೋದಿಲ್ಲವೇ? ಎಂದು ಹೇಳಿದರು.

ರ್‍ಯಾಡಿಸನ್ ಬ್ಲೂ ಹೋಟೆಲ್‌ಗೆ ಪೊಲೀಸರ ತಂಡ ಭೇಟಿ

ದರ್ಶನ್ ಪ್ರಕರಣ ಮೈಸೂರಿನಲ್ಲಿ ಮಹಜರು

ಮೈಸೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಗಳ ಪೈಕಿ ನಾಗ ಅಲಿಯಾಸ್ ನಾಗರಾಜ್ ಹಾಗೂ ಲಕ್ಷ್ಮಣ್‌ರನ್ನು ಬೆಂಗಳೂರು ಪೊಲೀಸರು ಮೈಸೂರಿಗೆ ಕರೆತಂದು ಸ್ಥಳ ಮಹಜರು ನಡೆಸಿದರು.

ದರ್ಶನ್‌ರ ಪರ್ಸನಲ್ ಮ್ಯಾನೇಜರ್ ನಾಗರಾಜು ಹಾಗೂ ಕಾರಿನ ಚಾಲಕ ಲಕ್ಷ್ಮಣ್‌ರನ್ನು ಬೆಂಗಳೂರು ಪೊಲೀಸರು ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್ ಗೆ ಮಂಗಳವಾರ ಕರೆತಂದು ಸ್ಥಳ ಮಹಜರು ಮಾಡಿದರು. ನಟ ದರ್ಶನ್‌ರನ್ನು ಇದೇ ಹೋಟೆಲ್ ನಲ್ಲಿ ಬಂಧಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಸ್ಥಳ ಮಹಜರಿಗಾಗಿ ಆರೋಪಿಗಳಿಬ್ಬರನ್ನು ಪೊಲೀಸರು ಕರೆತಂದಿದ್ದರು.

ರೇಣುಕಾ ಸ್ವಾಮಿ ಕೊಲೆ ಪ್ರಕರಣದ ನಂತರ ದರ್ಶನ್ ಮೈಸೂರಿಗೆ ಆಗಮಿಸಿ ರ್‍ಯಾಡಿಸನ್ ಬ್ಲೂ ಹೋಟೆಲ್ ನಲ್ಲಿ ಉಳಿದುಕೊಂಡು ಲಲಿತ ಮಹಲ್ ಹೋಟೆಲಿನಲ್ಲಿ ನಡೆಯುತ್ತಿದ್ದ 'ಡೆವಿಲ್ ಚಿತ್ರದ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು.

ದರ್ಶನ್ ಈ ಹೋಟೆಲ್ ನಿಂದ ಮೈಸೂರಿನ ಕುವೆಂಪುನಗರದ ಗೋಲ್ಡ್ ಜಿಮ್ ಗೆ ತೆರಳಿ ಅಲ್ಲಿ ವರ್ಕೌಟ್ ಮಾಡಿ ಹೋಟೆಲ್ ಗೆ ಆಗಮಿಸುವ ವೇಳೆ ಬೆಂಗಳೂರು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದರು.

ಹೋಟೆಲ್ ಸ್ಥಳ ಮಹಜರು ನಂತರ ದರ್ಶನ್ ಚಿತ್ರೀಕರಣದಲ್ಲಿ ಭಾಗವಹಿಸಿದ್ದ ಹೋಟೆಲ್ ಲಲಿತ ಮಹಲ್, ಆನಂತರ ಮೈಸೂರಿನ ಟಿ.ನರಸೀಪುರ ರಸ್ತೆಯ ದರ್ಶನ್ ಒಡೆತನದ ಫಾರಂ ಹೌಸ್‌ಗೂ ಕರೆತಂದು ಸ್ಥಳ ಮಹಜರು ನಡೆಸಿದರು.

ಬ್ಲಡ್ ಶೆಡ್

← ಮೊದಲಪುಟದಿಂದ

ಹಲ್ಲೆಗೊಳಗಾಗಿದ್ದರೂ ದರ್ಶನ್‌ಗೆ ಹೆದರಿ ಕೊಂಡು ಸುಮ್ಮನಿದ್ದಾರೆ ಎಂದು ಹೇಳಲಾಗುತ್ತಿದೆ. ಈ ಬಗ್ಗೆಯೂ ಆರೋಪಿಗಳನ್ನು ಪೊಲೀಸರು ವಿಚಾರಣೆ ಮಾಡುತ್ತಿದ್ದಾರೆ. ಹಲ್ಲೆಗೆ ಒಳಗಾಗಿರುವ ಸಂತ್ರಸ್ತರಿಗೆ ದೂರು ನೀಡುವಂತೆ ಪೊಲೀಸರು ಪ್ರಕಟಣೆ ಹೊರಡಿಸುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ.

ರಾಜಕಾಲುವೆಯ ಸಂಕಟ: ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿರುವ ದರ್ಶನ್ ಮನೆಯನ್ನು ರಾಜಕಾಲುವೆ ಒತ್ತುವರಿ ಮಾಡಿ ಕಟ್ಟಲಾಗಿದೆ ಎಂಬ ಆರೋಪದಲ್ಲಿ ಈ ಹಿಂದೆ ಬಿಬಿಎಂಪಿ ನೋಟಿಸ್ ಜಾರಿ ಮಾಡಿತ್ತು. ನ್ಯಾಯಾಲಯದಿಂದ ತಡೆಯಾಜ್ಞೆ ಪಡೆದ ಕಾರಣ ಈ ಪ್ರಕ್ರಿಯೆ ಸ್ಥಗಿತಗೊಂಡಿತ್ತು. ಇದೀಗ ಡಿಸಿಎಂ ಡಿ.ಕೆ ಶಿವಕುಮಾರ್ ಅವರು, ಯಾರೇ ಒತ್ತುವರಿ ಮಾಡಿ, ಸ್ಟೇ ತಂದಿದ್ದರೂ ಸಹ ಕಾನೂನಿನ ಪ್ರಕಾರ ಮನೆ ತೆರವು ಮಾಡಲು ಸೂಚನೆ ನೀಡಿದ್ದಾರೆ. ಇದರಿಂದ ದರ್ಶನ್‌ಗೆ ಮತ್ತೊಂದು ಸಂಕಷ್ಟ ಎದುರಾಗಿದೆ.

ಪವಿತ್ರಾ ಅಸ್ವಸ್ಥ: ಮಂಗಳವಾರ ವಿಚಾರಣೆ ವೇಳೆ ಅಸ್ವಸ್ಥಗೊಂಡ ಪ್ರಮುಖ ಆರೋಪಿ ಪವಿತ್ರಾ ಗೌಡಳನ್ನು ಮಲ್ಲತ್ತಹಳ್ಳಿ ಸಮೀಪದ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಿ ಮರಳಿ ವಿಚಾರಣೆಗೆ ಕರೆ ತರಲಾಯಿತು. ಸರಿಯಾಗಿ ಊಟ ಮಾಡದ ಕಾರಣ ಪವಿತ್ರಾಗೆ ರಕ್ತದೊತ್ತಡ ಏರುಪೇರಾಗಿತ್ತು ಎನ್ನಲಾಗಿದೆ.

ಆಯುಕ್ತರ ಪ್ರಶಂಸೆ: ದರ್ಶನ್ ಪ್ರಕರಣದ ತನಿಖಾ ತಂಡವನ್ನು ಪೊಲೀಸ್ ಆಯುಕ್ತ ದಯಾನಂದ ಅವರು ಪ್ರಶಂಶಿಸಿದ್ದು, ಪೊಲೀಸರು ಸ್ವಲ್ಪವೇ ನಿರ್ಲಕ್ಷ್ಯ ವಹಿಸಿದರೂ ಪ್ರಕರಣ ಬಯಲಿಗೆ ಬಾರದಿರುವ ಸಾಧ್ಯತೆ ಇತ್ತು ಎಂದು ಹೇಳಿದ್ದಾರೆ.

ಬಳಕೆಯಾಗದ ಪರಿಶಿಷ್ಟರ ಕಲ್ಯಾಣ ನಿಧಿ

← ಮೊದಲಪುಟದಿಂದ

ಪ್ರಕರಣದ ಮಾಹಿತಿ ಪಡೆದ ಸಿಎಂ: ಸಭೆಯಲ್ಲಿ ನಿಗಮದಲ್ಲಿ ಆಗಿರುವ ಹಗರಣದ ಬಗ್ಗೆ ಹೆಚ್ಚಿನ ಚರ್ಚೆ ನಡೆದಿಲ್ಲ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಪ್ರಕರಣದ ಪ್ರಗತಿ ಹಾಗೂ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದಾರೆ. ಯಾವುದೇ ಅಧಿಕಾರಿ ತಪ್ಪು ಮಾಡಿದ್ದರೂ ಕಠಿಣ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ. ಪರಿಶಿಷ್ಟರ ಅಭಿವೃದ್ಧಿಗೆ ಮೀಸಲಿಟ್ಟಿರುವ ಒಂದು ರುಪಾಯಿ ಕೂಡ ದುರ್ಬಳಕೆಯಾಗದಂತೆ ಎಚ್ಚರಿಕೆ ವಹಿಸುವಂತೆ ಸೂಚನೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಭೆಯಲ್ಲಿ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ನಿರ್ದೇಶಕ ಕಲ್ಲೇಶ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾದ ಗೋವಿಂದರಾಜು, ನಸೀರ್ ಅಹ್ಮದ್ ಉಪಸ್ಥಿತರಿದ್ದರು.

ತಂಗಡಗಿ ಹೆಗಲಿಗೆ ಪರಿಶಿಷ್ಟ ಪಂಗಡ ಖಾತೆ?: ವಾಲ್ಮೀಕಿ ಅಭಿವೃದ್ಧಿ ನಿಗಮದ ಭ್ರಷ್ಟಾಚಾರ ಆರೋಪದ ಹಿನ್ನೆಲೆಯಲ್ಲಿ ಪರಿಶಿಷ್ಟ ಪಂಗಡಗಳ ಸಚಿವ ನಾಗೇಂದ್ರ ರಾಜೀನಾಮೆ ಸಲ್ಲಿಸಿ ವಾರ ಕಳೆದಿದೆ.

ಈ ಖಾತೆಯನ್ನು ಶಿವರಾಜ್ ತಂಗಡಗಿ ಅವರಿಗೆ ವಹಿಸುವ ಚಿಂತನೆ ನಡೆದಿದೆ.

ಪ್ರಕರಣದಲ್ಲಿ ನಾಗೇಂದ್ರ ಅವರಿಗೆ ಕ್ಲೀನ್‌ಚಿಟ್ ಸಿಕ್ಕರೆ, ಪುನಃ ಅವರಿಗೆ ಈ ಖಾತೆ ಕೊಡಬೇಕು ಎನ್ನುವ ಇರಾದೆಯಲ್ಲಿ ಮುಖ್ಯಮಂತ್ರಿಗಳಿದ್ದಾರೆ. ಆದರೆ ಪ್ರಕರಣ ಇತ್ಯರ್ಥವಾಗಲು ಬಹುಸಮಯ ಹಿಡಿಯುವ ಸಾಧ್ಯತೆ ಇರುವುದರಿಂದ ಸದ್ಯಕ್ಕೆ ತಂಗಡಗಿ ಅವರಿಗೆ ವಹಿಸುವ ಸಾಧ್ಯತೆ ಇದೆ ಎನ್ನಲಾಗಿದೆ. ಆದರೆ ಈ ವಿಷಯದಲ್ಲಿ ಸಿಎಂ ಅಂತಿಮ ತೀರ್ಮಾನ ತಗೆದುಕೊಂಡಿಲ್ಲ ಎಂದು ಮೂಲಗಳು ತಿಳಿಸಿವೆ.

ಪ್ರಜ್ವಲ್ ಕಸ್ಟಡಿ ವಿಸ್ತರಣೆ, ಭವಾನಿಗೆ ಜಾಮೀನು

← ಮೊದಲಪುಟದಿಂದ

ಇದೇ ಸಂದರ್ಭದಲ್ಲಿ, ಎಸ್‌ಐಟಿ ಅಧಿಕಾರಿಗಳು ತನ್ನ ಆರೋಗ್ಯ ಸಮಸ್ಯೆಯನ್ನು ಕಡೆಗಣಿಸಿದ್ದಾರೆ ಎಂದು ಪ್ರಜ್ವಲ್ ದೂರಿಕೊಂಡರು. ಪ್ರಜ್ವಲ್ ಕಸ್ಟಡಿ ಅಂತ್ಯ ಹಿನ್ನೆಲೆಯಲ್ಲಿ ಎಸ್‌ಐಟಿ ಕೋರ್ಟ್‌ಗೆ ಹಾಜರುಪಡಿಸಿದಾಗ, 'ಏನಾದರೂ ಆರೋಗ್ಯ ಸಮಸ್ಯೆ ಇದೆಯಾ' ಎಂದು ನ್ಯಾಯಾಧೀಶರು ಪ್ರಶ್ನಿಸಿದರು. ''ಎಸ್‌ಐಟಿ ಅಧಿಕಾರಿಗಳು ಸರಿಯಾಗಿ ನೋಡಿಕೊಳ್ಳುತ್ತಿಲ್ಲ, ಎಂಆರ್‌ಐ ಸ್ಕ್ಯಾನ್ ಮಾಡಿ ಸಿದ್ದೇನೆ. ಮಾತ್ರೆ ತೆಗೆದುಕೊಳ್ಳುತ್ತಿದ್ದೇನೆ '' ಎಂದು ಹೇಳಿದಾಗ, ಆರೋಗ್ಯ ತಪಾಸಣೆ ಯಾಕೆ ಮಾಡಿಸಿಲ್ಲ ಎಂದು ಅಧಿಕಾರಿಗಳನ್ನು ನ್ಯಾಯಾಧೀಶರು ಪ್ರಶ್ನಿಸಿದರು. ಅವರು ಈಗ ಹೇಳುತ್ತಿದ್ದಾರೆ, ನಮಗೆ ಹೇಳಿರಲಿಲ್ಲ ಎಂದು ಎಸ್‌ಐಟಿ ಅಧಿಕಾರಿಗಳು ಉತ್ತರಿಸಿದರು. ನ್ಯಾಯಾಂಗ ವಶಕ್ಕೆ ನೀಡಿದ ಬಳಿಕ ಪರಪ್ಪನ ಆಗ್ರಹಾರ ಕೇಂದ್ರ ಕಾರಾಗೃಹಕ್ಕೆ ಒಯ್ಯಲಾಯಿತು.

ಭವಾನಿ ರೇವಣ್ಣಗೆ ಜಾಮೀನು

ಲೈಂಗಿಕ ದೌರ್ಜನ್ಯದ ಸಂತ್ರಸ್ತೆಯನ್ನು ಅಪಹರಿಸಿದ ಪ್ರಕರಣದಲ್ಲಿ ಭವಾನಿ ರೇವಣ್ಣ ಸಲ್ಲಿಸಿರುವ ಅರ್ಜಿ ಮಾನ್ಯಮಾಡಿದ ಹೈಕೋರ್ಟ್, ಷರತ್ತುಬದ್ಧ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ. ಪೊಲೀಸರು ವಿಚಾರಣೆಗೆ ಕರೆದಾಗ ಹೋಗಬೇಕು. ಅಗತ್ಯವೆನಿಸಿದಲ್ಲಿ ಹಾಸನ ಮತ್ತು ಮೈಸೂರು ಜಿಲ್ಲೆಗಳಿಗೆ ವಿಚಾರಣೆಗೆ ಕರೆದಾಗ ಪೊಲೀಸರೊಂದಿಗೆ ಸಹಕರಿಸಬೇಕು ಎಂಬ ಷರತ್ತುಗಳನ್ನು ವಿಧಿಸಿ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದರು.

ನ್ಯಾಯಾಂಗ ಬಂಧನಕ್ಕೆ ಹೋದರೂ ಸಿಐಡಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಿಸಿ ಮತ್ತೆ ಬಾಡಿ ವಾರಂಟ್ ಮೇಲೆ ಪ್ರಜ್ವಲ್‌ರನ್ನು ವಶಕ್ಕೆ ಪಡೆಯಲು ಎಸ್‌ಐಟಿ ಮುಂದಾಗಿದೆ.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಹಾಸನ

ವಾರಸುದಾರರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ

ಮಗುವಿನ ವಿವರ: ಕ್ರ.ಸಂ.1)ಹೆಸರು: ಕೃಷ್ಣ 2)ವಯಸ್ಸು: 5 ವರ್ಷ 3)ಲಿಂಗ: ಗಂಡು 5)ಬಣ್ಣ: ಕಪ್ಪು ಬಣ್ಣ 6)ಪತ್ತೆಯಾದ ವರ್ಷ: 07.01.2023 7)ಪತ್ತೆಯಾದ ಸ್ಥಳ: ಪಾಳ್ಯ 7)ಪೊಲೀಸ್ ಠಾಣೆ: ಆಲೂರು. ಮೇಲೆ ತಿಳಿಸಿದಂತಹ ಬಾಲಕನ ವಾರಸುದಾರರು ಇದ್ದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಸನ/ಚಿಕ್ಕಮಗಳೂರು ಹಾಗೂ ಮಕ್ಕಳ ಕಲ್ಯಾಣ ಸಮಿತಿ, ಹಾಸನ ಇವರನ್ನು ಸಂಪರ್ಕಿಸಬಹುದಾಗಿದೆ.

ಮಗುವಿನ ಭಾವಚಿತ್ರ

ಸಹಿ/-ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಹಾಸನ

ವಾಸಾಸಂಇ/ಹಿಸನಿ/ಹಾಸನ/73/ಕೆಎಸ್‌ಎಂಸಿಎ/2024-25

ಜಿಲ್ಲಾ ಪಂಚಾಯತ ಬಾಗಲಕೋಟೆ

ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ

ಕಾರ್ಯಪಾಲಕ ಅಭಿಯಂತರರ ಕಛೇರಿ,
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 126, ನವನಗರ, ಬಾಗಲಕೋಟೆ,
ದೂರವಾಣಿ : 08354-235042, ಇ-ಮೇಲ್ : bgkeezpe@yahoo.com

ಸಂಖ್ಯೆ : ಕಾ.ನಿ.ಇಂ./ಪಂ.ರಾ.ಇಂ.ವಿ./ಬಿಜಿಕೆ/ಪಿಬಿ-2,3/ಮೂರನೇ ವ್ಯಕ್ತಿ/ತಪಾಸಣೆ/2024-25/434 ದಿನಾಂಕ : 15-06-2024

ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ)
ಕೆ.ಸಿ-2 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಐಟಂವಾರು ಟೆಂಡರ್‌ಗಳ್ನು ಇ-ಪ್ರೊಕ್ಯೂರ್‌ಮೆಂಟ್ ಆಧಾರದ ಮೇಲೆ **ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ ಇವರು,** ಮಾನ್ಯ ರಾಜ್ಯಪಾಲರು, ಕರ್ನಾಟಕ ಸರ್ಕಾರದ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಮುಖ್ಯ ಇಂಜಿನೀಯರರು, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ, ಬೆಂಗಳೂರು / ಅಧೀಕ್ಷಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವೃತ್ತ ಬೆಳಗಾವಿ ಇವರಲ್ಲಿ ಎನ್‌ರೋಲ್‌ಮೆಂಟ್ ದಾಖಲಾತಿಗಳೊಂದಿಗೆ ನೊಂದಾಯಿಸಿದ ಅಧೀಕೃತ / ಸೇವಾ ಸಂಸ್ಥೆಯವರಿಂದ ಕೆಳಕಂಡ ತಪಾಸಣೆ ಕೆಲಸಕ್ಕೆ ಕೆಳಗೆ ನಮೂದಿಸಿದ ದಿನಾಂಕದಂದು ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವುದು. **ಟೆಂಡರ್ ಫಾರ್ಮ್‌ಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಟೆಂಡರ್ ಸಲ್ಲಿಸುವುದು ವೆಬ್‌ಸೈಟ್ ಮಾಖಾಂತರ ಮಾತ್ರ. ಈ ಕಚೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.**

1) ವಿವರ : Estimate Number : RDPR/2023-24/SE0240/CALL-2 Estimate Name : Providing Technical and physical quality evaluation Services as 3rd Party for all Development and Maintenance works including Spill-over and On-going Works in Bagalkot District, Division under Taluks Bagalkote, Hungund and Ilkal implemented by PRED all works taken up under various head of account by the Bagalkot Dist and any other works as directed by higher officers, ಇ.ಎಂ.ಡಿ. ಮೊತ್ತ ರೂ. ಗಳಲ್ಲಿ : As per https://kppp.karnataka.gov.in, ಟೆಂಡರ ಪದ್ಧತಿ : KC-2 Bid Document As per E-Protal, Tender Bid Document ಅರ್ಹತೆ : ಇ-ಪೋರ್ಟಲನಲ್ಲಿ ನಮೂದಿಸಿದಂತೆ, 2) ವಿವರ : Estimate Number : RDPR/2023-24/SE0243/CALL-2, Estimate Name : Providing Technical and physical quality evaluation Services as 3rd Party for all Development and Maintenance works including Spill-over and On-going Works in Bagalkot District, Division under Taluks Badami, Bilagi and Gulledagudda implemented by PRED all works taken up under various head of account by the Bagalkot Dist and any other works as directed by higher officers, ಇ.ಎಂ.ಡಿ. ಮೊತ್ತ ರೂ. ಗಳಲ್ಲಿ : As per https://kppp.karnataka.gov.in, ಟೆಂಡರ ಪದ್ಧತಿ : KC-2 Bid Document, As per E-Protal, Tender Bid Document ಅರ್ಹತೆ : ಇ-ಪೋರ್ಟಲನಲ್ಲಿ ನಮೂದಿಸಿದಂತೆ.

1) ಖಾಲಿ ಟೆಂಡರ್ ಫಾರ್ಮ್‌ಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್-ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : 14-06-2024 ರಿಂದ 16-07-2024 ರ ಸಾಯಂಕಾಲ 5.30 ಗಂಟೆಯವರೆಗೆ, 2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 18-07-2024 ರ ಮುಂಜಾನೆ 11.00 ಗಂಟೆಯ ನಂತರ, 3) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ತಾಂತ್ರಿಕ ಬಿಡ್ ಅನುಮೋದನೆಯ ನಂತರ ತೆರೆಯಲಾಗುವುದು.

ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್ https://kppp.karnataka.gov.in ಯಲ್ಲಿ ಲಾಗ್‌ಆನ್ ಮಾಡಿ ನೋಡಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗ,
ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟೆ/33/ಮಣಿಪಾಲ್/2024-25

ಗ್ಯಾರಂಟಿ ಯೋಜನೆ ನಿಲ್ಲಲ್ಲ

ಸಾಗರ: ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆ ನಿಲ್ಲುವುದಿಲ್ಲ. ಐದು ವರ್ಷ ಅಭಾಧಿತವಾಗಿ ಬಡವರಿಗೆ ರಾಜ್ಯ ಸರಕಾರದ ಐದೂ ಗ್ಯಾರಂಟಿಗಳು ತಲುಪಬೇಕು ಎನ್ನುವುದು ನನ್ನ ಅಭಿಲಾಷೆ ಎಂದು ಶಾಸಕ ಗೋಪಾ ಲಕೃಷ್ಣ ಬೇಳೂರು ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ಯಾರಂಟಿಗಾಗಿ 55,000 ಕೋಟಿ ರು. ಮೀಸಲಿರಿಸಲಾಗಿದೆ. ಪೆಟ್ರೋಲ್ ಡೀಸೆಲ್ ದರ ಹೆಚ್ಚಳ ಮಾಡಿರುವುದು ಸಮಗ್ರ ಅಭಿವೃದ್ಧಿಗೆ ಆರ್ಥಿಕ ಸಂಪನ್ಮೂಲ ಕ್ರೋಢೀಕರಣ ಮಾಡುವ ಉದ್ದೇಶದಿಂದಲೇ ವಿನಾ ಜನರ ಮೇಲೆ ಕೋಪ ತೀರಿಸಿಕೊಳ್ಳಲು ಅಲ್ಲ. ಬಿಜೆಪಿಯವರ ಹೇಳಿಕೆ ಸತ್ಯಕ್ಕೆ ದೂರವಾಗಿದೆ ಎಂದರು.

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು - 560083 ದೂರವಾಣಿ: 080-29755405
ಇ-ಮೇಲ್: dcfbannerghatta@gmail.com

ಸಂಖ್ಯೆ : ಎ3/ಟೆಂಡರ್/ಸಿಆರ್-3/2024-25 ದಿನಾಂಕ: 13.06.2024

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2024-25ನೇ ಸಾಲಿನಲ್ಲಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಕಳ್ಳಬೇಟೆ ತಡೆ ಶಿಬಿರದಲ್ಲಿ ಕಾರ್ಯ ನಿರ್ವಹಿಸುವ ನೌಕರರುಗಳಿಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡುವ ಸಂಬಂಧ ಟೆಂಡರ್ ಅನ್ನು ಅಧಿಕೃತ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 29.06.2024 ರಂದು ಬೆಳಿಗ್ಗೆ 11.00 ಗಂಟೆ. ಕೆಲಸದ ಅಂದಾಜು ಮೌಲ್ಯ ರೂ.24.82 ಲಕ್ಷಗಳು ಹಾಗೂ ಇ.ಎಂ.ಡಿ. ಮೊತ್ತ ರೂ.62050/- ಗಳು. ವಿವರಗಳನ್ನು https://kppp.karnataka. gov.in ಹಾಗೂ ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/-
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು

ವಾಸಾಸಂಇ/ವಾಪ್ರ/397/ಆಕಾರ್/2024-25

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಬೆಂಗಳೂರು.

Karnataka Housing Board Building Communities

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ ವಿವರಗಳು ಕೆಳಕಂಡಂತಿವೆ.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : 02.07.2024 ಸಂಜೆ 4.00 ಗಂಟೆಗೆ

ಕ್ರ. ಸಂ.	ಕಾಮಗಾರಿಯ ವಿವರ
1.	ಗದಗ ಜಿಲ್ಲೆ ಗಜೇಂದ್ರಗಡ ತಾಲ್ಲೂಕು, ಗಜೇಂದ್ರಗಡ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದ 2ನೇ ಹಂತದ ಕಟ್ಟಡ ಕಾಮಗಾರಿ. Tender Reference Number: KHB/2024-25/BD/work_indent 244 IFT No.16/2024-25 Date: 18.06.2024. **Amount put to tender Rs.1,24,65,134/-**
2.	ದಕ್ಷಿಣ ಕನ್ನಡ ಜಿಲ್ಲೆ, ಸುಳ್ಯ ತಾಲ್ಲೂಕು, ಕೋಡಿಯಾಲಬೈಲದಲ್ಲಿ ಮೆಟ್ರಿಕ್ ನಂತರದ ಶ್ರೀ ಡಿ. ದೇವರಾಜ ಅರಸ್ ಬಾಲಕಿಯರ ವಸತಿ ನಿಲಯದ 2ನೇ ಹಂತದ ಕಟ್ಟಡ ಕಾಮಗಾರಿ. Tender Reference Number: KHB/2024-25/BD/work_indent 245 & IFT No. 17/2024-25 Date: 18.06.2024. **Amount put to tender Rs.1,30,73,283/-**
3.	ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲ್ಲೂಕು, ಲೈಲಾದಲ್ಲಿ ಮೆಟ್ರಿಕ್ ನಂತರದ ಶ್ರೀ ಡಿ. ದೇವರಾಜ ಅರಸ್ ಬಾಲಕಿಯರ ವಸತಿ ನಿಲಯದ 2ನೇ ಹಂತದ ಕಟ್ಟಡ ಕಾಮಗಾರಿ. Tender Reference Number: KHB/2024-25/BD/work_indent 246 & IFT No. 18/2024-25 Date: 18.06.2024. **Amount put to tender Rs.1,31,45,020/-**
4.	ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕಿನಲ್ಲಿ ಮೆಟ್ರಿಕ್ ನಂತರದ ಶ್ರೀ ಡಿ. ದೇವರಾಜ ಅರಸ್ ಬಾಲಕಿಯರ ವಸತಿ ನಿಲಯದ 2ನೇ ಹಂತದ ಕಟ್ಟಡ ಕಾಮಗಾರಿ. (ಬೆಳ್ತಂಗಡಿಗೆ ಸ್ಥಳಾಂತರಿಸಲಾಗಿದೆ) Tender Reference Number: KHB/2024-25/BD/work_indent 247 & IFT No. 19/2024-25 Date: 18.06.2024. **Amount put to tender Rs.1,31,34,158/-**

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ: **ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511 / 080-22100077 web site : https://kppp.karnataka.gov.in**

ಸಹಿ/- ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/AAPL/RO413/24-25

ಮಂಗಳೂರು ವಿಶ್ವವಿದ್ಯಾನಿಲಯದ ಡಾ.ಅನುಸೂಯ ರೈ ಮಾರ್ಗದರ್ಶನ

ಭೂಕುಸಿತದಲ್ಲಿ ಬದುಕುಳಿದ ಪಲ್ಲವಿಗೆ ಡಾಕ್ಟರೇಟ್..!

■ ಅನಿಲ್ ಎಚ್.ಟಿ. ಮಡಿಕೇರಿ

ಭೂಕುಸಿತದ ಸಂದರ್ಭ ಕುಟುಂಬದವರನ್ನೆಲ್ಲಾ ಕಳೆದುಕೊಂಡು ಬದುಕುಳಿದಿದ್ದ ಮಡಿಕೇರಿಯ ಮಗಳು ಎಂಬ ಹಿರಿಮೆಗೆ ಕಾರಣಳಾಗಿದ್ದ ಪಲ್ಲವಿ ಈಗ ಡಾಕ್ಟರ್ ಪಲ್ಲವಿಯಾಗಿದ್ದಾಳೆ. ಡಾಕ್ಟರೇಟ್ ಪಡೆದಿರುವ ಪಲ್ಲವಿ ಹೆಮ್ಮೆ ತರುವಂಥ ಸಾಧನೆ ತೋರಿದ್ದಾಳೆ.

2006 ರಲ್ಲಿ ಮಡಿಕೇರಿಯ ಮಂಗಳಾದೇವಿ ನಗರದಲ್ಲಿ ಸಂಭವಿಸಿದ ಭೂಕುಸಿತ ದುರಂತ ಘಟನೆಯಲ್ಲಿ ಎರಡು ಕುಟುಂಬಗಳಿಗೆ ಸೇರಿದ ಆರು ಮಂದಿ ಭೂ ಸಮಾಧಿಯಾಗಿದ್ದರು. ತನ್ನ ತಾಯಿ, ತಂಗಿ, ತಮ್ಮನನ್ನು ಕಳೆದುಕೊಂಡರೂ ಜೀವಂತವಾಗಿ ಪಲ್ಲವಿ ಎಂಬಾಕೆ ಬದುಕುಳಿದಿದ್ದಳು. ಅದೇ ಪಲ್ಲವಿ ಈಗ ಮಂಗಳೂರು ವಿಶ್ವವಿದ್ಯಾನಿಲಯದಿಂದ ಡಾ.ಅನುಸೂಯ ರೈ ಮಾರ್ಗದರ್ಶನದಲ್ಲಿ ಡಾಕ್ಟರೇಟ್ ಪದವಿ ಪಡೆದು ಡಾ.ಪಲ್ಲವಿ ಸೈ ಎನಿಸಿಕೊಂಡಿದ್ದಾರೆ.

ಅಮ್ಮನಾಸೆ ಈಡೇರಿಸಿದ್ದೇನೆ

ನನ್ನ ಅಮ್ಮ ತನ್ನ ಮಕ್ಕಳು ಉತ್ತಮ ವಿದ್ಯೆ ಪಡೆಯಬೇಕೆಂದು ಬಯಸಿದ್ದರು, ಇದಕ್ಕಾಗಿ ಸಾಕಷ್ಟು ಶ್ರಮ ಪಡುತ್ತಿದ್ದರು, ಆದರೆ ಭೂ ಕುಸಿತದಿಂದಾಗಿ ಅಮ್ಮನೊಂದಿಗೆ ಆಕೆಯ ಇಬ್ಬರು ಮಕ್ಕಳೂ ಇನ್ನಿಲ್ಲವಾದರು, ಜೀವಂತ ಉಳಿದ ತಾನು ಅಮ್ಮನ ಆಸೆ ಈಡೇರಿಸಲೆಂದೇ ಛಲದಿಂದ ಗಮನ ಹರಿಸಿದೆ. ಅದು ನನ್ನ ನೆಮ್ಮದಿಗೆ ಕಾರಣವಾಗಿದೆ ಎಂದೂ ಪಲ್ಲವಿ ಭಾವುಕರಾಗಿ ನುಡಿದರು.

ಈ ಭೂಕುಸಿತ ಕೊಡಗಿನ ಇತಿಹಾಸದಲ್ಲಿಯೇ ಮೊದಲ ಪ್ರಾಕೃತಿಕ ವಿಕೋಪ ಎನಿಸಿಕೊಂಡಿತ್ತು. ತಾಯಿ, ತಂಗಿ, ತಮ್ಮನೊಂದಿಗೆ ನಿದ್ರಿಸುತ್ತಿದ್ದ ಪಲ್ಲವಿ ಅದಷ್ಟವಶಾತ್ ಕುಸಿಯುತ್ತಿದ್ದ ಮಣ್ಣಿನಲ್ಲಿಯೇ ಜಾರಿ ಕೆಳಕ್ಕೆ ಬಂದು ಬಿದ್ದಿದ್ದಳು. ಆಗ ಪಲ್ಲವಿಗೆ 16 ವರ್ಷ. ಅಂದಿನ ಜಿಲ್ಲಾಧಿಕಾರಿ ಸುಭೋ ದ್ ಯಾದವ್ ಪ್ರಯತ್ನದಿಂದ 3 ಲಕ್ಷ ರು. ಪರಿಹಾರ ದೊರಕಿತ್ತು.ಅದನ್ನು ಪಲ್ಲವಿ ಹೆಸರಿನಲ್ಲಿಯೇ ಬ್ಯಾಂಕ್ ಠೇವಣಿ ಇರಿಸಲಾಗಿತ್ತು. ಅದೇ ಹಣ ಪಲ್ಲವಿಯ ಭವಿಷ್ಯದ ವಿದ್ಯಾಭ್ಯಾಸಕ್ಕೆ ಬಳಸಿಕೊಳ್ಳಲಾಗಿತ್ತು.

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪದವಿ ಶಿಕ್ಷಣ ಪಡೆದ ನಂತರ ಬೆಂಗಳೂರಿನ ಜೈನ್ ಕಾಲೇಜಿಗೆ ಉಪನ್ಯಾಸಕಿಯಾಗಿ ಸೇರಿದ ಪಲ್ಲವಿ ಕೆಲ ವರ್ಷಗಳಿಂದ ಆ ಕಾಲೇಜಿನ ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗದಲ್ಲಿ ಸಹಾಯಕ ಪ್ರೊಫೆಸರ್ ಆಗಿದ್ದಾರೆ. ತಾಯಿ, ತಮ್ಮ, ತಂಗಿಯನ್ನು ಬಾಲ್ಯದಲ್ಲಿಯೇ ಕಳೆದುಕೊಂಡಿದ್ದರೂ ಶಿಕ್ಷಣದ ಬಗೆಗಿನ ಒಲವು ಕುಗ್ಗಲಿಲ್ಲ. ಹೀಗಾಗಿಯೇ ಪಿಎಚ್.ಡಿ ಪಡೆಯಬೇಕೆಂಬ ಛಲದಿಂದ 'ಭಾರತೀಯ ದೃಷ್ಟಿಕೋನದಿಂದ ಬ್ಯಾಂಕಿಂಗ್ ಇನ್ಸ್ಯೂರೆನ್ಸ್ ವಿಷಯದ ಬಗ್ಗೆ ಪಿಎಚ್.ಡಿ ಮಾಡಿದರು. ಛಲ ಮತ್ತು ಆತ್ಮವಿಶ್ವಾಸ ವಿದ್ದರೆ ಜೀವನದಲ್ಲಿ ಏನನ್ನೂ ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಪಲ್ಲವಿ ಬಹಳ ದೊಡ್ಡ ಉದಾಹರಣೆ ಎಂದು ಮಡಿಕೇರಿಯ ಸಮಾಜಸೇವಕರಾದ ಬೇಬಿ ಮ್ಯಾಥ್ಯು ಹೆಮ್ಮೆ ವ್ಯಕ್ತಪಡಿಸಿದ್ದಾರೆ.

ಅನುಮೋದನೆ ವಾಪಸಾತಿಗೆ ಎಸ್.ಆರ್.ಹಿರೇಮಠ ಒತ್ತಾಯ

ಬಳ್ಳಾರಿಯಲ್ಲಿ ಗಣಿಗಾರಿಕೆಗೆ ಅನುಮತಿ ಬೇಡ

ಧಾರವಾಡ: ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ , ಬಳ್ಳಾರಿಯಲ್ಲಿ ಕೆಐಒಸಿಎಲ್, ವಿಎಸ್ ಕಂಪನಿಗೆ ಗಣಿಗಾರಿಕೆಯ ಅನುಮತಿ ಕೊಟ್ಟ ಬಗ್ಗೆ ಸಮಾಜ ಪರಿವರ್ತನಾ ಸಮುದಾಯದ ಮುಖ್ಯಸ್ಥ ಎಸ್. ಆರ್.ಹಿರೇಮಠ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಗಣಿಗಾರಿಕೆಗೆ ಅನುಮತಿ ನೀಡಿದ್ದನ್ನು ರದ್ದು ಪಡಿಸಬೇಕು. ಈ ಬಗ್ಗೆ ಸ್ಥಳೀಯ ಜನ ಹಾಗೂ ಮಾಧ್ಯಮದವರನ್ನು ಮುಂದಿಟ್ಟುಕೊಂಡು ಚರ್ಚೆ ಮಾಡಬೇಕು. ಇದು ಸುಪ್ರೀಂ ಕೋರ್ಟ್‌ನಲ್ಲಿ ಇನ್ನೂ ಪ್ರಕರಣ ನಡೆಯುತ್ತಿದೆ ಎಂದು ಆಗ್ರಹಿ ಸಿದರು.

ಜವಾಬ್ದಾರಿಯುತ ಸ್ಥಾನದಲ್ಲಿರುವ ಕುಮಾರಸ್ವಾಮಿ, ದೇಶದ ಜನರ ಹಿತ ಕಾಪಾಡಬೇಕು. ಈ ಗಣಿಗಾರಿಕೆ ಪರಿಸರದ ಮೇಲೆ ದುಷ್ಪರಿಣಾಮ ಬೀರಲಿದೆ.

ಗಣಿಗಾರಿಕೆ ವಿಚಾರದಲ್ಲಿ ಈಗಾಗಲೇ ಸುಪ್ರೀಂ ಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಂಡು ಅನೇಕರು ಜೈಲಿಗೆ ಹೋಗಿ ಬಂದಿದ್ದಾರೆ. ಈಗ ಅದೇ ಮರುಕಳಿಸ ಬಾರದು. ಅಪರೂಪದ ಜೈವಿಕ ವೈವಿಧ್ಯ ಇರುವ ಅರಣ್ಯ ಪ್ರದೇಶ ಅದಾಗಿದೆ. ಇದಕ್ಕೆ ನಾವು ಕಪ್ಪತಗುಡ್ಡದ ರೀತಿಯಲ್ಲಿ ಹೋರಾಟ ಮಾಡುತ್ತಿದ್ದೇವೆ.

- ಎಸ್. ಆರ್ ಹಿರೇಮಠ , ಸಮಾಜ ಪರಿವರ್ತನಾ ಸಮುದಾಯದ ಮುಖ್ಯಸ್ಥ

ಬಳ್ಳಾರಿ, ಚಿತ್ರದುರ್ಗ, ತುಮಕೂರು ಜಿಲ್ಲೆಯಲ್ಲಿ ನಡೆಯುತ್ತಿರುವ ಗಣಿಗಾರಿಕೆ ಬಗ್ಗೆ ಸಮಗ್ರವಾಗಿ ಪರಿಶೀಲಿಸಲು ಸುಪ್ರೀಂ ಕೋರ್ಟ್ ಕಳೆದ ಮಾರ್ಚ್‌ನಲ್ಲೇ ಆದೇಶಿಸಿದೆ.

ನಾಲ್ಕು ತಿಂಗಳಿನಲ್ಲಿ ಸಮಗ್ರ ವರದಿ ಕೊಡಲು ಆದೇಶ ಮಾಡಿತ್ತು. ಇಷ್ಟೊಂದು ಕಷ್ಟಪಟ್ಟು ಕೋರ್ಟ್ ಆದೇಶ ತಂದಿದ್ದೇವೆ.

ಹೀಗಾಗಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸೇರಿ ಗಣಿಗಾರಿಕೆಯ ಅನುಮತಿ ರದ್ದು ಮಾಡಬೇಕು. ಈ ಸಂಬಂಧ ಸುಪ್ರೀಂ ಕೋರ್ಟ್ ನ್ಯಾಯಾಧೀಶರನ್ನು ಭೇಟಿ ಮಾಡಲಿದ್ದೇವೆ ಎಂದು ಹಿರೇಮಠ ನುಡಿದರು.

ಗ್ರಾಮೀಣ ಜನರಲ್ಲಿ ಆತಂಕ | 7ಕ್ಕೂ ಹೆಚ್ಚು ಕಾಡಾನೆಗಳು ಬೀಡುಬಿಟ್ಟು ದಾಂಧಲೆ

ಕೊಡಗಿನಲ್ಲಿ ಮನೆಯಂಗಳಕ್ಕೂ ಕಾಡಾನೆ ದಾಳಿ

ಮಡಿಕೇರಿ: ಕೊಡಗು ಜಿಲ್ಲೆಯ ಹಲವು ಕಡೆ ಕಾಡಾನೆಗಳ ಹಾವಳಿ ಮಿತಿ ಮೀರಿದ್ದು ನೀರು ಮತ್ತು ಆಹಾರ ಹುಡುಕಿಕೊಂಡು ಆನೆಗಳ ಹಿಂಡು ಕಾಫಿ ತೋಟಗಳ ದಾಟಿ ಮನೆಯಂಗಳಕ್ಕೂ ದಾಳಿ ಮಾಡಿ ದಾಂಧಲೆ ನಡೆಸುತ್ತಿವೆ. ಇದರಿಂದ ಗ್ರಾಮೀಣ ಜನ ಆತಂಕಗೊಂಡಿದ್ದಾರೆ.

ಅರಣ್ಯ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರೆ ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಮತ್ತು ತೋಟಗಳಿಗೆ ಆನೆಗಳು ಸ್ಥಳಾಂತರಗೊಳ್ಳುತ್ತಿವೆಯೇ ಹೊರತು ಮರಳಿ ಕಾಡು ಸೇರುತ್ತಿಲ್ಲ, ಪೊನ್ನಂಪೇಟೆಯ ಮತ್ತೂರು ಗ್ರಾಮದ ಚೇಪೆಕೊಲ್ಲಿಯಲ್ಲಿ 6 ಆನೆಗಳ ಹಿಂಡು ತೋಟವೊಂದರ ಗೇಟು ಮುರಿದಿವೆ. ಅಲ್ಲದೆ ತೋಟಕ್ಕೂ ಹಾನಿಗೊಳಿಸಿದೆ.

ಸಿದ್ದಾಪುರದ ಗುಹ್ಯ ಗ್ರಾಮದಲ್ಲಿ ಕಾಡಾನೆಗಳ ಹಿಂಡು ಮನೆಯಂಗಳದಲ್ಲಿ ದಾಂಧಲೆ ನಡೆಸಿ, ಹೂವು ಕುಂಡಗಳನ್ನು ಹಾನಿಗೊಳಿಸಿವೆ. ಮರಿಯಾನೆಗಳು ಮನೆಯೊಳಗೆ ನುಗ್ಗಲು ಯತ್ನಿಸಿದ ಘಟನೆಯೂ ನಡೆದಿದೆ. ಎಂ.ಸುಬ್ರಮಣಿ ಎಂಬುವವರ ಕಾಫಿ ತೋಟದಲ್ಲಿ ಮರಿಯಾನೆಗಳು ಸೇರಿದಂತೆ 7ಕ್ಕೂ ಹೆಚ್ಚು ಕಾಡಾನೆಗಳು ಬೀಡುಬಿಟ್ಟು ದಾಂಧಲೆ ನಡೆಸಿವೆ.

ಸೂಕ್ತ ಪರಿಹಾರಕ್ಕೆ ಆಗ್ರಹ

ಕಾಡಾನೆಗಳ ಹಾವಳಿಯನ್ನು ತಡೆಗಟ್ಟಲು ಅರಣ್ಯ ಇಲಾಖೆಗೆ ಹಲವು ಬಾರಿ ಮನ ಮಾಡಿದ್ದರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಗ್ರಾಮಸ್ಥರು ಆರೋಪಿಸಿದ್ದಾರೆ. ನೆಲ್ಲಿಹುದಿಕೇರಿ, ಅಭ್ಯತ್ ಮಂಗಲ, ವಾಲ್ನೂರು ತ್ಯಾಗತ್ತೂರು, ರಂಗ ಸಮುದ್ರ, ಅರೆಕಾಡು, ದಕ್ಷಿಣ ಕೊಡಗು ಭಾಗದಲ್ಲಿ ಕಾಡಾನೆಗಳ ಹಾವಳಿ ಅತಿಯಾಗಿದೆ. ಕಾಡಾನೆಗಳಿಂದಾಗುತ್ತಿರುವ ನಷ್ಟಕ್ಕೆ ಅರಣ್ಯ ಇಲಾಖೆ ಸೂಕ್ತ ಪರಿಹಾರ ನೀಡಬೇಕೆಂದು ಬೆಳೆಗಾರರು ಒತ್ತಾಯಿಸಿದ್ದಾರೆ.

ಮನೆಯ ಅಂಗಳದಲ್ಲಿದ್ದ 20ಕ್ಕೂ ಹೆಚ್ಚು ಹೂವಿನ ಕುಂಡಗಳನ್ನು ತುಳಿದು ಧ್ವಂಸಗೊಳಿಸಿವೆ. ಪ್ಲಾಸ್ಟಿಕ್ ಕುರ್ಚಿ ಮತ್ತಿತರ ವಸ್ತುಗಳನ್ನು ಎಳೆದು, ತುಳಿದು ಹಾಳು ಮಾಡಿವೆ.

ಗುಹ್ಯ ಭಾಗದಲ್ಲಿ ಕಾಡಾನೆಗಳ ಹಾವಳಿ ನಿರಂತರವಾಗಿದ್ದು, ಸಂಜೆ ಮನೆಯಾಚೆ ಹೊರ ಹೋಗದಂತಹ ಪರಿಸ್ಥಿತಿಯಿದೆ. ಮನೆಯ ಪಕ್ಕದಲ್ಲೇ ಕಾಡಾನೆ ಘೀಳಿಡುತ್ತಿತ್ತು. ಮರಿಯಾನೆಗಳು ಮನೆಯ ಒಳಕ್ಕೆ ನುಗ್ಗಲು ಯತ್ನಿಸುತ್ತಿದ್ದವು ಎಂದು ಸುಬ್ರಮಣಿ ಆತಂಕ ವ್ಯಕ್ತಪಡಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಪತ್ನಿಗೆ ಗುಂಡಿಕ್ಕಿಕೊಂದು ಪತಿ ಆತ್ಮಹತ್ಯೆಗೆ ಶರಣು

ಹಾಸನ: ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಪತ್ನಿಗೆ ಗುಂಡಿಕ್ಕಿ ಕೊಂದು ಬಳಿಕ ಪತಿಯೂ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೇಲೂರು ತಾಲೂಕಿನ ದೊಡ್ಡಸಾಲಾವರದಲ್ಲಿ ನಡೆದಿದೆ. ಜಾಜಿ (45) ಕೊಲೆಯಾದ ಪತ್ನಿ, ಹರೀಶ್ (50) ಕೊಲೆ ಬಳಿಕ ಆತ್ಮಹತ್ಯೆ ಮಾಡಿಕೊಂಡ ಪತಿ. ಪ್ರತಿದಿನ ಕ್ಷುಲ್ಲಕ ಕಾರಣಕ್ಕೆ ಜಗಳವಾಡುತ್ತಿದ್ದ ದಂಪತಿ, ಜೂ.17ರ ರಾತ್ರಿಯೂ ಗಲಾಟೆ ಮಾಡಿಕೊಂಡಿದ್ದಾರೆ. ಇದು ವಿಕೋಪಕ್ಕೆ ತಿರುಗಿದ್ದರಿಂದ ಮನೆಯಲ್ಲಿದ್ದ ಬಂದೂಕಿನಿಂದ ಹರೀಶ್ ಜಾಜಿಗೆ ಗುಂಡಿಕ್ಕಿದ್ದಾನೆ. ಬಳಿಕ ತಾನು ನೇಣಿಗೆ ಶರಣಾಗಿದ್ದಾನೆ ಎಂದು ಪೊಲೀಸರ ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ಅರೇಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೋನಿಗೆ ಬಿದ್ದ ಚಿರತೆ

ಹಾಸನ: ಕಳೆದ ಹಲವು ದಿನಗಳಿಂದ ಸಾರ್ವಜನಿಕರ ನಿದ್ದೆಗೆಡಿಸಿದ್ದ ಚಿರತೆಯನ್ನು ಸೆರೆಹಿಡಿಯುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ. ಅರಸೀಕೆರೆ ತಾಲೂಕಿನ ಅಗ್ಗುಂದ ಗ್ರಾಮದ ತೋಟದಮನೆಯಲ್ಲಿ ಚಿರತೆ ಸೆರೆಯಾಗಿದೆ. ಆಹಾರ ಹುಡುಕಿಕೊಂಡು ಬಂದ ಚಿರತೆ ನಾಯಿಯನ್ನು ತಿನ್ನಲು ಹೋಗಿ ಬೋನಿಗೆ ಬಿದ್ದಿದೆ. ಕಳೆದ 2-3 ತಿಂಗಳಿಂದ ಚಿರತೆ ಕುರಿ, ನಾಯಿಗಳನ್ನು ಹೊತ್ತೊಯ್ದು ಜನರ ನಿದ್ದೆಗೆಡಿಸಿತ್ತು. ಇದನ್ನು ಹಿಡಿಯುವಂತೆ ಅಗ್ಗುಂದ, ಸಿದ್ದರಹಳ್ಳಿ, ಬೊಮ್ಮೇನಹಳ್ಳಿ, ದುಮ್ಮೇನಹಳ್ಳಿ ಗ್ರಾಮಸ್ಥರು ಅರಣ್ಯ ಇಲಾಖೆಗೆ ಒತ್ತಡ ಹಾಕಿದ್ದರು. ಅದರಂತೆ ಅರಣ್ಯ ಸಿಬ್ಬಂದಿ ಅಗ್ಗುಂದ ಹೊರವಲಯದ ತೋಟದಮನೆಯಲ್ಲಿ ಬೋನ್ ಇಟ್ಟಿತ್ತು. ನಾಯಿಯನ್ನು ಬೇಟೆಯಾಡಲು ಬಂದಾಗ ಚಿರತೆ ಬೋನಿಗೆ ಬಿದ್ದಿದೆ.

ಸಾಮಾಜಿಕ ಜಾಲತಾಣಕ್ಕೆ ಕಡಿವಾಣ ಅಗತ್ಯ

ಮಂಡ್ಯ: ಅಶ್ಲೀಲ ಫೋಟೊ, ಕೊಳಕು ಭಾಷೆ, ಅವಹೇಳನಕಾರಿ ಸಂದೇಶಗಳಿಂದ ತುಂಬಿಹೋಗಿರುವ ಸಾಮಾಜಿಕ ಜಾಲತಾಣಕ್ಕೆ ಕಡಿವಾಣ ಹಾಕಬೇಕು. ಫೇಕ್ ಅಕೌಂಟ್ ಮೂಲಕ ಪ್ರಚೋದನಕಾರಿ ಸಂದೇಶ ಹರಿಬಿಡುತ್ತಿರುವವರ ವಿರುದ್ಧ ಸೈಬರ್ ಕ್ರೈಂ ಪೊಲೀಸರು ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಚಲನಚಿತ್ರ ನಿರ್ದೇಶಕ ಇಂದ್ರಜಿತ್ ಲಂಕೇಶ್ ಆಗ್ರಹಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸಾಮಾಜಿಕ ಜಾಲತಾಣ ಜನಸಾಮಾನ್ಯರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿರುವ ಶಕ್ತಿಯುತ ಮಾಧ್ಯಮ. ಆದರೆ, ಇದರ ದುರ್ಬಳಕೆ ಇತ್ತೀಚಿನ ದಿನಗಳಲ್ಲಿ ಜಾಸ್ತಿ ಆಗಿದೆ. ಸಾಮಾಜಿಕ ಜಾಲತಾಣದ ಸುಳ್ಳು ಸುದ್ದಿಗಳಿಂದ ಅನೇಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡಲೇ ಸಾಮಾಜಿಕ ಜಾಲತಾಣಗಳ ಸುಳ್ಳು ಸುದ್ದಿ ಪ್ರಸಾರಕ್ಕೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು. ರೇಣುಕಾಸ್ವಾಮಿ ಪತ್ನಿಗೆ ನ್ಯಾಯ ಕೊಡಿಸಬೇಕು. ವೈಯಕ್ತಿಕವಾಗಿ 20 ಸಾವಿರ ನೆರವು ನೀಡುತ್ತೇನೆ. ಚಿತ್ರರಂಗದವರು ಕೂಡ ಆರ್ಥಿಕ ನೆರವು ನೀಡಲಿ ಎಂದರು.

ಕೆರೆಗೆ ಬಿದ್ದ ವಿದ್ಯುತ್ ತಂತಿ: ಇಬ್ಬರ ಸಾವು

ವಿಜಯಪುರ: ವಿದ್ಯುತ್ ತಂತಿ ಕೆರೆಯಲ್ಲಿ ಕತ್ತರಿಸಿ ಬಿದ್ದ ಕಾರಣ ಮೀನು ಹಿಡಿಯಲು ತೆರಳಿದ್ದ ಇಬ್ಬರು ಬಾಲಕರು ಮೃತಪಟ್ಟ ದಾರುಣ ಘಟನೆ ವಿಜಯಪುರ ತಾಲೂಕಿನಲ್ಲಿ ಜರುಗಿದೆ. ದ್ಯಾಬೇರಿ ಗ್ರಾಮದ ಕೆರೆಯಲ್ಲಿ ಈ ದುರಂತ ಸಂಭವಿಸಿದೆ. ಕೆರೆಯಲ್ಲಿ ವಿದ್ಯುತ್ ತಂತಿ ತುಂಡಾಗಿ ಬಿದ್ದಿದ್ದು, ಇಬ್ಬರು ಬಾಲಕರು ಅವಘಡದಲ್ಲಿ ಜೀವ ಕಳೆದುಕೊಳ್ಳುವಂತಾಗಿದೆ. ದುರಂತದಲ್ಲಿ ಮಡಿದ ಬಾಲಕರನ್ನು 8 ವರ್ಷದ ರೋಹಿತ ಅನಿಲ್ ಚವ್ಹಾಣ ಹಾಗೂ 16 ವರ್ಷದ ವಿಜಯ್ ಚವ್ಹಾಣ ಎಂದು ಗುರುತಿಸಲಾಗಿದೆ. ಮೀನು ಹಿಡಿಯಲು ಹೋಗಿದ್ದ ಈ ಬಾಲಕರು ಕೆರೆಯಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿಯನ್ನು ಗಮನಿಸದೆ ನೀರಿಗೆ ಇಳಿದಾಗ ವಿದ್ಯುತ್ ಪ್ರವಹಿಸಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ವಿಷಯ ತಿಳಿಯುತ್ತಲೇ ವಿಜಯಪುರ ಗ್ರಾಮೀಣ ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ, ಪರಿಶೀಲನೆ ನಡೆಸಿದ್ದಾರೆ. ಪೊಲೀಸರು ಮೃತದೇಹಗಳನ್ನು ಹೊರಗೆತೆಗೆದು ಶವಪರೀಕ್ಷೆಗೆ ಸಾಗಿಸಿದ್ದಾರೆ.

{ಶಿವರಾಜ ತಂಗಡಗಿ} ಸಚಿವ

ಕಾಂಗ್ರೆಸ್ ಸರಕಾರ ನುಡಿದಂತೆ ನಡೆದಿದೆ. ಜನರಿಗೆ ಕೊಟ್ಟ ಉಚಿತ ವಿದ್ಯುತ್, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಕುಟುಂಬದ ಒಬ್ಬ ಸದಸ್ಯರಿಗೆ 5 ಕೆಜಿ ಅಕ್ಕಿ, ಯಜಮಾನಿಗೆ ತಿಂಗಳಿಗೆ 2 ಸಾವಿರ ರು. ಭರವಸೆಗಳನ್ನು ಈಡೇರಿಸಲಾಗಿದೆ. ಮುಂದೆಯೂ ಸಹ ನಮ್ಮ ಸರಕಾರ ನುಡಿದಂತೆ ನಡೆಯುತ್ತದೆ.

ಅಧಿಕಾರಿಗಳ ಕಾರ್ಯವೈಖರಿಗೆ ಸಿಎಂ ಗರಂ | ದಲಿತ ಮಕ್ಕಳನ್ನು ನೋಡಿಕೊಳ್ಳದಿದ್ದರೆ ಸೇವೆಯಲ್ಲಿ ಏಕೆ ಇರುತ್ತೀರಾ?

ಸೇವೆಯಲ್ಲಿರೋಕೆ ಅನ್‌ಫಿಟ್: ಅಧಿಕಾರಿಗಳಿಗೆ ಸಿಎಂ ಕ್ಲಾಸ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದಲಿತರ, ಬಡ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ ಸೇವೆಯಲ್ಲಿರುವುದಕ್ಕೆ ನೀವೆಲ್ಲ ಅನ್‌ಫಿಟ್ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳ ನಡೆಯನ್ನು ಖಂಡಿಸಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಪರಿಶಿಷ್ಟ ಪಂಗಡ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ, ವಸತಿ ಶಾಲೆಯ ಅವ್ಯವಸ್ಥೆ, ಫಲಾನುಭವಿಗಳಿಗೆ ಅನುದಾನ ಹಂಚಿಕೆ ಮಾಡುವಲ್ಲಿ ವಿಳಂಬ ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳ ವಿರುದ್ಧ ಗರಂ ಆಗಿದ್ದಾರೆ. ಮುಂದಿನ ದಿನದಲ್ಲಿ ಈ ವರ್ತನೆಯನ್ನು ಸರಿಪಡಿಸಿಕೊಳ್ಳದಿದ್ದರೆ, ಕಠಿಣ ಕ್ರಮದ ಎಚ್ಚರಿಕೆ ನೀಡಿದ್ದಾರೆ.

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಹಣಕಾಸು ಇಲಾಖೆಯ ಸೂಚನೆಯಂತೆ 2023-24ದರಲ್ಲಿ ಲಭ್ಯವಿದ್ದ 263 ಕೋಟಿ ಖಜಾನೆಗೆ ಜಮಾ ಮಾಡಲಾಗಿದೆ ಎಂದು ಸಿಎಂ ಸಿದ್ದರಾಮಯ್ಯಗೆ ಅಧಿಕಾರಿಗಳು ಮಾಹಿತಿ ನೀಡಿದರು. ಯಾವುದೇ ಯೋಜನೆಯಡಿ ಫಲಾನುಭವಿಗಳು ಏಕೆ ಆಯ್ಕೆಯಾಗಿಲ್ಲ ಎಂದು ಪ್ರಶ್ನಿಸಿದಾಗ, ಶಾಸಕರು ಫಲಾನುಭವಿಗಳ ಪಟ್ಟಿ ನೀಡಿಲ್ಲ. ಆಯ್ಕೆ ಮಾಡಬೇಕಾದ ಫಲಾನುಭವಿಗಳ ಸಂಖ್ಯೆ ಅತ್ಯಂತ ಕಡಿಮೆ ಇರುವುದರಿಂದ ಸಂದಿಗ್ಧ ಪರಿಸ್ಥಿತಿ ಎದುರಾಗುವ ಹಿನ್ನೆಲೆಯಲ್ಲಿ ಶಾಸಕರು ಆಯ್ಕೆ ಮಾಡಲು ಆಸಕ್ತಿ ತೋರಿಸುತ್ತಿಲ್ಲ ಎಂದು ತಿಳಿಸಿದರು. ಫಲಾನುಭವಿಗಳ ಸಂಖ್ಯೆ ಹೆಚ್ಚಿಸುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಪರಿಶಿಷ್ಟ ಪಂಗಡ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನಡೆಸಿದರು.

- ಪರಿಶಿಷ್ಟ ಪಂಗಡ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ
- ವಸತಿ ಶಾಲೆಯ ಅವ್ಯವಸ್ಥೆ, ಫಲಾನುಭವಿಗಳಿಗೆ ಅನುದಾನ ಹಂಚಿಕೆ ವಿಳಂಬ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚೆ
- ಅಧಿಕಾರಿಗಳ ನಡೆಗೆ ಸಿಎಂ ಸಿದ್ದರಾಮಯ್ಯ ಗರಂ

ಇಲಾಖೆಯ ಬಜೆಟ್‌ನಲ್ಲಿ ಬಿಡುಗಡೆಯಾದ ಮೊತ್ತ 1884.01 ಕೋಟಿ ರು.ಗಳಲ್ಲಿ 1879.35 ಕೋಟಿ ವೆಚ್ಚವಾಗಿದ್ದು, ಶೇ.99.75ರಷ್ಟು ಸಾಧನೆಯಾಗಿದೆ. ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಲ್ಲಿ 389 ವಿದ್ಯಾರ್ಥಿ ನಿಲಯಗಳು, ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಗಳು 39,541 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಒದಗಿಸಿದ್ದು, 194.71 ಕೋಟಿ ರು. ಒದಗಿಸಲಾಗಿದೆ. ಎಸ್‌ಎಸ್‌ಎಲ್‌ಸಿಯಲ್ಲಿ ಶೇ. 77 ರಷ್ಟು ಫಲಿತಾಂಶ ಬಂದಿದ್ದು, ಫಲಿತಾಂಶ ಉತ್ತಮ ಪಡಿಸಲು ಸೂಚನೆ ನೀಡಿದರು.

ಹಾಸ್ಟೆಲ್‌ಗಳಿಗೆ ಭೇಟಿ ನೀಡಿ: 2,90,546 ವಿದ್ಯಾರ್ಥಿಗಳಿಗೆ 50.47 ಕೋಟಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಪಾವತಿ ಮಾಡಲಾಗಿದೆ.

2,48,887 ವಿದ್ಯಾರ್ಥಿಗಳಿಗೆ 302.64 ಕೋಟಿ ರು. ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಪಾವತಿ ಮಾಡಲಾಗಿದೆ. ಅಧಿಕಾರಿಗಳು ಹಾಸ್ಟೆಲ್‌ಗಳಿಗೆ ಸಂಜೆ ವೇಳೆಗೆ ಭೇಟಿ ನೀಡಿ, ಶುಚಿ ಕಿಟ್, ಆಹಾರ ಪದಾರ್ಥ ವಿತರಣೆ ಸಮರ್ಪಕವಾಗಿ ಆಗುತ್ತಿದೆಯೇ ಎಂದು ಪರಿಶೀಲಿಸಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ಸಭೆಯಲ್ಲಿ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ನಸೀರ್ ಅಹಮದ್, ಮುಖ್ಯಮಂತ್ರಿಯವರ ಅಪರ ಮುಖ್ಯ ಕಾಯರದರ್ಶಿ ಎಲ್.ಕೆ. ಅತೀಕ್, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಮತ್ತು ಇತರ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ವಸತಿ ಶಾಲೆಗಳಲ್ಲಿ ಗುಣಮಟ್ಟ ಹೆಚ್ಚಿಸಿ

ಕೆಲವು ಆದಿವಾಸಿ ಬುಡಕಟ್ಟು ವಸತಿ ಶಾಲೆಗಳಲ್ಲಿ ರಾತ್ರಿ ವೇಳೆ ಮಕ್ಕಳು ಇರುವುದಿಲ್ಲ. ಮಕ್ಕಳನ್ನು ರಾತ್ರಿ ಊಟವಾದ ನಂತರ ಚಿಕ್ಕ ಮಕ್ಕಳು ಎಂದು ಮನೆಗೆ ಕರೆದುಕೊಂಡು ಹೋಗುತ್ತಿದ್ದಾರೆ. ಎಲ್ಲ ಸೌಲಭ್ಯ ಇದ್ದೂ, ಯಾಕೆ ಮನೆಗೆ ಕರೆದುಕೊಂಡು ಹೋಗುತ್ತಾರೆ. ಈ ಕುರಿತು ಪರಾಮರ್ಶೆ ನಡೆಸಲು ಸಿಎಂ ಸೂಚಿಸಿದರು. ಆದಿವಾಸಿ ಬುಡಕಟ್ಟು ವಸತಿ ಶಾಲೆಗಳ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಮತ್ತು ಇದಕ್ಕಾಗಿ ಶಿಕ್ಷಕರ ನೇಮಕಕ್ಕೆ ಕ್ರಮ ವಹಿಸಲು ಆರ್ಥಿಕ ಇಲಾಖೆಗೆ ಸೂಚಿಸಿದರು.

ಎಲ್ಲದಕ್ಕೂ 4ಜಿ ವಿನಾಯಿತಿ ಬೇಡ

ಆದಿವಾಸಿ ಬುಡಕಟ್ಟು ವಸತಿ ಶಾಲೆಯ ಮಕ್ಕಳು ಇತರ ವಿದ್ಯಾರ್ಥಿಗಳೊಂದಿಗೆ ಸಮರ್ಥವಾಗಿ ಸ್ಪರ್ಧಿಸುವಂತಾಗಬೇಕು. ಸ್ಮಾರ್ಟ್ ಕ್ಲಾಸ್‌ಗಳ ವ್ಯವಸ್ಥೆ ಸದ್ಬಳಕೆ ಮಾಡಬೇಕು. ಅನುದಾನ ಲಭ್ಯವಿದೆ ಎಂಬ ಕಾರಣಕ್ಕೆ ಬೇಡಿಕೆ ಇಲ್ಲದೆ ಇದ್ದರೂ, ಹಾಸಿಗೆ, ಬೆಡ್‌ಶೀಟ್ ಮತ್ತಿತರ ವಸ್ತುಗಳನ್ನು ಅನಗತ್ಯವಾಗಿ ಖರೀದಿಸುವುದನ್ನು ಸಹಿಸಲಾಗದು. ಅನಗತ್ಯವಾಗಿ 4 ಜಿ ವಿನಾಯಿತಿ ಪಡೆಯುವ ಬದಲು ನೇರವಾಗಿ ಟೆಂಡರ್ ಕರೆದು ಖರೀದಿ, ಸೇವೆಗಳನ್ನು ಪಡೆಯಬೇಕೆಂದು ಮುಖ್ಯಮಂತ್ರಿಗಳು ಸೂಚನೆ ನೀಡಿದರು.

ಕೊನೆಯ ಹಂತ ತಲುಪಿದ ರಾಜ್ಯ ಕಾಂಗ್ರೆಸ್ ಸರಕಾರ

ಗದಗ: ಆಸ್ತಿ ನಗದೀಕರಣ ಮಾಡಲು ಹೊರಟಿರುವ ಕಾಂಗ್ರೆಸ್ ಸರಕಾರ ಸಂಪೂರ್ಣ ದಿವಾಳಿಯಾಗಿರುವುದಕ್ಕೆ ಸಾಕ್ಷಿ ಎಂದು ಸಂಸದ ಬಸವರಾಜ ಬೊಮ್ಮಾಯಿ ಟೀಕಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿನ ಎಲ್ಲ ವರ್ಗದ ಬಡವರ ಹೆಸರಿನಲ್ಲಿ ಆಯ್ಕೆಯಾದ ಕಾಂಗ್ರೆಸ್ ಇಂದು ಅವರಿಗೆ ದ್ರೋಹ ಮಾಡುತ್ತಿದೆ. ಬಡವರು, ಸಾಮಾನ್ಯ ಜನರ ಮೇಲೆ ಒಂದಾದ ಮೇಲೆ ಒಂದರಂತೆ ಬರೆ ಎಳೆಯುತ್ತಿದೆ ಎಂದು ಹೇಳಿದರು. ಒಂದು ಕುಟುಂಬ ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದಾಗ ಮಾತ್ರ ಅಂತಿಮವಾಗಿ ಪಿತ್ರಾರ್ಜಿತ ಆಸ್ತಿ ಮಾರುತ್ತದೆ. ಅದೇರೀತಿ ಈ ಸರಕಾರ ಕೊನೆಯ ಹಂತ ತಲುಪಿದೆ. ಸಾವಿರಾರು ವರ್ಷದ ಆಸ್ತಿ ಮಾರಲು ಮತ್ತು ನಗದೀಕರಣ ಮಾಡಲು ಹೊರಟಿರುವುದು ರಾಜ್ಯವನ್ನು ಹಣಕಾಸಿನ ದುರ್ಗತಿಗೆ ತೆಗೆದುಕೊಂಡು ಹೋಗಿರುವುದೇ ಸಾಕ್ಷಿ. ಈ ರೀತಿಯ ಕ್ರಮಗಳನ್ನು ಹಿಂದಿನ ಯಾವುದೇ ಸರಕಾರಗಳು ತೆಗೆದುಕೊಂಡಿರಲಿಲ್ಲ ಎಂದು ಹರಿಹಾಯ್ದರು. ಈಗಾಗಲೇ ಬಜೆಟ್‌ನಲ್ಲಿ 1.05 ಲಕ್ಷ ಕೋಟಿ ಸಾಲವನ್ನು ರಾಜ್ಯ ಸರಕಾರ ಪಡೆದುಕೊಳ್ಳುತ್ತಿದ್ದು, ಸುಮಾರು 20 ಸಾವಿರ ಕೋಟಿ ಹೊಸ ತೆರಿಗೆಯ ಭಾರವನ್ನು ರಾಜ್ಯದ ಬಡಜನರ ಮೇಲೆ ಹೇರುತ್ತಿದೆ. ಇವೆಲ್ಲದರ ಬಗ್ಗೆ ಸಂಪೂರ್ಣ ವಿವರಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಜನರಿಗೆ ಕೊಡಬೇಕು ಎಂದರು.

ಡೀಲ್ ಮಾಡಲು ಹೊರಟಿರುವ ಸರಕಾರ

ಆಸ್ತಿಯನ್ನು ಖಾಸಗಿ ಸಹಭಾಗಿತ್ವದಲ್ಲಿ ನಗದೀಕರಣ ಮಾಡುವ ಮೂಲಕ ರಿಯಲ್ ಎಸ್ಟೇಟ್ ಕುಳಗಳಿಗೆ ಸಾವಿರಾರು ಕೋಟಿ ಲಾಭ ಮಾಡಿಕೊಡುವ ಹುನ್ನಾರ ಇದೆ. ಇಂತಹ ಗಂಭೀರ ಪರಿಸ್ಥಿತಿಯಲ್ಲೂ ಕೂಡ ಡೀಲ್ ಮಾಡಲು ಹೊರಟಿದೆ ರಾಜ್ಯ ಸರಕಾರ ರಾಜ್ಯ ದ್ರೋಹ ಹಾಗೂ ಜನದ್ರೋಹ ಮಾಡುತ್ತಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಟೀಕಿಸಿದರು.

ರೇಣುಕಾಸ್ವಾಮಿ ನಿವಾಸಕ್ಕೆ ಗೃಹ ಸಚಿವ ಪರಮೇಶ್ವರ್ ಭೇಟಿ, ಸಾಂತ್ವನ

ತನಿಖೆಯಲ್ಲಿ ಯಾರ ಒತ್ತಡವೂ ಇಲ್ಲ

ಚಿತ್ರದುರ್ಗದಲ್ಲಿನ ತಮ್ಮ ನಿವಾಸಕ್ಕೆ ಭೇಟಿ ನೀಡಿದ್ದ ಗೃಹಸಚಿವ ಡಾ.ಜಿ.ಪರಮೇಶ್ವರ್ ಎದುರು ರೇಣುಕಾಸ್ವಾಮಿ ಪತ್ನಿ, ತಂದೆ ಹಾಗೂ ತಾಯಿ ನೋವು ತೋಡಿಕೊಂಡರು.

ಚಿತ್ರದುರ್ಗ: ರೇಣುಕಾಸ್ವಾಮಿ ಹತ್ಯೆ ಪ್ರಕರಣದ ತನಿಖೆಯನ್ನು ನಮ್ಮ ಪೊಲೀಸರು ಸಮರ್ಥವಾಗಿ ನಡೆಸುತ್ತಿದ್ದಾರೆ. ಪೊಲೀಸರ ಮೇಲೆ ಯಾವುದೇ ಸಚಿವರಾಗಲೀ, ಶಾಸಕರಾಗಲೀ ಒತ್ತಡ ಹಾಕಿಲ್ಲ. ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವ ಅವಶ್ಯಕತೆ ಇಲ್ಲ ಎಂದು ಗೃಹಸಚಿವ ಡಾ.ಜಿ. ಪರಮೇಶ್ವರ್ ಹೇಳಿದರು. ರೇಣುಕಾಸ್ವಾಮಿ ನಿವಾಸಕ್ಕೆ ಮಂಗಳವಾರ ಭೇಟಿ ನೀಡಿ, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದ ನಂತರ ಅವರು ಸುದ್ದಿಗಾರರ ಜೊತೆ ಮಾತನಾಡಿ,' ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಕುರಿತು ಕೆಲವರು ರಾಜಕೀಯ ಹೇಳಿಕೆ ನೀಡುತ್ತಿರುವುದನ್ನು ಗಮನಿಸುತ್ತಿದ್ದೇನೆ. ತನಿಖೆ ನ್ಯಾಯಯುತವಾಗಿ ನಡೆಯುತ್ತಿದೆ. ಇದನ್ನು ರಾಜಕೀಯ ದೃಷ್ಟಿಕೋನದಿಂದ ನೋಡಬಾರದು ಎಂದರು.

ಘಟನೆ ನಡೆದು 48 ಗಂಟೆಯೊಳಗೆ ಪೊಲೀಸರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಯಾರ ಮುಲಾಜು, ಒತ್ತಡಕ್ಕೂ ಅವರು ಒಳಗಾಗಿಲ್ಲ. ಇಲ್ಲಿಯವರೆಗೆ 17 ಜನ ಆರೋಪಿಗಳನ್ನು ಬಂಧಿಸಲಾಗಿದೆ. ತ್ವರಿತಗತಿಯಲ್ಲಿ ಎಲ್ಲ ಮಾಹಿತಿಗಳನ್ನೂ ಕಲೆಹಾಕಿದ್ದಾರೆ. ಆರೋಪಿಗಳ ವಿರುದ್ಧ ಕಾನೂನಿನ ಅಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

> ರೇಣುಕಾಸ್ವಾಮಿ ಪತ್ನಿ, ತಂದೆ-ತಾಯಿಯನ್ನು ಭೇಟಿಯಾಗಿ ಸಾಂತ್ವನ ಹೇಳಿದ್ದೇನೆ. ಈ ಘಟನೆ ನಡೆಯಬಾರದಿತ್ತು. ನಮಗೂ ನೋವಾಗಿದೆ. ರೇಣುಕಾಸ್ವಾಮಿ ಪತ್ನಿಗೆ ಸರಕಾರಿ ಕೆಲಸ ನೀಡುವಂತೆ ಕುಟುಂಬ ಸದಸ್ಯರು ಮನವಿ ಮಾಡಿದ್ದಾರೆ. ಮುಖ್ಯಮಂತ್ರಿ ಜೊತೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು.
>
> -ಡಾ.ಜಿ.ಪರಮೇಶ್ವರ್, ಗೃಹ ಸಚಿವ

ಉಸ್ತುವಾರಿ ಸಚಿವರ ಬದಲಾವಣೆ ಮಾಡಲ್ಲ



ಬೆಳಗಾವಿ : ಚುನಾವಣೆಯಲ್ಲಿ ಸೋಲು, ಗೆಲುವು ಸಹಜ. ಅಭ್ಯರ್ಥಿ ಸೋತ ಕಾರಣಕ್ಕೆ ಉಸ್ತುವಾರಿ ಹೊತ್ತ ಸಚಿವರ ಬದಲಾವಣೆ ಮಾಡಬೇಕೆಂದು ಇರುವುದಿಲ್ಲ ಎಂದು ಮಾಜಿ ಸಚಿವ ವಿನಯ್ ಕುಲಕರ್ಣಿ ಅಭಿಪ್ರಾಯಪಟ್ಟರು.

ಸುದ್ದಿಗಾರರೊಂದಿಗೆ ಮಾತನಾಡಿ, ಚುನಾವಣೆಯಲ್ಲಿ ಸೋತ ತಕ್ಷಣ ಉಸ್ತುವಾರಿ ಸಚಿವರ ಬದಲಾವಣೆ ಮಾಡಲಾಗುವುದಿಲ್ಲ. ನಾನು ಒಬ್ಬ ಹಿರಿಯ ಶಾಸಕನಾಗಿ ಒಂದು ಬಾರಿಗೆ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ನನ್ನ ಶಕ್ತಿಯನ್ನು ಗಮನಿಸಿ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದರು.

ಪಂಚಮಸಾಲಿ ಮೀಸಲು ಹೋರಾಟ ವಿಚಾರವಾಗಿ ಮಾತನಾಡಿ. ಕಳೆದ 25 ವರ್ಷಗಳಿಂದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹೋರಾಟ ಮಾಡುತ್ತಿದ್ದಾರೆ. ಪಂಚಮಸಾಲಿ ಹೋರಾಟದಲ್ಲಿ ಬಿಜೆಪಿ ಸರಕಾರ ಸುಳ್ಳು ಭರವಸೆ ಕೊಟ್ಟು ದಾರಿ ತಪ್ಪಿಸಿತು. ಎಲ್ಲಾ ಸಮಾಜಗಳ ಬೇಡಿಕೆಗೆ ಸರಕಾರ ಸ್ಪಂದಿಸುವ ಕೆಲಸ ಮಾಡಬೇಕು. ಲಿಂಗಾಯತ ಸಮುದಾಯವನ್ನು ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸಲು ಈಗ ಹೋರಾಟ ಆರಂಭಿಸುತ್ತೇವೆ. ಸ್ವಾಮೀಜಿಗಳ ಹೋರಾಟದಲ್ಲಿ ನಾವೆಲ್ಲ ಭಾಗಿಯಾಗುತ್ತೇವೆ. ಅಲ್ಲದೇ ಮುಖ್ಯಮಂತ್ರಿಗಳನ್ನೂ ಭೇಟಿಯಾಗುತ್ತೇವೆ ಎಂದು ವಿನಯ ಕುಲಕರ್ಣಿ ಹೇಳಿದರು. ದರ್ಶನ್ ಗ್ಯಾಂಗ್‌ನಿಂದ ಆದ ಕೊಲೆ ಪ್ರಕರಣ ಖಂಡಿಸಿದ ವಿನಯ್ ಕುಲಕರ್ಣಿ, ಸಹಜವಾಗಿ ಚಿತ್ರನಟ ದರ್ಶನ್ ಕೋಪದಿಂದ ವರ್ತಿಸುತ್ತಿದ್ದರು. ಆದರೆ ನಮ್ಮ ಜತೆ ಇದ್ದಾಗ ಆ ವರ್ತನೆ ಕಂಡುಬಂದಿಲ್ಲ. ದರ್ಶನ್ ಮೇಲೆ ಆರೋಪ ಇದ್ದಿದ್ದಕ್ಕೆ ಪೊಲೀಸರು ಬಂಧಿಸಿ, ವಿಚಾರಣೆ ನಡೆಸಿದ್ದಾರೆ. ಪೊಲೀಸರು ಅವರ ಕರ್ತವ್ಯ ಮಾಡಿದ್ದಾರೆಎಂದು ಹೇಳಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಹೇಳಿಕೆ

ಬಿಜೆಪಿಯಿಂದ ನಾಳೆ ರಸ್ತೆತಡೆ

ತುಮಕೂರು: ಪೆಟ್ರೋಲ್ ಮತ್ತು ಡೀಸೆಲ್ ತೆರಿಗೆ ಹೆಚ್ಚಿಸಿರುವ ಕಾಂಗ್ರೆಸ್ ಸರಕಾರದ ಕ್ರಮ ವಿರೋಧಿಸಿ ಜೂ. 20 ರಂದು ರಾಜ್ಯಾದ್ಯಂತ ರಸ್ತೆತಡೆ ಚಳವಳಿ ನಡೆಸಲಿದೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು. ಮಂಗಳವಾರ ಸಿದ್ದಗಂಗಾ ಮಠಕ್ಕೆ ಭೇಟಿ ನೀಡಿ ಲಿಂಗೈಕ್ಯ ಡಾ. ಶ್ರೀ ಶಿವಕುಮಾರ ಸ್ವಾಮೀಜಿಯವರ ಗದ್ದುಗೆ ದರ್ಶನ ಪಡೆದು ಮಠಾಧ್ಯಕ್ಷ ಶ್ರೀಸಿದ್ದಲಿಂಗ ಸ್ವಾಮೀಜಿ ಅವರ ಆಶೀರ್ವಾದ ಪಡೆದ ನಂತರ ಸುದ್ದಿಗಾರರೊದಿಗೆ ಮಾತನಾಡಿದರು.

> ಭ್ರಷ್ಟಾಚಾರದ ಬಗ್ಗೆ ಮುಖ್ಯಮಂತ್ರಿಗಳು ಮಾತನಾಡುತ್ತಾರೆ. ವಾಲ್ಮೀಕಿ ನಿಗಮದಲ್ಲಿ ನೂರಾರು ಕೋಟಿ ಹಣ ಬೇನಾಮಿ ಖಾತೆ ಮುಖಾಂತರ ಆಂಧ್ರಕ್ಕೆ ಹೋಗಿದೆ. ಆಂಧ್ರ ಚುನಾವಣೆಯಲ್ಲಿ ಆ ಹಣ ಬಳಕೆಯಾಗಿದೆ. ಇಷ್ಟೆಲ್ಲಾ ಭ್ರಷ್ಟಾಚಾರ ನಡೆದಿದ್ದರೂ ಹಣಕಾಸು ಮಂತ್ರಿಯಾಗಿರುವ ಮುಖ್ಯಮಂತ್ರಿಗಳಿಗೆ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ನೈತಿಕತೆ ಇದೆಯೇ?
>
> -ಬಿ.ವೈ ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ವಿರೋಧಿಸಿ ಸೋಮವಾರ ರಾಜ್ಯಾದ್ಯಂತ ಪ್ರತಿಭಟನೆ ನಡೆಸಿದ್ದೇವೆ. ರಾಜ್ಯದಲ್ಲಿ ಭಂಡ ಸರಕಾರ ಅಧಿಕಾರದಲ್ಲಿದೆ. ಹಾಗಾಗಿ ಹೋರಾಟ ಮುಂದುವರೆಸುವ ಅನಿವಾರ್ಯತೆ ಇರುವುದರಿಂದ ಗುರುವಾರ ರಸ್ತೆತಡೆ ಚಳವಳಿ ಹಮ್ಮಿಕೊಂಡಿದ್ದೇವೆ ಎಂದರು. ಮುಖ್ಯಮಂತ್ರಿ ಎಚ್ಚೆತ್ತುಕೊಂಡು ಜನಸಾಮಾನ್ಯರಿಗೆ ಹೊರೆ ಮಾಡುತ್ತಿರುವ ನಿರ್ಧಾರದಿಂದ ಹಿಂದೆ ಸರಿಯಬೇಕು. ಗುರುವಾರ (ಜೂ.20) ಕೇಂದ್ರ ಸಚಿವರಾದ ಎಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ಸೇರಿ ನಾವೆಲ್ಲರೂ ಪ್ರತಿಭಟನೆ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಅವರು ಸಿದ್ಧಗಂಗಾ ಮಠಕ್ಕೆ ಭೇಟಿ ನೀಡಿ ಶ್ರೀಸಿದ್ಧಲಿಂಗ ಸ್ವಾಮೀಜಿ ಅವರ ಆಶೀರ್ವಾದ ಪಡೆದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರರಿಂದ 2 ಲಕ್ಷ ಪರಿಹಾರ

ರೇಣುಕಾಸ್ವಾಮಿ ಕೊಲೆ ತಲೆತಗ್ಗಿಸುವ ಘಟನೆ

ಚಿತ್ರದುರ್ಗ: ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಅವರು ರೇಣುಕಾಸ್ವಾಮಿ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿದರು. ಬಳಿಕ ಪಕ್ಷದ ವತಿಯಿಂದ ಕುಟುಂಬದವರಿಗೆ 2 ಲಕ್ಷ ರು. ಪರಿಹಾರ ನೀಡಿದರು. ಸುದ್ದಿಗಾರರೊಂದಿಗೆ ಮಾತನಾಡಿ, ರೇಣುಕಾಸ್ವಾಮಿಯ ಹತ್ಯೆಯನ್ನು ನಾಗರಿಕ ಸಮಾಜದ ಯಾರೊಬ್ಬರೂ ಬೆಂಬಲಿಸಲು ಸಾಧ್ಯವಿಲ್ಲ. ಪ್ರತಿಯೊಬ್ಬರು ಈ ಘಟನೆಯನ್ನು ತೀವ್ರವಾಗಿ ಖಂಡಿಸುವಂತಹದ್ದು ಎಂದರು.

ರೇಣುಕಾಸ್ವಾಮಿ ಕುಟುಂಬಕ್ಕೆ ಧೈರ್ಯ ತುಂಬುವ ಕೆಲಸ ರಾಜ್ಯ ಸರಕಾರದ ವತಿಯಿಂದ ಆಗಬೇಕು. ರೇಣುಕಾಸ್ವಾಮಿಯ ಪತ್ನಿ ನಾಲ್ಕು ತಿಂಗಳ ಗರ್ಭಿಣಿ. ಮುಂದಿನ ದಿನಗಳಲ್ಲಿ ಆಕೆಗೆ ಸರಕಾರಿ ಉದ್ಯೋಗ ಮತ್ತು ಪರಿಹಾರ ನೀಡಬೇಕು ಎಂದು ವಿಜಯೇಂದ್ರ ಆಗ್ರಹಿಸಿದರು. ರೇಣುಕಾಸ್ವಾಮಿ ಕೊಲೆ ಪ್ರಕರಣದ ತನಿಖೆ ನಡೆಯುತ್ತಿದೆ. ಈ ಕೊಲೆ ಪ್ರಕರಣದಲ್ಲಿ ಯಾರ್‍ಯಾರು ಭಾಗಿಯಾಗಿದ್ದಾರೆ ಎಂಬುದು ತಿಳಿದುಬಂದಿದೆ. ಆದರೆ ಈ ಕೊಲೆ ಪ್ರಕರಣ ತನಿಖೆ ಸರಿಯಾದ ರೀತಿಯಲ್ಲಿ ಆಗಬೇಕು. ಯಾವುದೇ ಒತ್ತಡಕ್ಕೆ ಮಣಿಯದೇ ತಪ್ಪಿಸ್ಥರಿಗೆ ಸರಿಯಾದ ಶಿಕ್ಷೆ ಸಹ ಆಗಬೇಕು ಎಂದು ವಿಜಯೇಂದ್ರ ಒತ್ತಾಯಿಸಿದರು.



ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಅವರು ರೇಣುಕಾಸ್ವಾಮಿ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿದರು.

> ಈ ಕೊಲೆ ಪ್ರಕರಣ ಇಡೀ ದೇಶದಲ್ಲೇ ಹೆಚ್ಚು ಚರ್ಚೆಯಾಗುತ್ತಿದೆ. ಈ ವಿಷಯವನ್ನು ರಾಜ್ಯ ಸರಕಾರ ಗಂಭೀರವಾಗಿ ತೆಗೆದುಕೊಂಡು ಸರಿಯಾದ ರೀತಿಯಲ್ಲಿ ತನಿಖೆಯಾಗಬೇಕು. ಸಿಎಂ ಸಿದ್ದರಾಮಯ್ಯ ರೇಣುಕಾಸ್ವಾಮಿ ಕುಟುಂಬಕ್ಕೆ ತಕ್ಷಣವೇ ಪರಿಹಾರ ನೀಡಬೇಕು. ಗೃಹ ಸಚಿವರು ಕುಟುಂಬಕ್ಕೆ ಧೈರ್ಯ ತುಂಬಿ, ಆರ್ಥಿಕವಾಗಿ ನೆರವಾಗಬೇಕು.
>
> -ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ವಧು ಸಿಗದೆ ರೈತ ಆತ್ಮಹತ್ಯೆಗೆ ಶರಣು

ದಾವಣಗೆರೆ: ವಧು ಸಿಗಲಿಲ್ಲ ಎಂದು ಖಿನ್ನತೆಗೊಳಗಾದ ಯುವಕ ಆತ್ಮಹತ್ಯೆಗೆ ಶರಣಾಗಿರುವ ಘಟನೆ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲೂಕಿನ ಹಿರೇ ಬಾಸೂರು ಗ್ರಾಮದಲ್ಲಿ ನಡೆದಿದೆ. ಎಚ್. ಪವನ್ (30) ಆತ್ಮಹತ್ಯೆ ಮಾಡಿಕೊಂಡ ಯುವ ಕೃಷಿಕ. ತನಗೆ ವಧು ಸಿಗಲಿಲ್ಲವೆಂಬ ಕೊರಗಿನಿಂದ ಪವನ್ ಮನೆಯಲ್ಲಿ ಯಾರೂ ಇಲ್ಲದ ವೇಳೆ ವಿಷ ಸೇವಿಸಿ ಆತ್ಮಹತ್ಯೆ ಶರಣಾಗಿದ್ದಾನೆ. ಪವನ್ ವೃತ್ತಿಯಲ್ಲಿ ಕೃಷಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ. ಮನೆಯಲ್ಲಿ ಕುಟುಂಬಸ್ಥರು ಮದುವೆ ಮಾಡಲು ಚಿಂತನೆ ನಡೆಸಿದ್ದರು. ಬಳಿಕ ಎರಡು ವರ್ಷಗಳಿಂದ ಹುಡುಗಿಯನ್ನು ಹುಡುಕುತ್ತಿದ್ದರು. ಹಿರೇಬಾಸೂರಿನ ಹನುಮಂತಪ್ಪ ಅವರಿಗೆ ಇಬ್ಬರು ಮಕ್ಕಳಿದ್ದು, ಪವನ್ ಹಿರಿಯ ಪುತ್ರನಾಗಿ ಮನೆಗೆ ಆಧಾರ ಸ್ತಂಭವಾಗಿದ್ದ. ಇಬ್ಬರು ಪುತ್ರರಿಗೆ ಮದುವೆ ಮಾಡಲು ತಂದೆ ಹನುಮಂತಪ್ಪ ವಧುಗಳನ್ನು ಹುಡುಕುತ್ತಿದ್ದರು. ವಧು ಸಿಗದೇ ಇರುವ ಕಾರಣಕ್ಕೆ ಇತ್ತೀಚೆಗೆ ಪವನ್ ಮಾನಸಿಕ ಖಿನ್ನತೆಗೆ ಒಳಗಾಗಿ ವಿಷ ಸೇವಿಸಿದ್ದಾನೆ ಎಂದು ಹೊನ್ನಾಳಿ ಪೊಲೀಸರು ಮಾಹಿತಿ ನೀಡಿದ್ದಾರೆ.



ತಿಂಗಳಲ್ಲಿ ಕಾಂಗ್ರೆಸ್ ಶಾಸಕರ ಬಂಡಾಯ: ಶಾಸಕ ಯತ್ನಾಳ್ ಭವಿಷ್ಯ

3 ತಿಂಗಳಲ್ಲಿ ರಾಜ್ಯ ಸರಕಾರ ಪತನ

ವಿಜಯಪುರ: ರಾಜ್ಯದಲ್ಲಿ ಗ್ಯಾರಂಟಿ ವಿಫಲವಾಗಿದೆ. ಎಲ್ಲದರ ಬೆಲೆ ಏರಿಕೆ ಮಾಡುತ್ತಿದ್ದಾರೆ. ಗ್ಯಾರಂಟಿ ಮೇಕ್ ಅಪ್ ಮಾಡಲು ಬೆಲೆ ಏರಿಕೆ ಮಾಡುತ್ತಿದ್ದಾರೆ. ಅಭಿವೃದ್ಧಿ ಆಗುತ್ತಿಲ್ಲ ಎಂದು ಕಾಂಗ್ರೆಸ್ ಶಾಸಕರೇ ಹೇಳುತ್ತಿದ್ದಾರೆ. ಈಗ ನಾವು ಹಿಂದಿನ ಕಾಮಗಾರಿಗಳಿಗೆ ಪೂಜೆ ಮಾಡುತ್ತಿದ್ದೇವೆ. ಇನ್ನೊಂದು ತಿಂಗಳಲ್ಲಿ ಅನುದಾನ ವಿಚಾರದಲ್ಲಿ ಕಾಂಗ್ರೆಸ್ ಶಾಸಕರೇ ಬಂಡೇಳುತ್ತಾರೆ, 3 ತಿಂಗಳಲ್ಲಿ ರಾಜ್ಯ ಸರಕಾರ ಪತನವಾಗಲಿದೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಭವಿಷ್ಯ ನುಡಿದಿದ್ದಾರೆ.

ಎಂಎಲ್‌ಸಿ ಎನ್. ರವಿಕುಮಾರ್, ಮಾಜಿ ಶಾಸಕರಾದ ವೀರಣ್ಣ ಚರಂತಿಮಠ, ಅಭಯ ಪಾಟೀಲ್ ಶಾಸಕ ಯತ್ನಾಳ ಭೇಟಿ ವಿಚಾರಕ್ಕೆ ವಿಜಯಪುರದಲ್ಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿಯ ಸಂಘಟನೆ ವಿಚಾರ ಮಾತನಾಡಿದ್ದೇವೆ. ಮುಂದಿನ ಅಧಿವೇಶನದಲ್ಲಿ ಕಾಂಗ್ರೆಸ್ ದುರಾಡಳಿತದ ವಿರುದ್ಧ ಹೋರಾಟ ಮಾಡುವ ಕುರಿತು ಚರ್ಚಿಸಿದ್ದೇವೆ ಎಂದು ಸಮಜಾಯಿಷಿ ನೀಡಿದರು.

ಜಿಗಜಿಣಗಿಗೆ ಸಂಪುಟ ದರ್ಜೆ ನೀಡಿ: ವಿ ಸೋಮಣ್ಣ ಅವರಿಗೆ ಕೇಂದ್ರದಲ್ಲಿ ಸಚಿವ ಸ್ಥಾನ ನೀಡಿಕೆ ಬಗ್ಗೆ ಬಿಜೆಪಿಯಲ್ಲಿ ಅಪಸ್ವರ ಎದ್ದಿರುವ ಬಗ್ಗೆ ಪ್ರತಿಕ್ರಿಯಿಸಿದ ಯತ್ನಾಳ್, ರಾಜ್ಯದಲ್ಲಿ ಹಿಂದಿನ ಉಪ ಚುನಾವಣೆಗಳಲ್ಲಿ ಸೋಮಣ್ಣ ಕೆಲಸ ಮಾಡಿ ಗೆಲ್ಲಿಸಿದ್ದಾರೆ. ವಿಧಾನಸಭಾ ಚುನಾವಣೆಯಲ್ಲಿ ಅವರನ್ನು ಎರಡು ಕಡೆ ನಿಲ್ಲಿಸಿ ಸೋಲಿಸಿದರು. ಅವರ ಕೆಲಸ ನೋಡಿ ಬಿಜೆಪಿ ವರಿಷ್ಠರು ಎರಡು ಖಾತೆ ನೀಡಿದ್ದಾರೆ. ವಿಜಯಪುರ ಸಂಸದ ರಮೇಶ ಜಿಗಜಿಣಗಿ ಅವರಿಗೂ ಸಂಪುಟ ಸಚಿವ ಸ್ಥಾನ ನೀಡಬೇಕು ಎಂದರು.

ಹೊಂದಾಣಿಕೆ ರಾಜಕಾರಣ ನನ್ನದಲ್ಲ

ಬಿಜೆಪಿ ನಾಯಕರ ಇಂದಿನ ಭೇಟಿ, ಯಡಿಯೂರಪ್ಪ ಜೊತೆಗೆ ಹೊಂದಾಣಿಕೆ ಮಾಡಲು ಬಂದಿದ್ದಾ ಎಂಬ ಪ್ರಶ್ನೆಗೆ ಉತ್ತರಿಸಿದ ಯತ್ನಾಳ, ನಾನು ಹೊಂದಾಣಿಕೆಯವನಲ್ಲ. ಬೆಳಗಾವಿ ಹಾಗೂ ಬೆಂಗಳೂರು ಅಧಿವೇಶನದಲ್ಲಿ ನಾನು ಯಾವುದೇ ಹೊಂದಾಣಿಕೆ ಇಲ್ಲದೇ ದಾಳಿ ಮಾಡುತ್ತೇನೆಂದು ಎಲ್ಲರೂ ಹೇಳಿದ್ದಾರೆ. ನಾವು ಒಂದಾಗಿ ಹೋರಾಟ ಮಾಡಬೇಕೆಂದು ಭೇಟಿಯಾಗಿದ್ದೇವೆ. ವಿಜಯಪುರ ಗಂಡುಮೆಟ್ಟಿದ ನಾಡು. ನೇರವಾಗಿ ಮಾತನಾಡುವವರು ಇಲ್ಲಿದ್ದಾರೆಂದು ಯತ್ನಾಳ ಮಾರ್ಮಿಕವಾಗಿ ನುಡಿದರು.

ಗೋವಾಗೆ ಕಳ್ಳಸಾಗಣೆ: 41 ಕಪ್ಪೆಗಳ ರಕ್ಷಣೆ

ಕಾರವಾರ: ಭಕ್ಷಣೆಗಾಗಿ ಗೋವಾಗೆ ಬಸ್‌ನಲ್ಲಿ ಸಾಗಿಸುತ್ತಿದ್ದ 41 ಬುಲ್ ಫ್ರಾಗ್ ಕಪ್ಪೆಗಳನ್ನು ಕಾರವಾರದ ಅರಣ್ಯ ಇಲಾಖೆ ಅಧಿಕಾರಿಗಳು ರಕ್ಷಣೆ ಮಾಡಿದ್ದಾರೆ. ಅಲ್ಲದೇ ಗೋವಾ ಮೂಲದ ಇಬ್ಬರನ್ನು ಬಂಧಿಸಿ ಬಸ್ ವಶಕ್ಕೆ ಪಡೆದಿದ್ದಾರೆ. ಕಾರವಾರದ ರಾಷ್ಟ್ರೀಯ ಹೆದ್ದಾರಿ 66ರ ಕಾಳಿ ಸೇತುವೆ ಬಳಿ ಅರಣ್ಯಾಧಿಕಾರಿಗಳು ಗೋವಾ ಮೂಲದ ಕಾಣಕೋಣ್ ನಿವಾಸಿ ಚಾಲಕ ಸಿದ್ದೇಶ್ ದೇಸಾಯಿ ಹಾಗೂ ನಿರ್ವಾಹಕ ಜಾನು ಲೂಲಿಮ್‌ರನ್ನು ಬಂಧಿಸಿದ್ದಾರೆ. ರಾಜ್ಯ ಸರಕಾರ ಈ ಕಪ್ಪೆಗಳ ಬೇಟೆ, ಸಾಕಣೆಯನ್ನು ನಿಷೇಧಿಸಿದೆ. ಆದರೂ ಗೋವಾದಲ್ಲಿ ಅತಿಹೆಚ್ಚು ಬೇಡಿಕೆ ಇರುವುದರಿಂದ ಮಳೆಗಾಲದ ಆರಂಭದಲ್ಲಿ ಬುಲ್‌ಫ್ರಾಗ್‌ಗಳ ಕಳ್ಳಸಾಗಣೆ ನಿರಂತರವಾಗಿ ನಡೆಯುತ್ತವೆ. ಆದರೆ ಇದೀಗ ಕಾರವಾರದ ಅರಣ್ಯ ಇಲಾಖೆ ಸಿಬ್ಬಂದಿ ಹಲವು ದಿನದ ಕಾರ್ಯಾಚರಣೆ ಬಳಿಕ ದೊಡ್ಡ ಮಟ್ಟದ ಕಪ್ಪೆಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಸಾಂಸ್ಕೃತಿಕ ನೀತಿ ಜಾರಿಯಾಗಲಿ

ಸುಮಾರು 20 ತಿಂಗಳ ಬಳಿಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವ್ಯಾಪ್ತಿಯ 13 ಅಕಾಡೆಮಿಗಳು, ನಾಲ್ಕು ಪ್ರಾಧಿಕಾರಗಳಿಗೆ ಹೊಸ ಅಧ್ಯಕ್ಷರ ನೇಮಕವಾಗಿದೆ. ಸರ್ಕಾರ ನೇಮಕ ಮಾಡಿರುವ ಅಧ್ಯಕ್ಷರ ಪದ ಗ್ರಹಣದ ಬೆನ್ನಿಗೇ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಇವರನ್ನು ಪಕ್ಷದ ಕಚೇರಿಗೆ ಆಹ್ವಾನಿಸಿ, ಪಕ್ಷದ ಪದಾಧಿಕಾರಿಗಳನ್ನು ಉದ್ದೇಶಿಸಿ ಮಾತನಾಡುವಂತೆ ಭಾಷಣ ಮಾಡಿದ್ದಾರೆ. ಸಾಂಸ್ಕೃತಿಕ ಲೋಕದ ಪ್ರತಿನಿಧಿಗಳು ಒಂದು ಪಕ್ಷದ ಪ್ರತಿನಿಧಿಗಳಲ್ಲ. ಇವರು ಸಮಾಜದ ಎಲ್ಲರ ಗೌರವಾದರಗಳಿಗೆ ಪಾತ್ರರಾಗಿರುವವರು ಎನ್ನುವುದು ಪ್ರಚಲಿತ ಅಭಿಪ್ರಾಯ. ಆದರೆ ಅಕಾಡೆಮಿಗಳು, ಪ್ರಾಧಿಕಾರಗಳು ರಾಜಕೀಯ ಹಿಂಬಾಲಕರ ಅಡ್ಡೆಗಳಾಗಿ ದಶಕಗಳೇ ಕಳೆದಿವೆ. ಹೆಸರಿಗೆ ಸ್ವಾಯತ್ತ ಸಂಸ್ಥೆಗಳಾದರೂ ಆಯಾ ಪಕ್ಷದ ಪರವಾಗಿರುವವರನ್ನು ಅಥವಾ ಪರ ಎಂದು ಬಿಂಬಿಸಿಕೊಂಡವರನ್ನೇ ಪದಾಧಿಕಾರಿಗಳನ್ನಾಗಿ ನೇಮಿಸಲಾಗುತ್ತದೆ. ಈ ಕಾರಣದಿಂದಲೇ ಆಡಳಿತಾರೂಢ ಪಕ್ಷ ಬದಲಾದಾಗ ಈ ಸಾಂಸ್ಕೃತಿಕ ಸಂಸ್ಥೆಗಳು ಬರ್ಖಾಸ್ತುಗೊಳ್ಳುತ್ತವೆ. ಹೊಸ ನೇಮಕಕ್ಕೆ ಲಾಬಿ ಆರಂಭವಾಗುತ್ತದೆ. ಇದೀಗ ಹೊಸ ಅಧ್ಯಕ್ಷರ ಪದಗ್ರಹಣಕ್ಕೂ ಮುನ್ನ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕೆ ಹಾಲಿ ಸರಕಾರವೇ ಆಯ್ಕೆ ಮಾಡಿದ್ದ ಮೈಸೂರಿನ ಡಾ. ಕೃಪಾ ಫಡ್ಕೆ ಅವರ ನೇಮಕವನ್ನು ರದ್ದುಪಡಿಸಿ ಶಿವಮೊಗ್ಗ ಮೂಲದ ಶುಭಾ ಧನಂಜಯ ಎಂಬವರನ್ನು ನೇಮಿಸಲಾಗಿದೆ. ಇವೆಲ್ಲವೂ ರಾಜಕೀಯ ಒತ್ತಡದ ತೀರ್ಮಾನಗಳೆನ್ನುವುದರಲ್ಲಿ ಅನುಮಾನವಿಲ್ಲ. ಸಾಂಸ್ಕೃತಿಕ ಲೋಕದ ರಾಯಭಾರಿಗಳನ್ನು ಪಕ್ಷದ ಕಚೇರಿಗೆ ಕರೆಸಿ ಮಾತನಾಡುವ ಮೂಲಕ ಡಿಕೆಶಿ ಅವರು ಕೆಟ್ಟ ಪರಂಪರೆಯೊಂದಕ್ಕೆ ನಾಂದಿ ಹಾಡಿದ್ದಾರೆ. ಇಷ್ಟಕ್ಕೂ ಈ ಹಿಂದೆ ಕಾಂಗ್ರೆಸ್ ಸರಕಾರವೇ ಅಕಾಡೆಮಿಗಳಿಗೆ ಸ್ವತಂತ್ರ ನೇಮಕ ಮತ್ತು ಸ್ವಾಯತ್ತೆ ಕಲ್ಪಿಸುವ ನಿಟ್ಟಿನಲ್ಲಿ ಸಾಂಸ್ಕೃತಿಕ ನೀತಿಯೊಂದನ್ನು ರೂಪಿಸಲು ಮುಂದಾಗಿತ್ತು. ಸಾಹಿತಿ ಡಾ. ಬರಗೂರು ರಾಮಚಂದ್ರಪ್ಪ ಅವರ ನೇತೃತ್ವದಲ್ಲಿ 2013ರ ಆಗಸ್ಟ್ ಎಂಟರಂದು ಸಮಗ್ರ ಸಾಂಸ್ಕೃತಿಕ ನೀತಿ ನಿರೂಪಣಾ ಸಮಿತಿ ರಚಿಸಲಾಗಿತ್ತು. ಈ ಸಮಿತಿಯು 2014ರ ಜೂನ್ 25 ರಂದು ಸಲ್ಲಿಸಿದ ವರದಿಯ ಪರಾಮರ್ಶೆಗೆ ಅಂದಿನ ಗ್ರಾಮೀಣಾಭಿವೃದ್ಧಿ ಸಚಿವ ಎಚ್.ಕೆ. ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಸಂಪುಟ ಉಪಸಮಿತಿಯನ್ನೂ ರಚಿಸಲಾಗಿತ್ತು. ಅಕಾಡೆಮಿ ಅಧ್ಯಕ್ಷರ ಆಯ್ಕೆಗೆ ಶೋಧನಾ ಸಮಿತಿ ರಚಿಸಬೇಕು, ಅಧ್ಯಕ್ಷರು ಹಾಗೂ ಸದಸ್ಯರ ಅವಧಿ ಮುಗಿದ ನಂತರವೂ ಹೊಸ ನೇಮಕಾತಿ ಆಗುವವರೆಗೆ ಅವರನ್ನೇ ಮುಂದುವರಿಸಬೇಕು ಎಂದು ಬರಗೂರು ಸಮಿತಿ ಶಿಫಾರಸು ಮಾಡಿತ್ತು. ಈ ಸಂಸ್ಥೆಗಳ ಘನತೆ, ಗೌರವ ಉಳಿಯಬೇಕಾದರೆ ರಾಜ್ಯದಲ್ಲಿ ಸಾಂಸ್ಕೃತಿಕ ನೀತಿಯೊಂದನ್ನು ತುರ್ತಾಗಿ ಅಳವಡಿಸಿಕೊಳ್ಳಬೇಕಿದೆ. ತಮ್ಮದೇ ಆದೇಶದನುಸಾರ ರಚನೆಯಾದ ಸಮಿತಿಯ ವರದಿಯನ್ನು ಜಾರಿ ಮಾಡುವ ಹೊಣೆ ಸಿದ್ದರಾಮಯ್ಯ ಅವರ ಮೇಲಿದೆ.

ಸೊಂಪಾದಕೀಯ

ಒಂದು ಟೊಮ್ಯಾಟೋ ಕಥೆ

ಟೊಮ್ಯಾಟೋ ಬೆಲೆ ಮತ್ತೆ ಶತಕದ ಹೊಸ್ತಿಲಲ್ಲಿದೆ. ದೇಶದ ಎಲ್ಲ ಕಡೆ ಈಗ ಹೆಚ್ಚಿರುವ ಟೊಮ್ಯಾಟೋ ದರದ ಬಗ್ಗೆಯೇ ಮಾತುಕತೆ ನಡೆಯುತ್ತಿದೆ. ಈ ಟೊಮ್ಯಾಟೋ ದರ ಹೆಚ್ಚಳದ ಕ್ರೇಜ್ ಎಲ್ಲೆಲ್ಲಿಗೋ ಹೋಗಿ ಮುಟ್ಟಿದೆ. ಹಾಗಾಗಿ ಜನ ಈಗ ಮತ್ತೆ ಟೊಮ್ಯೋಟೋ ದರದ ಸುತ್ತಲೇ ಗಾಣದ ಎತ್ತಿನಂತೆ ಸುತ್ತುವ ಸಮಯ ಶುರುವಾಗಿದೆ.

ಆದರೆ ಈಗ ಹೇಳ್ತಾ ಇರೋ ಸುದ್ದಿ ಟೊಮ್ಯಾಟೋದ್ದಲ್ಲ, ಬದಲಾಗಿ ಜೊಮ್ಯಾಟೋದು. ಜೊಮ್ಯಾಟೋ ಅನ್ನೋದು ಫುಡ್ ಡೆಲಿವರಿ ಅಪ್ಲಿಕೇಶನ್ ಅಂತ ಎಲ್ಲರಿಗೂ ಗೊತ್ತು. ಮಹಾನಗರಗಳಲ್ಲಿ ಈಗೀಗ ಮನೆಯಲ್ಲಿ ಅಡುಗೆ ಮಾಡುವವರಿಗಿಂತ ಸ್ವಿಗ್ಗಿ, ಜೊಮ್ಯಾಟೋ ದಲ್ಲಿ ಆರ್ಡರ್ ಮಾಡಿ ತರಿಸಿಕೊಂಡು ತಿನ್ನು ವವರೇ ಹೆಚ್ಚು. ಅದು ಜಂಕ್ ಫುಡ್ ಇರ್ಲಿ, ಅಥವಾ ದೈನಂದಿನ ರೆಗ್ಯುಲರ್ ಮೀಲ್ಸ್ ಇರಲಿ, ಸ್ವಿಗ್ಗಿ, ಜೊಮ್ಯಾಟೋದಿಂದಲೇ ಬರಬೇಕು. ಆದರೆ ಆಶ್ಚರ್ಯದ ವಿಷಯ ಅಂದ್ರೆ, ಇಂಥ ಜೊಮ್ಯಾಟೋ ಕಂಪನಿಯ ಸಂಸ್ಥಾಪಕ ಹಾಗೂ ಸಿಇಒ ಆಗಿರುವ ದೀಪಿಂದರ್ ಗೋಯಲ್ ತಮ್ಮ ಫಿಟ್ನೆಸ್ ಮಾಹಿತಿ ಹಂಚಿಕೊಂಡು 2019ರಿಂದ ಇಲ್ಲಿಯವರೆಗೆ 15 ಕೆಜಿ ದೇಹದ ತೂಕ ಇಳಿಸಿ ಕೊಂಡಿದ್ದೇನೆ ಎಂದು ಹೇಳಿಕೊಂಡಿದ್ದಾರೆ. ಇದನ್ನು ಕೇಳಿ ಆಶ್ಚರ್ಯಗೊಂಡಿರುವ ಜೊಮ್ಯಾಟೋ ಗ್ರಾಹಕರು ಈಯಪ್ಪ ನಮಗೆ ಮಾತ್ರ ಹೊಟ್ಟೆ ತುಂಬಾ ತಿನ್ನಿಸಿ, ಹೊಟ್ಟೆ ಬರಿಸಿ, ತಾನು ಮಾತ್ರ ತಿನ್ನದೆ ಡಯಟ್ ಮಾಡಿ ದೇಹದ ತೂಕ ಕಳೆದುಕೊಂಡಿದ್ದೀನಿ ಅಂತಾನಲ್ಲ ಅಂತ ಹೊಟ್ಟೆ ಸವರಿಕೊಂಡು ಹೊಟ್ಟೆ ಉರಿದುಕೊಳ್ಳುತ್ತಿದ್ದಾರೆ. ಇಲ್ಲಿ ಇನ್ನೊಂದು ವಿಶೇಷ ಅಂದ್ರೆ, ಈತ ನಮ್ಮ ಪ್ರಧಾನಿ ಮೋದಿ ಅವರಿಗಿಂತ ಒಂದು ವಿಷಯದಲ್ಲಿ ಡಿಫರೆಂಟ್ ಅನ್ನಬಹುದು. ಯಾಕಂದ್ರೆ ಮೋದಿ ಅವರು ನಾ ಖಾವೂಂಗ, ನಾ ಖಾನೇ ದೂಂಗಾ ಎಂದು ಹೇಳುವವರು. ಆದರೆ ಈತ ಜನರಿಗೆ ಊಟ ಸಪ್ಲೈ ಮಾಡುವ ಕಂಪನಿಯಿಂದ ಹೆಸರು, ದುಡ್ಡು ಮಾಡಿಕೊಂಡು, ಮೈ ಸಿರ್ಫ್ ಖಿಲಾವೂಂಗಾ, ಲೇಕಿನ್ ನಹೀ ಖಾವೂಂಗ ಎನ್ನುತ್ತಿದ್ದಾನಾ ಅನ್ನೋ ಅನುಮಾನ ಬಂದರೆ ತಪ್ಪೇನಿಲ್ಲ. ಒಟ್ಟಿನಲ್ಲಿ ಸಿಕ್ಕಾಪಟ್ಟೆ ತಿಂದು ಹೊಟ್ಟೆ ಬರಿಸಿಕೊಳ್ಳುವವರಿಗೆ, ಸ್ವತಃ ಊಟ ಒದಗಿಸುವ ಕೆಲಸ ಮಾಡುತ್ತಿದ್ದರೂ ತನ್ನ ದೇಹದ ತೂಕ ಇಳಿಸಿಕೊಂಡಿರುವ ಈತ, ತುಂಬಾ ತೂಕದ ಮಾತಾಡಿದ್ದಾನೆ ಅನ್ನೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಕಾಗುಣಿತ ದೋಷ ಎಂಬ ವೈರಸ್

Nobody is perfect-not even journalists... especially no journalist ಎಂಬ ಮಾತಿದೆ. ತಪ್ಪು ಮಾಡದ ಪತ್ರಕರ್ತರು ಇದ್ದಿರಲಾರರು. ತಪ್ಪು ಮಾಡಿದವರು, ದೊಡ್ಡ-ದೊಡ್ಡ ತಪ್ಪು ಮಾಡಿದವರು ಸಿಗಬಹುದು. ಆದರೆ ತಪ್ಪನ್ನೇ ಮಾಡದವರು ಹುಡುಕಿದರೂ ಸಿಗಲಿಕ್ಕಿಲ್ಲ. ಬಾರ್‌ನಲ್ಲಿ ಕೆಲಸ ಮಾಡುವ ವೇಟರುಗಳು ಹೆಚ್ಚು ಬಾಟಲಿ ಮತ್ತು ಗ್ಲಾಸನ್ನು ಒಡೆಯುತ್ತಾರೆ. ಕಾರಣ ಅವರು ಎಲ್ಲರಿಗಿಂತ ಹೆಚ್ಚು ಬಾಟಲಿ ಮತ್ತು ಗ್ಲಾಸನ್ನು ಹಿಡಿದಿರುತ್ತಾರೆ. ಅದೇ ರೀತಿ ಪತ್ರಕರ್ತರು ಮತ್ತು ಸಂಪಾದಕರು. ನಡೆಯುವವರು ಮುಗ್ಗರಿಸುವಂತೆ, ಕಾಲು ಜಾರುವಂತೆ ಇದೂ ಸಹ. ಪ್ರತಿ ಸಲ ತಪ್ಪು ಮಾಡಿದಾಗ, ಇವು ಸಮಾಧಾನ ಕೊಡುವ ಮಾತುಗಳಷ್ಟೇ. ಆದರೆ ಪತ್ರಿಕೆಗಳಲ್ಲಿ ತಪ್ಪುಗಳಾದಾಗಲೆಲ್ಲ ಅದನ್ನು ಬರೆದವರು ಮತ್ತು ಸಂಪಾದಕರು ಓದುಗರ ಮುಂದೆ ತಲೆ ತಗ್ಗಿಸಲೇಬೇಕಾಗುತ್ತದೆ. ಆಗ ಈ ಮಾತುಗಳು ಸ್ವಲ್ಪ ಸಾಂತ್ವನ ನೀಡಬಲ್ಲವು. ಕಾಗುಣಿತ (typos) ತಪ್ಪುಗಳಂತೂ ಕರೋನಾವೈರಸ್ಸಿಗಿಂತ ಭೀಕರ. ಪ್ರತಿ ಪದ, ಪ್ರತಿ ಅಕ್ಷರವೂ ಸಂಭವನೀಯ ವೈರಸ್ಸೇ. ಯಾವ ಪದಗಳಲ್ಲಿ, ಯಾವ ಅಕ್ಷರಗಳಲ್ಲಿ ತಪ್ಪು ನುಸುಳಬಹುದು ಎಂದು ಹೇಳಲಾಗದು. ಎಷ್ಟೇ ಕಣ್ಣಲ್ಲಿ ಕಣ್ಣಿಟ್ಟು ನೋಡಿದರೂ, ಭಯೋತ್ಪಾದಕರಂತೆ, ಗಡಿಯಲ್ಲಿರುವವರನ್ನು ಕಣ್ತಪ್ಪಿಸಿ ನುಸುಳಬಹುದು. ಇಂಗ್ಲಿಷಿನಲ್ಲಿ ಸ್ಪೆಲ್ ಚೆಕ್ ಇದ್ದರೂ, ತಪ್ಪುಗಳಾಗುತ್ತವೆ. ಉದಾಹರಣೆಗೆ, ಕೆಲವು ದಿನಗಳ ಹಿಂದೆ, ಇಂಗ್ಲಿಷ್ ನ್ಯೂಸ್ ಚಾನೆಲ್ಲೊಂದರಲ್ಲಿ Minister was in the hospital for an enlarged prostate ಎನ್ನುವ ಬದಲು 'enlarged prostitute' ಎಂದಾಗಿತ್ತು. ಸ್ಪೆಲ್ ಚೆಕ್ ಸೌಲಭ್ಯವಿದ್ದರೂ ಈ ಪ್ರಮಾದ ನುಸುಳಿತ್ತು. ಕೆಲವು ವರ್ಷಗಳ ಹಿಂದೆ, 'ದಿ ಆಸ್ಟ್ರೇಲಿಯನ್' ಪತ್ರಿಕೆಯಲ್ಲಿ ಪ್ರಕಟವಾದ ವರದಿಗೆ ಪತ್ರಿಕೆಯ ಸಂಪಾದಕರು ಕ್ಷಮೆಯಾಚಿಸಿದ್ದಲ್ಲದೇ, ತನ್ನ ದೇಶದಲ್ಲಿ ನೆಲೆಸಿದ್ದ ಸಿರಿಯಾ ರಾಜತಾಂತ್ರಿಕನಿಗೆ, ಆಸ್ಟ್ರೇಲಿಯಾದ ರಾಜತಾಂತ್ರಿಕ ಕ್ಷಮೆಯಾಚಿಸಿದ ಘಟನೆ ನೆನಪಾಗುತ್ತದೆ. ಇದಕ್ಕೆ ಕಾರಣವಾಗಿದ್ದು ಆ ಪತ್ರಿಕೆಯಲ್ಲಿ ಪ್ರಕಟವಾದ ಕಾಗುಣಿತ ದೋಷ. Syria is a country that has been a Ba'athist State for nearly forty years ಎಂದು ಬರೆಯುವ ಬದಲು Bastard State ಎಂದು ಪ್ರಕಟವಾಗಿ ದೊಡ್ಡ ರಾದ್ಧಾಂತಕ್ಕೆ ಕಾರಣವಾಗಿತ್ತು. (Ba'athist State ಅಂದರೆ ನವೋದಯ ಅಥವಾ ಪುನರುಜ್ಜೀವಿತ ದೇಶ ಎಂದರ್ಥ) ಸ್ಪೆಲ್ ಚೆಕ್ ಮಾಡುವಾಗ, Ba'athist State ಎಂಬ ಕಡೆ, ತನ್ನಷ್ಟಕ್ಕೆ ಅದು Bastard State ಎಂದು ತಿದ್ದಿಕೊಂಡಿದ್ದರಿಂದ ಈ ಪ್ರಮಾದವಾಗಿತ್ತು. ಇದೇ ರೀತಿ ಇನ್ನೊಂದು ಅಚಾತುರ್ಯ. ಎರಡನೇ ಪೋಪ್ ಜಾನ್ ಪಾಲ್ ನಿಧನರಾದಾಗ, ಪತ್ರಿಕೆಯೊಂದು Today we bury his remains in the earth as a seed of immortality ಎಂದು ಬರೆಯುವ ಬದಲು immorality ಎಂದು ಪ್ರಕಟಿಸಿ ತೀವ್ರ ಇರುಸುಮುರುಸಿಗೆ ಕಾರಣವಾಗಿತ್ತು.

ಶಿಶ್ನ ಮರುಜೋಡಣೆಗೆ ಜಿಗಣೆಯ ಜೊಲ್ಲು!

ಹಿಂದಿರುಗಿ ನೋಡಿದಾಗ

ಡಾ.ನಾ.ಸೋಮೇಶ್ವರ
vveditoped@gmail.com

ಪ್ರಾಚೀನ ಗ್ರೀಕರು ನಮ್ಮ ದೇಹದಲ್ಲಿ ನಾಲ್ಕು ರೀತಿಯ ರಸಗಳಿವೆ ಎಂದು ಭಾವಿಸಿದ್ದರು. ರಕ್ತ, ಕಫ, ಕಪ್ಪುಪಿತ್ತ ಮತ್ತು ಹಳದಿ ಪಿತ್ತ. ಇವುಗಳ ನಡುವೆ ಸಮತೋಲನೆ ಇದ್ದರೆ ಮಾತ್ರ ನಾವು ಆರೋಗ್ಯವಾಗಿರಲು ಸಾಧ್ಯ. ಇಲ್ಲದಿದ್ದರೆ ಅಸಮತೋಲನೆಯ ಸ್ವರೂಪವನ್ನು ಆಧರಿಸಿ, ಅನಾರೋಗ್ಯಗಳು ಬರುತ್ತವೆ ಎಂದು ತಿಳಿದಿದ್ದರು. ಈ ನಾಲ್ಕು ರಸಗಳಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಇರುವುದು ರಕ್ತ. ಹಾಗಾಗಿ ಬಹಳಷ್ಟು ಆರೋಗ್ಯ ಏರುಪೇರಿಗೆ ರಕ್ತವೇ ಕಾರಣವೆಂದರು. ಹೆಚ್ಚುವರಿ ರಕ್ತವನ್ನು ಹೊರಹರಿಸುವುದರ ಮೂಲಕ, ಅಸಮತೋಲನವನ್ನು ಸರಿದೂಗಿಸಬಹುದೆಂದು ಅವರು ನಂಬಿದ್ದರು. ಹೆಚ್ಚುವರಿ ರಕ್ತವನ್ನು ಹೊರಹರಿಸಲು ಅವರು ಮೂರು ವಿಧಾನಗಳನ್ನು ಬಳಸುತ್ತಿದ್ದರು. ಮೊದಲನೆಯ ರಕ್ತವಿಮೋಚನೆ. ಮುಂದೋಳಿನಲ್ಲಿರುವ ಸಿರೆಯನ್ನು ಛೇದಿಸಿ, ನಿರ್ದಿಷ್ಟ ಪ್ರಮಾಣದ ರಕ್ತವನ್ನು ಹೊರಹರಿಸುವ ವಿಧಾನ. ಎರಡನೆಯದು ಸೀಳು ಕೊಯ್ತ ಮತ್ತು ರಕ್ತಚೂಷಣ. ಕೈ/ಕಾಲು/ಹೊಟ್ಟೆಯ ಮೇಲೆ ಮೇಲ್‌ಸ್ತರದಲ್ಲಿ ಲಂಬವಾಗಿ ಕೊಯ್ಯುತ್ತಿದ್ದರು. ಇದರ ಮೇಲೆ ಲೋಹದ ನಿರ್ವಾತ ಬಟ್ಟಲನ್ನು ಬೋರಲುಹಾಕುತ್ತಿದ್ದರು. ಸೀಮಿತ ಪ್ರಮಾಣದ ರಕ್ತವು ಬಟ್ಟಲಲ್ಲಿ ಸಂಗ್ರಹವಾಗುತ್ತಿತ್ತು. ಮೂರನೆಯದು ಜಿಗಣೆಗಳನ್ನು ಬಳಸಿ, ಹೆಚ್ಚುವರಿ ರಕ್ತವನ್ನು ಹೊರಹರಿಸುತ್ತಿದ್ದರು. ಈ ಮೂರನೆಯ ವಿಧಾನದ ಇತಿ-ಮಿತಿಗಳತ್ತ ಒಮ್ಮೆ ಪಕ್ಷಿನೋಟವನ್ನು ಹರಿಸೋಣ.

ಜೀವಜಗತ್ತಿನಲ್ಲಿ ವಲಯವಂತ ಅಥವ ಅನೆಲಿಡ ಎಂಬ ವಿಭಾಗವಿದೆ. ಉಂಗುರಮಯವಾದ ದೇಹವನ್ನೊಳಗೊಂಡ ಜಲಚರ ಜೀವಿಗಳು. ಇವುಗಳಲ್ಲಿ ಜಿಗಣೆಗಳು ಮುಖ್ಯವಾದವು. ಇವು ನೂರಕ್ಕೆ ನೂರರಷ್ಟು ಇತರ ಜೀವಿಗಳ ರಕ್ತವನ್ನು ಹೀರಿ ಬದುಕುವ ಸಂಪೂರ್ಣ ಪರಾವಲಂಬಿಗಳು. ಇವುಗಳಲ್ಲಿ ಹಿರುಡೋ ಮೆಡಿಸಿನಾಲಿಸ್ ಎಂಬ ಜಿಗಣೆಯು ಯೂರೋಪಿನಲ್ಲಿ ವಾಸಿಸುತ್ತದೆ. ಹಿರುಡೋ ಓರಿಯೆಂಟಾಲಿಸ್, ಹಿರುಡೋ ಟಾಕ್ಟಿನ, ಹಿರುಡೋ ವರ್ಬಾನ ಇತ್ಯಾದಿಗಳು ಭಾರತವನ್ನು ಒಳಗೊಂಡತೆ ಇತರ ಪೌರ್ವಾತ್ಯ ದೇಶಗಳಲ್ಲಿ ದೊರೆಯುತ್ತವೆ. ಇವುಗಳನ್ನು ವೈದ್ಯಕೀಯ ಜಿಗಣೆಗಳು ಅಥವ ಮೆಡಿಸಿನಲ್ ಲೀಚಸ್ ಎಂದು ಕರೆಯುವುದುಂಟು. ವೈದ್ಯಕೀಯ ಜಿಗಣೆಯು ಸುಮಾರು 20 ಸೆಂ.ಮೀ. ಉದ್ದವಿರುತ್ತದೆ. ಬಣ್ಣ ಹಸಿರು, ಕಂದು ಅಥವ ಹಸಿರು ಮಿಶ್ರಿತ ಕಂದು. ಬೆನ್ನುಭಾಗವು ದಟ್ಟವರ್ಣವನ್ನು ಹೊಂದಿದ್ದು ಹೊಟ್ಟೆಯ ಭಾಗವು ಪೇಲವವಾಗಿರುತ್ತದೆ. ಇವುಗಳಲ್ಲಿ ಎರಡು ಹೀರುತಟ್ಟೆಗಳು (ಸಕರ್ಸ್) ಇರುತ್ತವೆ. ದೇಹದ ಮುಂಭಾಗದಲ್ಲಿ ಒಂದು ಹಾಗೂ ಹಿಂಭಾಗದಲ್ಲಿ ಒಂದು. ಹಿಂಭಾಗದಲ್ಲಿರುವ ಹೀರುತಟ್ಟೆಯು ನಿರ್ವಾತವನ್ನು ಸೃಜಿಸಿ, ಜಿಗಣೆಯು ಲಾಗ ಹಾಕುತ್ತ ಮುಂದೆ ಮುಂದೆ ನಡೆಯಲು ನೆರವಾಗುತ್ತದೆ. ಮುಂಭಾಗದಲ್ಲಿರುವ ಹೀರುತಟ್ಟೆಯು ವಾಸ್ತವದಲ್ಲಿ ನೆತ್ತರುಣಿ. ರಕ್ತವನ್ನು ಕುಡಿಯಲು ನೆರವಾಗುವ ಹೀರುಬಾಯಿಯನ್ನು ಒಳಗೊಂಡ ಭಾಗ. ಇದರ ಬಾಯಿಯಲ್ಲಿ ಮೂರು ದವಡೆಗಳಿವೆ. ಒಂದೊಂದು ದವಡೆಯಲ್ಲಿ ನೂರು ನೂರು ಬ್ಲೇಡಿಗಿಂತಲೂ ಹರಿತವಾದ ಹಲ್ಲುಗಳು. ಇವು ಪ್ರಾಣಿಗಳ ಚರ್ಮವನ್ನು ಕಚ್ಚಿ ಹಿಡಿದಾಗ, ಹಲ್ಲುಗಳ ಗುರುತು ಇಂಗ್ಲಿಷ್ ಅಕ್ಷಯ ವೈಯನ್ನು ಹೋಲುತ್ತದೆ. ಕಚ್ಚಿದ ಕೂಡಲೇ ಹೊರಬರುವ ಜೊಲ್ಲಿನಲ್ಲಿ ಪ್ರಧಾನವಾಗಿ ಎರಡು ರಾಸಾಯನಿಕಗಳು ಸಕ್ರಿಯವಾಗುತ್ತವೆ. ಮೊದಲನೆಯದು ನೋವನ್ನು ನಿವಾರಿಸಿದರೆ, ಎರಡನೆಯದು ರಕ್ತವು ಹೆಪ್ಪುಗಟ್ಟದಂತೆ ತಡೆಯುತ್ತದೆ. ಜಿಗಣೆಯು ಸರಾಸರಿ 15 ಎಂ.ಎಲ್ ರಕ್ತವನ್ನು ಹೀರುತ್ತದೆ. ಒಂದು ಸಲ ಹೊಟ್ಟೆ ತುಂಬ ರಕ್ತವನ್ನು ಕುಡಿದರೆ, ಸರಿಸುಮಾರು ಒಂದು ವರ್ಷದವರೆಗೆ ಅದಕ್ಕೆ ಹಸಿವಾಗುವುದಿಲ್ಲ ಹಾಗಾಗಿ ಮತ್ತೆ ಆಹಾರವನ್ನು ಸೇವಿಸಲು ಹೋಗುವುದಿಲ್ಲ.

ನಮ್ಮ ಪೂರ್ವಜರು ರಕ್ತವಿಮೋಚನೆಗಾಗಿ ಜಿಗಣೆಗಳನ್ನು ಎಂದು ಬಳಸಲು ಆರಂಭಿಸಿದರೆನ್ನುವುದು ನಮಗೆ ಖಚಿತವಾಗಿ ತಿಳಿದುಬಂದಿಲ್ಲ. ಈಜಿಪ್ಷಿಯನ್ ಸಂಸ್ಕೃತಿಯ 18 ವಂಶಸ್ಥ ಫ್ಯಾರೋವಿನ ಕಾಲಕ್ಕೆ ಸಂಬಂಧಿಸಿದ ವರ್ಣಚಿತ್ರಗಳಲ್ಲಿ ಜಿಗಣೆ ಚಿಕಿತ್ಸೆಯ ಬಗ್ಗೆ ಮಾಹಿತಿಯು ದೊರೆಯುತ್ತದೆ. ಇದು ಸುಮಾರು ಕ್ರಿ.ಪೂ.1500 ಕಾಲದ್ದು. ಕ್ರಿ.ಪೂ.ಎರಡನೆಯ ಶತಮಾನದಲ್ಲಿ ಗ್ರೀಕ್ ದೇಶದ ಕೋಲೋಫೋನ್‌ನಲ್ಲಿದ್ದ ನಿಕ್ಯಾಂಡರ್ ಎಂಬ ಗ್ರೀಕ್ ಕವಿ, ವೈದ್ಯ ಮತ್ತು ವೈಯ್ಯಾಕರಣಿಯಿದ್ದ. ಇವನು ಜಲೂಕಚಿಕಿತ್ಸೆಯ ಬಗ್ಗೆ ತನ್ನ ಕವನಗಳಲ್ಲಿ ಪ್ರಸ್ತಾಪಿಸಿದ್ದಾನೆ. ಆಯುರ್ವೇದವು ಜಲೂಕಾವಚರಣ ಎನ್ನುವ ಜಿಗಣೆ ಚಿಕಿತ್ಸೆಯನ್ನು ಪ್ರಸ್ತಾಪಿಸುತ್ತದೆ. ನಮ್ಮ ಶರೀರದಲ್ಲಿರುವ ರಕ್ತವನ್ನು ರಕ್ತಮೋಕ್ಷಣದ ಮೂಲಕ ಶುದ್ಧೀಕರಿಸಬೇಕಾಗುತ್ತದೆ ಎನ್ನುವುದು ಆಯುರ್ವೇದದ ನಿಲುವು. ಈ ಜಿಗಣೆ ಚಿಕಿತ್ಸೆಯಲ್ಲಿ ವಿಷರಹಿತವಾದ (ನಿರ್ವಿಷ ಜಲೂಕ) ಆರು ನಮೂನೆಯ ಜಿಗಣೆಗಳನ್ನು ಬಳಸಬಹುದು ಎನ್ನುತ್ತದೆ. ಗ್ರೀಕ್ ವೈದ್ಯರು ಕೀಲುವಾತಕಿ, ರುಮಟಾಯ್ಡ್ ಆರ್ಥ್ರೈಟಿಸ್, ಎಲ್ಲ ರೀತಿಯ ಜ್ವರ ಮತ್ತು ಕಿವುಡುತನವನ್ನು ನಿವಾರಿಸಲು ಜಿಗಣೆ ಚಿಕಿತ್ಸೆಯನ್ನು ನೀಡಲಾರಂಭಿಸಿದರು. ರೋಮನ್ ವೈದ್ಯ ಗ್ಯಾಲನ್ (130-201) ಹಿಪ್ಪೋಕ್ರೇಟ್ಸ್ ಮಂಡಿಸಿದ ರಸವಾದ ಸಿದ್ಧಾಂತವನ್ನು ಬಲವಾಗಿ ಪ್ರತಿಪಾದಿಸುತ್ತಿದ್ದ. ಹಾಗಾಗಿ ಅವನು ಸಣ್ಣ ಜ್ವರದಿಂದ ಹಿಡಿದು ಮನೋರೋಗದವರೆಗೆ, ಎಲ್ಲ ರೀತಿಯ ರೋಗನಿವಾರಣೆಗೆ ಜಿಗಣೆಚಿಕಿತ್ಸೆಯನ್ನು ಸೂಚಿಸುತ್ತಿದ್ದ. ಲಾವೋಡೀಸಿನ ಥೆಮಿಸನ್, ಓರ್ವ ಸಿರಿಯನ್ ವೈದ್ಯ, ಜಿಗಣೆಚಿಕಿತ್ಸೆಯು ಏರುಪೇರಾದ ರಸಗಳನ್ನು ಸಮತೋಲನಕ್ಕೆ ತರುವುದರ ಜೊತೆಯಲ್ಲಿ ದೇಹದಲ್ಲಿ ಮನೆಮಾಡಿರುವ ದುಷ್ಟಶಕ್ತಿಗಳನ್ನೂ ಹೊರಹಾಕುತ್ತದೆ ಎಂದ. ಇಸ್ಲಾಮ್ ದೇಶಗಳಲ್ಲೂ ಜಿಗಣೆ ಚಿಕಿತ್ಸೆಯು ಸ್ಥಾನವನ್ನು ಪಡೆಯಿತು. ಅವಿಸೆನ್ನ (980-1037) ತನ್ನ ಕ್ಯಾನನ್ ಆಫ್ ಮೆಡಿಸಿನ್ ಗ್ರಂಥದಲ್ಲಿ ಸೀಳುಕೊಯ್ತ ಮತ್ತು ಚೂಷಣದ ಮೂಲಕ ಹೊರಹಾಕಲಾಗದ ರಕ್ತವನ್ನು ಜಿಗಣೆಗಳ ಮೂಲಕ ಸರಳವಾಗಿ ಹೊರಹಾಕಬಹುದೆಂದು ದಾಖಲಿಸಿದ. ಜಿಗಣೆ ಚಿಕಿತ್ಸೆಯನ್ನು ವಿಶೇಷವಾಗಿ ಚರ್ಮರೋಗಗಳನ್ನು ಗುಣಪಡಿಸಲು ಬಳಸಬಹುದೆಂದ. ಅಬ್ ಎಲ್ ಲತೀಫ್ ಅಲ್ ಬಗ್ದಾದಿ (1162-1231) ಶಸ್ತ್ರಚಿಕಿತ್ಸೆಗಳನ್ನು ನಡೆಸಿದ ನಂತರ, ಗಾಯವು ಪೂರ್ಣಪ್ರಮಾಣದಲ್ಲಿ ಗುಣವಾಗಲು ಜಿಗಣೆಗಳನ್ನು ಬಳಸಬಹುದೆಂದು ಹೇಳಿದ. ನಂತರ ಇಬ್ನ್ ಮಸೀಹಿ (1233-1286) ತನ್ನ ಉಮ್ದ ಫಿ ಜರಾಹತ್ ಪುಸ್ತಕದಲ್ಲಿ ಜಿಗಣೆಗಳ ವರ್ಗೀಕರಣವನ್ನು ಸೂಚಿಸಿದ. ಜಿಗಣೆಗಳ ಬಣ್ಣ ಮತ್ತು ಬಾಹ್ಯಾ ಲಕ್ಷಣಗಳನ್ನು ಆಧರಿಸಿ, ವಿಷ ಸಹಿತ ಮತ್ತು ವಿಷ ರಹಿತ ಜಿಗಣೆಗಳನ್ನು ಗುರುತಿಸುವ ಬಗ್ಗೆ ಮಾಹಿತಿಯನ್ನು ನೀಡಿದ.

ಮಧ್ಯಯುಗದ ಯೂರೋಪಿನಲ್ಲಿ ವೈದ್ಯರು ನರಮಂಡಲದ ರೋಗಗಳು, ಜನನಾಂಗದ ರೋಗಗಳು, ಜಠರ ಮತ್ತು ಕರುಳು ರೋಗಗಳು, ಕಣ್ಣಿನ ರೋಗಗಳು - ಹೀಗೆ ಕಂಡ ಕಂಡ ರೋಗಗಳಿಗೆಲ್ಲ ಜಿಗಣೆ ಚಿಕಿತ್ಸೆಯನ್ನು ನೀಡಲಾರಂಭಿಸಿದರು. ಜಿಗಣೆ ಚಿಕಿತ್ಸೆಯು ಹೆಚ್ಚು ಜನಪ್ರಿಯವಾಗಲು ಕಾರಣಗಳು ಇವೆ. ರಕ್ತವಿಮೋಚನ ಅಥವ ಸೀಳುಕೊಯ್ತ-ರಕ್ತಚೂಷಣಗಳು ಸಾಕಷ್ಟು ನೋವನ್ನು ಕೊಡುತ್ತವೆ. ಜಿಗಣೆ ಚಿಕಿತ್ಸೆಯಲ್ಲಿ ನೋವೇ ಇರುವುದಿಲ್ಲ. ಏಕೆಂದರೆ ಜಿಗಣೆಯ ಜೊಲ್ಲಿನಲ್ಲಿರುವ ನೋವು ನಿವಾರಕವಿರುತ್ತದೆ. ಮೊಳೆರೋಗ, ಯೋನಿ ಉರಿಯೂತ ಮುಂದಾದ ಅಂಗಗಳ ರೋಗಗಳನ್ನು ಗುಣಪಡಿಸಲು, ಆ ಅಂಗಗಳಿಗೆ ಜಿಗಣೆಗಳನ್ನು ಕಚ್ಚಿಸುವುದು ಸುಲುಭ. ಮುಖ್ಯವಾದ ಜಿಗಣೆ ಚಿಕಿತ್ಸೆಯಲ್ಲಿ ವಿಪರೀತ ರಕ್ತಸ್ರಾವವಿರುವುದಿಲ್ಲ ಹಾಗಾಗಿ ಜೀವಕ್ಕೆ ಯಾವುದೇ ಅಪಾಯವು ಇರಲಿಲ್ಲ, ಹಾಗಾಗಿ ಯೂರೋಪಿನಾದ್ಯಂತ ಜಿಗಣೆಗಳ ಬೇಡಿಗೆ ತೀವ್ರವಾಯಿತು. ವೈದ್ಯರಿಗೆ ಜಿಗಣೆಗಳನ್ನು ಒದಗಿಸುವ ಉದ್ಯಮವು ತೀವ್ರಸ್ವರೂಪದಲ್ಲಿ ಬೆಳೆಯಿತು. ಪ್ಯಾರಿಸ್ ದೇಶದ ಫ್ರಾನ್ಸ್ ಬ್ರೌಸಿಯ (1772-1838) ಜಿಗಣೆ ಚಿಕಿತ್ಸೆಯನ್ನು ಜನಪ್ರಿಯಗೊಳಿಸಿದ. ಫ್ರಾನ್ಸ್ ದೇಶವೊಂದರಲ್ಲಿಯೇ ವೈದ್ಯರು ವರ್ಷಕ್ಕೆ ಸರಿಸುಮಾರು 35 ದಶಲಕ್ಷ ಜಿಗಣೆಗಳನ್ನು ಚಿಕಿತ್ಸೆಯಲ್ಲಿ ಬಳಸಲಾರಂಭಿಸಿದರು. ಇದರೊಡನೆ ಪ್ರಕೃತಿಯಲ್ಲಿ ಜಿಗಣೆಗಳ ಸಂಖ್ಯೆ ತೀವ್ರವಾಗಿ ಇಳಿದು, ಪ್ರಾಕೃತಿಕ ಅಸಮತೋಲನವು ಕಂಡುಬಂದಿತು. ಯೂರೋಪಿಯನ್ ಮತ್ತು ಅಮೆರಿಕನ್ ಉದ್ಯಮಿಗಳನ್ನು ಜಿಗಣೆಗಳ ಫಾರಂ ಸ್ಥಾಪಿಸಿದರು ಹಾಗೂ ಜಿಗಣೆಗಳ ಶೀಘ್ರ ಸಂತಾನವರ್ಧನಾ ಮಾರ್ಗಗಳನ್ನು ಸೂಚಿಸಿದವರಿಗೆ ವಿಶೇಷ ಬಹುಮಾನಗಳನ್ನು ಘೋಷಿಸಿದರು.

19ನೆಯ ಶತಮಾನದ ಹೊತ್ತಿಗೆ ಆಧುನಿಕ ವೈದ್ಯಕೀಯ ವಿಜ್ಞಾನದಲ್ಲಿ ಮಹತ್ತರ ಸಂಶೋಧನೆಗಳು ನಡೆದಿದ್ದವು. ಅದೃಶ್ಯ ಲೋಕದ ಅಗೋಚರ ಜೀವಿಗಳಾದ ಬ್ಯಾಕ್ಟೀರಿಯಗಳು, ಶಿಲೀಂಧ್ರಗಳ ಅನ್ವೇಷಣೆಯಾಗಿತ್ತು. ಪ್ರತಿಜೈವಿಕ ಔಷಧಗಳು, ಅರಿವಳಿಕೆ, ಕ್ರಿಮಿಶುದ್ಧತೆಯ ಪರಿಕಲ್ಪನೆಗಳು ಮುನ್ನೆಲೆಗೆ ಬಂದ ಕಾರಣ, ಹಿಪ್ಪೋಕ್ರೇಟ್ಸ್ ಮಂಡಿಸಿದ ರಸ ಸಿದ್ಧಾಂತ ಹಾಗೂ ಅವಗಳನ್ನು ಸರಿಪಡಿಸುವ ಜಿಗಣೆ ಚಿಕಿತ್ಸೆಗಳು ಹಿಂದೆ ಬಿದ್ದವು. ಬಹುಪಾಲು ನಿಂತೇ ಹೋದವು ಎನ್ನಬೇಕು. ಅಪಸ್ಮಾರ (ಎಪಿಲೆಪ್ಸಿ) ಚಿಕಿತ್ಸೆಯಲ್ಲಿ ಮಾತ್ರ ಜಿಗಣೆಗಳ ಬಳಕೆ ಮುಂದುವರೆದವು. ಅಪಸ್ಮಾರ ಏಕೆ ಬರುತ್ತದೆ ಎನ್ನುವ ಪರಿಕಲ್ಪನೆಯು ಇಲ್ಲದ ದಿನಗಳಲ್ಲಿ ತಲೆಯಲ್ಲಿ, ಮಿದುಳಿನಲ್ಲಿ ರಕ್ತವು ವಿಪರೀತವಾಗಿ ಸಂಚಯವಾದಾಗ ಅಪಸ್ಮಾರ ಬರುತ್ತದೆ ಎಂದು ನಂಬಿದ್ದರು. ರೋಗಿಗಳ ತಲೆಗೆ ಜಿಗಣೆಗಳನ್ನು ಕಚ್ಚಿಸಿ, ಹೆಚ್ಚುವರಿ ರಕ್ತವನ್ನು ಹೀರುತ್ತಿದ್ದರು. ಇದರ ಜೊತೆಗೆ ಬರೆ ಚಿಕಿತ್ಸೆ ಹಾಗೂ ವಿಶೇಷ ಅಭ್ಯಂಗನಗಳನ್ನು ಮುಂದುವರೆಸಿದರು. ಆದರೆ ಉಳಿದ ರೋಗಗಳ ಚಿಕಿತ್ಸೆಯನ್ನು ಜಿಗಣೆಗಳ ಬಳಕೆ ಪೂರ್ಣ ನಿಂತುಹೋಯಿತು.

ಜಾನ್ ಬೆರ್ರಿ ಹೇಕ್ರಾಫ್ಟ್ (1857-1922) ಎಂಬ ಬ್ರಿಟಿಷ್ ವೈದ್ಯನು ಜಿಗಣೆಯ ಜೊಲ್ಲಿನಲ್ಲಿ ರಕ್ತ ಹೆಪ್ಪುಗಟ್ಟುವುದನ್ನು ಪ್ರತಿರೋಧಿಸುವ ಒಂದು ರಾಸಾಯನಿಕವಿರುವುದನ್ನು ಗಮನಿಸಿದ. ಅದಕ್ಕೆ ಹಿರುಡಿನ್ ಎಂದು ನಾಮಕರಣವನ್ನು ಮಾಡಿದ. ಈ ಸಂಶೋಧನೆಯೊಡನೆ ವೈದ್ಯಕೀಯ ಲೋಕದಲ್ಲಿ ಜಿಗಣೆಗಳು ಮತ್ತೊಮ್ಮೆ ಸ್ಥಾನವನ್ನು ಗಳಿಸಿದವು. ಹಿರುಡಿನ್ ಬಗ್ಗೆ ಮತ್ತಷ್ಟು ಸಂಶೋಧನೆಗಳು ನಡೆದವು. ಹಿರುಡಿನ್ ರಕ್ತ ಹೆಪ್ಪುಗಟ್ಟುವ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರವಹಿಸುವ ಥ್ರಾಂಬಿನ್‌ನನ್ನು ನಾಶಗೊಳಿಸುತ್ತದೆ ಎನ್ನುವ ವಿಚಾರವು ತಿಳಿದುಬಂದಿತು. ಹಿರುಡಿನ್ ರಾಸಾಯನಿಕವನ್ನು ಪ್ರತ್ಯೇಕಿಸಿ, ಶುದ್ಧೀಕರಿಸಿದರು. ಹೃದಯಾಘಾತವಾದ ಹೃದಯದ ಮಕುಟಧಮನಿಯನ್ನು ಅಡಚಿರುವ ರಕ್ತಗರಣೆಯನ್ನು ಕರಗಿಸಲು ಹಿರುಡಿನ್‌ನನ್ನು ಬಳಸಬಹುದು ಎನ್ನುವ ವಿಚಾರವು ವಿಜ್ಞಾನಿಗಳಲ್ಲಿ ರೋಮಾಂಚನವನ್ನು ಉಂಟು ಮಾಡಿತು. ರಕ್ತಹೆಪ್ಪುಗಟ್ಟುವುದನ್ನು ನಿಗ್ರಹಿಸುವ ಹೆಪಾರಿನ್ ಎನ್ನುವ ಔಷಧವು ಮಾರುಕಟ್ಟೆಯಲ್ಲಿತ್ತು. ಆದರೂ ಹಿರುಡಿನ್ ಅದಕ್ಕಿಂತಲೂ ಶ್ರೇಷ್ಠವೆಂದು ಎನ್ನುವುದು ಸಾಬೀತಾಯಿತು. ಅನಾರೋಗ್ಯವು ಉಂಟಾದ ಮೇಲೆ ಹೆಪಾರಿನ್‌ನನ್ನು ಬಳಸಬೇಕಾಗಿತ್ತು. ಮುಂಚಿತವಾಗಿ, ಮುನ್‌ರಕ್ಷಣಾ ಔಷಧವನ್ನಾಗಿ ಬಳಸುವುದು ಕಷ್ಟವಿತ್ತು. ಡಿವಿಟಿ, ಪಲ್ಮನರಿ ಎಂಬೋಲಿಸಂ, ವೀನಸ್ ಥ್ರಾಂಬೋಸಿಸ್ ಮುಂತಾದ ಅನಾರೋಗ್ಯಗಳಲ್ಲಿ ರಕ್ತವು ಹೆಪ್ಪುಗಟ್ಟಿ ಅನಾಹುತವನ್ನು ಮಾಡುವ ಸಾಧ್ಯತೆಯು ಹೆಚ್ಚಿರುತ್ತದೆ. ಅಂತಹ ಸಾಧ್ಯತೆಯನ್ನು ಹಿರುಡಿನ್ ನೀಡುವುದರ ಮೂಲಕ ನಿಗ್ರಹಿಸುವುದು ಸುಲುಭವಾಗಿದೆ.

ಮೈಕ್ರೋಸರ್ಜರಿ ಈಗ ಅಸ್ತಿತ್ವದಲ್ಲಿದೆ. ಉದಾಹರಣೆಗೆ ಒಬ್ಬರ ಶಿಶ್ನವು ಯಾವುದೇ ಕಾರಣದಿಂದ ತುಂಡರಿಸಿಹೋಗಿದ್ದರೆ/ಛೇದಿಸಿದ್ದರೆ, ಅವರಿಗೆ ಮತ್ತೊಂದು ಶಿಶ್ನವನ್ನು ಬದಲಿಜೋಡಿಸಲು ಸಾಧ್ಯವಿದೆ. ಹಾಗೆ ಮರುಜೋಡಿಸಬೇಕಾದರೆ, ಎರಡೂ ಭಾಗಗಳಲ್ಲಿರುವ ಸೂಕ್ಷ್ಮಾತಿಸೂಕ್ಷ್ಮ ಧಮನಿಗಳನ್ನು ಹಾಗೂ ಸಿರೆಗಳನ್ನು ಹುಡುಕಿ ಅವನ್ನು ಹೊಲಿಯಬೇಕಾಗುತ್ತದೆ. ಇದನ್ನು ಅತ್ಯಂತ ಸೂಕ್ಷ್ಮ ಉಪಕರಣಗಳನ್ನು ಬಳಸಿ, ಸೂಕ್ಷ್ಮದರ್ಶಕದಡಿಯಲ್ಲಿ ಶಸ್ತ್ರಚಿಕಿತ್ಸೆಯನ್ನು ಮಾಡಬೇಕಾಗುತ್ತದೆ. ಹೀಗೆ ಜೋಡಿಸಿದ ಮೇಲೆ ಧಮನಿಗಳಲ್ಲಿ ಹಾಗೂ ಸಿರೆಗಳನ್ನು ರಕ್ತ ಹೆಪ್ಪುಗಟ್ಟುತ್ತದೆ. ರಕ್ತಹೆಪ್ಪುಗಟ್ಟಿ ರಕ್ತಸಂಚಾರವು ನಿಂತರೆ ಬದಲಿ ಜೋಡಿಸಿದ ಅಂಗವು ಸಾಯುತ್ತದೆ. ಇದನ್ನು ತಪ್ಪಿಸಲು ಜಿಗಣೆಗಳನ್ನು ಬಳಸುವುದುಂಟು. ಜಿಗಣೆಯನ್ನು ಬದಲಿ ಜೋಡಿಸಿದ ತುಂಡಿಗೆ ಕಚ್ಚಿಸಿದರೆ, ಅದು ರಕ್ತವನ್ನು ಹೀರುತ್ತದೆ. ಆಗ ರಕ್ತವು ಧಮನಿ ಮತ್ತು ಸಿರೆಗಳ ಮೂಲಕ ಮುಕ್ತವಾಗಿ ಹರಿಯಲಾರಂಭಿಸುತ್ತದೆ. ಹೀಗೆ ಸುಮಾರು 7-8 ದಿನಗಳವರೆಗೆ ಜಿಗಣೆಗಳನ್ನು ಕಚ್ಚಿಸಿದರೆ, ಬದಲಿಜೋಡಣೆಯ ಶಸ್ತ್ರಚಿಕಿತ್ಸೆಯು ಯಶಸ್ವಿಯಾಗುತ್ತದೆ. ಹಾಗಾಗಿ ಸುರೂಪಿಕ ಶಸ್ತ್ರಚಿಕಿತ್ಸೆ ಅಥವ ಪ್ಲಾಸ್ಟಿಕ್ ಸರ್ಜರಿಯಲ್ಲಿ ಜಿಗಣೆಗಳನ್ನು ಹೆಚ್ಚು ಬಳಸುವುದುಂಟು. ಬೆರಳು ತುಂಡಾದಾಗ, ಮೂಗು ತುಂಡಾದಾಗ, ಕಿವಿ ಕತ್ತರಿಸಿಹೋದಾಗ, ನೆತ್ತಿಯ ಚರ್ಮ+ಸ್ನಾಯುವನ್ನು ಬದಲಿ ಜೋಡಿಸುವಾಗ ಇಲ್ಲವೇ ಇಡೀ ಮುಖವನ್ನೇ ಬದಲಿ ಜೋಡಿಸಿದಾಗ ಅಥವ ಇನ್ಯಾವುದೇ ರೀತಿಯ ಸುರೂಪಿಕಾ ಶಸ್ತ್ರಚಿಕಿತ್ಸೆಗಳಲ್ಲಿ ಜಿಗಣೆಗಳಿಗೆ ಒಂದು ಸ್ಥಾನವಿದೆ. ಜಿಗಣೆಯ ಜೊಲ್ಲಿನಿಂದ ತಯಾರಾದ ಹಿರುಡಿನ್, ಕ್ಯಾಲಿನ್, ಡಿಸ್ಟಬಿಲೇಸ್, ಹಯಾಲ್ಯುರೋಡಿನೇಸ್, ಡೆಲ್ಲಿನ್ಸ್, ಎಗ್ಲಿನ್ಸ್, ಅನಸ್ಥೆಟಿಕ್ ಕಾಂಪೌಂಡ್ಸ್, ಕಾರ್ಬಾಕ್ಸಿ ಪೆಪ್ಟಿಡೇಸ್ ಇನ್‌ಹಿಬಿಟಾರ್-2, ಆಂಟಿ-ಎಲಾಸ್ಟೇಸ್, ಹಿಸ್ಟಮಿನ್ ಲೈಕ್ ಸಬ್‌ಸ್ಟನ್ಸ್ ಮುಂತಾದ ರಾಸಾಯನಿಕಗಳನ್ನು ಮೈಕ್ರೋಸರ್ಜರಿ ಹಾಗೂ ಪ್ಲಾಸ್ಟಿಕ್ ಸರ್ಜರಿಗಳನ್ನು ಯಶಸ್ವಿಗೊಳಿಸಲು ಪ್ರಧಾನವಾಗಿ ಕಾರಣವಾಗಿವೆ.

ಸಿಕೆಲ್‌ನ ಸಿಕ್‌ನಿಂದ ಕಾಪಾಡಿಕೊಳ್ಳಿ

ವೈದ್ಯ ಮಾತು

ಡಾ|| ಮುರಲೀ ಮೋಹನ್ ಚೂಂತಾರು
vveditoped@gmail.com

ಪ್ರತಿ ವರ್ಷ ಜೂನ್ 19ರಂದು ವಿಶ್ವ ಸಿಕಲ್ ಸೆಲ್ ದಿನ ಎಂದು ಆಚರಿಸಲಾಗುತ್ತಿದ್ದು, 2009ರಿಂದ ವಿಶ್ವ ಸಂಸ್ಥೆ ಈ ರೋಗದ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಈ ಆಚರಣೆಯನ್ನು ಜಾರಿಗೆ ತಂದಿತು. ಇದೊಂದು ರಕ್ತಸಂಬಂಧಿ ಅನುವಂಶೀಯ ಖಾಯಿಲೆ ಆಗಿದ್ದು, ಕೆಂಪು ರಕ್ತಕಣಗಳು ಈ ರೋಗದಿಂದ ಬಳಲುತ್ತವೆ. ಈ ರೋಗಿಗಳಲ್ಲಿ ಕೆಂಪು ರಕ್ತಕಣಗಳ ರಚನೆಯಲ್ಲಿ ವ್ಯತ್ಯಯ ಉಂಟಾಗಿ, ಕುಡುಗೋಲು ಅಥವಾ ಆಂಗ್ಲಭಾಷೆಯಲ್ಲಿ 'ಸಿಕಲ್' ಎಂಬ ರಚನೆ ಹೊಂದಿರುವುದರಿಂದ ಈ ರೋಗಕ್ಕೆ 'ಕುಡುಗೋಲು ಕಣ ಖಾಯಿಲೆ' ಅಥವಾ 'ಸಿಕಲ್ ಸೆಲ್ ಖಾಯಿಲೆ' ಎಂದು ಕರೆಯಲಾಗುತ್ತದೆ. ಇದೊಂದು ವಂಶವಾಹಕ ರೋಗವಾಗಿದ್ದು, ತಂದೆ ತಾಯಂದಿರಿಂದ ಈ ರೋಗ ಮಕ್ಕಳಿಗೆ ಜನ್ಮಜಾತವಾಗಿ ಬಳುವಳಿಯಾಗಿ ಬಂದಿರುತ್ತದೆ. ಆಫ್ರಿಕಾ ದೇಶವೊಂದರಲ್ಲಿಯೇ ದಿನವೊಂದರಲ್ಲಿ 1000 ಮಕ್ಕಳು ಈ ರೋಗದೊಂದಿಗೆ ಹುಟ್ಟುತ್ತಾರೆ ಮತ್ತು 5 ವರ್ಷದೊಳಗೆ ಸಾವನ್ನಪ್ಪುತ್ತಾರೆ. ಅಮೆರಿಕ ದೇಶವೊಂದರಲ್ಲಿ ವರ್ಷಕ್ಕೆ 1 ಲಕ್ಷ ಮಕ್ಕಳು ಈ ರೋಗಕ್ಕೆ ತುತ್ತಾಗುತ್ತಾರೆ. ಭಾರತ, ಬ್ರೆಜಿಲ್, ಟರ್ಕಿ, ಸೌದಿ ಅರೇಬಿಯಾ ಗಯಾನ, ಗ್ರೀಕ್ ಮುಂತಾದ ದೇಶಗಳಲ್ಲಿಯೂ ಈ ರೋಗ ಕಂಡು ಬರುತ್ತದೆ.

ಏನಿದು ಕುಡುಗೋಲು ಕಣ ಖಾಯಿಲೆ?

ಸಾಮಾನ್ಯವಾಗಿ ರಕ್ತದಲ್ಲಿನ ಕೆಂಪು ರಕ್ತಕಣಗಳಲ್ಲಿರುವ ಹಿಮೋಗ್ಲೋಬಿನ್ ಎಂಬ ಪ್ರೋಟೀನ್ ರಕ್ತದಲ್ಲಿ ಆಮ್ಲಜನಕ ಸರಬರಾಜು ಮಾಡುವ ಕೆಲಸವನ್ನು ಮಾಡಿ ಜೀವಕೋಶಗಳನ್ನು ಜೀವಂತವಾಗಿಡುತ್ತದೆ. ಈ ಖಾಯಿಲೆ ಇರುವವರಲ್ಲಿ ಅಸಹಜವಾದ ಕೆಂಪುರಕ್ತಕಣಗಳ ರಚನೆಯಿಂದಾಗಿ, ಸಣ್ಣ ಸಣ್ಣ ರಕ್ತನಾಳಗಳಲ್ಲಿ ಕೆಂಪು ರಕ್ತಕಣಗಳು ಸೇರಿಕೊಂಡು, ರಕ್ತನಾಳಗಳು ಮುಚ್ಚಿಕೊಂಡು ಜೀವಕೋಶಗಳಿಗೆ ಆಮ್ಲಜನಕ ಸರಬರಾಜು ಮಾಡುವ ಪ್ರಕ್ರಿಯೆಗೆ ತಡೆಯೊಡ್ಡುತ್ತದೆ. ಜೀವಕೋಶಗಳಿಗೆ ಆಮ್ಲಜನಕ ಸಿಗದೇ, ಹಲವಾರು ರೋಗ ಲಕ್ಷಣಗಳಿಗೆ ಮುನ್ನುಡಿ ಬರೆಯುತ್ತದೆ. ರಕ್ತದಲ್ಲಿನ ಹಿಮೋಗ್ಲೋಬಿನ್ ಅಂಶ ಕಡಮೆಯಾಗಿ ಅನಿಮೀಯಾ ಅಥವಾ ರಕ್ತಹೀನತೆಗೆ ದಾರಿ ಮಾಡಿಕೊಡುತ್ತದೆ.

ವಿಶ್ವ ಸಿಕಲ್ ಸೆಲ್ ದಿನ - ಜೂನ್ 19

ರೋಗದ ಲಕ್ಷಣಗಳು ಏನು?

ರಕ್ತಹೀನತೆ ಅಥವಾ ಅನೀಮಿಯಾದಿಂದಾಗಿ ರೋಗಿಗಳು ಉಸಿರಾಟದ ಸಮಸ್ಯೆಯಿಂದ ಬಳಲುತ್ತಾರೆ. ಈ ರೋಗಿಗಳು ಯಾವುದೇ ಕೆಲಸ ಮಾಡುವಾಗ ಬೇಗನೆ ಬಳಲುತ್ತಾರೆ ಮತ್ತು ಸುಸ್ತಾಗಿ ಬಿಡುತ್ತಾರೆ. ಅದರ ಜೊತೆಗೆ ನೋವು, ಪದೇ ಪದೇ ಸೋಂಕಿಗೆ ಒಳಗಾಗುವ ಸಾಧ್ಯತೆ ಇರುತ್ತದೆ. ತಲೆನೋವು, ಹೃದಯದ ಸಮಸ್ಯೆಗಳು, ಯಕೃತ್ತಿನ ತೊಂದರೆಗಳು, ಮೂಳೆಯಲ್ಲಿ ಹಠಾತ್ ನೋವು ಕಾಣಿಸಿಕೊಳ್ಳುತ್ತದೆ. ರಕ್ತಹೀನತೆಯಿಂದಾಗಿ ಕಿಡ್ನಿ, ಗುಲ್ಮಗ್ರಂಥಿ, ಮೆದುಳು ಮತ್ತು ಶ್ವಾಸಕೋಶದ ತೊಂದರೆಗಳು ಪದೇ ಪದೇ ಬರುತ್ತದೆ.

ಅಂಗೈ ಮತ್ತು ಅಂಗಾಲುಗಳು ತಣ್ಣಗಾಗುವುದು, ರಕ್ತಹೀನತೆಯಿಂದಾಗಿ ಚರ್ಮ ಬಿಳಿಚಿಕೊಳ್ಳುವುದು, ಪದೇ ಪದೇ ಜಾಂಡಿಸ್‌ಗೆ ತುತ್ತಾಗುವುದು, ಕಾಲುಗಳಲ್ಲಿ ಪದೇ ಪದೇ ವಾಸಿಯಾಗದ ಹುಣ್ಣುಗಳು ಕಾಣಿಸಿಕೊಳ್ಳುತ್ತದೆ. ಸಿಕಲ್ ಸೆಲ್ ಕ್ರೈಸಿಸ್ ಎಂಬುದು ಒಂದು ತುರ್ತು ಚಿಕಿತ್ಸೆಯ ಅಗತ್ಯವಿರುವ ಲಕ್ಷಣವಾಗಿದ್ದು, ಉಸಿರಾಟದ ತೊಂದರೆ, ವಿಪರೀತ ನೋವು, ಮೂಳೆಗಳು ಹಿಂಡಿ ಹಿಪ್ಪೆ ಮಾಡುವ ಅಸಾಧ್ಯ ನೋವು ಕಂಡು ಬರುತ್ತದೆ. ತಕ್ಷಣವೇ ಆಸ್ಪತ್ರೆಗಳಲ್ಲಿ ಒಳ ರೋಗಿಯಾಗಿ ಚಿಕಿತ್ಸೆ ನೀಡುವ ಅಗತ್ಯವಿರುತ್ತದೆ.

ಚಿಕಿತ್ಸೆ ಹೇಗೆ?

ಕುಡುಗೋಲು ಕಣ ಖಾಯಿಲೆ ಮಾರಣಾಂತಿಕ ರೋಗವಾಗಿದ್ದು. ಸಂಪೂರ್ಣವಾಗಿ ರೋಗವನ್ನು ಗುಣಪಡಿಸಲು ಸಾಧ್ಯವಿಲ್ಲದಿದ್ದರೂ ರೋಗಿಗೆ ಗುಣಮಟ್ಟದ ಜೀವನ ನೀಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಸಣ್ಣ ಪುಟ್ಟ ನೋವಾದಲ್ಲಿ ನೋವು ನಿವಾರಕ ಔಷಧಿ ಮತ್ತು ಹೀಲಿಂಗ್ ಪ್ಯಾಡ್‌ಗಳ ಮೂಲಕ ನೋವು ನಿವಾರಣೆ ಮಾಡಲಾಗುತ್ತದೆ. ವಿಪರೀತ ನೋವಿದ್ದಲ್ಲಿ ಒಳರೋಗಿಯಾಗಿ ಆಸ್ಪತ್ರೆಯಲ್ಲಿ ದಾಖಲಾಗಬೇಕಾಗುತ್ತದೆ. ಅದೇ ರೀತಿ ದೇಹಕ್ಕೆ ಅಗತ್ಯವಿರುವ ದ್ರವಗಳನ್ನು ರಕ್ತನಾಳಗಳ ಮೂಲಕ ನೀಡಲಾಗುತ್ತದೆ. ನಾರ್ಕೋಟಿಕ್ ನೋವು ನಿವಾರಕ ಔಷಧಿಯ ಅಗತ್ಯವಿರುತ್ತದೆ. ಅದೇ ರೀತಿ ಈ ರೋಗಿಗಳ ಪದೇ ಪದೇ ಸೋಂಕಿಗೆ ತುತ್ತಾಗದಂತೆ ಜಾಗ್ರತೆ ವಹಿಸಬೇಕಾಗುತ್ತದೆ. ಪದೇ ಪದೇ ಕಾಡುವ ಜ್ವರ, ಮೂಳೆ ನೋವು ಮತ್ತು ಸೋಂಕು ಈ ರೋಗದ ಮುಖ್ಯ ಲಕ್ಷಣವಾಗಿದ್ದು ನಿರಂತರವಾದ ವೈದ್ಯರ ಸಲಹೆ ಮತ್ತು ಚಿಕಿತ್ಸೆ ಅತೀ ಅಗತ್ಯ.

ಕೊನೆಮಾತು

ಕುಡುಗೋಲು ಕಣ ಖಾಯಿಲೆ ಒಂದು ಮಾರಣಾಂತಿಕ ಖಾಯಿಲೆಯಾಗಿದ್ದು ನಿರಂತರ ಚಿಕಿತ್ಸೆ ಮತ್ತು ವೈದ್ಯರ ಸಲಹೆ ಅತಿ ಅಗತ್ಯ. ಸಂಪೂರ್ಣವಾಗಿ ಗುಣಪಡಿಸಲಾಗದಿದ್ದರೂ ರೋಗವನ್ನು ನಿಯಂತ್ರಣದಲ್ಲಿ ಇರಿಸಬಹುದಾಗಿದೆ. ನಿರಂತರವಾದ ರಕ್ತಪೂರಣದಿಂದಾಗಿ ಹೃದಯ, ಯಕೃತ್‌ಗಳಲ್ಲಿ ಕಬ್ಬಿಣದ ಅಂಶ ಜಾಸ್ತಿಯಾಗದಂತೆ ಜಾಗ್ರತೆ ವಹಿಸಬೇಕಾಗುತ್ತದೆ. ಅಸ್ಥಿಮಜ್ಜೆ ಬದಲಾಯಿಸಿ ರೋಗವನ್ನು ಗುಣಪಡಿಸಬಹುದಾಗಿದೆ. ಆದರೆ ಖರ್ಚು ಮತ್ತು ಮೂಲ ಸೌಲಭ್ಯದ ಕೊರತೆಯಿಂದಾಗಿ ಎಲ್ಲರಿಗೂ ಈ ಚಿಕಿತ್ಸೆ ಅಲಭ್ಯವಾಗಿದೆ. ಪ್ರತಿ 500ರಲ್ಲಿ ಒಂದು ಮಗು ಈ ರೋಗಕ್ಕೆ ತುತ್ತಾಗಿರುವುದು ಆಫ್ರಿಕಾ ದೇಶದ ಹೆಗ್ಗಳಿಕೆಯಾಗಿದ್ದು, ಎಲ್ಲರಿಗೂ ಚಿಕಿತ್ಸೆ ದೊರಕದಿರುವುದು ದೌರ್ಭಾಗ್ಯದ ವಿಚಾರ. ಅನಕ್ಷರತೆ, ಬಡತನ ಮತ್ತು ಅಜ್ಞಾನದಿಂದಾಗಿ ಇದೊಂದು ಅಂಟು ರೋಗ ಮತ್ತು ಒಬ್ಬರಿಂದ ಒಬ್ಬರಿಗೆ ಹರಡುತ್ತದೆ ಎಂಬ ಮೂಢನಂಬಿಕೆ ಇನ್ನೂ ಚಾಲ್ತಿಯಲ್ಲಿರುವುದು ನೋವಿನ ವಿಚಾರವಾಗಿದೆ. ನೋವು, ವಾತ ಮತ್ತು ಮೈ ಜುಮ್ಮ ಹಿಡಿಯುವುದು ಮತ್ತು ಚರ್ಮ ಬಿಳುಪಾಗುವುದು ಈ

ರೋಗದ ಅತೀ ಸಾಮಾನ್ಯ ಲಕ್ಷಣವಾಗಿದೆ. ಬಹಳ ಸುಲಭವಾಗಿ ಈ ರೋಗವನ್ನು ಪತ್ತೆ ಹಚ್ಚಬಹುದಾಗಿದೆ. ಈ ಕುಡುಗೋಲು ಕಣ ಖಾಯಿಲೆ ಇರುವುವವರಲ್ಲಿ ಹಿಮೋಗ್ಲೋಬಿನ್ ಎಸ್ ಎಂಬ ಅಸಹಜ ಪ್ರೋಟೀನ್ ಇರುವುದರಿಂದಾಗಿ, ಕೆಂಪು ರಕ್ತಕಣಗಳು ಕುಡುಗೋಲು ಆಕಾರದಲ್ಲಿ ಇರುತ್ತದೆ. ಸಾಮಾನ್ಯವಾಗಿ ಕೆಂಪು ರಕ್ತ ಕಣಗಳು ಓವಲ್ ಅಥವಾ ಚಕ್ರದ ಆಕೃತಿಯಲ್ಲಿ ಇರುತ್ತದೆ. ತನ್ನ ಕುಡುಗೋಲಿನ ಆಕಾರದಿಂದಾಗಿ ತನ್ನ ಚಲನೆ ಮತ್ತು ಕಾರ್ಯಶೀಲತೆಯನ್ನು ಕಳಕೊಂಡ ಕೆಂಪು ರಕ್ತಕಣಗಳಿಂದಾಗಿ ಹಲವಾರು ರೋಗ ಲಕ್ಷಣಗಳಿಗೆ ನಾಂದಿ ಹಾಡುತ್ತದೆ. ನಿರಂತರವಾದ ವೈದ್ಯರ ಸಲಹೆ, ಮಾರ್ಗದರ್ಶನ ಮತ್ತು ಚಿಕಿತ್ಸೆಗಳ ಮುಖಾಂತರ ರೋಗವನ್ನು ಹತೋಟಿಯಲ್ಲಿ ಇಡುವುದರಲ್ಲಿಯೇ ಜಾಣತನ ಅಡಗಿದೆ.

(ಲೇಖಕರು: ಹವ್ಯಾಸಿ ಬರಹಗಾರರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಇಲ್ಲಸಲ್ಲದ ಅಪವಾದ ಬೇಡ

ವಿದ್ಯುನ್ಮಾನ ಮತ ಯಂತ್ರಗಳ ಕಾರ್ಯ ವೈಖರಿಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸುವ ಕೆಲಸ ಪದೇ ಪದೇ ನಡೆಯುತ್ತಿದೆ. ಲೋಕಸಭೆ ಚುನಾವಣೆ ಫಲಿತಾಂಶ ಬಂದನಂತರ ಯಾವ ಪಕ್ಷವೂ ಸಹ ಆಕ್ಷೇಪ ವ್ಯಕ್ತಪಡಿಸಲಿಲ್ಲವಾದರೂ, ಇತ್ತೀಚೆಗೆ ತಾಂತ್ರಿಕ ಕ್ಷೇತ್ರದ ದಿಗ್ಗಜ ಎಲಾನ್ ಮಸ್ಕ್ ಇವಿಎಂ ಹ್ಯಾಕಿಂಗ್ ಸಾಧ್ಯ ಎಂದು ಹೇಳಿದ ಬಳಿಕ ಭಾರತದ ರಾಜಕಾರಣಿಗಳು ಮತ್ತೆ ಜಾಗೃತರಾಗಿದ್ದಾರೆ. ಇವಿಎಂಗಳ ಕಾರ್ಯಕ್ಷಮತೆಯ ಬಗ್ಗೆ ಚುನಾವಣಾ ಆಯೋಗ ಮತ್ತು ಉಚ್ಚನ್ಯಾಯಾಲಯ ನೀಡಿದ ಸ್ಪಷ್ಟನೆಯನ್ನು ನಂಬದ ನಮ್ಮ ದೇಶದ ರಾಜಕಾರಣಿಗಳು ವಿದೇಶಿಗನ ಹೇಳಿಕೆಗೆ ಬೆಲೆ ಕೊಡುತ್ತಿರುವುದು ನಮ್ಮ ದೇಶದ ಚುನಾವಣಾ ಆಯೋಗ ಮತ್ತು ನ್ಯಾಯಾಂಗಕ್ಕೆ ಮಾಡಿದ ಅವಮಾನ. ಕಾಂಗ್ರೆಸ್ ಸಾಗರೋತ್ತರ ಘಟಕದ ಮಾಜಿ ಅಧ್ಯಕ್ಷ ಸ್ಯಾಮ್ ಪಿತ್ರೋಡ, ರಾಹುಲ್ ಗಾಂಧಿ, ಅಖಿಲೇಶ್ ಯಾದವ್ ಸಹ ಎಲಾನ್ ಮಸ್ಕ್‌ನ ಹೇಳಿಕೆಗೆ ಧ್ವನಿಗೂಡಿಸಿದ್ದಾರೆ. ಹೇಳಿಕೆಗಳು ಕೇವಲ ಇವಿಎಂ ಕಾರ್ಯ ವೈಖರಿಯ ಬಗ್ಗೆ ಸಂಶಯ ವ್ಯಕ್ತಪಡಿಸುವುದಕ್ಕಷ್ಟೇ ಸೀಮಿತವಾಗಬಾರದು ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಳ್ಳುವಂತಿರಬೇಕು. ಈ ಹಿಂದೆ ಚುನಾವಣಾ ಆಯೋಗವು ಹ್ಯಾಕಿಂಗ್ ಮಾಡಿ ತೋರಿಸಲು ಸವಾಲನ್ನು ಹಾಕಿತ್ತು. ಆದರೆ, ಯಾರೂ ಸಹ ಈ ಸವಾಲನ್ನು ಸ್ವೀಕರಿಸಲು ಸಿದ್ಧರಿರಲಿಲ್ಲ ಬದಲಿಗೆ ಪದೇ ಪದೇ ಗಾಳಿಯಲ್ಲಿ ಗುಂಡು ಹಾರಿಸುವ ಕೆಲಸ ಮಾಡುವುದರ ಮೂಲಕ ಮತದಾರರಲ್ಲಿ ಸಂಶಯ ಮೂಡಿಸಿ ಇವಿಎಂ ಮೂಲಕ ನಡೆಸಲಾಗುವ ಮತದಾನಕ್ಕೆ ಇತಿಶ್ರೀ ಹಾಡಬೇಕೆಂದು ಪಣತೊಟ್ಟಂತಿದೆ. ಚುನಾವಣಾ ಆಯೋಗ ಈ ವಿಷಯವನ್ನು ಗಹನವಾಗಿ ಪರಿಗಣಿಸಿ ಮುಂದಿನ ಹೆಜ್ಜೆ ಇಡಬೇಕಾಗಿದೆ.

-ಜಿ.ನಾಗೇಂದ್ರ ಕಾವೂರು ಸಂಡೂರು

ಸ್ಥಳೀಯ ಜವಾಬ್ದಾರಿ ಹೆಚ್ಚಲಿ

ಸ್ವಾತಂತ್ರ್ಯ ಬಂದು 75 ವರ್ಷ ಸಂದರೂ ಶುದ್ಧ ಕುಡಿಯುವ ನೀರು ಪೂರೈಸಲು ನಮ್ಮ ಸರಕಾರಗಳಿಗೆ ಸಾಧ್ಯವಾಗುತ್ತಿಲ್ಲ ಎನ್ನುವುದು ತಲೆ ತಗ್ಗಿಸುವ ವಿಚಾರ. ಪ್ರತಿ ಮಳೆಗಾಲದ ಆರಂಭದಲ್ಲಿ ಗ್ರಾಮೀಣ ಹಾಗೂ ಪಟ್ಟಣ ಭಾಗಗಳಲ್ಲಿ ನೀರಿಗೆ ಸಂಬಂಧಿಸಿದ ಸಮಸ್ಯೆಗಳು ಕಾಣಿಸುವುದು ವಾಡಿಕೆಯಾಗಿದೆ. ಇತ್ತೀಚಿಗೆ ತುಮಕೂರು ಜಿಲ್ಲೆಯ ಗ್ರಾಮವೊಂದರಲ್ಲಿ ಕಲುಷಿತ ನೀರು ಕುಡಿದು ಆರು ಮಂದಿ ಸಾವನ್ನಪ್ಪಿದ್ದರು ಸರಕಾರ ಕ್ಯಾಯರೇ ಅನುತ್ತಿಲ್ಲ. ಇದಷ್ಟೆ ಅಲ್ಲದೇ ಇನ್ನು ಹತ್ತು-ಹಲವಾರು ಗ್ರಾಮಗಳಲ್ಲಿ ಇರುವ ಕೊಳವೆ ಬಾವಿಗಳು ನೆಟ್ಟಗಿಲ್ಲ, ನೀರಿನ ಟ್ಯಾಂಕ್‌ಗಗಳು ಸ್ವಚ್ಛತೆ ಕಾಣದೇ ಕಾಯಿಲೆ ಹರಡುವ ಕೇಂದ್ರಗಳಾಗುತ್ತಿರುವುದು ಸುಳ್ಳಲ್ಲ. ಅತಿಯಾದ ಲವಣಾಂಶಯುಕ್ತ ನೀರನ್ನೆ ಕುಡಿಯಲು ಪೂರೈಕೆ ಮಾಡುತ್ತಿರುವುದು ಬೇಜವಾಬ್ದಾರಿ ತನವೂ ಕ್ಷಮೆಗೆ ಅರ್ಹವಲ್ಲ. ಮಳೆಗಾಲದಲ್ಲಿ ಜಲಮೂಲಗಳಿಂದ ಹರಡುವ ಕಾಯಿಲೆಗಳು ಹತ್ತಾರು. ಈಗಾಗಲೇ ನೀರಿಗೆ ಸಂಬಂಧಿಸಿದ ಸಾಂಕ್ರಾಮಿಗಳು ಪಸರಿಸತೊಡಗಿವೆ, ಕೇಳುವರು ದಿಕ್ಕಿಲ್ಲ, ಹೊಣೆ ಹೊರಬೇಕಾದ ಸರಕಾರ ಮಾಡುತ್ತಿರುವುದಾದರೂ ಏನು? ಇದಕ್ಕೆ ಸರಕಾರ ಯಾವಾಗ ಉತ್ತರಿಸುತ್ತದೆ ಎಂದು ಜನರಲ್ಲಿ ಪ್ರಶ್ನೆ ಹುಟ್ಟುವುದು ಸಹಜ. ಆದಷ್ಟು ಬೇಗ ಸರಕಾರ ಜನರ ಪ್ರಶ್ನೆಗೆ ಉತ್ತರಿಸಬೇಕಾಗಿದೆ.

-ದೀಕ್ಷಾ ಮುಚ್ಚಂಡಿ ಮಹಿಳಾ ವಿವಿ ವಿಜಯಪುರ

ಬೆಲೆ ಏರಿಕೆ: ಹೊರೆ ಏರಿಕೆ

ಈ ಜೂನ್‌ನಲ್ಲಿ ಕಳೆದ ವಾರಕ್ಕಿಂತ ಈ ವಾರ ಬಹುತೇಕ ತರಕಾರಿಗಳ ಬೆಲೆ ಅತಿ ದುಬಾರಿಯಾಗಿ ಬಡವರಿಗೆ, ಶ್ರೀ ಸಾಮಾನ್ಯರಿಗೆ ಬಿಸಿ ಕಣ್ಣೀರು ಮೂಡಿಸಿದೆ. ಟೊಮೋಟೋ ದರ ಕೇಳಿದರೆ ರಕ್ತ ಕಣ್ಣೀರು! ಈರುಳ್ಳಿ ದರ ಕೇಳಿದರೆ ಸಾಕು ಗುಲಾಬಿ ಕಣ್ಣೀರು! ಆಲೂಗಡ್ಡೆ ದರ ಕೇಳಿದರೆ ಅಳು! ಬೀನ್ಸ್-ಬಟಾಣಿ ದರ ಕೇಳಿದರೆ ಬಿಪಿ. ಕೊತ್ತಂಬರಿ ಸೊಪ್ಪು ಸೇರಿದಂತೆ ಇತರ ಸೊಪ್ಪುಗಳ ದರ ಕೇಳಿದರೆ ಸಾಕು ತಲೆಸುತ್ತು ಬರುತ್ತದೆ. ವೈದ್ಯರು ಚೆನ್ನಾಗಿ ತರಕಾರಿಗಳನ್ನು ತಿನ್ನುವುದಕ್ಕೆ ಸೂಚನೆ ನೀಡುತ್ತಾರೆ. ಅಕ್ಕಿ, ಬೇಳೆ, ಕಾಳುಗಳ ಎಣ್ಣೆದರ ಬೆಲೆಯೇರಿಕೆಯ ಜೊತೆಗೆ ತರಕಾರಿಗಳ ಬೆಲೆ ಏರಿಕೆ ಬಡವರಲ್ಲಿ ಶ್ರೀಸಾಮಾನ್ಯರಲ್ಲಿ ಅತೀವ ಸಂಕಟ ಕಣ್ಣೀರು ಮೂಡಿಸಿದೆ.

ಕಳೆದ ವರ್ಷದ ರಾಜ್ಯ ವಿಧಾನಸಭೆ ಹಾಗೂ ಈ ವರ್ಷದ ಲೋಕಸಭೆ ಚುನಾವಣೆ ಪ್ರಚಾರ ಭಾಷಣಗಳಲ್ಲಿ ಸ್ವರ್ಗಸೃಷ್ಟಿ ಎಂದಿದ್ದ ರಾಜಕಾರಣಿಗಳು, ಪಕ್ಷಗಳು ಫಲಿತಾಂಶದ ನಂತರ ನರಕ ಸೃಷ್ಟಿಸಿರುವುದು ಶ್ರೀಸಾಮಾನ್ಯರಲ್ಲಿ ಸಿಟ್ಟು ಮೂಡಿಸಿದೆ.

ಗಾಯದ ಮೇಲೆ ಉಪ್ಪು ಸುರಿದಂತೆ ಈಗ ಪೆಟ್ರೋಲ್ ಡಿಸೇಲ್ ಬೆಲೆ ಏರಿಕೆ, ನೀರಿನ ದರ ಏರಿಕೆ, ಸಾರಿಗೆ ದರ ಏರಿಕೆ ಶ್ರೀಸಾಮಾನ್ಯರಲ್ಲಿ, ಬಡವರಲ್ಲಿ ರಕ್ತ ಕಣ್ಣೀರು ಮೂಡಿಸಿದೆ. ಗ್ಯಾರಂಟಿಗಳ ಸ್ವರ್ಗದ ನಡುವೆಯೂ ಬೆಲೆ ಏರಿಕೆ ನರಕ ಸೃಷ್ಟಿಸಿದೆ! ಆನಪ್ರತಿನಿಧಿಗಳು, ಪಕ್ಷಗಳು ಯಾರ ಹಿತ ಕಾಯುತ್ತಿದ್ದಾರೆ! ತರಕಾರಿ ಹೂವು ಹಣ್ಣುಗಳನ್ನು ಬೆಳೆದ ರೈತರೆಲ್ಲ ಈಗ ಶ್ರೀಮಂತರಾಗಿ ಬಂಗಲೆಗಳಲ್ಲಿ ವಾಸಿಸುತ್ತಿದ್ದಾರಾ ಎನ್ನುವ ಶ್ರೀಸಾಮಾನ್ಯರ ಸಂದೇಹಕ್ಕೆ ಜನಪ್ರತಿನಿಧಿಗಳ ಉತ್ತರ.

-ಮಂಜುಳಾ ರಾಮಶೇಷ ಹುಲಿಮಂಗಲ

ಪ್ರಚಾರಕ್ಕಾಗಿ ಆರ್ಥಿಕ ಸಹಾಯ?

ನಟ ದರ್ಶನ್ ಮತ್ತು ತಂಡವನ್ನು ಚಿತ್ರದುರ್ಗದ ರೇಣುಕಾಸ್ವಾಮಿ ಅವರನ್ನು ಕೊಲೆ ಮಾಡಿದ ಆರೋಪದ ಮೇಲೆ ಪೋಲೀಸರು ವಿಚಾರಣೆ ನಡೆಸುತ್ತಿದ್ದಾರೆ. ಈ ಹಂತದಲ್ಲಿ ಹತ್ಯೆಗೀಡಾದ ಕುಟುಂಬಕ್ಕೆ ಆರ್ಥಿಕ ಚೈತನ್ಯ ನೀಡಲು ಬಿಜೆಪಿ ಎರಡು ಲಕ್ಷ ರು. ನೀಡಿದೆ. ಈ ರೀತಿಯ ಮಾನವೀಯತೆ ನಿಜಕ್ಕೂ ಅಗತ್ಯ.

ಆದರೆ, ಈ ರೀತಿ ಹತ್ಯೆಗೀಡಾದ ಎಲ್ಲಾ ಕುಟುಂಬಗಳಿಗೂ ಬಿಜೆಪಿ ಆರ್ಥಿಕ ಸಹಾಯ ನೀಡುತ್ತದೆಯೇ? ಅಥವಾ ಪ್ರಸಿದ್ಧ ವ್ಯಕ್ತಿಯಿಂದ ಹತ್ಯೆಗೀಡಾದ ಅಂತಲೋ ಅಥವಾ ಪ್ರಕರಣ ಜಗಜ್ಜಾಹೀರಾಗಿದೆ ಎಂದೋ ಪರಿಹಾರ ಹಣ ನೀಡುವ ನೆಪದಲ್ಲಿ ಪ್ರಚಾರ ಗಿಟ್ಟಿಸಿಕೊಳ್ಳುತ್ತಿದೆಯೇನೋ ಎಂಬ ಶಂಕೆ ಮೂಡುತ್ತದೆ. ನಿಜಕ್ಕೂ ಅಕಾಲ ಮೃತ್ಯುವಿಗೆ ಈಡಾದ ಎಲ್ಲಾ ಕುಟುಂಬಗಳಿಗೂ ಸಹ ಬಿಜೆಪಿ ಆರ್ಥಿಕ ನೆರ ವನ್ನು ಒದಗಿಸಿದರೆ ಜನ ಮೆಚ್ಚಿಯಾರು. ಅದನ್ನು ಬಿಟ್ಟು ಪ್ರಚಾರಕ್ಕೆಂದು ನೀಡಿದರೆ ಅದು ಸ್ವಾರ್ಥವಾಗುತ್ತದೆ. ಇದ ರಲ್ಲೂ ರಾಜಕೀಯ ಕಂಡುಬರುತ್ತದೆ. ಇಂತಹವುಗ ಳಿಂದ ನೊಂದ ಕುಟುಂಬಕ್ಕೆ ಮತ್ತಷ್ಟು ನೋವು ನೀಡಿದಂತೆ ಆಗುತ್ತದೆ.

-ಪತ್ತಂಗಿ ಎಸ್. ಮುರಳಿ ಬೆಂಗಳೂರು

ಮರೆಯದಿರಿ ಪೆನ್‌ಡ್ರೈವ್ ಪ್ರಕರಣ

ಕಳೆದ ಹಲವು ದಿನಗಳಿಂದ ರಾಜ್ಯದಲ್ಲಿ ದರ್ಶನ ಕೊಲೆ ಪ್ರಕರಣವೇ ಎಲ್ಲೆಡೆ ಸುದ್ದಿಯಾಗುತ್ತಿದೆ. ಈ ಪ್ರಕರಣದಲ್ಲಿ ಭಾಗಿಯಾದವರನ್ನು ಪೋಲಿಸರು ವಿಚಾರಣೆ ನಡೆಸುತ್ತಿದ್ದು, ದರ್ಶನ ಹಾಗೂ ರೇಣುಕಾಸ್ವಾಮಿಯ ಪರ ಮತ್ತು ವಿರೋಧದ ಅಭಿಪ್ರಾಯಗಳು ಎಲ್ಲೆಡೆಯೂ ಕೇಳಿಬರುತ್ತಿದೆ. ಕಾನೂನನ್ನು ಕೈಗೆತ್ತಿಕೊಂಡು ಕೊಲೆ ಮಾಡಿರುವುದು ಅಕ್ಷಮ್ಯ ಅಪರಾಧವೇ ಸರಿ. ಇಲ್ಲಿ ಇಬ್ಬರೂ ಸಾಚಾಗಳಲ್ಲ, ಒಂದು ಮಹಿಳೆಗೆ ಆ ರೀತಿಯಾಗಿ ಅಶ್ಲೀಲ ಸಂದೇಶ ಕಳುಹಿಸುವುದು ತಪ್ಪು ಎಂಬ ಅರಿವಿಲ್ಲದ ವ್ಯಕ್ತಿಯ ಮಾನಸಿಕತೆ ಹಾಗೂ ಸಮಾಜದಲ್ಲಿ ಮಾದರಿಯಾಗಿರುವ ಒಬ್ಬ ವ್ಯಕ್ತಿ ಅದನ್ನು ಕಾನೂನಾತ್ಮಕವಾಗಿ ಪರಿಹರಿಸುವುದನ್ನು ಬಿಟ್ಟು ಕೊಲೆ ಮಾಡುವ ಮನಸ್ಥಿತಿ ಎರಡು ಸರಿಯಲ್ಲ. ಈ ಘಟನೆಯ ನಡುವೆ ರಸಿಕ ಮಹಾಶಯ ಪ್ರಜ್ವಲ್ ಅವರ ಪೆನ್ ಡ್ರೈವ್ ಹಗರಣ ಮರೆಯಾಗದಿರಲಿ. ಏಕೆಂದರೆ ಈ ಎರಡು ಪ್ರಕರಣದ ತನಿಖೆ ಹಾಗೂ ಅಪರಾಧಿಗಳಿಗೆ ಆಗುವ ಶಿಕ್ಷೆಯಿಂದ ಜನರಿಗೆ ಕಾನೂನಿನ ಮೇಲೆ ನಂಬಿಕೆ ಬಲವಾಗುತ್ತದೆ ಹಾಗೂ ಎಲ್ಲರಿಗೂ ಒಂದು ಸಂದೇಶ ರವಾನೆಯಾಗುತ್ತದೆ.

-ಸುರೇಂದ್ರ ಪೈ ಭಟ್ಕಳ

ಭಟ್ಟರ್ ಸ್ಕಾಚ್

● ತ್ರಿವೇಣಿ ರಾವ್, ಗಿರಿನಗರ
ಗಂಡನನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು ತಪ್ಪಾ?
– **ಅಮ್ಮಾ ತ್ರಿವೇಣಿ, ಯಾರ ಗಂಡನನ್ನು ಅಂತ ಸ್ಪಷ್ಟವಾಗಿ ಹೇಳಬಾರದೇನಮ್ಮಾ?!**

● ಸಿ.ಕೆ.ರೆಡ್ಡಿ, ಭೈರಸಂದ್ರ
ರೇವಣ್ಣ ಈಗ ಏನು ಮಾಡುತ್ತಿದ್ದಾರೆ ಹೇಳ್ತೀರಾ?
– **ಮೂಗನ್ನು ತೋಡುವುದು ಮತ್ತು ಕಂಕುಳನ್ನು ಕೆರೆಯುವುದು!**

● ಪ್ರೀತಿ ಕಾಮತ, ವೈಯಾಲಿಕಾವಲ್
ಭಟ್ರೇ, ನಾನು ಯಾವ ಪಾಸ್‌ವರ್ಡ್‌ನ್ನು ಇಟ್ಟುಕೊಳ್ಳಲಿ?
– **ಪಾಸ್‌ವರ್ಡ್ ಅಂತಾನೇ ಇಟ್ಕೊಳ್ಳಿ!**

● ರಾಘಣ್ಣ ಕೃಷ್ಣಮೂರ್ತಿಪುರಂ, ಮೈಸೂರು
ಮದುವೆಯಾದ್ರೆ ಸಂತೋಷ, ಸುಖ, ನೆಮ್ಮದಿ, ಸೌಖ್ಯ ಎಲ್ಲಾ ಮನೆ ಮಾಡತ್ತಂತೆ ನಿಜವೇ ಭಟ್ರೇ?
– **ನಿಜ.. ಆದರೆ ಆ ಮನೆ ಯಾವುದು ಅನ್ನೋದು ಮಾತ್ರ ಯಾರಿಗೂ ಗೊತ್ತಿಲ್ಲ!**

● ರಾಜೇಶ ಶೆಟ್ಟಿ, ಸುಳ್ಯ
ಭಟ್ರೇ, ನಿಮ್ಮ ಯೌವನದಲ್ಲಿ ನೀವು ಸಿನಿಮಾ ನಟರಂತೆ ಇದ್ದೀರಂತೆ?
– **ಈಗ ಹಾಗೆ ಇಲ್ವಾ ಎಂದು ಅಭಿಮಾನಿನಿಯರು ಪ್ರಶ್ನಿಸಬಹುದು?**

● ವಿ. ಹೇಮಂತ ಕುಮಾರ್, ಬೆಂಗಳೂರು
ಈ ವಾರದ ಭವಿಷ್ಯದಲ್ಲಿ ಪತಿ – ಪತ್ನಿ ಸಂತೋಷದಿಂದ ಕಾಲ ಕಳೆಯುತ್ತೀರಿ ಎಂದಿದೆಯಲ್ಲ, ಭಟ್ರೇ?
– **'ಐವತ್ತು ವರ್ಷಗಳ ಮುಂದೆ' ಅಂಕಣದಲ್ಲಿ ಪ್ರಕಟವಾಗಬೇಕಾದುದು, 'ವಾರಭವಿಷ್ಯ'ದಲ್ಲಿ ಕಣ್ತಪ್ಪಿನಿಂದ ಪ್ರಕಟವಾಗಿರಬೇಕು!**

● ಯಮುನೇಶ ಕಿಟ್ಟಿ, ಭಾರತೀಪುರ
ಭಟ್ರೇ, ಗೊತ್ತಿದ್ದೂ ತಪ್ಪು ಮಾಡುವುದೇಕೆ ಸರ್?
– **ತಪ್ಪು ಮಾಡುವುದರಲ್ಲೂ ಅಂಥ ಆತ್ಮವಿಶ್ವಾಸ!**

● ವಿಜಯಕುಮಾರ್ ಎಚ್.ಕೆ., ರಾಯಚೂರು
ಭಟ್ರೇ, ನಿಮ್ಮನ್ನು ನೋಡಿದರೆ ಗೌರವ ಮೂಡುತ್ತದಲ್ಲ?
– **ಹೂಂ.. ಕೂದಲು ಬೆಳ್ಳಗಾದರೂ ಬಣ್ಣ ಹಚ್ಚುವುದಿಲ್ಲವಲ್ಲ?!**

● ವಿದ್ಯಾಧರ ಜೋತೆ, ಧಾರವಾಡ
ಭಟ್ರೇ, ಅವಳಿಗೆ ಫೋನ್ ಮಾಡಿದರೆ ಅವಳ ತಾಯಿ ರಿಸೀವ್ ಮಾಡ್ತಾರಲ್ಲ?
– **ಅದೇ ವಾಸಿ, ಸದ್ಯ ಅವಳ ತಂದೆ ರಿಸೀವ್ ಮಾಡ್ತಿಲ್ವಲ್ಲ?!**

● ಎಚ್.ಕೆ.ಹುದ್ದಾರ, ಗದಗ
ಭಟ್ರೇ, ನಾನು ಮದುವೆಯಾಗೋ ಹುಡುಗಿ ನನಗಿಂತ ದೊಡ್ಡವಳು, ಏನು ಮಾಡಲಿ?
– **ಜೀವನ ಅಂದ್ರೆ, ಹೊಂದಾಣಿಕೆ, ಅಡ್ಜಸ್ಟ್ ಮಾಡ್ಕೋ!**

ಯೋಗದ ವ್ಯಾಸ, ಜಗದಗಲ ವೃದ್ಧಿಸಿದ ಎಸ್-ವ್ಯಾಸ!

ಯೋಗಾ ಯೋಗ
ರವೀ ಸಜಂಗದ್ದೆ
vveditoped@gmail.com

ಪತಂಜಲಿ ಮಹರ್ಷಿಗಳು ಯೋಗವನ್ನು 'ಯೋಗಃ ಚಿತ್ತ-ವೃತ್ತಿ ನಿರೋಧಃ' ಎಂದು ಸಂಸ್ಕೃತ ಭಾಷೆಯಲ್ಲಿ ವರ್ಣಿಸಿದ್ದಾರೆ. ಅದನ್ನೇ ಸ್ವಾಮಿ ವಿವೇಕಾನಂದರು 'ಯೋಗವೆಂದರೆ ಮನಸ್ಸಿನ ಅಂತರಾಳವು (ಚಿತ್ತ) ವಿವಿಧ ಅನಗತ್ಯ ರೂಪಗಳನ್ನು (ವೃತ್ತಿ) ತಾಳಗಳಂತೆ ನಿಗ್ರಹಿಸುವುದು' ಎಂದು ವ್ಯಾಖ್ಯಾನಿಸಿದ್ದಾರೆ. ಒಟ್ಟಿನಲ್ಲಿ ಸರಳವಾಗಿ ಹೇಳುವುದಾದರೆ 'ಯೋಗವು ದೈಹಿಕ ಹಾಗೂ ಮಾನಸಿಕ ಆಚರಣೆಗಳ ಮೂಲಕ ಮನಸ್ಸಿನ ಚಂಚಲತೆಯ ಮೇಲೆ ನಿರ್ಬಂಧ ಹೇರುವಿಕೆಯ ಪ್ರಕ್ರಿಯೆ'ಯಾಗಿದೆ. ದೇಹ ಮತ್ತು ಮನಸ್ಸಿನ ಆರೋಗ್ಯ ಸುಧಾರಣೆ ಮತ್ತು ಉತ್ತಮ ಗುಣಮಟ್ಟ ಕಾಪಾಡಿಕೊಳ್ಳುವುದು ಯೋಗದ ಗುರಿ. ದೇಹ ಮತ್ತು ಮನಸ್ಸುಗಳ, ಆತ್ಮ ಮತ್ತು ಪರಮಾತ್ಮರ ಕೂಡುವಿಕೆಯೇ ಯೋಗ. ಯೋಗವು ದೈಹಿಕ, ಮಾನಸಿಕ, ಆಧ್ಯಾತ್ಮಿಕ ಅಭ್ಯಾಸ. ಯೋಗಕ್ಕೆ ಯಾವುದೇ ಧರ್ಮ, ಜಾತಿ, ವರ್ಣ, ಪಂಗಡ ಇತ್ಯಾದಿಗಳ ಬೇಧವಿಲ್ಲ. ಆಸಕ್ತಿ ಇರುವ ಯಾರೂ ಯೋಗವನ್ನು ಅಭ್ಯಸಿಸಬಹುದು.

ಜೂನ್ 21ನ್ನು ಅಂತಾರಾಷ್ಟ್ರೀಯ ಯೋಗ ದಿನವನ್ನಾಗಿ ಘೋಷಣೆಗೆ ದಶಮಾನದ ಸಂಭ್ರಮ. ಯೋಗದ ವಿಶ್ವವ್ಯಾಪಿಯ ಪರಿಧಿ ನೋಡಿದರೆ ಹದಿನೆಂಟನೆಯ ಶತಮಾನದ ಕೊನೆಯಿಂದ 2014ರ ವರೆಗಿನ ಯುಗ ಒಂದೆಡೆಯಾದರೆ ಕಳೆದ ಒಂದು ದಶಕಗಳಲ್ಲಿ (2014-2024) ಅದು ಪಸರಿಸಿದ, ತಲುಪಿದ ವಿಸ್ತಾರ ಮತ್ತೊಂದು ಮೈಲಿಗಲ್ಲು. ಪ್ರಪಂಚದ ಬಹುತೇಕ ದೇಶಗಳು ಯೋಗದ ಸತ್ಪರಿಣಾಮಗಳನ್ನು ಮನನ ಮಾಡಿಕೊಂಡು ಯೋಗವನ್ನು ಜೀವನಶೈಲಿಯಾಗಿ ಅಳವಡಿಸುವ ನಿಟ್ಟಿನಲ್ಲಿ ಕಾರ್ಯಯೋಜನೆ ಹಮ್ಮಿಕೊಂಡು ಆ ನಿಟ್ಟಿನಲ್ಲಿ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿರುವುದು ಯೋಗದ ಶ್ರೇಷ್ಠತೆಗೆ ಉತ್ತಮ ಉದಾಹರಣೆ.

ಯೋಗ ಎಂದಾಗ ನೆನಪಾಗುವುದು ಸ್ವಾಮಿ ವಿವೇಕಾನಂದರು. ತನ್ನ ಕಾಲಾವಧಿಯಲ್ಲಿ ಯೋಗವನ್ನು ವಿಶ್ವದಾದ್ಯಂತ ಪ್ರಚುರಪಡಿಸಲು ಅವರು ನಡೆಸಿದ ಪ್ರಯತ್ನ ಶ್ಲಾಘನೀಯ. ಅವರ ದೃಷ್ಟಿಕೋನದಿಂದ ಪ್ರಭಾವಿತಗೊಂಡು ಸ್ವಾಮಿ ವಿವೇಕಾನಂದ ಯೋಗ ಪ್ರತಿಷ್ಠಾನ ಸ್ಥಾಪಿಸಿ ಆ ನಿಟ್ಟಿನಲ್ಲಿ ತನ್ನ ಸರ್ವಸ್ವವನ್ನೂ ಮುಡಿಪಾಗಿಟ್ಟವರು ಏಕನಾಥ ರಾನಡೆಯವರು. ಕನ್ಯಾಕುಮಾರಿಯ ಸಮುದ್ರದ ಬಂಡೆಯ ಮೇಲಿನ ಸ್ವಾಮಿ ವಿವೇಕಾನಂದ ಕೇಂದ್ರದ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸಿ ಅದನ್ನು ಸಾಧ್ಯವಾಗಿಸಿದ್ದು ರಾನಡೆಯವರ ಹೆಗ್ಗಳಿಕೆ. ಮೊನ್ನೆಯ ಲೋಕಸಭಾ ಚುನಾವಣೆಯ ನಂತರ ಧ್ಯಾನದಲ್ಲಿ ತಲ್ಲೀನರಾಗಲು ಕನ್ಯಾಕುಮಾರಿಯ ಅದೇ ಕೇಂದ್ರವನ್ನು ನರೇಂದ್ರ ಮೋದಿಯವರು ಆರಿಸಿಕೊಂಡದ್ದನ್ನು ಸ್ಮರಿಸಬಹುದು.

ಏಕನಾಥ ರಾನಡೆಯವರ ಪ್ರಭಾವಕ್ಕೆ ಒಳಗಾಗಿ, ಅಮೆರಿಕದ ಪ್ರತಿಷ್ಠಿತ ಸಂಶೋಧನೆ ಸಂಸ್ಥೆ ನಾಸಾದ ಕೈತುಂಬಾ ಸಂಬಳ ಕೊಡುವ ಮತ್ತು ಸ್ಥಾನಮಾನ ಇರುವ ಕೆಲಸವನ್ನು ಬಿಟ್ಟು ತಾಯ್ನಾಡಿಗೆ ಬಂದು ಯೋಗ ವಿಶ್ವವಿದ್ಯಾಲಯ ಸ್ಥಾಪಿಸಿದ ಹೊಂಗಸಂದ್ರ ರಾಮರಾವ್ ನಾಗೇಂದ್ರ, ಅವರ ಸಾಧನೆಯ ಹಾದಿ ಮತ್ತೊಂದು ರೋಚಕ ಜೀವನ ಪಯಣ!

1980-90ರ ದಶಕದಲ್ಲಿ ವಿವೇಕಾನಂದ ಯೋಗ ಕೇಂದ್ರದ ಹಲವು ಜವಾಬ್ದಾರಿಗಳನ್ನು ನಿಭಾಯಿಸುತ್ತಾ ಯೋಗ ಮತ್ತದರ ಮಹತ್ವವನ್ನು ಪಸರಿಸುವ ಕಾರ್ಯದಲ್ಲಿ ಡಾ. ನಾಗೇಂದ್ರ ತಲ್ಲೀನರಾಗಿದ್ದರು. 2000ರಲ್ಲಿ ಬೆಂಗಳೂರಿನ ಹೊರವಲಯದ ಆನೇಕಲ್-ಜಿಗಣಿ ಭಾಗದ ಕಲ್ಲುಬಾಳು ಪ್ರದೇಶದಲ್ಲಿನ ನೂರು ಎಕರೆ ಪ್ರದೇಶ 'ಪ್ರಶಾಂತಿ ಕುಟೀರಂ'ನಲ್ಲಿ ಯೋಗಾಧ್ಯಯನ ನೀಡುವ ಮಹದಾಸೆಯೊಂದಿಗೆ 'ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ' (S-VYASA) ಹೆಸರಿನ ಸಂಸ್ಥೆ ನಾಗೇಂದ್ರ ಅವರ ನೇತೃತ್ವದಲ್ಲಿ ಜನ್ಮತಾಳಿತು. ಮೈಸೂರು ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ ಮತ್ತು ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಯೋಗ ಕೇಂದ್ರೀಕೃತ ಹಲವು ಪದವಿ ಮತ್ತು ಸ್ನಾತಕೋತ್ತರ ಮತ್ತು ವೈದ್ಯಕೀಯ ಶಿಕ್ಷಣವನ್ನು ಆರಂಭಿಸಲಾಯಿತು.

ಕಳೆದ ಒಂದೂವರೆ ದಶಕಗಳಿಂದ ಯೋಗ ಕೇಂದ್ರಿತ ಹಲವಾರು ಪದವಿಗಳನ್ನು ನೀಡಲಾಗುತ್ತಿದೆ. ಪ್ರಪಂಚದಾದ್ಯಂತ ಇರುವ ಆಸಕ್ತ ವಿದ್ಯಾರ್ಥಿಗಳು ಬಂದು ವ್ಯಾಸಂಗ ಮತ್ತು ವಿದ್ಯಾರ್ಜನೆ ಪೂರ್ತಿಗೊಳಿಸಿ, ಜಗತ್ತಿನಾದ್ಯಂತ ಯೋಗದ ರಾಯಭಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಯೋಗವು ಒಂದು ಪ್ರಮುಖ ವಿಷಯವಾಗಿ BSc, BCA, BTech, BBA, MCA, MSc MBAಮುಂತಾದ ಕೋರ್ಸುಗಳು ಇಲ್ಲಿ ಇವೆ. ಯೋಗ, Vedic science, physiotherapy,ಪ್ರಕೃತಿ ಚಿಕಿತ್ಸೆ (naturopathy), PhD, MD ಮುಂತಾದ ಕೋರ್ಸುಗಳು ಲಭ್ಯವಿವೆ. ವಾರ್ಷಿಕ ಸರಾಸರಿ ಒಂದು ಸಾವಿರದಷ್ಟು ವಿದ್ಯಾರ್ಥಿಗಳು ಈ ಕೇಂದ್ರದಿಂದ ಯೋಗದ ವಿಷಯದ ಜೊತೆಗೆ ಪದವಿ ಪಡೆಯುತ್ತಿದ್ದಾರೆ. ಯೋಗವು ಕಳೆದೊಂದು ದಶಕದಿಂದ ಹೆಚ್ಚಿನ ಪ್ರಮಾಣದಲ್ಲಿ ಪ್ರಸಿದ್ಧಿಯಾಗುತ್ತಿರುವುದರ ಫಲವಾಗಿ, ಇಲ್ಲಿ ನೀಡಲಾಗುವ ಒಂದು ತಿಂಗಳ ಅವಧಿಯ 'ಯೋಗ ಬೋಧಕ ಕೋರ್ಸ್' (Yoga Instructor Course) ಬಹಳ ಜನಪ್ರಿಯ ಮತ್ತು ಹೆಚ್ಚಿನ ಬೇಡಿಕೆ ಇರುವ ಕೋರ್ಸುಗಳಲ್ಲೊಂದು!

ಈ ಸಂಸ್ಥೆಯ ಇನ್ನೊಂದು ಹೆಗ್ಗಳಿಕೆ ಎಂದರೆ ಯೋಗವನ್ನು ಪ್ರಮುಖ ವಿಷಯವಾಗಿ ಪಠ್ಯ ಮತ್ತು ಅಭ್ಯಾಸವಾಗಿ(theory and practice) ಬೋಧನಾ ಕ್ರಮ ಮತ್ತು ಆಹಾರ ಕ್ರಮ ಇರುವ ಆಸ್ಪತ್ರೆ, ದುರಭ್ಯಾಸ ವರ್ಜನ ಶಿಬಿರ, ಸಕ್ಕರೆ ಕಾಯಿಲೆ ನಿಯಂತ್ರಣ ಶಿಬಿರ, ಒತ್ತಡ ನಿವಾರಣೆ ಮತ್ತು ಮನಃಶಾಂತಿ ವೃದ್ಧಿಸುವ ಶಿಬಿರ.... ಹೀಗೆ ಈ ಎಲ್ಲ ಶಿಬಿರಗಳೂ ಹಲವರ ಬಾಳಿನಲ್ಲಿ ಬೆಳಕು ಚೆಲ್ಲಿ ಒಳ್ಳೆಯ ಮತ್ತು ಸಂತುಷ್ಟ ಜೀವನ ನಡೆಸುವ ನಿಟ್ಟಿನಲ್ಲಿ ಸಾತತ್ಯ ಪಡೆದಿವೆ. 250 ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆ 'ಆರೋಗ್ಯ ಧಾಮ'ವು ಸಾರ್ವಜನಿಕರಿಗೆ ಉತ್ತಮ ಮತ್ತು ಅಗ್ಗದ ದರದಲ್ಲಿ ಎಲ್ಲ ರೀತಿಯ ವೈದ್ಯಕೀಯ ಸೇವೆ ನೀಡುತ್ತಿದೆ. ಪ್ರಪಂಚದ ಯಾವುದೇ ಔಷಧ ಕ್ರಮದಿಂದ ಗುಣವಾಗದ ಖಾಯಿಲೆಗಳು, ಎಲ್ಲ ಪ್ರಯತ್ನಗಳು ಕೈಚೆಲ್ಲಿದ, ಅನಾರೋಗ್ಯದಿಂದ ಮಲಗಿದಲ್ಲೇ ಇದ್ದು ಇಲ್ಲಿಗೆ ಬಂದ ಹಲವಾರು ರೋಗಿಗಳು ಎಸ್ ವ್ಯಾಸದ ವಿವಿಧ ವೈಜ್ಞಾನಿಕ, ಪ್ರಾಯೋಗಿಕವಾಗಿ ಸಾಬೀತಾದ (practically proven) ಯೋಗ ಚಿಕಿತ್ಸಾ ಕ್ರಮಗಳ ಮೂಲಕ ಪವಾಡಸದೃಶವಾಗಿ ಚೇತರಿಸಿಕೊಂಡ ದೃಷ್ಟಾಂತಗಳು ಹಲವಾರು ಇವೆ. 'ಈ ಎಲ್ಲ ರೋಗ ಮತ್ತು ಪರಿಸ್ಥಿತಿಗೆ ನಮ್ಮ ಅನಾರೋಗ್ಯಕರ ಮತ್ತು ಅಶಿಸ್ತಿನ ಆಹಾರ ಕ್ರಮ ಮತ್ತು ಜೀವನ ಶೈಲಿ ಕಾರಣ' ಎನ್ನುತ್ತಾರೆ ಡಾ. ನಾಗರತ್ನ. ಇವರು ಡಾ. ನಾಗೇಂದ್ರ ಅವರ ಸಹೋದರಿ. ಎಸ್ ವ್ಯಾಸದ ಮತ್ತೋರ್ವ ಆಧಾರ ಸ್ಥಂಭ. 'ಜೀವನ ಶೈಲಿಯಲ್ಲಿ ಸಕಾರಾತ್ಮಕ ಬದಲಾವಣೆ, ಪ್ರಾಣಾಯಾಮದ ಜೊತೆಗೆ ದೈನಂದಿನ ಯೋಗಾಭ್ಯಾಸ, ವ್ಯಾಯಾಮ, ಶಿಸ್ತುಬದ್ಧ ಆಹಾರ ಕ್ರಮದ ಮೂಲಕ ಯಾವುದೇ ರೋಗವನ್ನು ನಿಯಂತ್ರಿಸಲು ಸಾಧ್ಯ ಮತ್ತು ರೋಗಮುಕ್ತವಾದ ಜೀವನ ನಡೆಸಬಹುದು, ದೇಹ ಮತ್ತು ಮನಸ್ಸು ಸುಸ್ಥಿತಿಯಲ್ಲಿ ಇರಲು ಇದು ಸಹಕಾರಿ' ಎನ್ನುತ್ತಾರೆ ಗುರೂಜಿ ಡಾ. ನಾಗೇಂದ್ರ.

ಈ ಶೈಕ್ಷಣಿಕ ವರ್ಷದಿಂದ ಮೈಸೂರು ರಸ್ತೆಯ ರಾಜರಾಜೇಶ್ವರಿ ನಗರದಲ್ಲಿ ಮತ್ತೊಂದು ವಿಶಾಲವಾದ 'ಗ್ಲೋಬಲ್ ಸಿಟಿ ಕ್ಯಾಂಪಸ್' ಲೋಕಾರ್ಪಣೆಗೊಂಡು ಕಾರ್ಯ ನಿರ್ವಹಿಸುತ್ತಿದೆ. ಮೂರು ಸಾವಿರದಷ್ಟು ವಿದ್ಯಾರ್ಥಿಗಳು ಯೋಗವು ಪ್ರಮುಖ ವಿಷಯವಾಗಿ ಪಠ್ಯ ಮತ್ತು ಅಭ್ಯಾಸವಾಗಿ(theory and practice)ಇರುವ ವಿವಿಧ ಪದವಿ, ಸ್ನಾತಕೋತ್ತರ, ವೈದ್ಯಕೀಯ ಶಿಕ್ಷಣ ಕೋರ್ಸುಗಳಿಗೆ ದಾಖಲಾತಿ ಪಡೆದು ತರಗತಿಗಳು ಅದಾಗಲೇ ಆರಂಭಗೊಂಡಿವೆ. ಎಸ್ ವ್ಯಾಸವೂ ನ್ಯಾಕ್ (NAAC) ಸಂಸ್ಥೆಯಿಂದ ಎ ಪ್ಲಸ್ ಗ್ರೇಡ್ ಪಡೆದಿರುವ ಡೀಮ್ಡ್ ವಿಶ್ವ ವಿದ್ಯಾಲಯ (Deemed University). ಯೋಗ ಚಿಕಿತ್ಸೆ, ನ್ಯಾಚುರೋಪತಿ, ಆಯುರ್ವೇದ, ಫಿಸಿಯೋಥೆರಪಿ, ಆಕ್ಯುಪಂಕ್ಚರ್ ಇತ್ಯಾದಿ ವೈದ್ಯಕೀಯ ಕಲಿಕೆಯ ವಿಧಾನಗಳನ್ನೂ ಇಲ್ಲಿ ಬಳಸಲಾಗುತ್ತಿದೆ. ಸ್ವಾಮಿ ವಿವೇಕಾನಂದರ 'Combine the best of the east with the best of west'ನುಡಿ ಇಲ್ಲಿನ ಪ್ರಮುಖ ಸಿದ್ಧಾಂತ. ಈ ಸಂಸ್ಥೆ ಯೋಗಾಧ್ಯನ ಮತ್ತು ತತ್ಸಂಬಂಧಿತ ಸಂಶೋಧನೆಗಳಿಗೆ ಮೀಸಲಿರುವ, ಹೆಸರುವಾಸಿಯಾಗಿರುವ ಪ್ರಪಂಚದ ಏಕೈಕ ವಿಶ್ವ ವಿದ್ಯಾಲಯ!

ಡಾ. ಎಚ್. ಆರ್. ನಾಗೇಂದ್ರ, ಯೋಗತಜ್ಞ, ಆರೋಗ್ಯ ತಜ್ಞ, ವಿಷಯ ತಜ್ಞ, ಹೃದಯವಂತ ಮತ್ತು ದಣಿವರಿಯದ ಶ್ರಮಜೀವಿ. 82ರ ಹರೆಯದ ಅವರು ಇಂದಿಗೂ ತಿಂಗಳಿನಲ್ಲಿ ಅರ್ಧಕ್ಕಿಂತ ಹೆಚ್ಚು ದಿನಗಳಲ್ಲಿ ಜಗತ್ತಿನಾದ್ಯಂತ ಸಂಚರಿಸಿ ಯೋಗದ ಕುರಿತು ಉಪನ್ಯಾಸ, ಬೋಧನೆ, ವಿಚಾರ ಸಂಕೀರ್ಣ ಮತ್ತು ಪ್ರಾತ್ಯಕ್ಷಿಕೆ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿರುತ್ತಾರೆ. ಇದೆಲ್ಲದರ ಜೊತೆಗೆ ಎಲ್ಲೆಡೆ ಇರುವ ತನ್ನ ಸಂಸ್ಥೆಯ ದೈನಂದಿನ ಆಗುಹೋಗುಗಳ ಬಗ್ಗೆ ಸದಾ ಕ್ರಿಯಾಶೀಲರಾಗಿ, ನಿರತರಾಗಿರುತ್ತಾರೆ. ಎಸ್ ವ್ಯಾಸದ 'ಪ್ರಶಾಂತಿ ಕುಟೀರಂ' ಪರಿಸರ ಯೋಗ ಪ್ರಿಯರ ಅಚ್ಚುಮೆಚ್ಚಿನ ತಾಣ. ಅಲ್ಲಿಗೆ ಬಂದು ಚಿಕಿತ್ಸೆ, ತರಬೇತಿ ಮತ್ತು ಶಿಕ್ಷಣ ಪಡೆದ ಅನೇಕರು ಹಲವರ ಜೀವನದ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತಿದ್ದಾರೆ. ಯೋಗ ಮತ್ತು ಜೀವನಶೈಲಿಯ ಬಗೆಗಿನ ಗುರೂಜಿಯವರ ಸುಮಾರು ಎರಡು ಸಾವಿರ ಗಂಟೆಗಳಷ್ಟಿರುವ ಉಪನ್ಯಾಸಗಳು ಸೋಶಿಯಲ್ ಮೀಡಿಯಾದಲ್ಲಿ ಜನಪ್ರಿಯವಾಗಿವೆ. ಇವರು ಬರೆದ 220ಕ್ಕೂ ಹೆಚ್ಚಿನ ಕೃತಿಗಳು ವಿವಿಧ ಭಾಷೆಗಳಲ್ಲಿ ಪ್ರಕಟಗೊಂಡಿವೆ.

ಗುರೂಜಿ ಡಾ. ನಾಗೇಂದ್ರ ಮಾಡಿದ ಸಾಧನೆ ಅಪರೂಪ, ವಿಶಿಷ್ಟ, ಅನನ್ಯ ಮತ್ತು ಶ್ರೇಷ್ಠವಾದದ್ದು. ಮನುಕುಲದ ಒಳಿತಿಗಾಗಿ ಯೋಗವನ್ನು ಆರಿಸಿಕೊಂಡು, ಆ ಕ್ಷೇತ್ರದಲ್ಲಿ ನಿರಂತರ ಸಂಶೋಧನೆ, ಅಧ್ಯಯನ ಮತ್ತು ಶಿಕ್ಷಣ ನೀಡುತ್ತಾ ಬಂದಿದ್ದಾರೆ. ಇವರ ಈ ಸೇವೆಗೆ ದೇಶ ವಿದೇಶಗಳ ಹಲವಾರು ಪ್ರಶಸ್ತಿಗಳು ಅವರನ್ನರಸಿ ಬಂದಿವೆ. ಅವರ ಈ ಶ್ರೇಷ್ಠ ಸಾಧನೆಗೆ 2016ರಲ್ಲಿ ಕೇಂದ್ರ ಸರಕಾರವು ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಲ್ಲಿ ಒಂದಾದ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ. 'ನಾನು ನೆಪ ಮಾತ್ರ. ಈ ಎಲ್ಲಾ ಸಾಧನೆ ನನ್ನ ಜೊತೆಗೂಡಿ ಜನರಿಗೆ ಸದಾ ನಗುಮೊಗದ ಸೇವೆ ಸಲ್ಲಿಸುತ್ತಿರುವ ಸಾವಿರಾರು ನನ್ನ ಸಹವರ್ತಿ ಮತ್ತು ಸಹೋದ್ಯೋಗಿಗಳ ತಂಡದ್ದು. ಅವರ ನಿರಂತರ ಶ್ರಮ, ಕೆಲಸದಿಂದ ನಾವು ಪ್ರಪಂಚದಾದ್ಯಂತ ಒಂದಷ್ಟು ಒಳ್ಳೆಯ ಮತ್ತು ಪ್ರಯೋಜನಕಾರಿ ಕೆಲಸಗಳನ್ನು ಮಾಡಲು ಸಾಧ್ಯವಾಗುತ್ತಿದೆ. ಸಂದ ಗೌರವಾದರಗಳು ಅವರೆಲ್ಲರ ದಣಿವರಿಯದ ಸೇವಾತತ್ಪರತೆಗೆ ಸಿಕ್ಕಿರುವ ಪಾರಿತೋಷಕಗಳು. ಜೊತೆಗೆ ಇದೆಲ್ಲ-ಇಷ್ಟೆಲ್ಲ ಸ್ವಾಮಿ ವಿವೇಕಾನಂದ ಮತ್ತು ಏಕನಾಥ ರಾನಡೆಯವರ ಆಶೀರ್ವಾದದ ಫಲ. ನಾನು ಮುಖವಾಣಿ ಅಷ್ಟೇ. ಧನ್ಯೋಸ್ಮಿ' ಎನ್ನುವಾಗ ಅವರ ಕಂಗಳು ಹೊಳೆಯುತ್ತಿದ್ದವು; ಮುಖದ ತುಂಬಾ ಮಂದಹಾಸ ಪ್ರಜ್ವಲಿಸುತ್ತಿತ್ತು. ಕನ್ನಡಿಗರಾದ ಇವರು ಕಟ್ಟಿ ಬೆಳೆಸಿದ ವಿಶಾಲ ಹೆಮ್ಮರ 'ಎಸ್ ವ್ಯಾಸ ಪರಿವಾರ' ಜಗದಗಲ ಯೋಗಾಧ್ಯಯನ ಮತ್ತು ತತ್ಸಂಬಂಧಿತ ಸಂಶೋಧನೆಗಳ ವ್ಯಾಸ ಮತ್ತು ವ್ಯಾಸಂಗವನ್ನು ವೃದ್ಧಿಸಿ ಕಂಗೊಳಿಸುತ್ತಿರುವುದು ನಮಗೆಲ್ಲ ಹೆಮ್ಮೆಯ ವಿಚಾರ.

ಭಗವದ್ಗೀತೆಯಲ್ಲಿ 'ಯೋಗಃ ಕರ್ಮಸು ಕೌಶಲಂ' ಎನ್ನುವ ಉಕ್ತಿಯೊಂದಿದೆ. 'ಮಾಡುವ ಕೆಲಸದಲ್ಲಿ ಸದಾ ಶ್ರೇಷ್ಠತೆ ಹೊಂದುವುದೇ ಯೋಗ' ಎನ್ನುವುದು ಇದರ ಸರಳ ಅರ್ಥ. 'ವಿವೇಚನೆಯಿಂದ ಮಾಡುವ ಯಾವುದೇ ಉನ್ನತ ಕೆಲಸವೂ ಯೋಗ' ಎನ್ನುವುದು ಇದರ ವಿಶಾಲ ಅರ್ಥ. ಎಸ್ ವ್ಯಾಸ ಪರಿವಾರ ಈ ಎರಡೂ ಅರ್ಥಗಳಲ್ಲಿ ನಿರಂತರ ಕೆಲಸ ಮಾಡುತ್ತಿದೆ. ಪತಂಜಲಿ ಮಹರ್ಷಿ, ಸ್ವಾಮಿ ವಿವೇಕಾನಂದ, ಏಕನಾಥ ರಾನಡೆ, ಪ್ರಧಾನಿ ನರೇಂದ್ರ ಮೋದಿ, ಡಾ. ಎಚ್. ಆರ್. ನಾಗೇಂದ್ರ ಮುಂತಾದ ಹಲವಾರು ಮಹನೀಯರ ಕೆಲಸ ಮತ್ತು ಪ್ರೋತ್ಸಾಹದ ಫಲವಾಗಿ ಯೋಗವು ವಿಶ್ವದಾದ್ಯಂತ ಮುನ್ನೆಲೆಗೆ ಬಂದು ಹಲವರ ಬದುಕನ್ನು ಉನ್ನತೀಕರಿಸಲು ನೆರವಾಗಿದೆ. ಧರ್ಮ, ಜಾತಿ, ಪಂಗಡ, ಪ್ರದೇಶಗಳನ್ನು ಮೀರಿದ, ಎಲ್ಲರೂ ಅನುಕರಿಸಿ ಅನುಷ್ಠಾನ ಗೊಳಿಸಬಹುದಾದ, ವಿಶ್ವದಾದ್ಯಂತ ಇರುವ ಏಕೈಕ patent freeಸಿದ್ಧಾಂತವೆಂದರೆ ಅದು ಯೋಗ!

ದೈನಂದಿನ ಯೋಗಾಭ್ಯಾಸ ದೇಹ ಮತ್ತು ಮನಸ್ಸಿನ ಆರೋಗ್ಯವನ್ನು ಸುಸ್ಥಿತಿಯಲ್ಲಿ ಇಡಲು ಬಲು ಸಹಕಾರಿ. ಒತ್ತಡ, ಆತಂಕ, ಅತಿಯಾದ ಭಾವನಾತ್ಮಕತೆ, ಖಿನ್ನತೆ, ದುಷ್ಚಟ ಮುಂತಾದವುಗಳಿಂದ ದೂರವಿರಲು ಸರಳ ಯೋಗ ಮತ್ತು ಪ್ರಾಣಾಯಾಮ ತುಂಬಾ ಸಹಕಾರಿ. ಸೂರ್ಯ ನಮಸ್ಕಾರ, ವಿವಿಧ ಪ್ರಾಣಾಯಾಮಗಳು, ತಾಡಾಸನ, ವೀರಭದ್ರಾಸನ, ಭುಜಂಗಾಸನ ಮುಂತಾದ ಅಷ್ಟೇನೂ ಕ್ಲಿಷ್ಟಕರವಲ್ಲದ ಆಸನಗಳನ್ನು ಪ್ರತಿ ದಿನ ಮನೆಯಲ್ಲಿ ಮಾಡುವುದು ಮತ್ತು ಅಭ್ಯಸಿಸುವುದರ ಮೂಲಕ ದೇಹ ಮತ್ತು ಮನಸ್ಸಿನ ನೆಮ್ಮದಿಯನ್ನು ಸ್ವತೀಹ ಕಂಡುಕೊಳ್ಳಬಹುದು. ಮಾಡುವ ಕೆಲಸದಲ್ಲಿ ಶ್ರದ್ಧೆ ಮತ್ತು ಏಕಾಗ್ರತೆ ಬರಲು ಯೋಗ ಮತ್ತು ಪ್ರಾಣಾಯಾಮ ಹೆಚ್ಚು ಸಹಕಾರಿ. ಇದರಿಂದ ರೋಗ ನಿರೋಧಕ ಶಕ್ತಿ ಹೆಚ್ಚಿ ಆರೋಗ್ಯವೂ ವೃದ್ಧಿಸುತ್ತದೆ.

ವಿಶ್ವ ಯೋಗ ದಿನಾಚರಣೆಯ ದಶಮಾನೋತ್ಸವ ಸಂಭ್ರಮಾಚರಣೆಯ ಈ ಸಂದರ್ಭದಲ್ಲಿ, ಯೋಗ ಸಿದ್ಧಾಂತವನ್ನು ಪ್ರತಿಪಾದಿಸಿ ಜಗತ್ತಿನಾದ್ಯಂತ ಪಸರಿಸಿ ಜನರ ಜೀವನ ಶೈಲಿ, ಯೋಚನಾ ಲಹರಿ ಮತ್ತು ಆರೋಗ್ಯದ ಮೇಲೆ ಸತ್ಪರಿಣಾಮಗಳನ್ನು ಬೀರಿದ, ಕಾಲಾಂತರದಲ್ಲಿ ತಮ್ಮ ಸಂಪೂರ್ಣ ಜೀವನವನ್ನು ಇದಕ್ಕಾಗಿ ಮುಡಿಪಾಗಿಟ್ಟ ಎಲ್ಲ ಯೋಗಸಂತರ ಪಾದಾರವಿಂದಗಳಿಗೆ ಭಕ್ತಿ ಮತ್ತು ಅಭಿಮಾನ ಪೂರ್ವಕ ದೀರ್ಘ ದಂಡ ಉದ್ದಂಡಾಸನ! ಸರ್ವೇ ಭವಂತು ಸುಖಿನಃ, ಸರ್ವೇ ಸಂತು ನಿರಾಮಯಾಃ.

(ಲೇಖಕರು: ಹವ್ಯಾಸಿ ಬರಹಗಾರ)

ಪ್ರಸ್ತುತ
ರಾಸುಮ ಭಟ್

ಐಮೆಕ್ ಯೋಜನೆ ಭಾರತದ ಮಾಸ್ಟರ್ ಸ್ಟ್ರೋಕ್

ಚೀನಾ ದೇಶ ತನ್ನ ಹಳೆಯ ವ್ಯಾಪಾರ ಮಾರ್ಗವಾದ ಸಿಲ್ಕ್ ರೋಡ್ ಅಂದರೆ ಚೀನಾ, ಭಾರತ, ಪರ್ಷಿಯಾ, ಅರೇಬಿಯಾ, ಗ್ರೀಸ್ ಮತ್ತು ಇಟಲಿಯನ್ನು ಹಾದು ಹೋಗುವ ಮೂಲಕ ಬಟ್ಟೆಗಳು, ಮಸಾಲೆಗಳು, ಧಾನ್ಯಗಳು, ಹಣ್ಣುಗಳು ಮತ್ತು ತರಕಾರಿಗಳು, ಪ್ರಾಣಿಗಳ ಚರ್ಮ, ಮರ ಮತ್ತು ಲೋಹದ ಕೆಲಸ, ಅಮೂಲ್ಯ ಕಲ್ಲುಗಳು ಮತ್ತು ಇತರ ಮೌಲ್ಯದ ವಸ್ತುಗಳ ವ್ಯಾಪಾರವನ್ನು ಈ ಮಾರ್ಗದ ಮೂಲಕ ವ್ಯಾಪಾರ ಮಾಡುತ್ತಿತ್ತು.

ಪ್ರಸ್ತುತ ಚೀನಾ 2013 ರಲ್ಲಿ, ಸಿಲ್ಕ್ ಮಾರ್ಗವನ್ನು ಪುನರುಜ್ಜೀವನಗೊಳಿಸುವ ಯೋಜನೆಯನ್ನು ಚೀನಾ ಘೋಷಿಸಿತು, ಏಷ್ಯಾ, ಯುರೋಪ್, ಆಫ್ರಿಕಾ ಮತ್ತು ಮಧ್ಯಪ್ರಾಚ್ಯದ 60 ಹಾಗು ಒಟ್ಟು 140-160ಕ್ಕೂ ಹೆಚ್ಚು ದೇಶಗಳೊಂದಿಗೆ ಸಂಪರ್ಕಿಸುವ ಯೋಜನೆಯಾಗಿದ್ದು, ಭಾರತ, ಅಮೇರಿಕವನ್ನು ಹಿಂದಿಕ್ಕಿ ವ್ಯಾಪಾರದಲ್ಲಿ ಏಕಸ್ವಾಮ್ಯ ಸಾಧಿಸುವುದು ಚೀನಾದ ಮುಖ್ಯ ಉದ್ದೇಶವಾಗಿದೆ.

ಬೆಲ್ಟ್ ಅಂಡ್ ರೋಡ್ ಇನಿಶಿಯೇಟಿವ್ (ಆ್ಬಿ)ಯೋಜನೆಯ ವೆಚ್ಚ 2027 ಕ್ಕೆ 1.3 ಟ್ರಿಲಿಯನ್ ಡಾಲರ್‌ಗಳಾಗುತ್ತದೆ ಮತ್ತು ಇದರ ಮೌಲ್ಯ 3.7 ಟ್ರಿಲಿಯನ್ ಡಾಲರ್‌ಗಳಾಗುತ್ತದೆ. ಇದು ಹಲವಾರು ಭೂಮಿ ಮತ್ತು ಸಮುದ್ರ ಮಾರ್ಗಗಳನ್ನು ಹಾದುಹೋಗುತ್ತದೆ. ಬೆಲ್ಟ್ ಅಂಡ್ ರೋಡ್ ಎಕನಾಮಿಕ್ ಯೋಜನೆ ಪ್ರಾಥಮಿಕವಾಗಿ ಭೂ-ಆಧಾರಿತವಾಗಿದ್ದು, ಚೀನಾವನ್ನು ಮಧ್ಯ ಏಷ್ಯಾ, ಪೂರ್ವ ಯುರೋಪ್ ಮತ್ತು ಪಶ್ಚಿಮ ಯುರೋಪ್‌ನೊಂದಿಗೆ ಸಂಪರ್ಕಿಸುತ್ತದೆ, ಆದರೆ 21 ನೇ ಶತಮಾನದ ಸಿಲ್ಕ್ ರಸ್ತೆಯು ಸಮುದ್ರವನ್ನು ಆಧರಿಸಿದ್ದು ಚೀನಾದ ದಕ್ಷಿಣ ಕರಾವಳಿಯನ್ನು ಒಳಗೊಂಡು ಮೆಡಿಟರೇನಿಯನ್, ಆಫ್ರಿಕಾ, ಆಗ್ನೇಯ ಏಷ್ಯಾ, ಮತ್ತು ಮಧ್ಯ ಏಷ್ಯಾವನ್ನು ಸಂಪರ್ಕಿಸುತ್ತದೆ.

ಚೀನಾ ತನ್ನ ದೇಶೀಯ ಬೆಳವಣಿಗೆಯನ್ನು ಸುಧಾರಿಸಲು ಸಾಗರದ ಮಾರ್ಗವನ್ನು ಪ್ರಮುಖ ಮಾರ್ಗವೆಂದು ಪರಿಗಣಿಸುತ್ತದೆ. ಇದು ಚೀನೀ ಸರಕುಗಳಿಗೆ ಹೊಸ ವ್ಯಾಪಾರ ಮಾರುಕಟ್ಟೆಗಳನ್ನು ತೆರೆಯುವ ಮಾರ್ಗವಾಗಿಯೂ ಕಾರ್ಯನಿರ್ವಹಿಸುತ್ತದೆ, ದೇಶಕ್ಕೆ ವಸ್ತುಗಳು ಮತ್ತು ಸರಕುಗಳನ್ನು ರಫ್ತು ಮಾಡಲು ಅಗ್ಗದ ಮತ್ತು ಸುಲಭವಾದ ಮಾರ್ಗವನ್ನು ನೀಡುತ್ತದೆ.

ಬೆಲ್ಟ್ ಅಂಡ್ ರೋಡ್ ಇನಿಶಿಯೇಟಿವ್‌ಗೆ ಪ್ರತಿಯಾಗಿ ಭಾರತ ಜಿ7 ದೇಶಗಳೊಂದಿಗೆ ಐಮೆಕ್-ಇಂಡಿಯಾ - ಮಿಡಲ್ ಈಸ್ಟ್ - ಯುರೋಪ್ ಎಕಾನಾಮಿಕ್ ಕಾರಿಡಾರ್‌ನ ಮೂಲಕ ಭಾರತ, ಸೌದಿ ಅರೇಬಿಯಾ, ಅಮೆರಿಕ ಹಾಗೂ ಯುರೋಪ್ ನಡುವೆ ಬೃಹತ್ ರಸ್ತೆ, ರೈಲು ಹಾಗೂ ಜಲಮಾರ್ಗಗಳ ಮೂಲಕ ಏಷ್ಯಾ, ಮಧ್ಯಪ್ರಾಚ್ಯ ಹಾಗೂ ಪಶ್ಚಿಮ ರಾಷ್ಟ್ರಗಳನ್ನು ಸಂಪರ್ಕ ಕಲ್ಪಿಸುವ ಮೂಲಕ ಚೀನಾಗೆ ಮಾಸ್ಟರ್ ಸ್ಟ್ರೋಕ್ ನೀಡಿದೆ.

ಭಾರತದ ಈ ಐಮೆಕ್ ಯೋಜನೆಗೆ ಸುಮಾರು 24 ಸಾವಿರ ಕೋಟಿಯಿಂದ 66 ಸಾವಿರ ಕೋಟಿಗಳಷ್ಟು ಹಣ ವಿನಿಯೋಗಿಸಬೇಕಾಗಿದ್ದು, ಕಡಿಮೆ ವೆಚ್ಚ, ಹೆಚ್ಚಿನ ಉದ್ಯೋಗ, ಹಸಿರು ಮನೆಯ ಪರಿಣಾಮವನ್ನು ತಗ್ಗಿಸುವುದು, ವ್ಯಾಪಾರ ಮತ್ತು ಸಂಪರ್ಕದ ಮೂಲಕ ಪಾಲುದಾರ ರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯವನ್ನು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಐಮೆಕ್ ಯೋಜನೆಯ ಸಮುದ್ರ ಮಾರ್ಗ ಭಾರತದ ಗುಜರಾತ್‌ನ ಮುಂದ್ರಾ, ಕಾಂಡ್ಲಾ, ಮುಂಬೈನ ಜವಾಹರಲಾಲ್ ನೆಹರು ಪೋರ್ಟ್ ಟ್ರಸ್ಟ್ (ನವಿಮುಂಬಯಿ) ಮೂಲಕ ಮಧ್ಯ ಪ್ರಾಚ್ಯ ರಾಷ್ಟ್ರ ಗಳ ಫುಜೈರಾ, ಜಬೆಲ್ ಅಲಿ, ಅಬುದಾಬಿ ಮತ್ತು ಸೌದಿ ಅರೇಬಿಯಾದ ರಾಸ್ ಅಲ್ ಖೈರ್‌ನ ಮೂಲಕ ಇಸ್ರೇಲ್‌ನ ಹೈಫಾ ಬಂದರನ್ನು ತಲುಪಿ ನಂತರ ಗ್ರೀಸ್‌ನ ಪಿರಾಯಸ್ ಬಂದರು, ಇಟಲಿಯ ಮಸ್ಸಿನಾ ಬಂದರು ಮತ್ತು ಫ್ರಾನ್ಸ್‌ನ ಮಾರ್ಸಿಲೆ ಬಂದರನ್ನು ತಲುಪುವ ಗುರಿಯನ್ನು ಈ ಯೋಜನೆ ಹೊಂದಿದೆ. ಈ ಯೋಜನೆಗೆ ಹಲವಾರು ತೊಂದರೆಗಳಿದ್ದು ಪ್ರಸ್ತುತ ಇಸ್ರೇಲ್ ಮತ್ತು ಪ್ಯಾಲೆಸ್ಟೈನ್ ಯುದ್ಧ ನಡೆಯುತ್ತಿದ್ದು ಈ ಯುದ್ಧಕ್ಕೆ ಇರಾನ್ ಪ್ಯಾಲೆಸ್ಟೈನ್‌ಗೆ ಬೆಂಬಲಿಸಿದ್ದು ಈ ಯೋಜನೆ ಕೂಡ ಈ ಭೂಪ್ರದೇಶ ಗಳ ಮೂಲಕ ಹಾದು ಹೋಗಲಿದ್ದು ಮತ್ತು ಜೊತೆಗೆ ಮಧ್ಯ ಪ್ರಾಚ್ಯದ ಪ್ರಮುಖ ಆರ್ಥಿಕ ಶಕ್ತಿಯ ದೇಶಗಳಾದ ಟರ್ಕಿ, ಇರಾಕ್, ಕುವೈತ್, ಕತಾರ್, ಈಜಿಪ್ಟ್, ಇರಾನ್ ದೇಶಗಳು ಹೊರಗುಳಿದ್ದಿದ್ದು ಐಮೆಕ್ ಯೋಜ ನೆಗೆ ಪ್ರಮುಖ ಹಿನ್ನಡೆಯೆಂದರೆ ತಪ್ಪಾಗಲಾರದು. ಭಾರತ ಮಹತ್ವಾ ಕಾಂಕ್ಷೆಯ ಐಮೆಕ್ ಯೋಜನೆ ಪೂರ್ಣಗೊಳಿ ಸಲು ಭಾರತದ ದೃಢ ಸಂಕಲ್ಪದ ಜೊತೆಗೆ ರಾಜತಾಂತ್ರಿಕ ಸಂಬಂಧಗಳನ್ನು ಸರಿಯಾಗಿ ಬಳಸಿಕೊಳ್ಳಬೇಕಿದೆ.

(ಲೇಖಕರು: ಸಂಶೋಧನಾ ವಿದ್ಯಾರ್ಥಿ)

ಪ್ರಜಾಪ್ರಭುತ್ವದ ಕನಸು ಸಾಕಾರವಾಗುವುದಾದರೂ ಹೇಗೆ?

ಅಭಿಮತ
ವೀಣಾ ಬಿ.ಎಂ
vveditoped@gmail.com

ಈ ಚುನಾವಣೆಗಳು ಬಂದಾಗಲೆಲ್ಲ ನಮ್ಮ ರಾಜಕಾರಣಿಗಳು ಆಕಾಶವನ್ನು ಅಂಗೈಯಲ್ಲೇ ತೋರಿಸುತ್ತಾರೆ. ಚುನಾವಣೆಗೂ ಮುನ್ನ ಹಲವಾರು ಆಶ್ವಾಸನೆಗಳನ್ನು ಘೋಷಿಸುತ್ತಾರೆ. ಆ ಮೂಲಕ ಸಾಮಾನ್ಯ ಬಡ ಜನರನ್ನು ಆಸೆ ಬುರುಕರನ್ನಾಗಿಸಿ ಚುನಾವಣೆ ಗೆಲ್ಲುವ ಮೂಲಕ ಅಧಿಕಾರಕ್ಕೆ ಬರುತ್ತಾರೆ. ಬಳಿಕ ಅವರು ನೀಡಿರುವ ಆಶ್ವಾಸನೆಗಳ ಈಡೇರಿಕೆಗಾಗಿ ಹಣ ಹೊಂದಿಸಬೇಕಲ್ಲ; ಅದು ಪುನಃ ಬೆಲೆ ಏರಿಕೆಗಳಿಗೇ ಕಾರಣವಾಗುತ್ತದೆ. ಬೇರೆ ಬೇರೆ ಪಕ್ಷಗಳು ಈ ಉಚಿತಗಳಿಂದ ತಂದುಕೊಂಡ ಸಮಸ್ಯೆಗಳ ಬಗ್ಗೆ ರಾಜಕಾರಣಿಗಳಿಗೂ ಮತ್ತು ಜನರಿಗೂ ಗೊತ್ತಿರುತ್ತದೆ. ಆದರೆ ಮತ ಹಾಕುವ ಸಂದರ್ಭದಲ್ಲಿ ಮತದಾರರು ಆಲೋಚನೆಗಳೇ ಬೇರೆಯಾಗಿಬಿಡುತ್ತವೆ. ಇದೀಗ ಯಾರೆಲ್ಲ ನಮಗೆ ಹೆಚ್ಚಿನ ಹಣ ಕೊಡುತ್ತಾರೆ, ಮತ್ತು ನಾಳೆ ಏನೆಲ್ಲ ಕೊಡ್ತೀವಿ ಅಂತ ಹೇಳಿದ್ದಾರೋ ಅದೆಲ್ಲವನ್ನು ನೋಡಿ ಮತ ಹಾಕುತ್ತಾರೆ. ವಾಸ್ತವ ಅಂದರೆ, ಯಾವೆಲ್ಲ ಪಕ್ಷಗಳು ಬಡವರಿಗೆ ಆಸೆ ಆಮೀಷಗಳನ್ನು ತೋರಿಸಿ ಚುನಾವಣೆಗಳನ್ನು ಗೆದ್ದಿರುತ್ತಾರೋ, ಮುಂದೆ ಅವರು ನಮ್ಮದೇ ಹಣವನ್ನು ಕಿತ್ತುಕೊಂಡು ಪುನಃ ನಮಗೆ ಕೊಡುತ್ತಾರೆ ಅನ್ನೋದು ಬಹಳಷ್ಟು ಸಾಮಾನ್ಯ ಜನರಿಗೆ ಅರ್ಥವೇ ಆಗುವುದಿಲ್ಲ. ಸಾಮಾನ್ಯ ಜನರು ಮಾತ್ರ ಈ ರಾಜಕಾರಣಿಗಳ ಆಸೆ ಅಮಿಷಗಳಿಗತೆ ತಮ್ಮ ಅಮೂಲ್ಯವಾದ ಮತವನ್ನು ಮಾರಿಕೊಂಡು ಬಲಿಯಾಗುತ್ತಲೇ ಇರುತ್ತಾರೆ.

ಈ ಚಾಲಾಕಿ ರಾಜಕಾರಣಿಗಳಂತೂ ಸುಳ್ಳು ಹೇಳುವುದರಲ್ಲಿ ಎತ್ತಿದ ಕೈ! ಕಳೆದ ಏಳೆಂಟು ದಿನಗಳ ಹಿಂದೆ ಬೆಂಗಳೂರಿನ ಪೋಸ್ಟ್ ಆಫೀಸ್ ಮುಂದೆ ಟಕಾಟಕ್, ಟಕಾಟಕ್, ಟಕಾಟಕ್ ಅಂತ ಆಕಾಶದಿಂದ ಉದುರುವ ಹಣವನ್ನು ಪಡೆದುಕೊಳ್ಳಲಿಕ್ಕಾಗಿ ಸಾವಿರಾರು ಮಹಿಳೆಯರು ಕ್ಯೂ ನಿಂತಿದ್ದರು. ಅಷ್ಟಕ್ಕೂ ಟಕಾಟಕ್ ಅಂತ ಹಣವನ್ನ ಎಲ್ಲಿಂದ ಹಾಕ್ತಾರೆ? ಯಾರು ಹಾಕ್ತಾರೆ? ಅನ್ನೊ ಅನ್ನೊದರ ಬಗ್ಗೆ ಸಾಮಾನ್ಯ ಪ್ರಜ್ಞೆ ಕೂಡಾ ಆ ಹೆಣ್ಣುಮಕ್ಕಳಿಗಿರಲಿಲ್ಲ, ರಾಜಕಾರಣಿಗಳು ಹೇಗೆಲ್ಲ ನಮಗೆ ಮೋಸ ಮಾಡುತ್ತಾರೆ ಅನ್ನೊ ಉದಾಹರಣೆ ಕೂಡ ನಮ್ಮ ಕಣ್ಮುಂದಿದೆ. ಉಚಿತ ಕರೆಂಟ್ ಕೊಡುವ ಮೊದಲೇ ಉಳಿದೆಲ್ಲರ ಕರೆಂಟ್ ಬಿಲ್ಲುಗಳನ್ನು ಏರಿಸಿದ್ದರು. ಹೆಣ್ಣು ಮಕ್ಕಳಿಗೆ ಟಿಕೆಟ್ ಫ್ರೀ ಅಂತ ಹೇಳಿ ಗಂಡಸರ ಬಸ್ ಟಿಕೆಟ್ ಏರಿಸಿದ್ದರು. ಗಂಡಸರು ಬಸ್ಸುಗಳಲ್ಲಿ ಓಡಾಡಬೇಕು ಅಂದ್ರೆ, ಟಿಕೆಟ್ ತಗೊಂಡು ಕೂಡ ನಿಂತು ಹೋಗಬೇಕಾದ ಸ್ಥಿತಿಯನ್ನು ನಿರ್ಮಾಣ ಮಾಡಿದ್ದರು. ಹೆಂಗಸರಿಗೆ ಎರಡು ಸಾವಿರ ಅಂತ ಹೇಳಿ ಗಂಡಸರ ಜೇಬುಗಳಿಗೆ ಕತ್ರಿ ಹಾಕಿದ್ದರು. ಸರಾಯಿ,ಪೆಟ್ರೋಲ್, ಡೀಸೆಲ್ ಬೆಲೆಗಳನ್ನು ಗಗನಕ್ಕೇರಿಸಿದರು. ಇದರ ಹೊರೆ ಕೇವಲ ನಾವು ಪ್ರಯಾಣಿಸುವ ವಾಹನಗಳ ಮೇಲೆ ಮಾತ್ರ ಬಿಳುವುದಿಲ್ಲ ಬದಲಿಗೆ ನಾವು ಖರೀದಿಸುವ ತರಕಾರಿ ಹಾಕಿ ಬೇಳೆ ಶಾಲಾ ಮಕ್ಕಳ ವಾಹನದ ಶುಲ್ಕ ಆಟೋಚಾರ್ಯ ಹೋಟೆಲ್‌ಗಳಲ್ಲಿ ಕುಡಿಯೋ ಕಾಫಿ ತಿನ್ನೋ ಆಹಾರ ಹೀಗೆ ಎಲ್ಲದರ ಮೇಲು ಹೊರೆ ಬೀಳುತ್ತದೆ. ಹೀಗೆ ರಾಜಕಾರಣಿಗಳು ನಮ್ಮ ಮನೆಗಳನ್ನೇ ಕೊಳ್ಳೆ ಹೊಡೆದು ಅದರಲ್ಲಿ ಅವರು ಚೆನ್ನಾಗಿ ತಿಂದು ತೇಗಿ ಉಳಿದಿದ್ದನ್ನು ನಮಗೆ ಕೊಡುತ್ತಾರೆ. ಇದೆಲ್ಲ ನಮ್ಮ ಸಾಮಾನ್ಯ ಜನರಿಗೆ ಅರ್ಥ ಆಗುವುದಾದರೂ ಯಾವಾಗ? ಈ ಭವ್ಯ ಭಾರತದ ಪ್ರಬುದ್ಧ ಮತದಾರಣ ಮನಸ್ಥಿತಿ ಬದಲಾಗಬೇಕಿದೆ. ಕೇವಲ ನಾವು, ನಮ್ಮ ಪ್ರಜಾಪ್ರಭುತ್ವಕ್ಕೆ ಶಕ್ತಿ ಇದೆ, ಬಲಿಷ್ಠ ಪ್ರಜಾಪ್ರಭುತ್ವ ನಮ್ಮದು ಅಂತ ಜಂಬ ಕೊಚ್ಚಿಕೊಳ್ಳುವ ಬದಲು ಮುಂಬರುವ ಚುನಾವಣೆಗಳಲ್ಲಿ ಯೋಚನೆ ಮಾಡಿ ಮತದಾನ ಮಾಡಬೇಕು.

ಕರ್ನಾಟಕದ ವಿಧಾನಸಭಾ ಚುನಾವಣೆಗಳ ಸಂದರ್ಭದಲ್ಲಿ ರಾಜ್ಯ ಕಾಂಗ್ರೆಸ್ ಐದು ಗ್ಯಾರಂಟಿಗಳನ್ನು ಘೋಷಿಸಿತ್ತು. ಅದನ್ನು ಈಡೇರಿಸುವುದಕ್ಕೆ ಸುಮಾರು 50 ಸಾವಿರ ಕೋಟಿಗಿಂತ ಅಧಿಕ ಪ್ರಮಾಣದ ಹಣದ ಅವಶ್ಯಕತೆ ಇತ್ತು. ಅದಕ್ಕಾಗಿ ಅವರು ರಾಜ್ಯದಲ್ಲಿ ಈಗ ಎಲ್ಲದರ ಬೆಲೆಗಳನ್ನು ವಿಪರೀತ ಪ್ರಮಾಣದಲ್ಲಿ ಏರಿಸಿದ್ದಾರೆ. ಇದರ ಮಧ್ಯೆ ಲೋಕಸಭಾ ಚುನಾವಣೆಗಳು ಮುಗಿದಿವೆ. ಆದರೆ ಗ್ಯಾರಂಟಿಗಳು ಅವರ ಕೈ ಹಿಡಿದಿಲ್ಲ. ಇವರಂದುಕೊಂಡಷ್ಟು ಮತಗಳು ಕಾಂಗ್ರೆಸ್ ಪಕ್ಷಕ್ಕೆ ಬಂದಿಲ್ಲ. ಹೀಗಾಗಿ ಗ್ಯಾರಂಟಿಗಳನ್ನು ತೆಗೆಯಲು ಕೆಲ ಮಂತ್ರಿ ಶಾಸಕರುಗಳು ಸಭೆಯಲ್ಲಿ ಚರ್ಚಿಸಿದ್ದರು. ಆದರೆ ಇನ್ನೂ ಕೆಲವರು ಈ ಗ್ಯಾರಂಟಿಗಳನ್ನು ತೆಗೆದರೆ ಮುಂದಿನ ಚುನಾವಣೆಯಲ್ಲಿ ಹೊಡೆತ ಬೀಳುತ್ತದೆ ಎಂಬ ಸಲಹೆಗಳನ್ನು ಕೊಟ್ಟಿದ್ದರು.ಈಗ ಅದೇ ಪರಿಸ್ಥಿತಿಯಲ್ಲಿ ಆಂಧ್ರಪ್ರದೇಶವು ಇದೆ.

ಪಕ್ಕದ ರಾಜ್ಯ ಆಂಧ್ರಪ್ರದೇಶದಲ್ಲಿ ಚಂದ್ರಬಾಬು ನಾಯ್ಡು ಅವರ ನೂತನ ಸರಕಾರ ಅಧಿಕಾರಕ್ಕೆ ಬಂದಿದೆ. ಈ ಹಿಂದಿನ ಸರಕಾರ ಜಾರಿಗೆ ತಂದಿರುವ ಯೋಜನೆಗಳು ಮತ್ತು ಅವರು ಮಾಡಿಕೊಂಡ ಸಾಲದ ಜೊತೆ ಜೊತೆಗೆ ಈ ಚುನಾವಣೆಯ ಸಂದರ್ಭದಲ್ಲಿ ನಾಯ್ಡು ಘೋಷಿಸಿದ ಸೂಪರ್ ಸಿಕ್ಸ್ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲು ಹಣದ ಅವಶ್ಯಕತೆ ಬಹಳ ಇದೆ. ಹಾಗಾಗಿ ಆ ಹಣವನ್ನು ಹೊಂದಿಸುವುದು ಹೇಗೆ ಎಂಬುದರ ಗೊಂದಲ ಅವರ ನೀಗ ಕಾಡುತ್ತಿದೆ. ಎನ್ಡಿಎ ಸರ್ಕಾರಕ್ಕೆ 16 ಸಂಸದರ ಬೆಂಬಲವನ್ನು ಕೊಟ್ಟಿದ್ದ ನಾಯ್ಡು ಪಕ್ಷ ಮೊನ್ನೆ ಕೇಂದ್ರ ಸಚಿವ ಸಂಪುಟ ರಚನೆಯ ಸಂದರ್ಭದಲ್ಲಿ ಬಿಜೆಪಿ ಕೊಟ್ಟಿದ್ದ ಸ್ಥಾನಮಾನಗಳನ್ನು ಸ್ವೀಕರಿಸಿ ಸುಮ್ಮನಿದ್ದಾರೆ. ಇದರರ್ಥ, ಇವರ ಮುಂದಿನ ಯೋಜನೆಗಳಿಗೆ ಕೇಂದ್ರ ಸರಕಾರ ಹಣದ ವಿಶೇಷ ಪ್ಯಾಕೇಜ್ ಕೊಡುತ್ತದೆ ಎಂಬ ಹುಮ್ಮಸ್ಸಿನಲ್ಲಿದ್ದಾರೆ. ಆಂಧ್ರದಲ್ಲಿ ಹಿಂದಿನ ಮುಖ್ಯಮಂತ್ರಿ ಜಗನ್ಮೋಹನ್ ರೆಡ್ಡಿ ಅವರ ಸರಕಾರ ಸಾಕಷ್ಟು ಜನಪ್ರಿಯ ಯೋಜನೆಗಳನ್ನು ಜಾರಿಗೊಳಿಸಿತ್ತು. ವಿದ್ಯಾರ್ಥಿ, ಮಹಿಳೆ, ವೃದ್ಧ, ವ್ಯಾಪಾರಿ, ಕೃಷಿಕ, ಕಾರ್ಮಿಕ ಹೀಗೆ ಎಲ್ಲ ವರ್ಗಗಳಿಗೂ ಉಚಿತಗಳನ್ನು ನೀಡಿದ್ದರು. ಸರಕಾರ ಘೋಷಿಸಿದ ಎಲ್ಲ ಸಹಾಯಧನಗಳನ್ನು ಯಾವುದಾದರೊಂದು ಕುಟುಂಬ ಪಡೆದರೆ ಆ ಕುಟುಂಬಕ್ಕೆ ವಾರ್ಷಿಕ 1.20 ಲಕ್ಷದಷ್ಟು ಹಣ ಸಿಗುತ್ತೆ. ಹೀಗೆ ಹಲವು ಯೋಜನೆಗಳ ಹೆಸರಲ್ಲಿ ಜನರಿಗೆ ನೇರವಾಗಿ ಹಣವನ್ನೇ ಹಾಕುತ್ತಾ ಹೋಗಿದ್ದರಿಂದ ಅಲ್ಲಿ ಅಭಿವೃದ್ಧಿಗೆ ಬೊಕ್ಕಸದಲ್ಲಿ ಹಣ ಕಾಲಿ ಆಗಿದೆ. ಅಲ್ಲಿನ ಸರಕಾರಿ ನೌಕರರಿಗೆ ಸಮಯಕ್ಕೆ ಸರಿಯಾಗಿ ವೇತನಗಳು ಸಿಗದ ಪರಿಸ್ಥಿತಿ ನಿರ್ಮಾಣವಾಯಿತು. ಉದ್ಯೋಗ ಸೃಷ್ಟಿ ಸಾಧ್ಯವಾಗಲಿಲ್ಲ ನಿರುದ್ಯೋಗಿ ಲಕ್ಷಾಂತರ ಯುವಕರು ಹೊಟ್ಟೆಪಾಡಿಗಾಗಿ ಪಕ್ಕದ ತೆಲಂಗಾಣ ಕರ್ನಾಟಕ ತಮಿಳುನಾಡಿಗೆ ಒಲಸೆ ಹೋಗಬೇಕಾದ ಸ್ಥಿತಿ ನಿರ್ಮಾಣವಾಯಿತು. ಇದರಿಂದ ಆ ಸರಕಾರದ ಬಗ್ಗೆ ಜನರಲ್ಲಿ ಜಿಗುಪ್ಸೆ ಉಂಟಾಯಿತು. ಆ ಸಂದರ್ಭದಲ್ಲಿ ಆಡಳಿತರೂಢ ಪಕ್ಷದ ಅಧಿಕಾರ ಕಸಿದುಕೊಳ್ಳಲು ಟಿಡಿಪಿಯು ಕೂಡಾ ಅಂತಹದ್ದೇ ಘೋಷಣೆಗಳನ್ನು ಮಾಡಿ ಚುನಾವಣೆಯಲ್ಲಿ ಗೆದ್ದಿದೆ. ಹೀಗಾಗಿ ಅವರ ಮುಂದೆ ಇದೀಗ ಸಾಕಷ್ಟು ಸವಾಲುಗಳಿವೆ. ಇವರ ಉಚಿತ ಯೋಜನೆಗಳನ್ನು ಜಾರಿಗೆ ತರಲು ಅಂದಾಜು ಅರವತ್ತು ಸಾವಿರ ಕೋಟಿಗಳಷ್ಟು ಹಣದ ಅವಶ್ಯಕತೆ ಇದೆ. ಇತ್ತ ನೋಡಿದರೆ ಬೊಕ್ಕಸವೆಲ್ಲ ಖಾಲಿಯಾಗಿದೆ.

ಹಿಂದಿನ ಜಗನ್ಮೋಹನ್ ರೆಡ್ಡಿ ಸರಕಾರದ ಅವಧಿಯಲ್ಲಿ 4,42,442 ಕೋಟಿಯಷ್ಟು ಆಂಧ್ರ ಪ್ರದೇಶದ ಸಾಲ ಇದೆ. ಇದೇ 21 ಮಾರ್ಚ್ 2024ರ ಮಾಹಿತಿ ಯನ್ವಯ ರಾಜ್ಯದ ಒಟ್ಟು ವಿತ್ತೀಯ ಕೊರತೆ 55,817,05 ಕೋಟಿ ಇದೆ. ಇದು 2018-19 ನೇ ಸಾಲಿನಲ್ಲಿ ಇದು 35.441 ಸಾವಿರ ಕೋಟಿಗಳಷ್ಟು ಇತ್ತು ಈಗ ಶೇ.57 ರಷ್ಟು ಹೆಚ್ಚಳ ಆಗಿದೆ. ನೂತನ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಇದಕ್ಕೆ ಪರಿಹಾರ ಹುಡುಕಬೇಕಿದೆ. ಮಹಿಳೆಯರಿಗೆ ಉಚಿತ ಬಸ್, ದೀಪಂ ಯೋಜನೆಯ ಅಡಿ ವರ್ಷಕ್ಕೆ ಮೂರು ಗ್ಯಾಸ್, ಪ್ರತಿ ಮಹಿಳೆಗೆ ವಾರ್ಷಿಕ 18000 ರುಪಾಯಿ, 18 ವರ್ಷಕ್ಕಿಂತ ಮೇಲ್ಪಟ್ಟ ಮಕ್ಕಳಿಗೆ ಹದಿನೈದು ಸಾವಿರ ವಾರ್ಷಿಕ ಬತ್ತೆ, ನಿರುದ್ಯೋಗಿ ಯುವಕರಿಗೆ ವಾರ್ಷಿಕ 3000 ಹಣ, ಪ್ರತಿ ಮನೆಗೆ ಉಚಿತ ಶುದ್ಧ ಕುಡಿಯುವ ನೀರಿನ ಸರಬರಾಜು ಮಾಡಬೇಕಿದೆ. ಇದಕ್ಕೆಲ್ಲ ಪ್ರತಿ ವರ್ಷ 60 ಸಾವಿರ ಕೋಟಿಯಷ್ಟು ಹಣದ ಅವಶ್ಯಕತೆ ಇದೆ. ಜೊತೆಗೆ ಇದೇ ಜುಲೈ ಒಂದರ ಒಳಗೆ 65 ಲಕ್ಷ ಫಲಾನುಭವಿಗಳಿಗೆ ಪೆನ್ಷನ್‌ಗಾಗಿ 4.5 ಸಾವಿರ ಕೋಟಿ ರು ಹಾಗೂ ಸರಕಾರಿ ನೌಕರ ವೇತನಕ್ಕಾಗಿ 6,000 ಕೋಟಿ ರುಪಾಯಿಗಳ ಅವಶ್ಯಕತೆ ಇದೆ. ಇದರ ಬಳಿಕ ಘೋಷಿಸಿದ ಹೊಸ ಯೋಜನೆಗಳಿಗೆ ಬೇಕಾದ ಅರವತ್ತು ಸಾವಿರ ಕೋಟಿ ರುಪಾಯಿಗಳನ್ನು ಹೊಂದಿಸಬೇಕು. ಈ ಎಲ್ಲ ಸವಾಲುಗಳು ಚಂದ್ರಬಾಬು ನಾಯ್ಡು ಸರಕಾರದ ಮುಂದಿದೆ.

ಇನ್ನು ಇದೇ ಜೂನ್ 2ಕ್ಕೆ ಹೈದರಾಬಾದ್ ರಾಜಧಾನಿಯ ಋಣದ ಅವಧಿಯೂ ಮುಗಿದಿದೆ. ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಅವರಿಗೊಂದು ನೂತನ ರಾಜಧಾನಿ ನಿರ್ಮಾಣ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಕಳೆದ ಹತ್ತು ವರ್ಷದ ಹಿಂದೆ ಚಂದ್ರಬಾಬು ನಾಯ್ಡು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಅಮರಾವತಿಯನ್ನು ಆಂಧ್ರಪ್ರದೇಶದ ನೂತನ ರಾಜಧಾನಿ ಅಂತ ಘೋಷಿಸಿದ್ದರು. ಅದರ ಕೆಲಸ ಕಾರ್ಯಗಳು ಕೂಡ ಆರಂಭವಾಗಿದ್ದವು. ಬಳಿಕ ನಾಯ್ಡು ನಂತರ ಬಂದ ಜಗನ್ ಸರಕಾರ ಆ ಯೋಜನೆಗೆ ಸಂಪೂರ್ಣ ಬ್ರೇಕ್ ಹಾಕಿತು. ಇದೀಗ ಮತ್ತೆ ನಾಯ್ಡು ಈ ಐದು ವರ್ಷಗಳ ಅವಧಿಯಲ್ಲಿ ಅಮರಾವತಿಯನ್ನು ನಿರ್ಮಿಸುವ ಗುರಿಯನ್ನು ಹೊಂದಿದ್ದಾರೆ. ನಾಯ್ಡು ಅವರು ವಿದೇಶಿ ಹೂಡಿಕೆಗಳನ್ನು ತರುವುದರಲ್ಲಿ ಬಹಳ ಕ್ರಿಯಾಶೀಲರು. ಅವರಿಗೊಂದು ಅಭಿವೃದ್ಧಿಯ ವಿಷನ್ ಇದೆ ಆದರೆ ಅಂದುಕೊಂಡಂತೆ ಹೂಡಿಕೆಗಳು ರಾಜ್ಯಕ್ಕೆ ಬರಬೇಕಾದರೆ ಅಲ್ಲಿನ ಇನ್ಫ್ರಾಸ್ಟ್ರಕ್ಚರ್ ತುಂಬಾ ಚೆನ್ನಾಗಿರಬೇಕಾಗುತ್ತದೆ ಇದಕ್ಕೆಲ್ಲಾ ಹಣದ ಅವಶ್ಯಕತೆ ಇದೆ ಈ ಎಲ್ಲಾ ಕಾರ್ಯಗಳು ಸಾಕಾರ ಹಾಗೂ ಹೊತ್ತಿಗೆ ಅವರ ಗ್ಯಾರಂಟಿಗಳೇ ಅವರನ್ನು ಹುರಿದು ಮುಕ್ಕುವ ಸಾಧ್ಯತೆಗಳು ಹೆಚ್ಚಿದೆ. ಅವರ ಈ ಎಲ್ಲ ಕಾರ್ಯ ಯೋಜನೆಗಳನ್ನು ಸಾಕಾರ ಗೊಳಿಸಲು ಅವರಿಗೆ ಕೇಂದ್ರ ಸರಕಾರದ ಮೇಲಿನ ಡಿಪೆಂಡೆಂಸಿ ಹೆಚ್ಚಿದೆ. ಅದು ಏನಾಗುತ್ತೋ ಗೊತ್ತಿಲ್ಲ. ಈ ನಿಟ್ಟಿನಲ್ಲಿ ಮುಂಬರುವ ದಿನಗಳಲ್ಲಿ ಆಂಧ್ರದ ನೂತನ ಸರಕಾರ ತನ್ನ ಆರ್ಥಿಕ ಸಮಸ್ಯೆಗಳನ್ನು ಹೇಗೆ ನಿಭಾಯಿಸಿಕೊಳ್ಳುತ್ತದೆ ಎಂಬ ದೊಡ್ಡ ಸವಾಲು ಅವರ ಮುಂದಿದೆ.

(ಲೇಖಕರು: ಹವ್ಯಾಸಿ ಬರಹಗಾರರು)



ನಾರದ ಸಂಚಾರ
ಕಲಹಪ್ರಿಯ
naadigru@gmail.com

ಕಾಂಗ್ರೆಸ್‌ನ ಬೆನ್ನೆಲುಬು ಈ ಇಬ್ಬರಂತೆ

ಈ ಬಾರಿ ಲೋಕಸಭಾ ಚುನಾವಣೆ ಸಮಯದಲ್ಲಿ ಕಾಂಗ್ರೆಸಿಗೆ ಕಾಡಿದ್ದು ಒಂದೆರೆಡಲ್ಲ. ಚುನಾವಣೆ ನಡೆಸಲು, ಸ್ಟಾರ್ ಪ್ರಚಾರಕರ ಓಡಾಟಕ್ಕೆ ದುಡ್ಡು ವಿನಿಯೋಗಿಸಲು ಪಕ್ಷದ ಖಾತೆ ಬಂದ್ ಆಗಿತ್ತು. ಹಲವು ರಾಜ್ಯಗಳಲ್ಲಿ ಮೈತ್ರಿಗಳೊಂದಿಗೆ ಟಿಕೆಟ್ ಪಡೆಯಲು ಹೋರಾಟ ನಡೆಸಿದ ಪ್ರಸಂಗ ನಡೆದಿತ್ತು. ಈ ಎಲ್ಲದರ ನಡುವೆಯೂ ಶತಕದ ಸಾಧನೆಯನ್ನು ಕಾಂಗ್ರೆಸ್ ಮಾಡಿದೆ.

ಇದಕ್ಕೆ ಕಾರಣ ಹುಡುಕುತ್ತಾ ಹೋದರೆ, ಕಾಣಿಸುವುದು ಚುನಾವಣೆಗೆ ವರ್ಷದ ಮೊದಲೇ ಕಾಂಗ್ರೆಸ್ ಸಿದ್ಧಪಡಿಸಿದ 'ನರೇಟಿವ್' ಎಂದರೆ ತಪ್ಪಾಗುವುದಿಲ್ಲ. ವರ್ಷಕ್ಕೆ ಮೊದಲೇ ನಡೆಸಿದ ಭಾರತ್ ಜೋಡೋ ಯಾತ್ರೆ ಎನ್ನುವ ಕಲ್ಪನೆಯೇ ಜನರನ್ನು ಕಾಂಗ್ರೆಸ್‌ನತ್ತ ಸೆಳೆದಿತ್ತು. ಈ ಕಲ್ಪನೆಯನ್ನು ಕಾಂಗ್ರೆಸ್‌ಗೆ ಕೊಟ್ಟಿದ್ದು ಪ್ರಶಾಂತ್ ಭಾರಿ ಹಾಗೂ ಸಾವಿಯೋ ಜೋಸೆಫ್ ಎನ್ನುವ ಇಬ್ಬರು ತರುಣರು. ಏಜೆನ್ಸಿ ಮೂಲಕ ಕೈ ಹಿಡಿದ ಈ ಇಬ್ಬರ ಬಳಿಕ ಇದೀಗ, ಕಾಂಗ್ರೆಸ್ ಪಾಲಿಗೆ ಕರ್ನಾಟಕ ಮೂಲಕ ಶ್ರೀವತ್ಸ ಹಾಗೂ ವೈಭವ್ ವಾಲಿಯಾ ಎನ್ನುವ ಇಬ್ಬರು ಕಾರಣವಂತೆ. ರಾಹುಲ್ ಗಾಂಧಿ ಅವರ ಸೋಷಿಯಲ್ ಮೀಡಿಯಾದಲ್ಲಿ ಏನಾದರೂ, ಸರಿಯಾಗಿ ಬಂದರೆ ಈ ಇಬ್ಬರ ಪಾತ್ರವೇ ಇರುತ್ತದೆಯಂತೆ. ದೆಹಲಿಯ ವಾರ್ ರೂಂನಲ್ಲಿರುವ ಈ ಇಬ್ಬರ ನೀಡುವ ಸಲಹೆಗಳನ್ನು ಪಕ್ಷದ ಹಿರಿಯ ನಾಯಕರು ಸ್ವೀಕರಿಸಿದಾಗಲೆಲ್ಲ, ಪಕ್ಷಕ್ಕೆ ಲಾಭವೇ ಆಗಿದೆಯಂತೆ!

ಏಕಾಂಗಿ ವೀರ!

ಕೇಂದ್ರಾಡಳಿತ ಪ್ರದೇಶವಾಗಿರುವ ದಮಾನ್ ದಿಯೂನಲ್ಲಿರೋದೇ ಒಂದು ಲೋಕಸಭಾ ಕ್ಷೇತ್ರ. ಸುಮಾರು 87 ಸಾವಿರ ಮತದಾರರಿರುವ ಈ ಕೇಂದ್ರಾಡಳಿತ ಪ್ರದೇಶದಲ್ಲಿ ನಾಲ್ಕು ಬಾರಿ ಬಿಜೆಪಿಯ ಲಾಲುಬಾಯಿ ಪಾಟೀಲ್ ಗೆಲುವು ಸಾಧಿಸಿಕೊಂಡು ಬಂದಿದ್ದರು. ಆದರೆ ಈ ಬಾರಿ ಇಲ್ಲಿ ಬಿಜೆಪಿಗೆ ಸೋಲಾಗಿದ್ದು, ಉಮೇಶ್ ಪಟೇಲ್ ಪಕ್ಷೇತರವಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದಾರೆ. ಬಿಜೆಪಿಯ ವಿರುದ್ಧ ಹೋರಾಡಿಕೊಂಡು ಬಂದಿರುವ ಉಮೇಶ್ ಕಳೆದ ಲೋಕಸಭಾ ಚುನಾವಣೆಯಲ್ಲಿಯೂ ಸ್ಪರ್ಧಿಸಿ 19938 ಮತಗಳನ್ನು ಪಡೆದುಕೊಂಡಿದ್ದರು. ಈ ಬಾರಿ ಗುಜರಾತ್‌ನೊಂದಿಗೆ ದಮಾನ್ ಅನ್ನು ಸೇರಿಸುವ ಪ್ರಸ್ತಾವನೆ ವಿರುದ್ಧ ಹೋರಾಡಿಕೊಂಡು ಬಂದಿದ್ದ ಉಮೇಶ್, 42,523 ಮತಗಳನ್ನು ಪಡೆಯುವ ಮೂಲಕ ಗೆಲುವು ಸಾಧಿಸಿದ್ದಾರಂತೆ. ಈ ಕೇಂದ್ರಾಡಳಿತ ಪ್ರದೇಶದಲ್ಲಿ ಏಕೈಕ ಸಂಸದ ಸ್ಥಾನವಿರುವುದರಿಂದ ಇಡೀ ಕೇಂದ್ರಾಡಳಿತ ಪ್ರದೇಶದ ಏಕಾಂಗಿ ವೀರ ಎನ್ನುವ ಹೆಸರನ್ನು ಪಡೆದರೂ ಅಚ್ಚರಿಯಿಲ್ಲ



ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:177

ಸಮಾಚಾರ ಸಣ್ಣದಲ್ಲ

ಶ್ರೀನಗರ ಯೋಗ ದಿನ ಪ್ರಧಾನಿ ಮೋದಿ ಭಾಗಿ

ದೆಹಲಿ: ಕಾಶ್ಮೀರದ ಶ್ರೀನಗರದಲ್ಲಿ ಜೂನ್ 21ರಂದು ನಡೆಯಲಿರುವ 10ನೇ ಅಂತಾರಾಷ್ಟ್ರೀಯ ಯೋಗ ದಿನ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗಿಯಾಗುವರು.



ಅಂತಾರಾಷ್ಟ್ರೀಯ ಯೋಗ ದಿನ ಆಚರಣೆ ಬಗ್ಗೆ ದೆಹಲಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಕೇಂದ್ರ ಆಯುಷ್ ಸಚಿವ ಪ್ರತಾಪ್ ರಾವ್ ಜಾಧವ್, ಈ ವರ್ಷದ ಯೋಗ ದಿನದ 'ಥೀಮ್' ವೈಯಕ್ತಿಕ ಮತ್ತು ಸಮಾಜ ಹಿತಕ್ಕಾಗಿ ಯೋಗ ಎಂದಾಗಿದೆ. ಮನುಷ್ಯ ಮತ್ತು ಸಮಾಜದ ಯೋಗಕ್ಷೇಮವನ್ನು ಬೆಳೆಸುವಲ್ಲಿ ಯೋಗದ ಪಾತ್ರವನ್ನು ಈ ವರ್ಷದ ಯೋಗ ಪ್ರದರ್ಶನ ಎತ್ತಿ ತೋರಿಸುತ್ತದೆ ಎಂದರು. ಯೋಗ ದಿನ ಶ್ರೀನಗರದ ಶೇರ್-ಎ-ಕಾಶ್ಮೀರ್ ಇಂಟರ್‌ನ್ಯಾಷನಲ್ ಕನ್ವೆನ್ಷನ್ ಸೆಂಟರ್‌ನಲ್ಲಿ ಜರುಗಲಿದೆ. ಯೋಗ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಕಾರಣವಾಗುತ್ತದೆ. ಸಾಮಾಜಿಕ ಸಾಮರಸ್ಯ ಹೆಚ್ಚಿಸುತ್ತದೆ. ಲಕ್ಷಾಂತರ ಜನರು ಯೋಗ ದಿನದಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದು, ಇದು ಸಮುದಾಯಗಳ ಮೇಲಿನ ಯೋಗದ ಪ್ರಭಾವದ ತೀವ್ರತೆಯನ್ನು ಬಿಂಬಿಸುತ್ತದೆ ಎಂದು ವಿವರಿಸಿದರು. ಬ್ರೈಲ್ ಲಿಪಿಯಲ್ಲಿ 'ಸಾಮಾನ್ಯ ಯೋಗ' ಶಿಷ್ಟಾಚಾರ ಪುಸ್ತಕವನ್ನು ಸಚಿವ ಜಾಧವ್ ಬಿಡುಗಡೆ ಮಾಡಿದರು. ದೃಷ್ಟಿ ಸಮಸ್ಯೆ ಇದ್ದವರಿಗೆ ಯೋಗ ಕಲಿಯಲು ಮತ್ತು ಅಭ್ಯಾಸ ಮಾಡಲು ಅನುಕೂಲವಾಗಲಿದೆ.

ಮೋದಿ ಮನ್ ಕೀ ಬಾತ್ 30ರಿಂದ ಮತ್ತೆ ಶುರು

ದೆಹಲಿ: ನರೇಂದ್ರ ಮೋದಿ ಅವರು 3ನೇ ಬಾರಿ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮರಳಿ ಮನ್ ಕಿ ಬಾತ್‌ನತ್ತ ಗಮನ ಹರಿಸಿದ್ದಾರೆ. ಜೂ.30ಕ್ಕೆ 3ನೇ ಅವಧಿಯ ಮೊದಲ ಮನ್ ಕೀ ಬಾತ್ ಪ್ರಸಾರವಾಗಲಿದೆ. ಲೋಕಸಭಾ ಚುನಾವಣೆಗೂ ಮುನ್ನ ಫೆ.25ಕ್ಕೆ 110ನೇ ಮನ್ ಕೀ ಬಾತ್ ಪ್ರಸಾರವಾಗಿತ್ತು. 'ಮನ್ ಕೀ ಬಾತ್' ಸಂದೇಶ ರೂಪಿಸಲು ಉತ್ತಮ ವಿಚಾರಗಳನ್ನು ಕಳುಹಿಸಿಕೊಡಿ ಎಂದು ಮೋದಿ ದೇಶದ ಜನರಲ್ಲಿ ಮನವಿ ಮಾಡಿದ್ದಾರೆ. 'ಮೈಜಿಒವಿ ಫೋರಂ, ನಮೋ ಆಪ್ ಅಥವಾ 180011788 ಸಂಖ್ಯೆಗೆ ಸಂದೇಶವನ್ನು ರೆಕಾರ್ಡ್ ಮಾಡಿ ಕಳುಹಿಸುವಂತೆ ತಿಳಿಸಿದ್ದಾರೆ. 2014 ಅಕ್ಟೋಬರ್‌ನಲ್ಲಿ ಆರಂಭವಾದ ಮನ್ ಕೀ ಬಾತ್, ಸಮಾಜದ ವಿವಿಧ ಸ್ತರದ, ವರ್ಗಗಳ ಜನರ ಧನಾತ್ಮಕ ಸಂಗತಿಗಳನ್ನು ದೇಶದ ಜನರ ಜತೆ ಹಂಚಿಕೊಳ್ಳುವ ಪ್ರಯೋಗವಾಗಿದೆ.

ಹಲ್ಲೆ ಚರ್ಚೆಗೆ ಇಂಡಿಯ ಸಮಯ ಕೋರಿದ ಸ್ವಾತಿ

ದೆಹಲಿ: ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ನಿವಾಸದಲ್ಲಿ ತಮ್ಮ ಮೇಲೆ ನಡೆದ ಹಲ್ಲೆ ಕುರಿತು ಚರ್ಚೆ ನಡೆಸಲು ಸಮಯಾವಕಾಶ ನೀಡಿ ಎಂದು ಆಮ್ ಆದ್ಮಿ

ಪಕ್ಷದ(ಎಎಪಿ) ರಾಜ್ಯಸಭೆ ಸದಸ್ಯೆ ಸ್ವಾತಿ ಮಲಿವಾಲ್, 'ಇಂಡಿಯ' ಒಕ್ಕೂಟದ ನಾಯಕರಿಗೆ ಮಂಗಳವಾರ ಪತ್ರ ಬರೆದಿದ್ದಾರೆ. '18 ವರ್ಷದಿಂದ ಸಾರ್ವಜನಿಕ ವಲಯದಲ್ಲಿದ್ದೇನೆ. 9 ವರ್ಷ ಮಹಿಳಾ ಆಯೋಗದಲ್ಲಿ 1.7 ಲಕ್ಷ ಪ್ರಕರಣ ಆಲಿಸಿದ್ದೇನೆ. ಯಾರಿಗೂ ಬಗ್ಗದೇ ಮಹಿಳಾ ಆಯೋಗ ಎತ್ತರದಲ್ಲಿರುವಂತೆ ಮಾಡಿದ್ದೆ. ಆದರೆ, ನನ್ನ ಮೇಲೆ ಸಿಎಂ ಮನೆಯಲ್ಲೇ ಹಲ್ಲೆಯಾಯಿತು. ಘಟನೆ ಖಂಡಿಸಿದ್ದಕ್ಕೆ ಸ್ವಪಕ್ಷೀಯರಿಂದಲೇ ಅವಮಾನ. ಪಕ್ಷದಿಂದ ಬೆಂಬಲ ನಿರೀಕ್ಷಿಸಿದ್ದೆ. ಆದರೆ ಚಾರಿತ್ರ್ಯ ಹರಣ ಮಾಡಿದ್ದಾರೆ. ತಿಂಗಳಿಂದ ನ್ಯಾಯಕ್ಕಾಗಿ ಹೋರಾಡುತ್ತಾ ನೋವು-ಒಂಟಿತನ ಅನುಭವಿಸಿದ್ದೇನೆ' ಎಂದು ಸ್ವಾತಿ ಮಲಿವಾಲ್, ರಾಹುಲ್ ಗಾಂಧಿ, ಶರತ್ ಪವಾರ್‌ಗೆ ಪತ್ರ ಬರೆದಿದ್ದಾರೆ.

ಜಲ ಕಲುಷಿತ: ಕೇರಳ 300 ಮಂದಿ ಅಸ್ವಸ್ಥ!

ಕೊಚ್ಚಿ: ಕೇರಳದ ಕೊಚ್ಚಿ ನಗರದ ಕಾಕನಾಡ್ ಪ್ರದೇಶದಲ್ಲಿನ 15 ಅಂತಸ್ತುಗಳ ಅಪಾರ್ಟ್‌ಮೆಂಟ್‌ನಲ್ಲಿ ಕಲುಷಿತ ನೀರಿನ ಕಾರಣ 25 ಪುಟ್ಟ ಮಕ್ಕಳೂ ಸೇರಿದಂತೆ 300ಕ್ಕೂ ಅಧಿಕ ನಿವಾಸಿಗಳು ಅಸ್ವಸ್ಥಗೊಂಡಿದ್ದಾರೆ. ಡಿಎಲ್‌ಎಫ್ ನ್ಯೂ ಟೌನ್‌ನ 338 ನಿವಾಸಿಗಳು ವಾಂತಿ ಬೇಧಿ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಅಸ್ವಸ್ಥಗೊಂಡವರಲ್ಲಿ 25 ಮಕ್ಕಳು 5 ವರ್ಷದೊಳಗಿನವರು. 9 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಮೇ ಕೊನೇ ವಾರದಿಂದ ಅಪಾರ್ಟ್‌ಮೆಂಟ್ ನಿವಾಸಿಗಳಲ್ಲಿ ಆರೋಗ್ಯ ಸಮಸ್ಯೆ ಕಾಣಿಸಿಕೊಳ್ಳುತ್ತಿತ್ತು. ಕುಡಿಯುವ ನೀರಿನಲ್ಲಿ ಅಧಿಕ ಬ್ಯಾಕ್ಟೀರಿಯಾ ಇರುವುದು ಖಚಿತವಾಗಿದೆ. ಆದರೆ, ಬಾವಿ, ಕೊಳವೆಬಾವಿ, ಕೇರಳ ನೀರು ಸರಬರಾಜು ಇಲಾಖೆಯ ನೀರನ್ನು ಒಂದೇ ಟ್ಯಾಂಕ್‌ನಲ್ಲಿ ಶೇಖರಿಸಿರುವ ಕಾರಣ ಯಾವ ನೀರಿನಲ್ಲಿ ಬ್ಯಾಕ್ಟೀರಿಯಾ ಬಂದಿದೆ ಎಂದು ಪತ್ತೆ ಹಚ್ಚುವುದೇ ಕಷ್ಟವಾಗಿದೆ ಎಂದು ಸ್ಥಳಕ್ಕೆ ಭೇಟಿ ನೀಡಿದ ಆರೋಗ್ಯ ಅಧಿಕಾರಿಗಳು ಹೇಳಿದ್ದಾರೆ.

{ವೈಎಸ್ ಜಗನ್ ಮೋಹನ್ ರೆಡ್ಡಿ} ಆಂಧ್ರ ಮಾಜಿ ಸಿಎಂ

ಚುನಾವಣೆಗಳಲ್ಲಿ ಇವಿಎಂ ಬದಲು ಬ್ಯಾಲೆಟ್ ಪೇಪರ್ ಬಳಸುವುದನ್ನು ಮರಳಿ ಆರಂಭಿಸಬೇಕಿದೆ. ಅಭಿವೃದ್ಧಿ ಹೊಂದಿದ ಪ್ರಜಾಪ್ರಭುತ್ವದ ದೇಶಗಳೇ ಮತಪತ್ರವನ್ನು ಚುನಾವಣೆಗಳಲ್ಲಿ ಬಳಸುತ್ತಿವೆ. ಹಾಗಾಗಿ ಭಾರತದಲ್ಲಿಯೂ ಪ್ರಜಾತಂತ್ರ ವ್ಯವಸ್ಥೆಯ ನೈಜ ಆಶಯ ಎತ್ತಿಹಿಡಿಯಲು ಮತಪತ್ರಗಳ ಬಳಕೆ ಮಾಡಬೇಕಿದೆ. ಅನುಮಾನಕ್ಕೆ ಆಸ್ಪದವಿಲ್ಲದ ಚುನಾವಣೆಗೆ ಮತಪತ್ರವೇ ಪರಿಹಾರ.

ವಾರಾಣಸಿ ಜನರ ನಂಬಿಕೆಯೇ ಆಸ್ತಿ

ಸ್ವಕ್ಷೇತ್ರದ ಮತದಾರರೆದುರು ಪ್ರಧಾನಿ ನರೇಂದ್ರ ಮೋದಿ ಭಾವುಕ

ವಾರಾಣಸಿ: ವಾರಾಣಸಿ ಜನರ ನಂಬಿಕೆಯೇ ನನ್ನ ದೊಡ್ಡ ಆಸ್ತಿ. ನಾನು ಗಂಗಾ ಮಾಯಿಯ ವರಪುತ್ರ. ಗಂಗಾ ಮಾತೆಯ ಆಶೀರ್ವಾದ, ಕಾಶಿಯ ಪ್ರೀತಿ ಇರುವುದರಿಂದಲೇ ನಾನು ಮತ್ತೊಮ್ಮೆ ಪ್ರಧಾನಿ ಹುದ್ದೆಗೇರಲು ಸಾಧ್ಯವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾವೋದ್ವೇಗದಿಂದ ನುಡಿದರು.

- ಕಿಸಾನ್ ಸಮ್ಮಾನ್ 17ನೇ ಕಂತು 20 ಸಾವಿರ ಕೋಟಿ ರು. ಬಿಡುಗಡೆ
- ಆಯ್ದ ಕೆಲವು ರೈತರ ಜತೆ ಸಂವಾದ-ಬೆಳೆಗಳ ಪರಿಶೀಲನೆ-ಮಾಹಿತಿ
- ಕಾಶಿ ವಿಶ್ವನಾಥನ ದರ್ಶನ ಪಡೆದು ಸ್ವತಃ ಪೂಜೆ ಸಲ್ಲಿಸಿ ಪ್ರಾರ್ಥನೆ
- ಸಂಜೆ ಗಂಗಾನದಿ ತಟದಲ್ಲಿ ಗಂಗಾರತಿಯಲ್ಲಿ ಭಾಗಿ, ಮಾತೆಗೆ ಪೂಜೆ

ಉತ್ತರಪ್ರದೇಶದ ಪ್ರಸಿದ್ಧ ಪುಣ್ಯಕ್ಷೇತ್ರ, ತಾವು ಪ್ರತಿನಿಧಿಸುವ ಲೋಕಸಭಾ ಕ್ಷೇತ್ರ ವಾರಾಣಸಿಗೆ 3ನೇ ಬಾರಿ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ಮಂಗಳವಾರ ಭೇಟಿ ನೀಡಿದ ನರೇಂದ್ರ ಮೋದಿ, ಇಡೀ ದಿನ ಪುಣ್ಯಕ್ಷೇತ್ರವನ್ನು ಸುತ್ತಾಡಿದರು. ಮೊದಲಿಗೆ ಕಾಶಿ ವಿಶ್ವನಾಥನ ದರ್ಶನ ಮಾಡಿದ ಮೋದಿ, ಸ್ವತಃ ಪೂಜೆ ಮಾಡಿ ಪ್ರಾರ್ಥನೆ ಸಲ್ಲಿಸಿದರು. ಬಳಿಕ ರೈತ ಸಮ್ಮಾನ-ಸಂವಾದ ಕಾರ್ಯಕ್ರಮದಲ್ಲಿ ಭಾಗಿಯಾದರು.

ಪ್ರಧಾನಿಯಾಗಿ ಮೂರನೇ ಬಾರಿಗೆ ಅಧಿಕಾರ ವಹಿಸಿಕೊಂಡ ಬಳಿಕ ಮೊದಲ ಬಾರಿಗೆ ಸ್ವಕ್ಷೇತ್ರಕ್ಕೆ ಆಗಮಿಸಿದ ಮೋದಿ, ರೈತ ಸಮಾವೇಶದಲ್ಲಿ ಪಾಲ್ಗೊಂಡು ಕಿಸಾನ್ ಸಮ್ಮಾನ್ ನಿಧಿಯ ಹಣದ 17ನೇ ಕಂತನ್ನು ಮಂಗಳವಾರ ಬಿಡುಗಡೆ ಮಾಡಿದರು. ಇಲ್ಲಿಯವರೆಗೆ ಒಟ್ಟು 3.24 ಲಕ್ಷ ಕೋಟಿ ರು.ಗಳನ್ನು ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಬಿಡುಗಡೆ ಮಾಡಲಾಗಿದೆ. ಈ ಯೋಜನೆಯಡಿ 5 ಎಕರೆಗೂ ಕಡಿಮೆ ಜಮೀನು ಹೊಂದಿರುವ ಸಣ್ಣ ರೈತರಿಗೆ ವಾರ್ಷಿಕ 6 ಸಾವಿರ ರು. ಪ್ರತಿವರ್ಷ ಸಂದಾಯವಾಗುತ್ತಿದೆ.

9.26 ಕೋಟಿ ರೈತರಿಗೆ ಖಾತೆಗೆ 20 ಸಾವಿರ ಕೋಟಿ ಹಣವನ್ನು ಪಿಎಂ ಕಿಸಾನ್ ಸಮ್ಮಾನ್ ಯೋಜನೆಯಡಿಯಲ್ಲಿ ಪ್ರಧಾನಿ ಮೋದಿ ವಾರಾಣಸಿಯಲ್ಲಿ ಬಿಡುಗಡೆ ಮಾಡಿದ್ದಾರೆ. ಜತೆಗೆ ಸ್ವಸಹಾಯ ಸಂಘದ 30 ಸಾವಿರಕ್ಕೂ ಅಧಿಕ ಮಹಿಳೆಯರಿಗೆ ಕೃಷಿ ಸಖಿ ಪ್ರಮಾಣಪತ್ರ ವಿತರಿಸಿದ್ದಾರೆ.

ನಂತರ ಕಿಸಾನ್ ಸಮ್ಮಾನ್-ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ ಮೋದಿ, 'ಈ ಬಾರಿ ಲೋಕಸಭಾ ಚುನಾವಣೆ ಹೊಸ ಇತಿಹಾಸ ಸೃಷ್ಟಿಸಿದೆ. ಒಂದು ಸರಕಾರ ಸತತವಾಗಿ ಮೂರನೇ ಬಾರಿಗೆ ಅಧಿಕಾರಕ್ಕೆ ಬಂದಿರುವುದು ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿನ ಬಹು ಅಪರೂಪದ ಘಟನೆ. ನೀವು ಈ ಸೇವಕನಿಗೆ ಅವಕಾಶ ನೀಡಿದ್ದೀರಿ. ನಿಮಗೆ ಆಭಾರಿ' ಎಂದು ಸಭೆಗೆ ನಮಿಸಿದರು.

3ನೇ ಬಾರಿಗೆ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಇದೇ ಮೊದಲ ಬಾರಿಗೆ ಸ್ವಕ್ಷೇತ್ರ ವಾರಾಣಸಿಗೆ ಆಗಮಿಸಿದ ನರೇಂದ್ರ ಮೋದಿ ಅವರನ್ನು ಕಿಸಾನ್ ಸಮ್ಮಾನ್ ಸಮಾರಂಭದಲ್ಲಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಕಿಸಾನ್ ಪ್ರತಿಮೆ ಸ್ಮರಣಿಕೆ ನೀಡಿ ಸನ್ಮಾನಿಸಿದರು. ರಾಜ್ಯಪಾಲೆ ಆನಂದಿ ಬೆನ್, ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಮತ್ತಿತರರಿದ್ದರು.

ಭಾರತ ಪ್ರಜಾಪ್ರಭುತ್ವಕ್ಕೇ ಮಾದರಿ

18ನೇ ಲೋಕಸಭೆಯ ಈ ಚುನಾವಣೆ ಭಾರತದ ಪ್ರಜಾಪ್ರಭುತ್ವದ ಆಳ ಅಗಲವನ್ನು ಪ್ರಸ್ತುತಪಡಿಸಿದೆ. 64 ಕೋಟಿ ಜನರು ಈ ಬಾರಿ ಮತದಾನ ಮಾಡಿದ್ದಾರೆ. ಜಿ-7 ಶೃಂಗಸಭೆಯ ಸದಸ್ಯರಾಗಿರುವ ಎಲ್ಲಾ ಏಳೂ ರಾಷ್ಟ್ರಗಳಲ್ಲಿನ ಮತದಾರರನ್ನೆಲ್ಲಾ ಒಟ್ಟುಗೂಡಿಸಿದರೂ ಭಾರತದ ಮತದಾರರ ಸಂಖ್ಯೆ ಒಂದೂವರೆ ಪಟ್ಟು ಅಧಿಕವಾಗಿದೆ. 31 ಕೋಟಿ ಮಹಿಳೆಯರು ಈ ಬಾರಿ ಮತ ಹಕ್ಕು ಚಲಾಯಿಸಿದ್ದಾರೆ. ಇದು ಇಡೀ ವಿಶ್ವದಲ್ಲಿನ ಮಹಿಳಾ ಮತದಾರರ ಸಂಖ್ಯೆಗಿಂತಲೂ ಅಧಿಕವಾಗಿದೆ ಎಂದು ಭಾರತದ ಚುನಾವಣಾ ಪ್ರಕ್ರಿಯೆ ಮತ್ತು ಅದರ ವೈಶಿಷ್ಟ್ಯವನ್ನು ಪ್ರಧಾನಿ ಮೋದಿ ಕೊಂಡಾಡಿದರು. ಇಡೀ ವಿಶ್ವದಲ್ಲೇ ಭಾರತ ಪ್ರಜಾಪ್ರಭುತ್ವಕ್ಕೆ ಮಾದರಿ ಎಂದು ಬಣ್ಣಿಸಿದರು.

ಗಂಗಾ ಮಾಯಿ ವರಪುತ್ರ

ಗಂಗಾ ಮಾತೆಯ ವರಪುತ್ರ ನಾನು ಎಂಬ ಭಾವನೆ ಬಲವಾಗಿದೆ. ಕಾಶಿಯ ವಿಶ್ವನಾಥ, ಗಂಗಾ ಮಾತೆಯ ಆಶೀರ್ವಾದದಿಂದ ಮತ್ತೆ ದೇಶದ 140 ಕೋಟಿ ಜನರ ಪ್ರಧಾನ ಸೇವಕನಾಗಿ ಆರಿಸಿ ಬಂದಿದ್ದೇನೆ. ಬನಾರಸ್‌ನ ಎಲ್ಲಾ ಮತದಾರರಿಗೂ ಧನ್ಯವಾದ. ಕಾಶಿಯ ಜನರು ಸಂಸದನನ್ನಲ್ಲ ಒಬ್ಬ ಪ್ರಧಾನಿಯನ್ನು ಆರಿಸಿ ಕಳುಹಿಸಿದ್ದಾರೆ.

ನೀಟ್ ಅಕ್ರಮ; ಎನ್‌ಟಿಎ, ಕೇಂದ್ರಕ್ಕೆ ಸುಪ್ರೀಂ ನೋಟಿಸ್

'ನೀಟ್' ಪ್ರಕ್ರಿಯೆ ಶೇ.0.0001 ಲೋಪವಿದ್ದರೂ ಸಹಿಸಲಾಗದು: ಸುಪ್ರೀಂ ಕೋರ್ಟ್ ಸೂಚನೆ

'ನೀಟ್-2024' ಪರೀಕ್ಷೆ ರದ್ದುಗೊಳಿಸಿ ಮರು ಪರೀಕ್ಷೆ ನಡೆಸಿ, 'ನೀಟ್' ಕೋಚಿಂಗ್ ಕೇಂದ್ರಗಳ ಬಂದ್ ಮಾಡಿಸಿ ಎಂದು ಆಗ್ರಹಿಸಿ ದೇಶಾದ್ಯಂತ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದಾರೆ.

ದೆಹಲಿ: ವೈದ್ಯಕೀಯ ಶಿಕ್ಷಣ ಪ್ರವೇಶದ 'ನೀಟ್-ಯುಜಿ ಪರೀಕ್ಷೆ'ಯಲ್ಲಿ ಅಕ್ರಮ ನಡೆದಿದೆ. ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂಬ ಆರೋಪಗಳ ಸಂಬಂಧ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ನಡೆಸಿರುವ ಸುಪ್ರೀಂ ಕೋರ್ಟ್, ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ಹಾಗೂ ಕೇಂದ್ರ ಸರಕಾರಕ್ಕೆ ಮಂಗಳವಾರ ನೋಟಿಸ್ ಜಾರಿಗೊಳಿಸಿದೆ.

ನೀಟ್ ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿದ್ದು, 2024ರ ಪರೀಕ್ಷೆ ರದ್ದುಗೊಳಿಸಿ ಹೊಸದಾಗಿ ಪರೀಕ್ಷೆ ನಡೆಸುವಂತೆ 'ಎನ್‌ಟಿಎ' ನಿರ್ದೇಶನ ನೀಡುವಂತೆ ಕೋರಿ 20 ವಿದ್ಯಾರ್ಥಿಗಳು ಸುಪ್ರೀಂಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾ.ವಿಕ್ರಮ ನಾಥ್ ಮತ್ತು ನ್ಯಾ. ಎಸ್.ವಿ.ಎನ್.ಭಟ್ಟಿ ಅವರ ಪೀಠ , 'ನೀಟ್ ಪರೀಕ್ಷಾ ಪ್ರಕ್ರಿಯೆಯಲ್ಲಿ ಶೇ.0.0001ರಷ್ಟು ಲೋಪವಾಗಿದ್ದರೂ ಅದನ್ನು ಕೂಲಂಕಷ ಪರಿಶೀಲಿಸಬೇಕು. ಲೋಪವನ್ನು ಸರಿಪಡಿಸಬೇಕು' ಎಂದು ಆದೇಶಿಸಿದೆ.

'ನೀಟ್' ಪರೀಕ್ಷೆ ಉತ್ತರಿಸುವುದಕ್ಕೆ ಅದೆಷ್ಟು ಕಠಿಣ ತಯಾರಿ ನಡೆಸಬೇಕು ಎಂಬುದರ ಅರಿವಿದೆ. ಯಾರೋ ಒಬ್ಬ ಅಕ್ರಮ ಮಾರ್ಗದಲ್ಲಿ ಪರೀಕ್ಷೆ ಬರೆದು ಹೆಚ್ಚು ಅಂಕಗಳಿಸಿ ವೈದ್ಯನಾದರೆ ರೋಗಿಗಳಿಗೆ ಎಂತಹ ಸ್ಥಿತಿ ಬರಬಹುದು ಕಲ್ಪಿಸಿಕೊಳ್ಳಿ. ಆತ ಸಮಾಜಕ್ಕೆ ಮಾರಕವಾಗಬಹುದು ಎಂದು ಕಳವಳ ವ್ಯಕ್ತಪಡಿಸಿದ ನ್ಯಾಯಪೀಠ, ಈ ವಿಚಾರದಲ್ಲಿ ನ್ಯಾಯಾಲಯ ಸಕಾಲಿಕ ಕ್ರಮ ನಿರೀಕ್ಷಿಸುತ್ತದೆ ಎಂದು ಹೇಳಿದೆ.

ಮುಂದಿನ ವಿಚಾರಣೆ ಜು.8ಕ್ಕೆ ನಿಗದಿಪಡಿಸಿದ ಪೀಠ, ಪರೀಕ್ಷೆ ರದ್ದು ಮತ್ತು ಸಿಬಿಐ ತನಿಖೆ ಕೋರಿ ಸಲ್ಲಿಸಲಾಗಿರುವ ಅರ್ಜಿಗಳನ್ನೂ ಅಂದು ವಿಚಾರಣೆ ನಡೆಸುವುದಾಗಿ ಹೇಳಿದೆ.

ಈವರೆಗೆ: ನೀಟ್ 2024ರ ಸ್ನಾತಕಪೂರ್ವ (ಯುಜಿ) ಪರೀಕ್ಷೆಯಲ್ಲಿ 1563 ವಿದ್ಯಾರ್ಥಿಗಳಿಗೆ ಕೃಪಾಂಕ ನೀಡಿ ಅವರೆಲ್ಲಾ ಮೊದಲ ರ‍್ಯಾಂಕ್ ಬರುವಂತೆ ಆಗಿದ್ದರಿಂದ ವಿವಾದವಾಗಿದೆ. ಪ್ರತಿಭಟನೆ-ವಿರೋಧ ವ್ಯಕ್ತವಾದ ಬಳಿಕ ಎನ್‌ಟಿಎ 1563 ವಿದ್ಯಾರ್ಥಿಗಳ ಕೃಪಾಂಕ ರದ್ದುಗೊಳಿಸಿ ಜೂ.23ರಂದು ಮರು ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟಿದೆ.

ನೀಟ್: ಮೋದಿ ಮೌನ ಪ್ರಶ್ನಿಸಿದ ರಾಹುಲ್

ದೆಹಲಿ: ನೀಟ್ ಯುಜಿ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಪ್ರಧಾನಿ ಮೋದಿ ಅವರನ್ನು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಮಂಗಳವಾರ ಒತ್ತಾಯಿಸಿದ್ದಾರೆ. 'ನೀಟ್' ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣದಿಂದಾಗಿ 24 ಲಕ್ಷ ವಿದ್ಯಾರ್ಥಿಗಳ ಜೀವನ ಅಪಾಯಕ್ಕೆ ಸಿಲುಕಿದೆ. ಆದರೆ, ಪ್ರಧಾನಿ ಮೋದಿ ಮೌನವಾಗಿದ್ದಾರೆ. ಬಿಜೆಪಿ ಆಡಳಿತದ ರಾಜ್ಯಗಳು ಪ್ರಶ್ನೆಪತ್ರಿಕೆ ಸೋರಿಕೆ ಕೇಂದ್ರಗಳಾಗಿವೆ. ಬಿಹಾರ, ಗುಜರಾತ್ ಮತ್ತು ಹರಿಯಾಣದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿದವರ ಬಂಧನವಾಗಿದೆ. ಇದು ಯೋಜಿತ ಭ್ರಷ್ಟಾಚಾರಕ್ಕೆ ಸಾಕ್ಷಿ ಎಂದು ರಾಹುಲ್ ಆರೋಪಿಸಿದ್ದಾರೆ. ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ವಿರುದ್ಧ ಕಠಿಣ ಕಾನೂನು ಜಾರಿಗೊಳಿಸಿ ಯುವಕರ ಭವಿಷ್ಯ ಸುರಕ್ಷಿತವಾಗಿಡುವ ಗ್ಯಾರಂಟಿಯನ್ನು ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಘೋಷಿಸಿದ್ದೆವು. ಈಗ ಪ್ರತಿಪಕ್ಷ ಸ್ಥಾನದಲ್ಲಿ ನಿಂತು ಸಂಸತ್‌ವರೆಗೆ ಯುವಜನರ ಪರ ಧ್ವನಿ ಎತ್ತುತ್ತೇವೆ. ಪ್ರಶ್ನೆಪತ್ರಿಕೆ ಸೋರಿಕೆ ವಿರುದ್ಧ ಕಠಿಣ ಕಾನೂನು ಕ್ರಮಕ್ಕೆ ಆಗ್ರಹಿಸುತ್ತೇವೆ ಎಂದಿದ್ದಾರೆ.

ಪ್ರಕೃತಿ ವಿಕೋಪಕ್ಕೆ ತತ್ತರಿಸಿದ ಅಸ್ಸಾಂ, ಸಿಕ್ಕಿಂ!

ಅಪಾಯಮಟ್ಟ ಮೀರಿದ ಕೊಪಿಲಿ ನದಿ | ಸಾವಿರಾರು ಪ್ರವಾಸಿಗರ ರಕ್ಷಣೆ ಸವಾಲು

ದೆಹಲಿ: ಉತ್ತರ ಸಿಕ್ಕಿಂ ಹಾಗೂ ಅಸ್ಸಾಂನ ಹಲವು ಪ್ರದೇಶ ಪ್ರಕೃತಿ ವಿಕೋಪಕ್ಕೆ ತತ್ತರಿಸಿವೆ. ಧಾರಾಕಾರ ಮಳೆಯಿಂದ ಉತ್ತರ ಸಿಕ್ಕಿಂನಲ್ಲಿ ಭೂಕುಸಿತವಾಗಿದ್ದರೆ, ಅಸ್ಸಾಂನಲ್ಲಿ ಬ್ರಹ್ಮಪುತ್ರಳ ಉಪನದಿ ಕೊಪಿಲಿ ಅಪಾಯಮಟ್ಟ ಮೀರಿ ಹರಿಯುತ್ತಿದೆ. ಪ್ರವಾಸಕ್ಕೆ ಬಂದ ಸಾವಿರಾರು ಜನರು ರಸ್ತೆ ಸಂಪರ್ಕ ಕಡಿತವಾಗಿದ್ದರಿಂದ ಕಷ್ಟಕ್ಕೆ ಸಿಲುಕಿದ್ದಾರೆ. ಪ್ರವಾಸಿಗರ ರಕ್ಷಣೆ ಆಡಳಿತಕ್ಕೆ ದೊಡ್ಡ ಸವಾಲಾಗಿದೆ.

ಉತ್ತರ ಸಿಕ್ಕಿಂನ ಹಲವೆಡೆ ಭೂಕುಸಿತವಾಗಿದ್ದು, ದಕ್ಷಿಣ, ಉತ್ತರ ಸಿಕ್ಕಿಂನಲ್ಲಿ 9 ಮಂದಿ ಸಾವನ್ನಪ್ಪಿದ್ದಾರೆ. ತೀಸ್ತಾ ನದಿ ಪ್ರವಾಹ ಕಾರಣ ಸೇತುವೆ ಕೊಚ್ಚಿಹೋಗಿವೆ. ರಸ್ತೆ-ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಪ್ರವಾಸಿಗರ ಸಂಖ್ಯೆ ಹೆಚ್ಚಾಗಿರುವುದರಿಂದ ರಕ್ಷಣಾ ಕಾರ್ಯ ಸವಾಲಾಗಿದೆ. ಪ್ರತಿಕೂಲ ವಾತಾವರಣ ಕಾರಣ ಪ್ರವಾಸಿಗರನ್ನು ಏರ್ ಲಿಫ್ಟ್ ಮಾಡುವ ಯೋಜನೆ ಸದ್ಯ ಕೈಬಿಡಲಾಗಿದೆ. ಭೂಕುಸಿತವಾದ ಲಾಚುಂಗ್, ಚೌಂಗ್‌ಥಂಗ್ ಪ್ರದೇಶಗಳಲ್ಲಿದ್ದ ವಿದೇಶಿ ಪ್ರವಾಸಿಗರು ಸೇರಿ 1200 ಜನರನ್ನು ರಕ್ಷಿಸಲಾಗಿದೆ. ಸೋಮವಾರ 60, ಮಂಗಳವಾರ 150 ಪ್ರವಾಸಿಗರನ್ನು ವಿವಿಧೆಡೆಯಿಂದ ರಕ್ಷಿಸಿ ಗ್ಯಾಂಗ್ಟಕ್‌ಗೆ ಕರೆತರಲಾಗಿದೆ.

ಸಿಕ್ಕಿಂನಲ್ಲಿ ಹಲವೆಡೆ ಭೂಕುಸಿತವಾಗಿ ಸಾವಿರಾರು ಪ್ರವಾಸಿಗರು ಕಷ್ಟಕ್ಕೀಡಾಗಿದ್ದಾರೆ, ಅವರನ್ನು ರಕ್ಷಿಸುವ ಯತ್ನ ನಡೆದಿದೆ.

ಭೂಕುಸಿತವಾಗಿರುವೆಡೆ ಪ್ರವಾಸಿಗರ ರಕ್ಷಣೆಗೆ ವಾಯುಪಡೆ ಹೆಲಿಕಾಪ್ಟರ್‌ಗಳು ಸಜ್ಜಾಗಿದ್ದರೂ ಪ್ರತಿಕೂಲ ವಾತಾವರಣ ಹಿನ್ನೆಲೆ ಈ ಕಾರ್ಯಾಚರಣೆಗೆ ತಡೆಯಾಗಿದೆ. ಪ.ಬಂಗಳದ ಬಗ್ದೊಗ್ರಾ, ನಿಲ್ದಾಣದಲ್ಲಿ ಕಾಪ್ಟರ್‌ಗಳು ನಿಲುಗಡೆಯಾಗಿವೆ. ಪ್ರವಾಸಿಗರು ನಡೆಯುತ್ತಲೇ ಕೆಲವು ಪ್ರದೇಶ ದಾಟಿ ಬಳಿಕ ವಾಹನಗಳ ಮೂಲಕ ಜಿಲ್ಲಾ ಕೇಂದ್ರ ತಲುಪುವ ವ್ಯವಸ್ಥೆ ಮಾಡಲಾಗಿದೆ ಎಂದು ಸಿಕ್ಕಿಂ ಪ್ರವಾಸೋದ್ಯಮ ಸಚಿವ ತ್ಶೇರಿಂಗ ಭುಟಿಯ ತಿಳಿಸಿದ್ದಾರೆ.

ಪ್ರವಾಹದಲ್ಲಿ 1.5 ಲಕ್ಷ ಜನ

ಅಸ್ಸಾಂನ ಕೊಪಿಲಿ ನದಿ ಅಪಾಯ ಮಟ್ಟ ಮೀರಿ ಹರಿದಿದೆ. 14 ಜಿಲ್ಲೆಗಳ 1.05 ಲಕ್ಷ ಜನ ಸಂತ್ರಸ್ತರಾಗಿದ್ದಾರೆ. ಕರಿಂಗಂಜ್ ಜಿಲ್ಲೆಯಲ್ಲೇ 96 ಸಾವಿರ ಜನ ಪ್ರವಾಹಕ್ಕೆ ಸಿಲುಕಿದ್ದಾರೆ ಎಂದು ಅಸ್ಸಾಂ ವಿಪತ್ತು ನಿರ್ವಹಣಾ ಪ್ರಾಧಿಕಾರ ಮಾಹಿತಿ ನೀಡಿದೆ. ಜೂ.20ರವರೆಗೆ ಮೇಘಾಲಯ, ಅಸ್ಸಾಂ ಹಲವೆಡೆ ಭಾರಿ ಮಳೆ ಮುನ್ಸೂಚನೆ ನೀಡಲಾಗಿದೆ. ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುವ ಸಾಧ್ಯತೆ ಇದೆ ಎನ್ನಲಾಗಿದೆ. ಒಟ್ಟು 309 ಗ್ರಾಮ ಪ್ರವಾಹಕ್ಕೆ ಸಿಲುಕಿದ್ದರೆ 1005 ಹೆಕ್ಟರ್ ಪ್ರದೇಶಗಳ ಬೆಳೆ ಹಾನಿಗೊಂಡಿವೆ. 11 ನಿರಾಶ್ರಿತ ಕೇಂದ್ರ ಸ್ಥಾಪಿಸಿದ್ದು 3168 ಜನ ಆಶ್ರಯ ಪಡೆದಿದ್ದಾರೆ.

ರೈಲು ಅಪಘಾತಕ್ಕೆ ಯಾರು ಹೊಣೆ?

ಪ್ರಧಾನಿ ನರೇಂದ್ರ ಮೋದಿಗೆ ಕಾಂಗ್ರೆಸ್ 9 ಪ್ರಶ್ನೆ

ದೆಹಲಿ: 2023ರಲ್ಲಿ ಒಡಿಶಾದ ಬಾಲಾಸೋರ್ ನಲ್ಲಾದ ರೈಲ್ವೆ ಅಪಘಾತ ಬಳಿಕ ಈಗ ಪಶ್ಚಿಮ ಬಂಗಾಳದಲ್ಲಿ ಮತ್ತೊಂದು ರೈಲು ಅಪಘಾತವಾಗಿದ್ದು, ದೇಶವನ್ನು ಆಘಾತಕ್ಕೀಡು ಮಾಡಿದೆ. ಪದೇ ಪದೇ ರೈಲ್ವೆ ಅಪಘಾತ ಆಗುತ್ತಿರುವುದಕ್ಕೆ ಯಾರು ಜವಾಬ್ದಾರರು? ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನಿ ಮೋದಿ ಅವರನ್ನು ಪ್ರಶ್ನಿಸಿದ್ದಾರೆ.

ಸೋಮವಾರ ಡಾರ್ಜಲಿಂಗ್ ಬಳಿ ಕಾಂಚನಜಂಗಾ ಎಕ್ಸ್‌ಪ್ರೆಸ್ ಪ್ಯಾಸೆಂಜರ್ ರೈಲಿಗೆ ಗೂಡ್ಸ್ ರೈಲು ಡಿಕ್ಕಿ ಹೊಡೆದ ಪರಿಣಾಮ 9 ಮಂದಿ ಸಾವನ್ನಪ್ಪಿ, 45 ಮಂದಿ ಗಾಯಗೊಂಡಿದ್ದಾರೆ. ಇದು ರೈಲ್ವೆಯಲ್ಲಿನ 'ದುರಾಡಳಿತದ ಪರಿಣಾಮ' ಎಂದು ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದ್ದಾರೆ. ಈ ಸಂಬಂಧ ಮೋದಿ ಸರಕಾರಕ್ಕೆ ಖರ್ಗೆ 9 ಪ್ರಶ್ನೆ ಕೇಳಿದ್ದಾರೆ.

- ಬಾಲಾಸೋರ್ ರೈಲ್ವೆ ಅಪಘಾತ ಬಳಿಕ 1 ಕಿ.ಮೀ.ನಷ್ಟಾದರೂ ಅಪಘಾತ ತಡೆಗೆ 'ಕವಚ್' ತಂತ್ರಾಂಶ ಅಳವಡಿಸಿಲ್ಲ?
- ರೈಲ್ವೆ ಇಲಾಖೆಯಲ್ಲಿ 3 ಲಕ್ಷ ಖಾಲಿ ಹುದ್ದೆಗಳಿವೆ. ರೈಲ್ವೆ ಮಂಡಳಿ ಏಕೆ ಭರ್ತಿ ಮಾಡುತ್ತಿಲ್ಲ? ಸಿಆರ್‌ಎಸ್ ಏಕೆ ಬಲಪಡಿಸಿಲ್ಲ?
- ಸಿಬ್ಬಂದಿ ಕೊರತೆಯಿಂದಾಗಿ ಲೋಕೊ ಪೈಲಟ್ ದೀರ್ಘಾವಧಿ ಕೆಲಸ-ಅಪಘಾತ ಹೆಚ್ಚಳಕ್ಕೆ ಕಾರಣ ಎಂದು ರೈಲ್ವೆ ಮಂಡಳಿ ಒಪ್ಪಿದೆ.
- ಎನ್‌ಸಿಆರ್‌ಬಿ ವರದಿ ಪ್ರಕಾರ 2017-21 ಅವಧಿಯಲ್ಲಿ 1 ಲಕ್ಷ ಜನ ರೈಲು ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ.
- ರೈಲ್ವೆ ಸುರಕ್ಷತಾ ಆಯೋಗದ ಶಿಫಾರಸು ರೈಲ್ವೆ ಮಂಡಳಿ ನಿರ್ಲಕ್ಷಿಸಿರುವುದೇಕೆ? ಈ ಬಗ್ಗೆ ಸಂಸದೀಯ ಸ್ಥಾಯಿ ಸಮಿತಿ ಟೀಕಿಸಿದೆ.
- ರಾಷ್ಟ್ರೀಯ ರೈಲು ಸುರಕ್ಷಾ ಕೋಶಕ್ಕೆ ಮೀಸಲಿಟ್ಟದ್ದರಲ್ಲಿ ಶೇ.75 ಅನುದಾನ ಕಡಿತಗೊಳಿಸಿರುವುದೇಕೆ?
- ಹೊಣೆಗಾರಿಕೆ ತಪ್ಪಿಸಿಕೊಳ್ಳಲು ಸಾಮಾನ್ಯ ಬಜೆಟ್‌ನಲ್ಲೇ ರೈಲ್ವೆ ಬಜೆಟ್ ಸೇರಿಸಿರುವುದು ಸರಿಯೇ?
- ಕೋಚ್ ಸಂಖ್ಯೆ ಇಳಿಕೆ ಕಾರಣ ಕಳೆದ ವರ್ಷ 2 ಕೋಟಿ ಜನ ರೈಲು ಪ್ರಯಾಣ ಟಿಕೆಟ್ ರದ್ದು ಮಾಡಿದ್ದಾರೆ.
- ರೈಲು ಅಪಘಾತವಾದಾಗಷ್ಟೇ ರೈಲ್ವೆ ಸಚಿವರು ಕ್ಯಾಮೆರಾ ಎದುರು ನಾಟಕವಾಡುತ್ತಾರೆ. ಮೋದಿ ರೈಲು ಅಪಘಾತಗಳಿಗೆ ಯಾರು ಜವಾಬ್ದಾರಿ?

ಉತ್ತಮ ಜನಪ್ರತಿನಿಧಿ ಆಗಲು ಯತ್ನಿಸುವೆ

ದೆಹಲಿ: ಉತ್ತಮ ಜನಪ್ರತಿನಿಧಿಯಾಗಲು ಯತ್ನಿಸುವೆ ಎಂದು ವಯನಾಡು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ನಿಯೋಜಿತ ಅಭ್ಯರ್ಥಿ ಪ್ರಿಯಾಂಕ ವಾದ್ರಾ ವಚನ ನೀಡಿದ್ದಾರೆ.

ಎರಡು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿರುವ ರಾಹುಲ್ ಗಾಂಧಿ ರಾಯಬರೇಲಿ ಸದಸ್ಯತ್ವ ಉಳಿಸಿಕೊಂಡು ವಯನಾಡು ಕ್ಷೇತ್ರದ ಸದಸ್ಯತ್ವ ತ್ಯಜಿಸಲಿದ್ದಾರೆ. ವಯನಾಡು ಕ್ಷೇತ್ರದಲ್ಲಿ ಉಪ ಚುನಾವಣೆಯಲ್ಲಿ ಪ್ರಿಯಾಂಕಾ ಅವರು ಸ್ಪರ್ಧೆ ಮಾಡಲಿದ್ದಾರೆ.

ವಯನಾಡು ಕ್ಷೇತ್ರ ಪ್ರತಿನಿಧಿಸಲು ಸಂತೋಷವಾಗುತ್ತಿದೆ. ಕ್ಷೇತ್ರದ ಮತದಾರರಿಗೆ ರಾಹುಲ್ ಅನುಪಸ್ಥಿತಿ ಕಾಡದಂತೆ ನೋಡಿಕೊಳ್ಳುವೆ. ರಾಯ್‌ಬರೇಲಿ, ಅಮೇಥಿ ನಂಟು ಹಳೆಯದು. ಅದೆಂದಿಗೂ ಕಡಿತಗೊಳ್ಳದು. ನಾನು ಮತ್ತು ರಾಹುಲ್ ವಯನಾಡು-ರಾಯ್‌ಬರೇಲಿಯಲ್ಲಿ ಒಟ್ಟಾಗಿ ಕೆಲಸ ಮಾಡುತ್ತೇವೆ' ಎಂದಿದ್ದಾರೆ.

ಕಾಂಗ್ರೆಸ್ ದೊಡ್ಡ ಶತ್ರು ಯಾರು?

ಕಾಂಗ್ರೆಸ್‌ನ ದೊಡ್ಡ ಶತ್ರು ಯಾರು? ಕೋಮುವಾದಿ ಫ್ಯಾಸಿಸ್ಟ್ ಪಕ್ಷವೋ ಅಥವಾ ಎಡ ಪಂಥೀಯ ಪಕ್ಷಗಳೋ? ಈ ಬಗ್ಗೆ ಆ ಪಕ್ಷದ ನಾಯಕರೇ ನಿರ್ಧರಿಸಬೇಕು ಎಂದು ಸಿಪಿಐ ನಾಯಕಿ ಆನಿ ರಾಜಾ ಹೇಳಿದ್ದಾರೆ. ಉಪ ಚುನಾವಣೆಯಲ್ಲಿ ಪ್ರಿಯಾಂಕಾ ವಿರುದ್ಧ ಸ್ಪರ್ಧಿಸಬೇಕಾ ಎಂಬುದನ್ನು ಪಕ್ಷ ನಿರ್ಧರಿಸಲಿದೆ ಎಂದು ವಯನಾಡು ಲೋಕ ಕ್ಷೇತ್ರದಲ್ಲಿ ರಾಹುಲ್ ಗಾಂಧಿ ವಿರುದ್ಧ ಸೋತಿರುವ ಆನಿ ಪ್ರತಿಕ್ರಿಯಿಸಿದ್ದಾರೆ. ಇಂಡಿಯ ಒಕ್ಕೂಟದ ನಾಯಕಿಯೇ ಮಿತ್ರಪಕ್ಷಗಳ ವಿರುದ್ಧ ಸ್ಪರ್ಧಿಸುತ್ತಿದ್ದಾರೆ ಎಂದು ಎಲ್‌ಡಿಎಫ್‌ನ ಎಲ್ಲಾ ಪಕ್ಷಗಳೂ ಟೀಕಿಸಿವೆ.

ಸೂರನ್‌ಕೋಟ್‌ನಲ್ಲಿ ಉಗ್ರ ನಿಗ್ರಹ ಕಾರ್ಯಾಚರಣೆ

ಶ್ರೀನಗರಕ್ಕೆ 21ರಂದು ಪ್ರಧಾನಿ ಮೋದಿ ಭೇಟಿ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯ ಸೂರನ್‌ಕೋಟ್‌ನಲ್ಲಿ ಮಂಗಳವಾರ ಉಗ್ರರು ಅಡಗಿರುವ ಮಾಹಿತಿ ಸಿಕ್ಕ ಬಳಿಕ ಪ್ರದೇಶವನ್ನು ಭದ್ರತಾ ಪಡೆಗಳು ಸುತ್ತುವರಿದು ಕಾರ್ಯಾಚರಣೆ ನಡೆಸಿವೆ. ಉಗ್ರರೂ ಪ್ರತಿಯಾಗಿ ಗುಂಡು ಹಾರಿಸಿದ್ದು, ಗಂಟೆಗಳ ಕಾಲ ಚಕಮಕಿ ನಡೆದಿದೆ. ಹಲವು ದಿನಗಳಿಂದ ಉಗ್ರರು ಅಡಗಿರುವ ಮಾಹಿತಿ ಮೇರೆಗೆ ಈ ಪ್ರದೇಶದಲ್ಲಿ ವಿಶೇಷ ಕಾರ್ಯಾಚರಣೆ ಪಡೆಗಳಿಂದ(ಎಸ್‌ಒಜಿ) ಭಯೋತ್ಪಾದಕರ ಶೋಧ ಕಾರ್ಯ ನಡೆದಿದೆ. ಮಂಗಳವಾರ ಅಡಗಿ ಕುಳಿತಿರುವ ಉಗ್ರರಿಂದ ಭಾರಿ ಗುಂಡಿನ ದಾಳಿ ನಡೆದಿದೆ. ಭದ್ರತಾ ಸಿಬ್ಬಂದಿಗಳಿಂದಲೂ ಪ್ರತಿ ದಾಳಿ ನಡೆದಿದೆ. ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ ಎಂದು ತಿಳಿದು ಬಂದಿದೆ. ದಟ್ಟ ಅರಣ್ಯದಲ್ಲಿ ಅಡಗಿರುವ ಭಯೋತ್ಪಾದಕರನ್ನು ಮಟ್ಟಹಾಕಲು ಭಾರೀ ಕಾರ್ಯಾಚರಣೆ ಮುಂದುವರಿದಿದೆ ಎಂದು ಭದ್ರತಾ ಪಡೆ ಅಧಿಕಾರಿಗಳು ಮಂಗಳವಾರ ಸಂಜೆ ತಿಳಿಸಿದ್ದಾರೆ.

ಶ್ರೀನಗರ ತಾತ್ಕಾಲಿಕ ರೆಡ್ ಜೋನ್

ಜೂ.21ರಂದು ಪ್ರಧಾನಿ ಮೋದಿ ಭೇಟಿ ಹಿನ್ನೆಲೆ ಶ್ರೀನಗರ ಸಿಟಿಯನ್ನು ತಾತ್ಕಾಲಿಕ ರೆಡ್ ಜೋನ್ ಎಂದು ಘೋಷಿಸಲಾಗಿದೆ. ಅನುಮತಿ ಇಲ್ಲದೇ ಶ್ರೀನಗರದಲ್ಲಿ ಡ್ರೋನ್ ಹಾಗೂ ಕ್ವಾಡ್ ಕಾಪ್ಟರ್ ಹಾರಾಟಕ್ಕೆ ನಿಷೇಧ ಹೇರಲಾಗಿದೆ. ನಿಯಮ ಉಲ್ಲಂಘಿಸಿದರೆ ಡ್ರೋನ್ ಕಾಯ್ದೆ 2021ರ ಅನ್ವಯ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ಶ್ರೀನಗರ ಪೊಲೀಸರು ಎಚ್ಚರಿಸಿದ್ದಾರೆ. ಯೋಗ ದಿನಾಚರಣೆ ಪ್ರಯುಕ್ತ ಪ್ರಧಾನಿ ಮೋದಿ ಶ್ರೀನಗರಕ್ಕೆ ಆಗಮಿಸುತ್ತಿದ್ದು, ಭದ್ರತೆ ಬಿಗಿಗೊಳಿಸಲಾಗಿದೆ.

ಸ್ಪಾನರ್‌ನಲ್ಲೇ 15 ಬಾರಿ ಬಡಿದು ಕೊಂದ ಪ್ರೇಮಿ

ಮುಂಬೈ: ಮಹಾರಾಷ್ಟ್ರದ ಮುಂಬೈನ ವಸಾಯಿ ಬಳಿಯ ಚಿಂಚಪಾಡ ನಡುರಸ್ತೆಯಲ್ಲೇ ಪ್ರೇಮಿಸಿದವಳ ಬುರುಡೆಗೆ ಪಾಗಲ್ ಪ್ರೇಮಿಯೊಬ್ಬ ಉಕ್ಕಿನ ದೊಡ್ಡ ಸ್ಪಾನರ್‌ನಿಂದ 15 ಬಾರಿ ಬಡಿದು ಬರ್ಬರವಾಗಿ ಕೊಂದಿದ್ದಾನೆ. ಮಂಗಳವಾರ ಬೆಳಿಗ್ಗೆ ಯುವಕ ಕ್ರೌರ್ಯ ಮೆರೆಯುತ್ತಿದ್ದಾಗ ನೂರಾರು ಜನರು ಸ್ಥಳದಲ್ಲಿದ್ದರೂ ಯುವತಿಯ ರಕ್ಷಣೆಗೆ ಒಬ್ಬರೂ ಮುಂದಾಗಿಲ್ಲ. ಕ್ರೂರ ಹತ್ಯೆಯನ್ನು ಕಣ್ಣೆವೆ ಇಕ್ಕದೇ ನೋಡುತ್ತಾ, ಕೆಲವರು ಮೊಬೈಲ್‌ನಲ್ಲಿ ಚಿತ್ರೀಕರಿಸುತ್ತಾ ಇದ್ದುದು ನಾಗರಿಕ ಸಮಾಜದ ಮನಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ.

15 ಬಾರಿ ತಲೆಗೆ ಜೋರಾಗಿ ಪೆಟ್ಟು ಬಿದ್ದಿದ್ದರಿಂದ ಕುಸಿದ ಯುವತಿ ರಕ್ತದ ಮಡುವಿನಲ್ಲಿ ಸ್ಥಳದಲ್ಲೇ ಸಾವನ್ನಪ್ಪಿದ್ದಾಳೆ. ಮೃತಳನ್ನು ಆರತಿ ಯಾದವ್(20), ಹಂತಕನನ್ನು ರೋಹಿತ್ ಯಾದವ್ (29) ಎಂದು ಗುರುತಿಸಲಾಗಿದೆ. ಆರೋಪಿ 'ಏಕೆ ಹೀಗೆ ಮಾಡಿದೆ?' ಎಂದು ಪ್ರಶ್ನಿಸುತ್ತಲೇ ಸ್ಪಾನರ್‌ನಿಂದ ಹೊಡೆದಿದ್ದಾನೆ. ಪ್ರೀತಿ ಮನಸ್ತಾಪ ಹಿನ್ನೆಲೆ ಹತ್ಯೆ ನಡೆದಿರಬಹುದೆಂದು ಶಂಕಿಸಲಾಗಿದೆ. ಆರೋಪಿ ರೋಹಿತ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಕಣ್ಣೂರು ಬಾಂಬ್ ಸ್ಫೋಟ; ವೃದ್ಧ ಬಲಿ

ಕಣ್ಣೂರು: ಕೇರಳದ ಕಣ್ಣೂರು ಜಿಲ್ಲೆ ತಲಸ್ಸೇರಿ ಬಳಿಯ ಕುಡಕ್ಕಲಮ್ ಗ್ರಾಮದ ಜಮೀನಿನಲ್ಲಿ ಬಾಂಬ್ ಸ್ಫೋಟಿಸಿ 86 ವರ್ಷದ ಆಯಿನಾಥ್ ವೇಲಾಯುಧನ್ ಮೃತಪಟ್ಟಿದ್ದಾರೆ. ವೇಲಾಯುಧನ್ ತೆಂಗಿನಕಾಯಿ ಸಂಗ್ರಹಿಸಲು ಹೋದಾಗ ಪೊಟ್ಟಣವೊಂದು ಕಂಡಿದೆ. ಅದನ್ನು ತೆರೆದುನೋಡಲೆತ್ನಿಸಿದಾಗ ಸ್ಫೋಟಿಸಿದೆ. ಸ್ಟೀಲ್ ಡಬ್ಬಿ ಬಳಸಿ ಬಾಂಬ್ ತಯಾರಿಸಲಾಗಿತ್ತು. ವೇಲಾಯುಧನ್ ಕುತೂಹಲದಿಂದ ಡಬ್ಬಿ ಮುಚ್ಚಲ ತೆರೆಯಲೆತ್ನಿಸಿದಾಗ ಸ್ಫೋಟವಾಗಿದೆ. ಗಂಭೀರವಾಗಿ ಗಾಯಗೊಂಡ ವೇಲಾಯುಧನ್‌ರನ್ನು ತಕ್ಷಣ ಆಸ್ಪತ್ರೆಗೆ ಕರೆದೊಯ್ದರೂ ಅವರು ಬದುಕಲಿಲ್ಲ. ಸ್ಫೋಟ ಪ್ರಕರಣ ದಾಖಲಿಸಿದ ಕಣ್ಣೂರು ಪೊಲೀಸರು ತನಿಖೆ ಆರಂಭಿಸಿದ್ದಾರೆ. ಬಾಂಬ್ ನಿಷ್ಕ್ರಿಯ ದಳ ಸ್ಥಳ ಪರಿಶೀಲನೆ ನಡೆಸಿದೆ. ಮರಣೋತ್ತರ ಪರೀಕ್ಷೆ ಬಳಿಕ ಇನ್ನಷ್ಟು ಮಾಹಿತಿ ಲಭಿಸಲಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕಣ್ಣೂರಲ್ಲಿ ಇತ್ತೀಚೆಗೆ ಬಾಂಬ್ ಉತ್ಪಾದನೆ, ಸ್ಫೋಟ ಹೆಚ್ಚಿವೆ. 6 ತಿಂಗಳ ಹಿಂದೆ ಕಸ ಸಂಗ್ರಹಿಸುವ ವ್ಯಕ್ತಿ ಕಸದ ರಾಶಿಯಲ್ಲಿದ್ದ ಬಾಂಬ್ ಸ್ಫೋಟಿಸಿ ಗಾಯಗೊಂಡರು. ಆರ್‌ಎಸ್‌ಎಸ್ ಕಾರ್ಯಕರ್ತರ ಮನೆ ಮೇಲೆ ಬಾಂಬ್ ದಾಳಿಯಾಗಿತ್ತು. ಬಾಂಬ್ ತಯಾರಿ ವೇಳೆಯೇ ಸ್ಫೋಟಿಸಿ ಸಿಪಿಎಂ ಕಾರ್ಯಕರ್ತ ಮೃತಪಟ್ಟ. ಇಂತಹ ಪ್ರಕರಣ ಕೊನೆಯಾಗಬೇಕು. ಪೊಲೀಸರು ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಕಣ್ಣೂರು ಜನತೆ ಆಗ್ರಹಿಸಿದ್ದಾರೆ.

ಅರುಂಧತಿ ವಿರುದ್ಧ ಮುಂದಿನವಾರ ಚಾರ್ಜ್

ದೆಹಲಿ: 2010ರ ಅ.21ರಂದು ದೆಹಲಿಯಲ್ಲಿ 'ಆಜಾದಿ-ದಿ ಓನ್ಲಿ ವೇ' ಬ್ಯಾನರ್‌ನಡಿ ಆಯೋಜಿಸಿದ್ದ ಸಮಾವೇಶದಲ್ಲಿ ಅರುಂಧತಿ ರಾಯ್ ಹಾಗೂ ಕಾಶ್ಮೀರದ ಸೆಂಟ್ರಲ್ ವಿವಿ ಮಾಜಿ ಪ್ರಾಧ್ಯಾಪಕ ಶೇಕ್ ಶೌಕತ್ ಹುಸೇನ್ ಪ್ರಚೋದನಾಕಾರಿ ಭಾಷಣ ಮಾಡಿದ್ದಾರೆಂಬ ಆರೋಪದ ಮೇರೆಗೆ ಕಾನೂನುಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದು, ದೆಹಲಿ ಪೊಲೀಸರು ಮುಂದಿನ ವಾರ ಚಾರ್ಜ್ ಶೀಟ್ ಸಲ್ಲಿಸುವ ಸಾಧ್ಯತೆಯಿದೆ ಎಂದು ಅಧಿಕೃತ ಮೂಲಗಳು ಮಂಗಳವಾರ ತಿಳಿಸಿವೆ.

ಕಾಶ್ಮೀರದ ಸಾಮಾಜಿಕ ಕಾರ್ಯಕರ್ತ ಸುಶೀಲ್ ಪಂಡಿತ್, ತಿಲಕ್ ಮಾರ್ಗ ಠಾಣೆಯಲ್ಲಿ ಸಿಆರ್‌ಪಿಸಿ ಸೆಕ್ಷನ್ 156(3) ಅನ್ವಯ ದೂರು ಸಲ್ಲಿಸಿದ್ದರು. ದೆಹಲಿಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಕೋರ್ಟ್ ಎಫ್‌ಐಆರ್ ದಾಖಲಿಸಲು ಪೊಲೀಸರಿಗೆ ಆದೇಶಿಸಿತ್ತು. ನಂತರ ವಿಚಾರಣೆಗಾಗಿ ಪ್ರಕರಣವನ್ನು ದೆಹಲಿ ಅಪರಾಧ ವಿಭಾಗ ಪೊಲೀಸರಿಗೆ ವರ್ಗಾಯಿಸಲಾಗಿತ್ತು. ಅನೇಕ ವಿಡಿಯೋ ಮತ್ತು ವಿಧಿವಿಜ್ಞಾನ ಪ್ರಯೋಗಾಲಯ ಸಾಕ್ಷ್ಯಗಳ ಆಧಾರ ಅರುಂಧತಿ ರಾಯ್ ಹಾಗೂ ಹುಸೇನ್ ವಿರುದ್ಧ ಸಾವಿರ ಪುಟಗಳ ದೋಷಾರೋಪ ಪಟ್ಟಿಯನ್ನು ದೆಹಲಿ ಕ್ರೈಮ್ ಬ್ರಾಂಚ್ ಪೊಲೀಸರು ಸಿದ್ಧಪಡಿಸಿದ್ದಾರೆ. 6 ಸಾಕ್ಷಿದಾರರು ಇದ್ದಾರೆ ಎಂದು ಪೊಲೀಸರು ಹೇಳಿರುವುದಾಗಿ ಮೂಲಗಳು ತಿಳಿಸಿವೆ.

ಪತ್ನಿ ಕ್ಯಾನ್ಸರ್‌ಗೆ ಬಲಿ: ಪತಿ ಆತ್ಮಹತ್ಯೆ

ದಿಸ್‌ಪುರ್: ಅಸ್ಸಾಂ ರಾಜ್ಯ ಸರಕಾರದ ಗೃಹ ಮತ್ತು ರಾಜಕೀಯ ಇಲಾಖೆ ಕಾರ್ಯದರ್ಶಿ, ಹಿರಿಯ ಐಪಿಎಸ್ ಅಧಿಕಾರಿ ಶಿಲಾದಿತ್ಯ ಚೇಟಿಯಾ ಮಂಗಳವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಪತ್ನಿ ಆಸ್ಪತ್ರೆಯಲ್ಲಿ ನಿಧನರಾದ ಸುದ್ದಿ ತಿಳಿದ ಕೆಲವೇ ನಿಮಿಷಗಳಲ್ಲಿ ಶಿಲಾದಿತ್ಯ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದು ಬಹಳ ದುರದೃಷ್ಟಕರ ಘಟನೆ. ಇಡೀ ಅಸ್ಸಾಂ ಪೊಲೀಸ್ ಕುಟುಂಬ ತೀವ್ರ ದುಃಖದಲ್ಲಿದೆ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಜಿ.ಪಿ.ಸಿಂಗ್ ಮಂಗಳವಾರ ತಿಳಿಸಿದ್ದಾರೆ. ಶಿಲಾದಿತ್ಯ ಅವರ ಪತ್ನಿ ಗುವಾಹಟಿಯ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಚೇತಿಯಾ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡರು ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.



ಕೋಚ್ ಸ್ಥಾನಕ್ಕೆ ಗಂಭೀರ್ ಸಂದರ್ಶನ



ದೆಹಲಿ: ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಸ್ಥಾನದ ಆಕಾಂಕ್ಷಿಯಾಗಿರುವ ಗೌತಮ್ ಗಂಭೀರ್ ಅವರನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕ್ರಿಕೆಟ್ ಸಲಹಾ ಸಮಿತಿ (ಸಿಎಸಿ) ಮಂಗಳವಾರ ಸಂದರ್ಶನ ನಡೆಸಿತು.

ಈ ಸಭೆಯು ಝೂಮ್ ಕಾಲ್ ಮೂಲಕ ನಡೆಯಿತು. ಗಂಭೀರ್ ಮತ್ತು ಸಿಎಸಿಯ ಮುಖ್ಯಸ್ಥ ಅಶೋಕ್ ಮಲ್ಹೋತ್ರಾ ಅವರು ವರ್ಚುವಲ್ ಆಗಿ ಹಾಜರಾಗಿದ್ದರು. ಮುಖ್ಯ ಕೋಚ್ ಹುದ್ದೆಗೆ ಅರ್ಜಿ ಕರೆದಾಗಿನಿಂದಲೂ ಗೌತಮ್ ಗಂಭೀರ್ ಅವರ ಹೆಸರು ಪ್ರಮುಖವಾಗಿ ಕೇಳಿಬರುತ್ತಿದೆ. ಅವರ ಆಯ್ಕೆಯು ಬಹುತೇಕ ಖಚಿತ ಎಂದೂ ಹೇಳಲಾಗುತ್ತಿದೆ. ಮುಂದಿನ 48 ಗಂಟೆಗಳಲ್ಲಿ ಬಿಸಿಸಿಐ ನಿರ್ಧಾರ ಪ್ರಕಟವಾಗುವ ನಿರೀಕ್ಷೆ ಇದೆ. ಸಿಎಸಿಯು ಎಲ್ಲ ಅಭ್ಯರ್ಥಿಗಳ ಸಂದರ್ಶನದ ನಂತರ ಸೂಕ್ತ ವ್ಯಕ್ತಿಯ ಹೆಸರನ್ನು ಬಿಸಿಸಿಐಗೆ ಶಿಫಾರಸು ಮಾಡಲಿದೆ.

ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ಭಾರತ ತಂಡದ ಭವಿಷ್ಯದ ರೂಪುರೇಷೆಯ ಕುರಿತು ಗೌತಮ್ ಅವರೊಂದಿಗೆ ಚರ್ಚೆ ನಡೆಸಲಾಯಿತು. ಅವರ ಅಭಿಪ್ರಾಯ ಗಳನ್ನು ಸಿಎಸಿ ಸದಸ್ಯರು ಆಲಿಸಿದರು. ಸಿಎಸಿಯು ಉತ್ತರ ವಲಯದ ಆಯ್ಕೆದಾರರ ಸ್ಥಾನಕ್ಕಾಗಿಯೂ ಕೆಲವು ಅಭ್ಯರ್ಥಿಗಳ ಸಂದರ್ಶನ ನಡೆಸಲಿದೆ.

ಅಭಿಮಾನಿ ಮೇಲೆ ಹಲ್ಲೆಗೆ ಯತ್ನ

ವಾಷಿಂಗ್ಟನ್: ಅಮೆರಿಕದಲ್ಲಿರುವ ಪಾಕಿಸ್ತಾನ ತಂಡದ ವೇಗದ ಬೌಲರ್ ಹ್ಯಾರಿಸ್ ರೌಫ್, ಕ್ರಿಕೆಟ್ ಅಭಿಮಾನಿಯೊಬ್ಬನಿಗೆ ಹಲ್ಲೆ ಮಾಡಲು ಹೋದ ವಿಡಿಯೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. ಟಿ20 ವಿಶ್ವಕಪ್‌ನಿಂದ ಹೊರಬಿದ್ದ ನಂತರ ಪಾಕಿಸ್ತಾನ ತಂಡದ ಕೆಲ ಆಟಗಾರರು ಅಮೆರಿಕದಲ್ಲಿ ಸಮಯ ಕಳೆಯುತ್ತಿದ್ದು, ರೌಫ್ ಕೂಡ ತಮ್ಮ ಕುಟುಂಬದೊಂದಿಗೆ ಫ್ಲೊರಿಡಾದಲ್ಲಿ ತಂಗಿದ್ದಾರೆ. ಪತ್ನಿಯೊಂದಿಗೆ ವಿಹಾರಕ್ಕೆ ಹೋದ ವೇಳೆ ಕ್ರಿಕೆಟ್ ಅಭಿಮಾನಿಯೊಬ್ಬ ರೌಫ್ ಉದ್ದೇಶಿಸಿ ಏನೊ ಮಾತನಾಡಿದ್ದು, ರೌಫ್ ಕೋಪ ನೆತ್ತಿಗೇರಿದೆ. ತಕ್ಷಣ ಆ ವ್ಯಕ್ತಿಗೆ ಕಡೆಗೆ ನುಗ್ಗಿದ ರೌಫ್, ನೀನು ಭಾರತೀಯನಾ? ಎಂದು ಕೇಳಿದ್ದಾರೆ. ಇದಕ್ಕೆ ಆತ ಅಲ್ಲ.. ನಾನು ಪಾಕಿಸ್ತಾನದವನು ಎಂದಿದ್ದಾನೆ. ರೌಫ್ ಮತ್ತು ಅಭಿಮಾನಿಯ ನಡುವೆ ಜಗಳವನ್ನು ತಡೆಯಲು ಹಲವರು ಪ್ರಯತ್ನಿಸುತ್ತಿರುವುದು ದೃಶ್ಯದಲ್ಲಿ ಕಾಣಬಹುದು. ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಸದ್ದು ಮಾಡುತ್ತಿದ್ದಂತೆ ಎಚ್ಚೆತ್ತ ರೌಫ್, ತಮ್ಮ ವರ್ತನೆ ಬಗ್ಗೆ ಸ್ಪಷ್ಟನೆ ನೀಡಿದ್ದಾರೆ. ಈ ವಿಷಯವನ್ನು ಸಾಮಾಜಿಕ ಜಾಲತಾಣದಲ್ಲಿ ಚರ್ಚಿಸುವ ಇಚ್ಛೆ ನನಗಿಲ್ಲ. ಆದರೆ ಈಗಿನ ಪರಿಸ್ಥಿತಿಯಲ್ಲಿ ಅದರ ಅಗತ್ಯವಿದೆ ಎನ್ನಿಸುತ್ತಿದೆ. ಒಬ್ಬ ಕ್ರಿಕೆಟಿಗನಾಗಿ ಜನರಿಂದ ಬರುವ ಎಲ್ಲ ಟೀಕೆಗಳನ್ನು ಮುಕ್ತವಾಗಿ ಸ್ವೀಕರಿಸುತ್ತಿದ್ದೇನೆ. ನಮ್ಮನ್ನು ಬೆಂಬಲಿಸಲು ಮತ್ತು ಟೀಕಿಸಲು ಅವರು ಅರ್ಹರು. ಆದರೆ ನನ್ನ ಪೋಷಕರು ಮತ್ತು ನನ್ನ ಕುಟುಂಬದ ವಿಷಯಕ್ಕೆ ಬಂದಾಗ, ಅದಕ್ಕೆ ತಕ್ಕಂತೆ ಪ್ರತಿಕ್ರಿಯಿಸಲು ನಾನು ಹಿಂಜರಿಯುವುದಿಲ್ಲ ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಫೀಲ್ಡಿಂಗ್ ದಾರಿ ತೋರಲು ರೋಡ್ಸ್

ಮುಂಬಯಿ: ಗೌತಮ್ ಗಂಭೀರ್ ಅವರು ಟೀಮ್ ಇಂಡಿಯಾದ ಮುಂದಿನ ಕೋಚ್ ಆಗಲಿದ್ದಾರೆ ಎಂದು ವರದಿಯಾದ ಬೆನ್ನಲ್ಲೇ ಇದೀಗ ದಕ್ಷಿಣ ಆಫ್ರಿಕಾದ ಈ ಮಾಜಿ ಆಟಗಾರ, ಕ್ರಿಕೆಟ್ ಕಂಡ ಬೆಸ್ಟ್ ಫೀಲ್ಡರ್ ಜಾಂಟಿ ರೋಡ್ಸ್ ಅವರು ಭಾರತ ತಂಡದ ಫೀಲ್ಡಿಂಗ್ ಕೋಚ್ ಆಗಲಿದ್ದಾರೆ ಎಂದು ತಿಳಿದುಬಂದಿದೆ. ತಂಡದ ಇತರ ಕೋಚ್‌ಗಳ ಆಯ್ಕೆಯಲ್ಲಿ ತನ್ನ ವ್ಯಕ್ತಿಗಳನ್ನು ನೇಮಿಸಿಕೊಳ್ಳುವ ಅವಕಾಶ ನೀಡಬೇಕೆಂದು ಗಂಭೀರ್ ಅವರು ಬಿಸಿಸಿಐಗೆ ಬೇಡಿಕೆ ಇಟ್ಟಿದ್ದು ಈ ಬೇಡಿಕೆಯನ್ನು ಬಿಸಿಸಿಐ ಒಪ್ಪಿಕೊಂಡಿದೆ ಎನ್ನಲಾಗಿದೆ. ಗಂಭೀರ್ ಅವರು ಜಾಂಟಿ ರೋಡ್ಸ್ ಜತೆ ಐಪಿಎಲ್‌ನಲ್ಲಿ ಲಕ್ನೋ ತಂಡದ ಪರ ಜತೆಯಾಗಿ 2 ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿದ್ದರು. ಇದೇ ಕಾಂಬಿನೇಷನ್ ನಲ್ಲಿ ಇದೀಗ ಟೀಮ್ ಇಂಡಿಯಾದಲ್ಲೂ ಕಾಣಿಸಿ ಕೊಳ್ಳುವ ಸಾಧ್ಯತೆ ಕಂಡುಬಂದಿದೆ. 2019ರಲ್ಲಿಯೂ ಜಾಂಟಿ ರೋಡ್ಸ್ ಅವರು ಭಾರತದ ತಂಡದ ಫೀಲ್ಡಿಂಗ್ ಕೋಚ್ ಹುದ್ದೆಗೆ ಅರ್ಜಿ ಸಲ್ಲಿಸಿದ್ದರು. ಆದರೆ, ಭಾರತೀಯ ಮೂಲದ ಸಿಬ್ಬಂದಿಗೆ ಬಿಸಿಸಿಐ ಮಣೆ ಹಾಕಿತ್ತು. ಈ ಬಾರಿ ಗಂಭೀರ್ ಅವರ ಅಭಯಹಸ್ತದಿಂದ ರೋಡ್ಸ್‌ಗೆ ಅವಕಾಶ ಸಿಗುವ ಸಾಧ್ಯತೆ ಇದೆ. ಟಿ20 ವಿಶ್ವಕಪ್ ಟೂರ್ನಿ ಮುಕ್ತಾಯಗೊಂಡ ತಕ್ಷಣ ನೂತನ ಕೋಚ್‌ಗಳ ಹೆಸರು ಪ್ರಕಟಗೊಳ್ಳಲಿದೆ. 54 ವರ್ಷದ ಜಾಂಟಿ ಸದ್ಯ ಐಪಿಎಲ್‌ನಲ್ಲಿ ಲಕ್ನೋ ಸೂಪರ್ ಜೈಂಟ್ಸ್ ತಂಡದ ಫೀಲ್ಡಿಂಗ್ ಕೋಚ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ಹಿಂದೆ ಪಂಜಾಬ್ ಕಿಂಗ್ಸ್ ಮತ್ತು ಮುಂಬೈ ಇಂಡಿಯನ್ಸ್ ತಂಡದ ಪರ ಫೀಲ್ಡಿಂಗ್ ಕೋಚ್ ಆಗಿ ಕಾರ್ಯ ನಿರ್ವಹಿಸಿದ್ದರು.

ಪಾಕ್ ಮಾಜಿ ಬ್ರಿಗೇಡಿಯರ್ ಅಮೀರ್ ಹಮ್ಜಾ ಹತ್ಯೆ

ಇಸ್ಲಾಮಾಬಾದ್: ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಝೀಲಂ ಪ್ರದೇಶದ ಲೀಲಾ ಇಂಟರ್ ಚೇಂಜ್‌ನಲ್ಲಿ ಉದ್ದೇಶಿತ ದಾಳಿಯಲ್ಲಿ ಪಾಕಿಸ್ತಾನ ಸೇನೆಯ ನಿವೃತ್ತ ಬ್ರಿಗೇಡಿಯರ್ ಅಮೀರ್ ಹಮ್ಜಾ ಅವರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ. ಅಪರಿಚಿತ ಬಂದೂಕುಧಾರಿಗಳು ಈ ದಾಳಿ ನಡೆಸಿದ್ದಾರೆ. ದಾಳಿಕೋರರ ಏಕೈಕ ಉದ್ದೇಶ ಹಮ್ಜಾನನ್ನು ಕೊಲ್ಲುವುದೇ ಆಗಿತ್ತು ಎಂದು ಸೂಚಿಸುತ್ತದೆ. ಇದು ಉದ್ದೇಶಿತ ಹತ್ಯೆ ಎಂದು ಪಾಕ್ ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ. ನಿವೃತ್ತ ಬ್ರಿಗೇಡಿಯರ್ ಅಮೀರ್ ಹಮ್ಜಾ ಅವರು ತುರ್ತು ಸೇವೆಗಳ ಅಕಾಡೆಮಿ 1122ರ ಮಾಜಿ ಮಹಾ ನಿರ್ದೇಶಕರಾಗಿದ್ದರು. ಜಮ್ಮು ಮತ್ತು ಕಾಶ್ಮೀರದ ಸುಂಜ್ವಾನ್ ಸೇನಾ ಶಿಬಿರದ ಮೇಲೆ 2018ರ ಭಯೋತ್ಪಾದಕ ದಾಳಿ ಹಿಂದಿನ ಪ್ರಮುಖ ಸಂಚುಕೋರರಲ್ಲಿ ಒಬ್ಬರಾಗಿದ್ದರು. ಈ ದಾಳಿಯನ್ನು ಜೈಷ್-ಎ-ಮೊಹಮ್ಮದ್ ಉಗ್ರರು ನಡೆಸಿರುವ ಶಂಕೆ ವ್ಯಕ್ತವಾಗಿದೆ.2018ರ ಫೆ.10ರಂದು ನಡೆದ ದಾಳಿಯಲ್ಲಿ ಇಬ್ಬರು ಜೂನಿಯರ್ ಕಮಿಷನ್ಡ್ ಅಧಿಕಾರಿಗಳು ಮತ್ತು ಸೈನಿಕನ ತಂದೆ ಸೇರಿದಂತೆ ಐವರು ಭಾರತೀಯ ಯೋಧರು ಹುತಾತ್ಮರಾಗಿದ್ದರು. ಅಲ್ಲದೇ 6 ಮಹಿಳೆಯರು, ಮಕ್ಕಳು ಸೇರಿದಂತೆ 10 ಮಂದಿ ಗಾಯಗೊಂಡಿದ್ದರು.

ಪಪುವಾ ನ್ಯೂಗಿನಿ ವಿರುದ್ಧ ಗೆದ್ದ ನ್ಯೂಜಿಲ್ಯಾಂಡ್

24 ಬಾಲ್, 3 ವಿಕೆಟ್, 0 ರನ್! ಫರ್ಗ್ಯೂಸನ್ ಹೊಸ ದಾಖಲೆ

ತರೂಬಾ (ಟ್ರಿನಿಡಾಡ್ ಅಂಡ್ ಟೊಬಾಗೊ): ಲಾಕಿ ಫರ್ಗ್ಯೂಸನ್ (4-4-0-3) ಟಿ20 ಅಂತಾರಾಷ್ಟ್ರೀಯ ಪಂದ್ಯದಲ್ಲಿ ಅತ್ಯಂತ ಮಿತವ್ಯಯದ ಬೌಲಿಂಗ್ ದಾಖಲೆಗೆ ಪಾತ್ರರಾದರು. ನ್ಯೂಜಿಲೆಂಡ್ ಬೌಲರ್‌ಗಳು ಟಿ20 ವಿಶ್ವಕಪ್ ಪಂದ್ಯದಲ್ಲಿ ಪಾಪುವಾ ನ್ಯೂಗಿನಿ ತಂಡವನ್ನು 78 ರನ್‌ಗೆ ಉರುಳಿಸಿದರು. ನಂತರ 46 ಎಸೆತಗಳು ಇರುವಂತೆಯೇ ಏಳು ವಿಕೆಟ್‌ಗಳಿಂದ ಗೆದ್ದರು. ಸೋಮವಾರ ನಡೆದ ಸಿ ಗುಂಪಿನ ಔಪಚಾರಿಕ ಪಂದ್ಯದಲ್ಲಿ ನ್ಯೂಜಿಲೆಂಡ್ 12.2 ಓವರ್‌ಗಳಲ್ಲಿ 3 ವಿಕೆಟ್‌ಗೆ 79 ರನ್ ಹೊಡೆಯಿತು. ಫಿನ್ ಅಲೆನ್ (0) ಮತ್ತು ರಚಿನ್ ರವೀಂದ್ರ (6) ಅವರು ಬೇಗನೆ ನಿರ್ಗಮಿಸಿದರು. ಡೆವೋನ್ ಕಾನ್ವೆ (35, 32ಎ) ತಂಡದ ನೆರವಿಗೆ ಬಂದರು.

ನಂತರ ನಾಯಕ ಕೇನ್ ವಿಲಿಯಮ್ಸನ್ (ಔಟಾಗದೆ 18) ಮತ್ತು ಡೆರೆಲ್ ಮಿಚೆಲ್ (ಔಟಾಗದೆ 19) ಅವರಿಬ್ಬರೂ ಗೆಲುವಿನ ವಿಧಿ ಪೂರೈಸಿದರು. ಮಳೆಯ ಕಾರಣ ಪಂದ್ಯ ವಿಳಂಬವಾಗಿ ಆರಂಭಗೊಂಡಿತು.

ಅಫ್ಘಾನಿಸ್ತಾನ ಮತ್ತು ವೆಸ್ಟ್ ಇಂಡೀಸ್ ತಂಡಗಳು ಈಗಾಗಲೇ ಗುಂಪಿನಿಂದ ಸೂಪರ್ ಎಂಟರ ಹಂತ ಪ್ರವೇಶಿಸಿದ್ದವು. ಸೋಮವಾರ ನಡೆದ ಕೊನೆಯ ಪಂದ್ಯ ಗೆಲ್ಲುವ ಮೂಲಕ ನ್ಯೂಜಿಲೆಂಡ್ 4 ಪಾಯಿಂಟ್ಸ್ ಸಂಗ್ರಹಿಸಿದರೆ, ನ್ಯೂಗಿನಿ ತಂಡ ಆಡಿದ ನಾಲ್ಕು ಪಂದ್ಯಗಳಲ್ಲೂ ಸೋಲು ಅನುಭವಿಸಿತು.

ಈ ಹಿಂದೆ ಕೆನಡಾದ ಸಾದ್ ಬಿನ್ ಜಾಫರ್ (4-4-0-2) ಅವರು ಫರ್ಗ್ಯೂಸನ್‌ಗಿಂತ ಮೊದಲು ಈ ಸಾಧನೆ ದಾಖಲಿಸಿದ್ದರು. ಆದರೆ ಅದು ವಿಶ್ವಕಪ್ ಅರ್ಹತಾ ಪಂದ್ಯದಲ್ಲಿ (ಪನಮಾ ವಿರುದ್ಧ) ಬಂದಿತ್ತು.

ಸ್ಕೋರುಗಳು: ಪಾಪುವಾ ನ್ಯೂಗಿನಿ: 19.4 ಓವರುಗಳಲ್ಲಿ 78 (ಚಾರ್ಲ್ಸ್ ಅಮಿನಿ 17, ಸೇಸೆ ಬಾವು 12, ನಾರ್ಮನ್ ವನುವ 14; ಟ್ರೆಂಟ್ ಬೌಲ್ಟ್ 14ಕ್ಕೆ2, ಟಿಮ್ ಸೌಥಿ 11ಕ್ಕೆ2, ಲಾಕಿ ಫರ್ಗ್ಯೂಸನ್ ಸೊನ್ನೆಗೆ 3, ಈಶ್ ಸೋಧಿ 29ಕ್ಕೆ2)

ನ್ಯೂಜಿಲೆಂಡ್: 12.2 ಓವರ್‌ಗಳಲ್ಲಿ 3 ವಿಕೆಟ್‌ಗೆ 79 (ಡೆವೊನ್ ಕಾನ್ವೆ 35, ಕೇನ್ ವಿಲಿಯಮ್ಸನ್ ಔಟಾಗದೆ 18, ಡೆರಿಲ್ ಮಿಚೆಲ್ ಔಟಾಗದೆ 19, ಕಬುವಾ ಮೋರಿಯಾ 4ಕ್ಕೆ2)

ಪಂದ್ಯ ಶ್ರೇಷ್ಠ: ಲಾಕಿ ಫರ್ಗ್ಯೂಸನ್

ವಿಶ್ವದಾಖಲೆ

ನ್ಯೂಜಿಲ್ಯಾಂಡ್ ಕ್ರಿಕೆಟ್ ತಂಡದ ವೇಗಿ ಲಾಕಿ ಫರ್ಗ್ಯೂಸನ್ ಅವರು 4 ಓವರ್‌ಗಳನ್ನು ಎಸೆದು, ನಾಲ್ಕೂ ಓವರ್‌ಗಳನ್ನು ಮೇಡನ್ ಮಾಡಿದ್ದಲ್ಲದೆ 3 ವಿಕೆಟ್‌ಗಳನ್ನು ಪಡೆಯುವ ಮೂಲಕ ವಿಶ್ವದಾಖಲೆ ಬರೆದಿದ್ದಾರೆ. ಟಿ-20 ವಿಶ್ವಕಪ್ ಇತಿಹಾಸದಲ್ಲಿಯೇ ನಾಲ್ಕು ಓವರ್ ಎಸೆದು, ಒಂದು ರನ್ ಕೊಡದ ಅಥವಾ ಮೋಸ್ಟ್ ಎಕನಾಮಿಕಲ್ ಸ್ಪೆಲ್ ಮಾಡಿದ ಬೌಲರ್ ಎನಿಸಿದ್ದಾರೆ.

ಸರಣಿ ವಶಕ್ಕೆ ವನಿತೆಯರ ಕಣ್ಣು

ಇಂದು ಭಾರತ ಮತ್ತು ದಕ್ಷಿಣಾ ಆಫ್ರಿಕಾ ವಿರುದ್ಧದ ಎರಡನೇ ಏಕದಿನ ಪಂದ್ಯ

ಬೆಂಗಳೂರು: ಭಾರತ ಮಹಿಳಾ ತಂಡವು ಎರಡು ದಿನಗಳ ಹಿಂದೆ ಸ್ಮೃತಿ ಮಂದಾನ ಅವರ ಚೆಂದದ ಶತಕದ ಬಲದಿಂದ ದಕ್ಷಿಣ ಆಫ್ರಿಕಾ ಎದುರಿನ ಮೊದಲ ಏಕದಿನ ಪಂದ್ಯದಲ್ಲಿ ಜಯಿಸಿತ್ತು. ಇದೀಗ ಸರಣಿ ಕೈವಶದ ಮೇಲೆ ಕಣ್ಣಿಟ್ಟಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ನಡೆಯಲಿರುವ ಪಂದ್ಯವು ದಕ್ಷಿಣ ಆಫ್ರಿಕಾ ತಂಡಕ್ಕೆ ಸರಣಿ ಗೆಲುವಿನ ಆಸೆಯನ್ನು ಜೀವಂತವಾಗಿರಿಸಿಕೊಳ್ಳುವ ಕಡೆಯ ಅವಕಾಶವೂ ಹೌದು. ಅದಕ್ಕಾಗಿ ತನ್ನ ಬ್ಯಾಟಿಂಗ್ ವಿಭಾಗವನ್ನು ಬಲಿಷ್ಠಗೊಳಿಸಿಕೊಂಡು ಕಣಕ್ಕಿಳಿಯಬೇಕಾದ ಒತ್ತಡ ಪ್ರವಾಸಿ ತಂಡಕ್ಕಿದೆ. ತಿರುಗೇಟು ನೀಡುವ ಸಾಮರ್ಥ್ಯವೂ ನಾಯಕಿ ಲಾರಾ ವೊಲ್ವಾರ್ಡ್ತ್, ತಂಜೀಮ್ ಬ್ರಿಟ್ಸ್, ಅನೆಕಿ ಬಾಷ್ ಹಾಗೂ ಅನುಭವಿ ಆಟಗಾರ್ತಿ ಮರಿಝೇನ್ ಕಾಪ್ ಅವರಿಗೆ ಇದೆ. ಆದರೆ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಬೇಕಿದೆ.

ಭಾರತ ತಂಡದ ಬ್ಯಾಟಿಂಗ್ ಬಲ ಕೂಡ ಅನಿಶ್ಚಿತತೆಯಿಂದ ಕೂಡಿದೆ. ಮೊದಲ ಪಂದ್ಯದಲ್ಲಿ ಸ್ಮೃತಿ ಬಿಟ್ಟರೆ ಅಗ್ರಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದ್ದರು. ನಾಯಕಿ ಹರ್ಮನ್ಪ್ರೀತ್ ಕೌರ್ ಕೇವಲ 10 ರನ್ ಗಳಿಸಿದ್ದರು. ಗಾಯದಿಂದ ಚೇತರಿಸಿಕೊಂಡು ಮರಳಿರುವ ಜೆಮಿಮಾ ರಾಡ್ರಿಗಸ್, ಆರಂಭಿಕ ಬ್ಯಾಟರ್ ಶಫಾಲಿ ವರ್ಮಾ ಹಾಗೂ ದಯಾಳನ್ ಹೇಮಲತಾ ಅವರು ತಮ್ಮ ಲಯ ಕಂಡುಕೊಂಡರೆ ತಂಡದ ಬ್ಯಾಟಿಂಗ್ ಬಲಿಷ್ಠವಾಗಲಿದೆ.

ಆಲ್‌ರೌಂಡರ್ ದೀಪ್ತಿ ಶರ್ಮಾ ಮತ್ತು ಪೂಜಾ ವಸ್ತ್ರಕರ್ ಅವರು ಬ್ಯಾಟಿಂಗ್‌ನಲ್ಲಿಯೂ ಮಹತ್ವದ ಕಾಣಿಕೆ ನೀಡಿದ್ದರು. ಅದರಿಂದಾಗಿ ತಂಡವು ಹೋರಾಟದ ಮೊತ್ತ ಗಳಿಸಿತ್ತು. ಸ್ಪಿನ್ನರ್ ಆಶಾ ಶೋಭನಾ ಮತ್ತು ದೀಪ್ತಿ ಇಬ್ಬರೂ ಬೌಲಿಂಗ್‌ನಲ್ಲಿಯೂ ಕೈಚಳಕ ತೋರಿ ತಂಡದ ಗೆಲುವಿಗೆ ಕಾರಣರಾಗಿದ್ದರು.

ಈ ಪಂದ್ಯದಲ್ಲಿಯೂ ಅದೇ ಲಯವನ್ನು ಬೌಲರ್‌ಗಳು ಮುಂದುವರಿಸಿದರೆ ದಕ್ಷಿಣ ಆಫ್ರಿಕಾ ಬ್ಯಾಟರ್‌ಗಳಿಗೆ ಕಠಿಣ ಸವಾಲು ಎದುರಾಗಬಹುದು.

ಆತಿಥೇಯರು ಈ ಪಂದ್ಯದಲ್ಲಿಯೂ ಮೂವರು ಸ್ಪಿನ್ನರ್‌ಗಳೊಂದಿಗೇ ಕಣಕ್ಕಿಳಿಯುವ ನಿರೀಕ್ಷೆ ಇದೆ.

ಪಂದ್ಯ ಆರಂಭ: ಮಧ್ಯಾಹ್ನ 1.30

ತಂಡಗಳು

ಭಾರತ: ಹರ್ಮನ್‌ಪ್ರೀತ್ ಕೌರ್ (ನಾಯಕಿ) ಸ್ಮೃತಿ ಮಂದಾನ (ಉಪನಾಯಕಿ) ಶಫಾಲಿ ವರ್ಮಾ, ದೀಪ್ತಿ ಶರ್ಮಾ, ಜೆಮಿಮಾ ರಾಡ್ರಿಗಸ್, ರಿಚಾ ಘೋಷ್ (ವಿಕೆಟ್ ಕೀಪರ್) ಉಮಾ ಚೆಟ್ರಿ (ವಿಕೆಟ್ ಕೀಪರ್) ದಯಾಳನ್ ಹೇಮಲತಾ, ರಾಧಾ ಯಾದವ್, ಆಶಾ ಶೋಭನಾ, ಶ್ರೇಯಾಂಕಾ ಪಾಟೀಲ, ಸೈಕಾ ಇಶಾಕಿ, ಪೂಜಾ ವಸ್ತ್ರಕರ್, ರೇಣುಕಾ ಸಿಂಗ್, ಠಾಕೂರ್ ಅರುಂಧತಿ, ರೆಡ್ಡಿ ಪ್ರಿಯಾ ಪೂನಿಯಾ.

ದಕ್ಷಿಣ ಆಫ್ರಿಕಾ: ಲಾರಾ ವೊಲ್ವಾರ್ಡ್ತ್ (ನಾಯಕಿ), ಅನೆಕ್ ಬಾಷ್, ತಂಜೀಮ್ ಬ್ರಿಟ್ಸ್, ನದೆನ್ ಡಿ ಕ್ಲರ್ಕ್, ಅನೆರಿ ಡೆರ್ಕ್‌ಸೆನ್, ಮೀಕೆ ಡಿ ರಿಡರ್ ಸಿನಾಲೊ ಜಾಫ್ತಾ ಮರಿಜಾನ್ ಕಾಪ್ ಅಯಾಬೊಂಗಾ ಕಾಕಾ ಸುನ್ ಲೂಸ್ ಎಲಿಜ್ ಮೇರಿ ಮಾರ್ಕ್ಸ್ ನಾನಕುಲುಲೆಕೊ ಮ್ಲಾಬಾ ತುಮಿ ಸೆಕುಕುನೆ ನಾಂದುಮಿಸೊ ಶಾಂಗ್ಸಿ ಡೆಲ್ಮಿ ಠಕರ್

ಎಂಬಾಪೆ ಮೂಗಿಗೆ ಗಾಯ: ಮುಂದಿನ ಪಂದ್ಯ ಡೌಟ್!

ಮ್ಯೂನಿಚ್: ಡಸೆಲ್ಡಾರ್ಫ್ ಅರೆನಾದಲ್ಲಿ ಮಂಗಳವಾರ ನಡೆದ ಡಿ ಗುಂಪಿನ ಪಂದ್ಯದಲ್ಲಿ ಫ್ರಾನ್ಸ್ 1-0 ಗೋಲುಗಳಿಂದ ಆಸ್ಟ್ರಿಯಾ ವಿರುದ್ಧ ಗೆದ್ದು ಯುರೋ ಕಪ್ ಫುಟ್ಬಾಲ್ ಟೂರ್ನಿಯಲ್ಲಿ ಗೆಲುವಿನ ಶುಭಾರಂಭ ಕಂಡಿದೆ. ಆದರೆ, ಇದೇ ಪಂದ್ಯದಲ್ಲಿ ಫ್ರಾನ್ಸ್ ತಂಡದ ಸ್ಟಾರ್ ಆಟಗಾರ ಹಾಗೂ ನಾಯಕ ಕಿಲಿಯನ್ ಎಂಬಾಪೆ ಅವರು ಮೂಗಿನ ಗಂಭೀರ ಗಾಯಕ್ಕೆ ತುತ್ತಾಗಿದ್ದು ಮುಂದಿನ ಪಂದ್ಯದಲ್ಲಿ ಆಡುವುದು ಅನುಮಾನ ಎನ್ನಲಾಗಿದೆ.

ಪಂದ್ಯದ 86ನೇ ನಿಮಿಷದಲ್ಲಿ ಎದುರಾಳಿ ತಂಡದ ಕೆವಿನ್ ಡಾನ್ಸೊ ಅವರ ಕಾಲು ಮೂಗಿಗೆ ಬಡಿದ ಪರಿಣಾಮ ಎಂಬಪೆ ಗಾಯಗೊಂಡರು. ಈ ವೇಳೆ ಅವರ ಮೂಗಿನಿಂದ ರಕ್ತಸ್ರಾವ ಉಂಟಾಗಿದೆ. ತಕ್ಷಣ ವೈದ್ಯರು ಅವರನ್ನು ಮೈದಾನದಿಂದ ಹೊರಗಡೆ ತಂದು ಚಿಕಿತ್ಸೆ ನೀಡಿದ್ದಾರೆ. ಸದ್ಯ ಅವರಿಗೆ ಯಾವುದೇ ದೊಡ್ಡ ಪ್ರಮಾಣದ ಗಾಯ ಸಂಭವಿಸಿಲ್ಲ ಎಂದು ವೈದ್ಯರು ತಿಳಿಸಿರುವುದಾಗಿ ವರದಿಯಾಗಿದೆ. ಆಸ್ಟ್ರಿಯಾ ವಿರುದ್ಧದ ಪಂದ್ಯದಲ್ಲಿ ಎಂಬಾಪೆಗೆ 2 ಗೋಲು ಬಾರಿಸುವ ಅವಕಾಶವಿದ್ದರೂ ಕೂಡ ಇದರಲ್ಲಿ ಅವರು ಯಶಸ್ಸು ಕಾಣಲಿಲ್ಲ.

ಎಸ್ಟೋನಿಯಾ ಬ್ಯಾಟರ್ ಚೌಹಾಣ್ ದಾ

27 ಎಸೆತದಲ್ಲಿ ಶತಕದ ಸಾಧ

ದೆಹಲಿ: ಟ್ವೆಂಟಿ-20 ಕ್ರಿಕೆಟ್‌ನಲ್ಲಿ ಎಸ್ಟೋನಿಯಾದ ಬ್ಯಾಟರ್ ಸಾಹಿಲ್ ಚೌಹಾಣ್ ನೂತನ ವಿಶ್ವದಾಖಲೆ ಬರೆದಿದ್ದು, ಕೇವಲ 27 ಎಸೆತಗಳಲ್ಲಿ ಶತಕ ಸಾಧನೆ ಮಾಡಿದ್ದಾರೆ.

ಸೈಪ್ರಸ್ ವಿರುದ್ಧ ನಡೆದ ಟ್ವೆಂಟಿ-20 ಪಂದ್ಯದಲ್ಲಿ ಎಸ್ಟೋನಿಯಾದ ಸಾಹಿಲ್, ಈ ದಾಖಲೆ ಬರೆದಿದ್ದಾರೆ.

ಆ ಮೂಲಕ 'ಯೂನಿವರ್ಸ್ ಬಾಸ್' ಖ್ಯಾತಿಯ ವೆಸ್ಟ್‌ಇಂಡೀಸ್‌ನ ಮಾಜಿ ಸ್ಫೋಟಕ ಬ್ಯಾಟರ್ ಕ್ರಿಸ್ ಗೇಲ್ ದಾಖಲೆಯನ್ನು ಮುರಿದಿದ್ದಾರೆ. 2013ರ ಐಪಿಎಲ್ ಟೂರ್ನಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಗೇಲ್ 30 ಎಸೆತಗಳಲ್ಲಿ ಸೆಂಚುರಿ ಬಾರಿಸಿದ್ದರು. 32 ವರ್ಷದ ಸಾಹಿಲ್ ಅಂತಿಮವಾಗಿ 41 ಎಸೆತಗಳಲ್ಲಿ ಅಜೇಯ 144 ರನ್ ಗಳಿಸಿದರು. ಸಾಹಿಲ್ ಇನಿಂಗ್ಸ್‌ನಲ್ಲಿ 6 ಬೌಂಡರಿ ಹಾಗೂ 18 ಸಿಕ್ಸರ್‌ಗಳು ಸೇರಿದ್ದವು. 3 ಸ್ಟ್ರೈಕ್‌ರೇಟ್‌ನಲ್ಲಿ ಅಬ್ಬರಿಸಿದರು.

ಟ್ವೆಂಟಿ-20 ಅಂತಾರಾಷ್ಟ್ರೀಯ ಕ್ರಿ ದಾಖಲಾದ ಅತಿ ವೇಗದ ಶತಕ ಇದ ಮೂಲಕ ನಮೀಬಿಯಾದ ಜಾನ್ ಲಾಫ್ಟಿ-ಈಟನ್ (33 ಎಸೆತ) ದಾಖ ಮುರಿದಿದ್ದಾರೆ. 18 ಸಿಕ್ಸರ್ ಗಳಿಸಿದ ಟ್ವೆಂಟಿ-20 ಅಂತಾರಾಷ್ಟ್ರೀಯ ಇನಿಂಗ್ಸ್ ವೊಂದರಲ್ಲಿ ಅತಿ ಹೆಚ್ಚು ಗಳಿಸಿದ ಬ್ಯಾಟರ್ ಎಂಬ ಭಾಜನರಾಗಿದ್ದಾರೆ. ಈ ಅಫ್ಘಾನಿಸ್ತಾನದ ಹಜ್ರತುಲ್ಲ ಜಾಜೈ ನ್ಯೂಜಿಲೆಂಡ್‌ನ ಫಿನ್ ಅಲೆನ್ ತ ಸಿಕ್ಸರ್ ಗಳಿಸಿದ್ದರು.

ಟ್ವೆಂಟಿ-20 ಕ್ರಿಕೆಟ್‌ನಲ್ಲಿ ವೇಗದ ಶತಕ ವೀರರು:

ಸಾಹಿಲ್ ಚೌಹಾಣ್: 27 ಎಸೆತ (20
ಕ್ರಿಸ್ ಗೇಲ್: 30 ಎಸೆತ (2013)
ರಿಷಭ್ ಪಂತ್: 32 ಎಸೆತ (2018)

ಅಫ್ಘಾನ್ ವಿರುದ್ಧ ವಿಂಡೀಸ್‌ಗೆ | 103 ರನ್‌ಗಳ ಭರ್ಜರಿ ಜಯ

ವೆಸ್ಟ್ ಇಂಡೀಸ್‌ಗೆ ಸತತ 8ನೇ ಗೆಲುವು

ಸೇಂಟ್ ಲೂಸಿಯಾ: ಐಸಿಸಿ ಟ್ವೆಂಟಿ-20 ವಿಶ್ವಕಪ್ ಟೂರ್ನಿಯಲ್ಲಿ ಇಂದು ಸಿ ಗುಂಪಿನಲ್ಲಿ ಅಫ್ಘಾನಿಸ್ತಾನ ವಿರುದ್ಧ ನಡೆದ ಪಂದ್ಯದಲ್ಲಿ ಅತಿಥೇಯ ವೆಸ್ಟ್ ಇಂಡೀಸ್ 103 ರನ್ ಅಂತರದ ಭರ್ಜರಿ ಗೆಲುವು ದಾಖಲಿಸಿದೆ.

ಇದರೊಂದಿಗೆ ಟ್ವೆಂಟಿ-20 ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಗೆಲುವಿನ ಓಟ ಮುಂದುವರಿಸಿರುವ ವಿಂಡೀಸ್, ಸತತ ಎಂಟನೇ ಗೆಲುವು ದಾಖಲಿಸಿದೆ. ಈ ಪೈಕಿ ಪ್ರಸಕ್ತ ಸಾಗುತ್ತಿರುವ ಟಿ20 ವಿಶ್ವಕಪ್‌ನಲ್ಲಿ ಸತತ ನಾಲ್ಕನೇ ಗೆಲುವು ದಾಖಲಿಸಿರುವ ರೋವ್ಮನ್ ಪೊವೆಲ್ ಬಳಗವು, ಒಟ್ಟು ಎಂಟು ಅಂಕಗಳನ್ನು ಕಲೆ ಹಾಕಿದೆ. ಅಲ್ಲದೆ ಸಿ ಗುಂಪಿನ ಅಗ್ರಸ್ಥಾನಿಯಾಗಿ ಸೂಪರ್ ಎಂಟರ ಹಂತಕ್ಕೆ ಪ್ರವೇಶಿಸಿದೆ.

ಎರಡನೇ ಸ್ಥಾನದಲ್ಲಿರುವ ಅಫ್ಘಾನಿಸ್ತಾನ ನಾಲ್ಕು ಪಂದ್ಯಗಳಲ್ಲಿ ಮೂರು ಗೆಲುವಿನೊಂದಿಗೆ ಒಟ್ಟು ಆರು ಅಂಕ ಗಳಿಸಿದೆ. ಈ ಗುಂಪಿನಲ್ಲಿ ನ್ಯೂಜಿಲೆಂಡ್, ಯುಗಾಂಡ ಹಾಗೂ ಪಾಪುವಾ ನ್ಯೂಗಿನಿ ನಿರ್ಗಮಿಸಿವೆ.

ಒಂದೇ ಓವರ್‌ನಲ್ಲಿ 36 ರನ್

ಮೊದಲು ಬ್ಯಾಟಿಂಗ್ ನಡೆಸಿದ ವಿಂಡೀಸ್, ನಿಕೋಲಸ್ ಪೂರನ್ (98) ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಐದು ವಿಕೆಟ್ ನಷ್ಟಕ್ಕೆ 218 ರನ್‌ಗಳ ಬೃಹತ್ ಮೊತ್ತ ಪೇರಿಸಿತು.

ಕೇವಲ ಎರಡು ರನ್ನಿಂದ ಶತಕ ವಂಚಿತರಾದ ಪೂರನ್ 53 ಎಸೆತಗಳಲ್ಲಿ 98 ರನ್ ಗಳಿಸಿದರು. ಅವರ ಸ್ಫೋಟಕ ಇನಿಂಗ್ಸ್‌ನಲ್ಲಿ ಎಂಟು ಸಿಕ್ಸರ್ ಹಾಗೂ ಆರು ಬೌಂಡರಿಗಳು ಸೇರಿದ್ದವು. ಅಜ್ಮತುಲ್ಲಾ ಅವರ ನೇರ ಥ್ರೋದಿಂದಾಗಿ ರನೌಟ್ ಆಗಿ ಪೆವಿಲಿಯನ್‌ಗೆ ಹಿಂತಿರುಗಿದರು. ಇದಕ್ಕೂ ಮೊದಲು ಅಜ್ಮತುಲ್ಲಾ ಒಮರ್‌ಝೈರ್ ಓವರ್ ಒಂದರಲ್ಲಿ 36 ರನ್ ಸಿಡಿಸುವ ಮೂಲಕ ಪೂರನ್ ಅಬ್ಬರಿಸಿದರು. ಇದರಲ್ಲಿ ತಲಾ ಮೂರು ಸಿಕ್ಸರ್ ಹಾಗೂ ಬೌಂಡರಿ ಒಳಗೊಂಡಿತ್ತು.

2007ರ ಟ್ವೆಂಟಿ-20 ವಿಶ್ವಕಪ್‌ನಲ್ಲಿ ಇಂಗ್ಲೆಂಡ್‌ನ ಸ್ಟುವರ್ಟ್ ಬ್ರಾಡ್ ಓವರ್‌ವೊಂದರ ಎಲ್ಲ ಆರು ಎಸೆತಗಳಲ್ಲಿ ಸಿಕ್ಸರ್ ಬಾರಿಸಿದ್ದ ಭಾರತದ ಯುವರಾಜ್ ಸಿಂಗ್ 36 ರನ್ ಗಳಿಸಿದ್ದರು. ಇದರೊಂದಿಗೆ ಗುಂಪು ಹಂತದ ಪಂದ್ಯಗಳು ಕೊನೆಗೊಂಡಿದ್ದು, ಜೂನ್ 19ರಿಂದ ಸೂಪರ್ 8ರ ಹಂತದ ಪಂದ್ಯಗಳು ಆರಂಭವಾಗಲಿವೆ.

ಪವರ್ ಪ್ಲೇನಲ್ಲಿ 92 ರನ್...

ಅಷ್ಟೇ ಯಾಕೆ ಪವರ್ ಪ್ಲೇನಲ್ಲಿ ವಿಂಡೀಸ್ ಒಂದು ವಿಕೆಟ್ ನಷ್ಟಕ್ಕೆ 92 ರನ್ ಗಳಿಸಿತು. ಇದು ಟ್ವೆಂಟಿ-20 ವಿಶ್ವಕಪ್‌ನಲ್ಲಿ ಪವರ್ ಪ್ಲೇನಲ್ಲಿ ತಂಡವೊಂದರಿಂದ ದಾಖಲಾದ ಗರಿಷ್ಠ ಮೊತ್ತವಾಗಿದೆ. ವಿಂಡೀಸ್ ಪರ ಜಾನ್ಸನ್ ಚಾರ್ಲ್ಸ್ (43), ಶಾಯ್ ಹೋಪ್ (25) ಹಾಗೂ ನಾಯಕ ರೋವ್ಮನ್ ಪೊವೆಲ್ (26) ಉಪಯುಕ್ತ ಕಾಣಿಕೆ ನೀಡಿದರು. ಈ ಗುರಿ ಬೆನ್ನಟ್ಟಿದ ಅಫ್ಘಾನಿಸ್ತಾನ 16.2 ಓವರ್‌ಗಳಲ್ಲಿ 114 ರನ್ನಿಗೆ ಆಲೌಟ್ ಆಯಿತು. ಇಬ್ರಾಹಿಂ ಜದ್ರಾನ್ ಗರಿಷ್ಠ 38 ರನ್ ಗಳಿಸಿದರು. ವಿಂಡೀಸ್ ಪರ ಒಬೆಡ್ ಮೆಕೋಯ್ ಮೂರು ವಿಕೆಟ್ ಗಳಿಸಿದರು.

ನಳಂದಾ ವಿವಿ: ಇಂದು ಪ್ರಧಾನಿ ಉದ್ಘಾಟನೆ

ದಾಳಿಕೋರ ಖಿಲ್ಜಿಯಿಂದ ನಾಶವಾಗಿದ್ದ ಪುರಾತನ ವಿವಿ

ಪಟನಾ: ದಾಳಿಕೋರ ಖಿಲ್ಜಿಯಿಂದ ನಾಶವಾಗಿದ್ದ ಪುರಾತನ ನಳಂದಾ ವಿಶ್ವವಿದ್ಯಾಲಯ ಹೊಸ ರೂಪ ಪಡೆದುಕೊಂಡಿದ್ದು, ಪ್ರಧಾನಿ ನರೇಂದ್ರ ಮೋದಿ ಬುಧವಾರ ಉದ್ಘಾಟನೆ ಮಾಡಲಿದ್ದಾರೆ.

ಬಿಹಾರದ ರಾಜಗಿರ್‌ನಲ್ಲಿರುವ ನಳಂದದ ಪುರಾತನ ಅವಶೇಷಗಳ ಬಳಿ ಇರುವ ಅಂತಾರಾಷ್ಟ್ರೀಯ ಸಂಸ್ಥೆಯಾದ ನಳಂದ ವಿಶ್ವವಿದ್ಯಾಲಯದ ಹೊಸ ಕ್ಯಾಂಪಸ್ ಅನ್ನು ಪ್ರಧಾನಿ ಮೋದಿ ಉದ್ಘಾಟಿಸಲಿದ್ದಾರೆ. ವಿಶ್ವವಿದ್ಯಾನಿಲಯದ ಹೊಸ ಕ್ಯಾಂಪಸ್ ಅನ್ನು ನಳಂದ ವಿಶ್ವವಿದ್ಯಾಲಯ ಕಾಯಿದೆ-2010ರಡಿ ನಿರ್ಮಾಣ ಮಾಡಲಾಗಿದೆ.

2022-24, 2023-25 ಶೈಕ್ಷಣಿಕ ವರ್ಷಗಳಿಗೆ ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಮತ್ತು 2023-27 ರಲ್ಲಿ ಪಿಎಚ್‌ಡಿ ಕಾರ್ಯಕ್ರಮಕ್ಕೆ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ಭಾರತದವರಷ್ಟೇ ಅಲ್ಲದೇ, ಅರ್ಜೆಂಟೀನಾ, ಬಾಂಗ್ಲಾದೇಶ, ಭೂತಾನ್, ಕಾಂಬೋಡಿಯಾ, ಘಾನಾ, ಇಂಡೋನೇಷಿಯಾ, ಕೀನ್ಯಾ, ಲಾವೋಸ್, ಲೈಬೀರಿಯಾ, ಮ್ಯಾನ್ಮಾರ್, ಮೊಜಾಂಬಿಕ್, ನೇಪಾಳ, ನೈಜೀರಿಯ, ಕಾಂಗೋ ಗಣರಾಜ್ಯ, ದಕ್ಷಿಣ ಸುಡಾನ್, ಲಂಕಾ, ಸರ್ಬಿಯ, ಸಿಯೆರಾ ಲಿಯೋನ್, ಥೈಲ್ಯಾಂಡ್, ಟರ್ಕಿ, ಉಗಾಂಡಾ, ಅಮೆರಿಕ, ವಿಯೆಟ್ನಾಂ ಮತ್ತು ಜಿಂಬಾಬ್ವೆ ದೇಶದ ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡಲು ಬಂದಿದ್ದಾರೆ.

ಪಾಕ್‌ನಲ್ಲಿರುವ ದಾವೂದ್ ಸಿಐಎ ಕೈಗೊಂಬೆ

ಮುಂಬೈ: ಭೂಗತ ಪಾತಕಿ ದಾವೂದ್ ಇಬ್ರಾಹಿಂ ಪಾಕಿಸ್ತಾನದಲ್ಲಿ ಅಡಗಿಕೊಂಡಿದ್ದರೂ ಈಗ ಅಮೆರಿಕದ ಸೆಂಟ್ರಲ್ ಇಂಟೆಲಿಜೆನ್ಸ್ ಏಜೆನ್ಸಿ(ಸಿಐಎ)ಯ ಕೈಗೊಂಬೆಯಾಗಿದ್ದಾನೆ. ಪಾಕಿಸ್ತಾನದಲ್ಲಿ ದಾವೂದ್‌ನನ್ನ ಅಮೆರಿಕದ ಸಿಐಎ ತನ್ನ ಕಾರ್ಯಾಚರಣೆಗಳಿಗೆ ಪ್ರಮುಖ ದಾಳವಾಗಿ ಮಾಡಿಕೊಂಡಿದೆ ಎಂದು ಮಾಧ್ಯಮ ವರದಿ ಮಾಡಿದೆ.

ದಾವೂದ್ ಈ ಮೊದಲು ಪಾಕಿಸ್ತಾನದ ಇಂಟರ್ ಸರ್ವಿಸ್ ಇಂಟೆಲಿಜೆನ್ಸ್(ಐಎಸ್‌ಐ)ನ ಭಾಗವಾಗಿದ್ದ. ಪಾತಕಿಗೆ ಐಎಸ್‌ಐನಲ್ಲಿ ಹೆಚ್ಚುವರಿ ಮಹಾನಿರ್ದೇಶಕ ಸ್ಥಾನವನ್ನು ಪಾಕ್ ಸರಕಾರ ನೀಡಿತ್ತು ಎಂದು ಹೇಳಲಾಗಿದೆ.

ಜತೆಗೆ ಪದೇ ಪದೇ ಪಾಕಿಸ್ತಾನದಲ್ಲಿ ತನ್ನ ನೆಲೆ ಬದಲಿಸುತ್ತಿದ್ದ ದಾವೂದ್, ಈಗ ನೇರವಾಗಿ ಇಸ್ಲಾಮಾಬಾದ್‌ನಲ್ಲಿರುವ ಸಿಐಎ ನಿರ್ದೇಶಕರಿಗೆ ವರದಿ ಮಾಡಿಕೊಳ್ಳುತ್ತಿದ್ದಾನೆ. ಐಎಸ್‌ಐಗೆ ಯಾವುದಾದರೂ ಕೆಲಸ ಆಗಬೇಕಾದಲ್ಲಿ ಅಮೆರಿಕದ ಶಕ್ತಿಶಾಲಿ ಗೂಢಚರ್ಯೆ ಸಂಸ್ಥೆ ಮೂಲಕವೇ ಸಾಗಬೇಕಿದೆ. ವಯಸ್ಸು, ಅನಾರೋಗ್ಯದ ಹೊರತಾಗಿಯೂ ಭಯೋತ್ಪಾದನೆ, ಮಾದಕವಸ್ತು ಕಳ್ಳ ಸಾಗಣೆ ಸಾಮ್ರಾಜ್ಯದಲ್ಲೇ ಪಾತಕಿ ದಾವೂದ್ ಮುಂದುವರೆದಿದ್ದಾನೆ. ಆಫ್ಘಾನಿಸ್ತಾನ ಹಾಗೂ ತಾಲಿಬಾನ್ ಜತೆಗಿನ ಆತನ ಒಡನಾಟ ಸಿಐಎಗೆ ದಾವೂದ್ ಮೇಲಿನ ಆಸಕ್ತಿಯನ್ನು ಮತ್ತಷ್ಟು ಹೆಚ್ಚಿಸಿದೆ ಎನ್ನಲಾಗಿದೆ.

ಸಾಮಾಜಿಕ ತಾಣ ಪಯಣ

ವಿ ಟಾಕೀಸ್

ಸೋನೆ ಮಳೆ

ಇಳೆಯಲಿ ಮುಂಗಾರು ಮಳೆಯ ಸೋನೆ
ಬಾಗಿ ಬಳುಕುತಲಿ ತೂಗುತಿದೆ ಹೊನ್ನ ತೆನೆ
ತರುಲತೆಯಲಿ ಭ್ರಮರ ಝೇಂಕಾರ
ಕುಕಿಲಗಾನದ ತಾಳಮೇಳ ಬಹು ಮಧುರ

ಸೋನೆ ಮಳೆ ಸುರಿದ ಮುಂಜಾನೆ
ಮುತ್ತಿನಹಾರ ತೊಟ್ಟ ನವಜವ್ವನೆ
ಇಳೆ ಪಚ್ಚೆವರ್ಣ ಲಸಿತ ಅಂಗನೆ
ಹೊನಲ ಲಲಂತಿಕೆ ತೊಟ್ಟ ವದನೆ

ತಿಳಿಗೊಳಗಳು ತುಂಬಿ ಹರಿದು
ತರತರದ ಪುಷ್ಪಗಳು ಕಂಪು ಬಿರಿದು
ವೈವಿಧ್ಯ ಜೀವಗಳ ದಿವ್ಯ ದರ್ಶನ
ಸೃಷ್ಟಿಕರ್ತನ ಕಲೆಗೆ ಬೆರಗಾಗಿ ಮನ

ಭಾವಗಳು ಹೃದಯದಿ ದಾಂಗುಡಿಯಿಟ್ಟು
ಕಡಲಲಿ ಮೂಡಿರಬಹುದೇ ಸ್ವಾತಿ ಮುತ್ತು
ಪೀಚುಕಾಯಿ ಸವಿ ಹಣ್ಣಾಗುವ ಹೊತ್ತು
ಬಾನಾಡಿಗಳು ಹಾಡಿವೆ ಹೊರಳಿಸಿ ಕಣ್ಣುಕತ್ತು.

ಇನ ಇಳೆಯರ ಸಲ್ಲಾಪ ವೈಭವ
ಕಂಗೊಳಿಸಿ ಇಂದ್ರಚಾಪ ಸಪ್ತವರ್ಣ
ಹಸಿರ ಅಂಕುರಗಳಲಿ ಜೀವಚೈತನ್ಯ
ಸೆಳೆವ ಸೊಬಗು ಅನನ್ಯ ಸೃಷ್ಟಿಕಾವ್ಯ

• **ಎಸ್. ಎಲ್. ವರಲಕ್ಷ್ಮಿ ಮಂಜುನಾಥ್**

ಭಾವಗೀತೆ

ನಿನಗಾಗಿಯೆ ನಾನು ಬರೆದ
ಭಾವಗೀತೆ ಒಂದಿದೆ
ಅನುರಾಗದ ಸ್ವರಕೆ ಬೆರೆತು
ನಿನ್ನ ದನಿಗೆ ಕಾದಿದೆ

ಇಳಿ ಸಂಜೆಯ ಮೊದಲ ಭೇಟಿ
ಪಲ್ಲವಿಯಲಿ ಅರಳಿದೆ
ತಡರಾತ್ರಿಯ ಮಧುರ ಮಾತು
ನೆನೆದು ಮನವು ನಾಚಿದೆ

ಹಗಲಿನಲ್ಲಿ ಬಿಡದ ನೆನಪು
ಇರುಳಿನಲ್ಲು ಕಾಡಿದೆ
ಮೊದಲ ಮೌನ, ಕ್ಷಣಿಕ ವಿರಹ
ಚರಣವೆರಡು ಬರೆಸಿದೆ

ನೀನೆ ಬರೆದ ಕೊನೆಯ ಚರಣ
ನಿನ್ನ ಬಳಿಯೆ ಉಳಿದಿದೆ
ಅದೇ ಸಂಜೆ, ಅದೇ ತೀರ
ನಮಗಾಗಿಯೆ ಕಾದಿದೆ

• **ಸುಪ್ರೀತಾ ಕೆ ಆರ್**

ಬಾಂದಳದಲಿ ನಗುವ ದಿನಪ

ದಿಗಂತದಿ ನಿತ್ಯ ಮೆರೆವ
ದಿನಪನಿಗೆ ಸಮನಾರಿಹರು!
ಜತನದಿ ಆಗಮಿಸಿ ನೀಗಿಸಿಹನಿವ
ಜಗದಲಡರಿದ ತಿಮಿರು!

ಭಾಸ್ಕರನ ಆಗಮನಕೆ ನೀಲಿ
ಬಾನಲಿ ಮೂಡಿದೆ ಹೊಂಬಣ್ಣ..!
ಇವನೀಯುವ ದಿವ್ಯಕಾಂತಿಗೆ ಜಗ
ತೆರೆವುದೇ ಅಂತರ್ಮನದ ಕಣ್ಣ!

ದಿನವೂ ಅಂಬರದಲಿವ
ಮೂಡಿಸುವ ಹೊನ್ನಿನ ಚಿತ್ತಾರಕೆ..!
ತರುಲತೆಗಳು ನಿತ್ಯ ಅರಳಿದೆ
ರವಿಯ ಕಂಡ ಸಂಭ್ರಮಕೆ!

ಲೋಕದಿ ಕ್ಷಣಕಾಲ ನೀಗುವುದೇ
ದಿನವೂ ಕಾಡುವ ಕೊರತೆ!
ಕಂಡು ಅವನಿ-ನೇಸರನ
ಬತ್ತದ ಸವಿಯೊಲವಿನೊರತೆ!

• **ಸುಮನಾ ರಮಾನಂದ , ಮುಂಬೈ**

ಕಾರ್ಟೂನ್

ಚುನಾವಣೆಯಲ್ಲಿ ಹೆಚ್ಚು ಸೀಟು ಬಂದಿದ್ದರೆ
ಈ ರೀತಿ ಹೇಳಿಕೆ ಕೊಡುತ್ತಿರಲಿಲ್ಲ ಅಲ್ವೇನ್ರೀ ..!!!

• **ಎಚ್.ಎಸ್. ವಿಶ್ವನಾಥ್**

ಹನಿ ಫನ್ನಿ

ಹೆಂಡತಿ
ಮನೆಯಲ್ಲಿದ್ದರೆ
ಶಬ್ದ,
ಗಂಡ
ಮನೆಯಲ್ಲಿದ್ದರೆ
ನಿಶ್ಯಬ್ದ

• **ಬಾಲು ಪಟಗಾರ**

ತರ್ಲೆ-ತಿಮ್ಮಾ

ನಗುವ ನಯನದಲಿ ನೂರೆಂಟು ಭಾವ.. ಚಿತ್ರದಲ್ಲಿರುವರು, ಇವಾನ

ಪಂಜರದೊಳಗಿನ ಬದುಕು!

• **ಟಿ .ಎಸ್ .ಪ್ರತಿಭಾ,ಚಿತ್ರದುರ್ಗ**

ಬಂಧನ ಶಬ್ದಕ್ಕೆ ವಿಲೋಮವಾಗಿ ಸ್ವಾತಂತ್ರ್ಯ ಅನ್ನುವ ಶಬ್ದ ಬಹಳವಾಗಿ ಧ್ವನಿಸುತ್ತದೆ. ಸ್ವಚ್ಛಂದವಾಗಿ ಹಾರಬೇಕಾಗಿದ್ದ ಹಕ್ಕಿಗಳನ್ನು ಅಂದರೆ ಗಿಳಿ, ಲವ್ ಬರ್ಡ್ಸ್‌ನಂತಹ ಹಕ್ಕಿಗಳನ್ನು ಪಂಜರದೊಳಗಿಟ್ಟು ಸಾಕುವ ಖಯಲಿ ಇತ್ತೀಚೆಗಂತೂ ಹೆಚ್ಚಾಗುತ್ತಿದೆ! ಪಾಪ ಆ ಹಕ್ಕಿಗಳಿಗೆ ಆ ಪಂಜರವೇ ಪುಟ್ಟ ಪ್ರಪಂಚದ ಬಂಧನ. ಕಳೆದ ಮೂರು ವರ್ಷಗಳಿಂದ ನನ್ನ ಮಗನು ಗಾಜಿನ ಒಂದು ಪುಟ್ಟ ಬೌಲ್ ನಲ್ಲಿ ಮೀನನ್ನು ಸಾಕುತ್ತಿದ್ದಾನೆ. ಒಮ್ಮೆ ನನ್ನ ಮಗನೊಂದಿಗೆ ಮಾತನಾಡುತ್ತಾ ನಾನು, 'ಪಾಪ ಈ ಮೀನು ಯಾವುದು ಕೆರೆಯಲ್ಲೊ ನದಿಯಲ್ಲೋ ಇರುತ್ತಿತ್ತು' ಅಂದೆ. ತಕ್ಷಣ ಅವನು, 'ಅಮ್ಮ ಇದು ತನ್ನ ಗಾಜಿನ ಮನೆಯಲ್ಲಿ ಯಾವ ದೊಡ್ಡ ಮೀನುಗಳಿಗೆ ಆಹಾರವಾಗದೆ ಇಲ್ಲಿ ಕ್ಷೇಮವಾಗಿದೆ' ಎಂದು ಪ್ರತಿಕ್ರಿಯಿಸಿದ್ದು ನೋಡಿ ನನಗೆ ಏನು ಹೇಳಬೇಕು ತೋಚಲಿಲ್ಲ. ಪ್ರಕೃತಿಯಲ್ಲಿ ಒಂದಾಗಿ ಸ್ವಚ್ಛಂದವಾಗಿ ಹಾರಾಡುತ್ತಾ ಗಿಡ ಮರಗಳಲ್ಲಿ ಕೂತು ಚಿಲಿಪಿಲಿ ಉಲಿಯುವ ಹಕ್ಕಿಗಳ ನಾದ ಕೇಳಲೇ ಚೆಂದ.

ರಾಜ್‌ಕುಮಾರ್ ಅಭಿನಯದ ಮಯೂರ ಚಿತ್ರದಲ್ಲಿ ರಾಜಕುಮಾರನು ರಾಜಕುಮಾರಿಯನ್ನು ಸಂಧಿಸಿದಾಗ ರಾಜಕುಮಾರಿಯ ಅಂತಃಪುರದಲ್ಲಿ ಪಂಜರದೊಳಗಿದ್ದ ಗಿಳಿಯನ್ನು ರಾಜ ನೋಡಿ ಅದನ್ನು ಪಂಜರದ ಬಂಧನದಿಂದ ಮುಕ್ತಿಗೊಳಿಸಿ ಹಾರಲು ಬಿಡುವ ಸನ್ನಿವೇಶ ಎಷ್ಟೊಂದು ಅರ್ಥಪೂರ್ಣವಾಗಿದೆ.

ಮಾನವ ಮೂಲತಃ ಸಂಘ ಜೀವಿ, ಯಾವ ಮನುಷ್ಯ ಜೀವಿಯು ಒಂಟಿಯಾಗಿ ಬದುಕಲು ಸಾಧ್ಯವಿಲ್ಲ. ಅಪರಾಧ ಕೃತ್ಯಗಳನ್ನು ಎಸಗಿ ಸೆರೆಮನೆ ವಾಸ ಶಿಕ್ಷೆ ಅನುಭವಿಸುವ ಕೈದಿಗಳು ಕೂಡ ತಮಗೆ ಈ ಸೆರೆಮನೆ ವಾಸದಿಂದ ಎಂದು ಮುಕ್ತಿ ದೊರೆಯುವುದು ಎಂದು ಪರಿತಪಿಸುತ್ತಾರೆ. ಸಂಸಾರ ಅನ್ನುವುದನ್ನು ಕೆಲ ದಾಸ ಶ್ರೇಷ್ಠರು ಬಂಧನ ಎಂದು ಭಾವಿಸಿರುವ

ಉದಾಹರಣೆಯನ್ನು ನಾವು ನೋಡಬಹುದು. ಪುರಂದರದಾಸರು ಭವ ಬಂಧನ ದೊಳು ಸಿಲುಕಿ ಎಂಬ ಸಾಲುಗಳನ್ನು ಹೇಳಿರುವುದು ಸಂಸಾರ ಎನ್ನುವ ಬಂಧನದಿಂದ ಹೊರಬರಲು ಕಷ್ಟಸಾಧ್ಯ ಎಂಬ ಅರ್ಥ ಕಾಣಬಹುದು.

ಕ್ರೂರ ಮೃಗಗಳು ಕಾಡಿನಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಾ ತಮ್ಮ ಆಹಾರವನ್ನು ಭೇಟಿ ಮಾಡಿ ಕೊಂಡು ತಮ್ಮ ಹಸಿವನ್ನು ನೀಗಿಸಿಕೊಳ್ಳುತ್ತವೆ. ಇದು ಪ್ರಕೃತಿಯಲ್ಲಿಯ ಆಹಾರ ಸರಪಳಿಯ ವ್ಯವಸ್ಥೆಯನ್ನು ಸೂಚಿಸುತ್ತದೆ. ಈ ಸಂದರ್ಭದಲ್ಲಿ ಬಿಗ್ ಬಾಸ್ ಅನ್ನುವ ರಿಯಾಲಿಟಿ ಶೋ ನೆನಪಾಗುತ್ತದೆ, ಹೊರಗಿನ ಪ್ರಪಂಚದ ಸಂಪರ್ಕವೇ ಇಲ್ಲದೆ ಕೆಲವೇ ಜನರ ಮಧ್ಯೆ ಇರಬೇಕಾದ ಈ ರೀತಿ ಶೋನಲ್ಲಿ ಭಾಗವಹಿಸಲು ಕೆಲವು ಸೆಲೆಬ್ರಿಟಿಗಳು ನಿರಾಕರಿಸುತ್ತಾರೆ ಕಾರಣ ಸ್ವತಂತ್ರ.

ಬಿಟ್ಟಿ ಸಲಹೆಗಳು ಬೇಕಿಲ್ಲ!

• **ಸಂದೀಪ್ ಶರ್ಮಾ ಮೂಟೇರಿ**

ಇತ್ತೀಚೆಗೆ ಕಪಿಲ್ ಶರ್ಮಾ ಕಾರ್ಯಕ್ರಮದಲ್ಲಿ, ನಿಮಗೆ ಕ್ರಿಕೆಟ್ ಆಟದ ವಿಷಯದಲ್ಲಿ ಜನ ಏನಾದರೂ ಅಭಿಪ್ರಾಯಗಳನ್ನು ಕೊಡುತ್ತಾರಾ? ಹೀಗೆ ಆಡಿದರೆ ಚೆನ್ನಾಗಿತ್ತು, ಮೊದಲು ಬ್ಯಾಟಿಂಗ್ ಆರಿಸಿಕೊಂಡರೆ ಗೆಲ್ಲುತ್ತಿದ್ದಿರಿ. ನೀವು ಸಿಕ್ಸರ್ ಅನ್ನು ಈ ರೀತಿ ಹೊಡೆಯಬಹುದಿತ್ತು ಎಂದೆಲ್ಲಾ ಪುಕ್ಕಟೆ ಸಲಹೆ ಕೊಡುತ್ತಾರಾ' ಎಂದು ಕ್ರಿಕೆಟಿಗ ಹಿಟ್ ಮ್ಯಾನ್ ರೋಹಿತ್ ಶರ್ಮಾ ಅವರನ್ನು ಕಪಿಲ್ ಶರ್ಮಾ ಪ್ರಶ್ನಿಸಿದರು. ಆಗ ರೋಹಿತ್, 'ಹೌದು ಜನ ಹೆಚ್ಚೆಚ್ಚು ಮಾರ್ಗದರ್ಶನ ಕೊಡುತ್ತಾರೆ. ತಮಗೆ ತಿಳಿದದ್ದು, ತಿಳಿಯದ್ದು ಎಲ್ಲ ಹೇಳಲು ಹಾತೊರೆಯುತ್ತಾರೆ. ನಾವು ಮ್ಯಾಚ್ ನಡೆಯುವ ದಿನಗಳಲ್ಲಿ ಏರ್‌ಪೋರ್ಟಿಂದ ಇಳಿದು ನಮ್ಮ ಬಸ್ಸಿಗೆ ಹತ್ತಲು ಹೋಗುವಾಗ ಕಿವಿಗೆ ಹ್ಯಾಂಡ್ಸ್ ಫ್ರೀ ಹಾಕಿಕೊಂಡಿರುತ್ತೇವೆ ಏಕೆ ಗೊತ್ತಾ? ಜನರ ಯಾವ ಮಾತು ತಾಕಬಾರದೆಂದು ಕಿವಿ ಮುಚ್ಚಿಕೊಂಡಿರುತ್ತೇವೆ. ಜಯಕಾರ, ನಿಂದನೆ, ಪ್ರಶಂಸೆ, ಟೀಕೆ ಈ ಯಾವುದೂ ಆ ಕ್ಷಣದಲ್ಲಿ ಮನಸ್ಸಿಗೆ ದಾಟಬಾರದೆಂದು ಸ್ವಯಂ ನಿರ್ಬಂಧ ಹೇರಿಕೊಳ್ಳುತ್ತೇವೆ. ಎಲ್ಲರೂ ಹೇಳುವುದನ್ನು ಕೇಳುತ್ತಿದ್ದರೆ ನೀವು ಸಂಪೂರ್ಣ ಗೊಂದಲಗಳಲ್ಲಿಯೇ ಮುಳುಗಿ ಬಿಡುತ್ತೀರಿ' ಎಂದರು.

ತನ್ನ ಕಾರ್ಯವನ್ನು ಹೀಗೆ ಮಾಡಬೇಕು ಎಂದು ನಿಶ್ಚಯಿಸಿ ಹೊರಟವನು ಕೊನೇ ಗಳಿಗೆಯಲ್ಲಿ ಎಲ್ಲರ ಸಲಹೆ, ಸೂಚನೆ, ಹಿತವಚನ ಕೇಳುತ್ತಾ ನಿಲ್ಲುವುದಿಲ್ಲ. ಆಗ ಜನ ದುರಂಹಕಾರಿ ಎಂದರೂ ಅಡ್ಡಿಯಿಲ್ಲ. ಮನಸ್ಸನ್ನು ಚಂಚಲಗೊಳಿಸುವ ಇಲ್ಲವೇ ಘಾಸಿ ಮಾಡುವ ಎಲ್ಲಾ ಮಾತುಗಳಿಂದ ಆತ ತಪ್ಪಿಸಿಕೊಳ್ಳುತ್ತಾನೆ. ಪರ ನಿಂದೆ ಮತ್ತು ಸ್ತುತಿಗಳಿಂದ ದೂರವಿರಬೇಕೆಂದು ವಚನಕಾರರು ಹೇಳಿದ್ದು ಈ ಕಾರಣಕ್ಕೆ ಇರಬೇಕು.

ಒಮ್ಮೆ ಅಪಘಾತದಲ್ಲಿ ತನ್ನ ಕುಟುಂಬದ ಸದಸ್ಯರನ್ನು ಕಳೆದುಕೊಂಡ ಮಿತ್ರರೊಬ್ಬರನ್ನು ಕಂಡು ಸಾಂತ್ವನ ಹೇಳಿ ಬರಲು ಸ್ನೇಹಿತರ ಜತೆ ಹೋಗಿದ್ದೆ. ಹೀಗೆ ಆಕಸ್ಮಿಕಗಳಲ್ಲಿ ರಕ್ತ ಸಂಬಂಧಿಗಳನ್ನು ಕಳೆದು ಕೊಂಡವರ ಅನೇಕ ಘಟನೆಗಳನ್ನು ಹೇಳಿ ಸಂತೈಸಲು ನನ್ನ ಸ್ನೇಹಿತರು ಯತ್ನಿಸಿದರು. 'ಇವೆಲ್ಲಾ ಬದುಕಿನ ಅನಿರೀಕ್ಷಿತಗಳು. ಆದಷ್ಟು ಬೇಗ ಈ ಘಟನೆಯಿಂದ ಹೊರಬರಲು ಪ್ರಯತ್ನಿಸಿ, ಮರೆತರೆ ಒಳಿತು ಕೂಡ. ಮನಸ್ಸಿಗೆ ಹೆಚ್ಚು ಹಚ್ಚಿಕೊಂಡರೆ ಖಿನ್ನತೆ ಬಾಧಿಸಬಹುದು. ನಿಮ್ಮ ಮಕ್ಕಳ ಮೇಲೂ ಅದರ ಪರಿಣಾಮ ಬೀರಬಹುದು. ಒಂಟಿಯಾಗಿ ಕೂತು ಅದೇ ಘಟನೆಗಳ ಮೆಲುಕು ಹಾಕಿ ದುಃಖಿಸುವ ಬದಲು ಬೇರೆ ಕೆಲಸಗಳಲ್ಲಿ ಮಗ್ನರಾಗಿ. ಮುಂದಿನ ಬದುಕಿನ ಬಗ್ಗೆ ಯೋಚಿಸಿ' ಎಂದೆಲ್ಲಾ ಹೇಳಿ ಸಂತೈಸಿದರು. ಸ್ನೇಹಿತನ ಮಾತನ್ನು ಕೇಳುತ್ತಾ ಕೂತಿದ್ದ ಆತನ ಸೋದರ ಮಾವ ತಟ್ಟನೆದ್ದರು. ತುಂಬು ಹಿರಿಯ. ದಿಟ್ಟವಾಗಿ ನಿಂತುಗಟ್ಟಿ ದನಿಯಲ್ಲಿ, 'ಈ ಜಗತ್ತಿನಲ್ಲಿ ಉಚಿತವಾಗಿ ಸಿಗುವುದು ಸಲಹೆಗಳು ಮಾತ್ರ. ಹೇಳುವುದು ಪಾಲಿಸುವಷ್ಟು ಸಲೀಸಲ್ಲ. ಆದವರಿಗಷ್ಟೇ ಅದರ ಮರ್ಮ, ಕರ್ಮ, ನೋವು ತಿಳಿಯುವುದು. ತಣ್ಣಗಿರುವವರಿಗೆ ಹೇಳಲು ನೂರು ಮಾತು, ಉದಾಹರಣೆ ಸಿಗುತ್ತವೆ. ತಿಳಿ ಹೇಳುವ ಜನರೂ ಇಂಥ ಸಮಸ್ಯೆಗಳು ಅವರಿಗೇ ಅಮರಿಕೊಂಡಾಗ ಈ ತರಹವೇ ಕುಗ್ಗಿ, ಕೂತು ಅಬ್ಬರಿಸುತ್ತಾರೆ. ಮನಸ್ಸಿನ ಭಯ, ಆತಂಕ, ಒಗ್ಗರಣೆ ಮಾತುಗಳಿಂದ ಹೋಗು ವುದಿಲ್ಲ. ಕಾಲ ಎಲ್ಲವನ್ನೂ ಬದಲಿಸಬೇಕೆ ಹೊರತು ತೋರಿಕೆಯ ಮಾತು, ಪುಕ್ಕಟ್ಟೆ ಉಪದೇಶದಿಂದ ಪ್ರಯೋಜನವಿಲ್ಲ' ಎಂದು ಹೇಳಿದರು.

ಕೊಂಚ ಒರಟಾಗಿ ನಡೆದುಕೊಂಡ ರೀತಿ ನಮ್ಮಿಬ್ಬರಿಗೂ ಇರಿಸುಮುರುಸಾಯಿತು. ಅವರ ಮಾತಿನಲ್ಲಿ ಸತ್ಯವಿತ್ತು. ನಾವು ಆಚರಿಸದ ಅನೇಕ ಸಂಗತಿಗಳನ್ನು ಬೇರೆಯವರಿಗೆ ಉಣಿಸಲು ಹೋಗುತ್ತೇವೆ. ಮತ್ತೊಬ್ಬರ ಸಮಸ್ಯೆ ಬಗೆಹರಿಸಲು ಹೊರಡುವ ನಾವೇ ಅನೇಕ ಭ್ರಾಮಕ ಸ್ವಪ್ನಗಳಲ್ಲಿ ಮುಳುಗಿರುತ್ತೇವೆ.

ಸೆಪ್ಟೆಂಬರ್ ನಲ್ಲಿ ಮ್ಯಾಕ್ಸ್ ತೆರೆಗೆ



ಕಿಚ್ಚ ಸುದೀಪ್ ಅಭಿನಯದ ಮ್ಯಾಕ್ಸ್ ಯಾವಾಗ ತೆರೆಗೆ ಬರಲಿದೆ ಎಂದು ಸಿನಿಪ್ರಿಯರು ಕಾದುಕುಳಿತ್ತಿದ್ದಾರೆ. ಹೀಗಿರುವಾಗಲೇ ಸುದೀಪ್ ಚಿತ್ರದ ಬಗ್ಗೆ ಅಪ್ಡೇಟ್ ನೀಡಿದ್ದಾರೆ. ಮ್ಯಾಕ್ಸ್ ಸೆಪ್ಟೆಂಬರ್ ನಲ್ಲಿ ತೆರೆಗೆ ತರಲು ಪ್ಲಾನ್ ಮಾಡಿದ್ದೇವೆ ಎಂದಿದ್ದಾರೆ. ಇದನ್ನು ಕೇಳಿ ಸಿನಿಪ್ರಿಯರು ಖುಷಿಯಾಗಿದ್ದಾರೆ. ಬಹು ನಿರೀಕ್ಷೆಯ ಮ್ಯಾಕ್ಸ್ ಚಿತ್ರ ಚಿತ್ರೀಕರಣ ಮಹಾಬಲಿಪುರಂನಲ್ಲಿ ನಡೆದಿದೆ. ಚಿತ್ರಕ್ಕಾಗಿ ಅದ್ದೂರಿ ಸೆಟ್ ಹಾಕಿ ಅಲ್ಲಿಯೇ ಚಿತ್ರೀಕರಣ ನಡೆಸಲಾಗಿದೆ. ಸದ್ಯ ಶೂಟಿಂಗ್ ಮುಗಿಸಿರುವ ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಬ್ಯುಸಿಯಾಗಿದೆ.

ಮ್ಯಾಕ್ಸ್ ಆ್ಯಕ್ಷನ್ ಸಿನಿಮಾವಾಗಿದ್ದು ಕಿಚ್ಚ ಸುದೀಪ್ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ವಿಜಯ್ ಕಾರ್ತಿಕೇಯ ನಿರ್ದೇಶನ ಮ್ಯಾಕ್ಸ್ ಹೈ ಬಜೆಟ್ ಸಿನಿಮಾವಾಗಿದ್ದು, ಕಲೈಪುಲಿ ಎಸ್ ಧನು ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ವರಲಕ್ಷ್ಮಿ ಶರತ್ ಕುಮಾರ್, ಸುಕೃತಾ ವಾಗ್ಲೆ, ಸಂಯುಕ್ತಾ ಹೊರನಾಡು, ಇರುವರಸು ಮುಂತಾದವರು ತಾರಾಬಳಗದಲ್ಲಿದ್ದಾರೆ. ಮ್ಯಾಕ್ಸ್ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಕನ್ನಡ, ಹಿಂದಿ ಸೇರಿದಂತೆ ಪಂಚಭಾಷೆಗಳಲ್ಲಿ ಮೂಡಿಬರಲಿದೆ.



ರಾಮರಸ ಕುಡಿದ ಕಾರ್ತಿಕ್

ಬಿಗ್ ಬಾಸ್ ವಿನ್ನರ್ ಕಾರ್ತಿಕ್ ಮಹೇಶ್ ರಾಮರಸ ಚಿತ್ರದಲ್ಲಿ ನಾಯಕನಾಗಿ ನಟಿಸುತ್ತಿದ್ದಾರೆ. ಈ ಚಿತ್ರದ ನಾಯಕ ನಟನನ್ನು ಪರಿಚಯಿಸುವ ವಿಶೇಷ ವಿಡಿಯೊವನ್ನು ಕಿಚ್ಚ ಸುದೀಪ್ ಬಿಡುಗಡೆ ಮಾಡಿ ಶುಭಕೋರಿದರು. ಬಿಗ್ ಬಾಸ್ ಪ್ರತಿ ಸೀಸನಲ್ಲೂ ಒಬ್ಬ ಹೊಸ ಹೀರೋ ಹುಟ್ಟಿಕೊಳ್ಳುತ್ತಿದ್ದಾನೆ. ಬಿಗ್ ಬಾಸ್ ಗೆಲ್ಲುವುದು ಅಷ್ಟು ಸುಲಭವಲ್ಲ. ಕಾರ್ತಿಕ್ ಅವರಿಗಂತೂ ಬಹಳಷ್ಟು ಸ್ಪರ್ಧಿಗಳಿದ್ದರು. ಅದು ಅವರಿಗೆ ಗೊತ್ತು. ಬಿಗ್ ಬಾಸ್ ಗೆದ್ದ ಮೇಲೆ ಕಾರ್ತಿಕ್ ಅವರಿಗೆ ಒಳ್ಳೆಯ ಅವಕಾಶಗಳು ಅರಸಿ ಬರುತ್ತಿವೆ. ಕಾರ್ತಿಕ್ ಸರಿಯಾದ ಹಾದಿಯಲ್ಲಿದ್ದಾರೆ. ಈ ಅವಕಾಶವನ್ನು ಚೆನ್ನಾಗಿ ಬಳಸಿಕೊಳ್ಳಿ ಎಂದು ಸುದೀಪ್ ಹಾರೈಸಿದರು.

ಜಟ್ಟ ಖ್ಯಾತಿಯ ಗಿರಿರಾಜ್ ನಿರ್ದೇಶನ ಮಾಡುತ್ತಿರುವ ರಾಮರಸ ಚಿತ್ರವನ್ನು ಗುರುದೇಶಪಾಂಡೆ ನಿರ್ಮಿಸುತ್ತಿದ್ದಾರೆ. ಕಾರ್ತಿಕ್ ಈ ಚಿತ್ರದ ಮೂಲಕ ಬಿಗ್ ಬ್ರೇಕ್ ನಿರೀಕ್ಷೆಯಲ್ಲಿದ್ದಾರೆ.

ಜಿ ಅಕಾಡೆಮಿಯ ಹದಿನಾರು ಜನ ಹೊಸ ಪ್ರತಿಭೆಗಳಿಗೆ ತರಬೇತಿ ನೀಡಿ ಈ ಚಿತ್ರದಲ್ಲಿ ನಟಿಸಲು ಅವಕಾಶ ನೀಡಲಾಗಿದೆ. ಬಿ.ಜೆ.ಭರತ್ ಸಂಗೀತ ನಿರ್ದೇಶನ, ಎ.ವಿ.ಕೃಷ್ಣಕುಮಾರ್, ಅರ್ಜುನ್ ಕಿಟ್ಟು ಸಂಕಲನ, ಮುರಳಿ ಮಾಸ್ಟರ್ ನೃತ್ಯ ನಿರ್ದೇಶನ ಹಾಗೂ ಪುನೀತ್ ಆರ್ಯ ಸಾಹಿತ್ಯ ಈ ಚಿತ್ರಕ್ಕಿದೆ.

ನಸಾಬ್ ಟ್ರೇಲರ್ ರಿಲೀಸ್



ನೈಜ ಕಥೆಯಾಧಾರಿತ ನಸಾಬ್ ಚಿತ್ರದ ಟ್ರೇಲರ್ ಹಾಗೂ ಹಾಡುಗಳು ಬಿಡುಗಡೆಯಾಗಿವೆ. ಬಂಜಾರ ಶಕ್ತಿ ಪೀಠದ ಕುಮಾರ ಮಹಾರಾಜ್ ಹಾಗೂ ಮಾಜಿ ಉಪ ಸಭಾಪತಿ ರುದ್ರಪ್ಪ ಎಂ.ಲಮಾಣಿ ಟ್ರೇಲರ್, ಹಾಡುಗಳನ್ನು ಬಿಡುಗಡೆ ಮಾಡಿ ಶುಭಕೋರಿದರು.

ಬಂಜಾರ ಸಮುದಾಯದ ಯುವಕನ ಸಾಹಸಮಯ ಬದುಕನ್ನು ಚಿತ್ರದಲ್ಲಿ ಕಟ್ಟಿಕೊಡಲಾಗಿದೆ.

ಕೀರ್ತಿ ಕುಮಾರ್ ನಾಯ್ಕ್ ಈ ಚಿತ್ರವನ್ನು ನಿರ್ದೇಶಿಸುವುದರ ಜತೆಗೆ ನಾಯಕನಾಗಿಯೂ ಅಭಿನಯಿಸಿದ್ದಾರೆ. ಶೆಫಾಲಿ ಸಿಂಗ್ ಸೋನಿ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಬಿ.ಜಯಶ್ರೀ, ಪದ್ಮಾ ವಾಸಂತಿ, ವಿಜಯ ಕಾಶಿ, ತಬಲಾ ನಾಣಿ, ನಾಗೇಂದ್ರ ಅರಸ್, ಶೋಭ್ ರಾಜ್, ಪ್ರಕಾಶ್, ಹನುಮಂತೇ ಗೌಡ ಮುಂತಾದವರು ತಾರಾಗಣದಲ್ಲಿದ್ದಾರೆ. ಕೀರ್ತಿ ಕ್ರಿಯೇಷನ್ಸ್ ಲಾಂಛನದಲ್ಲಿ ಸುಜಾತ ಕಿಶೋರ್ ನಾಯ್ಕ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಚಿತ್ರಕ್ಕೆ ರಾಗಂ ಸಂಗೀತ ಸಂಯೋಜಿಸಿದ್ದಾರೆ.

> ನಸಾಬ್ ಎಂದರೆ ಲಮಾಣಿ ಭಾಷೆಯಲ್ಲಿ ನ್ಯಾಯ ಎಂದು ಅರ್ಥ. ನಾನು, ನನ್ನ ಜೀವನದ ಕಥೆಯನ್ನು ನಸಾಬ್ ಎಂಬ ಪುಸ್ತಕ ರೂಪದಲ್ಲಿ ಹೊರ ತಂದೆ. ಇದನ್ನು ಓದಿದ ಮಿತ್ರ ಹರೀಶ್, ಈ ಕೃತಿಯನ್ನು ಸಿನಿಮಾ ಮಾಡೋಣ ಎಂದರು. ಹೀಗೆ ಸಿನಿಮಾ ಸೆಟ್ಟೇರಿತು, ಈಗ ತೆರೆಗೂ ಸಿದ್ಧವಾಗಿದೆ.
> -ಕಿಶೋರ್ ಕುಮಾರ್ ನಾಯ್ಕ್ ನಿರ್ಮಾಪಕ

ಶಿಷ್ಯ ಇದು ಎಣ್ಣೆಯ ವಿಷ್ಯ

ಈಗಾಗಲೇ ಪ್ರೇಮಕಥೆಯ ಹಲವು ಸಿನಿಮಾಗಳು ತೆರೆಗೆ ಬಂದಿವೆ. ಆದರೆ ಈಗ ಈ ಹಿಂದಿನ ಸಿನಿಮಾಗಳಿಗಿಂತ ವಿಭಿನ್ನವಾದ ಕಥೆ ಹೊತ್ತ ಚಿತ್ರ ಸೆಟ್ಟೇರಿದೆ. ಎಣ್ಣೆ ಪಾರ್ಟಿ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬರುತ್ತಿದೆ. ಶೀರ್ಷಿಕೆ ಕೇಳಿದಾಕ್ಷಣ ಇಲ್ಲಿ ಮತ್ತೇರಿಸುವ ಕಥೆ ಇದೆ ಎಂಬುದು ತಿಳಿಯುತ್ತದೆ. ಎಣ್ಣೆ ಪಾರ್ಟಿ ಚಿತ್ರದ ಮುಹೂರ್ತ ಪಂಚಮುಖಿ ಗಣಪತಿ ದೇವಸ್ಥಾನದಲ್ಲಿ ಅದ್ದೂರಿಯಾಗಿ ನೆರವೇರಿತು. ಕಾಮನ್ ಮ್ಯಾನ್ ಪ್ರೊಡಕ್ಷನ್ ಬ್ಯಾನರ್ ನಲ್ಲಿ ಕೆ.ಪ್ರದೀಪ್ ಕುಮಾರ್ ಚಿತ್ರ ನಿರ್ಮಾಣ ಮಾಡುತ್ತಿದ್ದು, ಎಲ್.ಭರತ್ ನಿರ್ದೇಶನದ ಜವಾಬ್ದಾರಿ ಹೊತ್ತಿದ್ದಾರೆ.

ನಾಲ್ಕು ಯುವ ಜೋಡಿಗಳ ಸುತ್ತ ಕಥೆ ಸಾಗುತ್ತದೆ.

ಕುಡಿತದ ಚಟ ಎಷ್ಟು ಕೆಟ್ಟದ್ದು, ಒಳಗೆ ಗುಂಡು ಸೇರಿದಾಗ ಕೆಲವರು ಹೇಗೆಲ್ಲಾ ವರ್ತಿಸುತ್ತಾರೆ. ಕುಡಿತ ಆರೋಗ್ಯದ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಹಾಸ್ಯಮಯವಾಗಿ ಚಿತ್ರದಲ್ಲಿ ಹೇಳಲಾಗುತ್ತಿದೆ. ಇಲ್ಲಿ ಎಣ್ಣೆ ಪ್ರಿಯರ ಕಥೆ ವ್ಯಥೆ ನಗುತರಿಸುತ್ತದೆ ಎನ್ನುತ್ತಾರೆ ನಿರ್ದೇಶಕರು.

ಶೋಭನ್, ಸಂತೋಷ್, ಪ್ರೀತಿ, ಮಂಜುಳಾ, ವರುಣ್, ಮಂಜು ಸುವರ್ಣ, ರಾಮು ಕೊನ್ನಾರ್, ಅಪ್ಪು ರಾಜ್, ರಶ್ಮಿ, ಗ್ರೀಷ್ಮಾ, ದಿವ್ಯಾ, ವೈಶಾಖ ಮತ್ತಿತರರು ತಾರಬಳಗದಲ್ಲಿದ್ದಾರೆ. ಚಿತ್ರದಲ್ಲಿ ನಾಲ್ಕು ಎಣ್ಣೆ ಹಾಡುಗಳಿದ್ದು ಆಕಾಶ್ ಪರ್ವ ಸಂಗೀತ ಸಂಯೋಜಿಸಿದ್ದಾರೆ. ರಾಜ್‌ಕಾಂತ್.ಕೆ ಛಾಯಾಗ್ರಹಣ ಈ ಚಿತ್ರಕ್ಕಿದೆ. ಬೆಂಗಳೂರು ಸುತ್ತಮುತ್ತ ಎರಡು ಹಂತದಲ್ಲಿ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ರೂಪಿಸಿಕೊಂಡಿದೆ.

ದಿನ ದರ್ಶಿಕೆ

ಜೇಷ್ಠ ಮಾಸ, ನಕ್ಷತ್ರ ವಿಶಾಖ, ಶುಕ್ಲಪಕ್ಷ, ತ್ರಯೋದಶಿ, ಯೋಗ ಸಿದ್ಧ, ಕ್ರೋಧಿನಾಮ ಸಂವತ್ಸರ, 1945 ಶೋಭಕೃತ್, ಋತು- ಗ್ರೀಷ್ಮ, ದ್ರಿಕ್ ಆಯನ- ಉತ್ತರಾಯಣ

ಮನೆಮದ್ದು

ಹೊಟ್ಟೆನೋವಿನಿಂದ ಬಳಲುತ್ತಿರುವವರು ಬಿಸಿನೀರಿಗೆ 1 ಚಮಚ ಜೇನುತುಪ್ಪ ಹಾಗೂ 1 ಚಮಚ ಪುದೀನಾ ರಸವನ್ನು ಸೇರಿಸಿ ಕುಡಿಯಿರಿ. ನಿತ್ಯವೂ ಇದನ್ನು ಬಳಸುವುದರಿಂದ ಹೊಟ್ಟೆಯ ಆರೋಗ್ಯ ಸುಧಾರಿಸುವುದು.

ಸೌಂದರ್ಯ ಸೂತ್ರ

ತಲೆಹೊಟ್ಟಿನ ಸಮಸ್ಯೆ ಇದ್ದಲ್ಲಿ 2 ಚ. ತೆಂಗಿನ ಎಣ್ಣೆ, 2 ಚ. ಆಲಿವ್ ಎಣ್ಣೆ, 2 ಚ. ಜೇನುತುಪ್ಪ ಮತ್ತು 3 ಚ.ಮೊಸರನ್ನು ಒಂದು ಬೌಲ್‌ಗೆ ಹಾಕಿ, ಮಿಶ್ರಣ ತಯಾರಿಸಿ ಟ್ಟುಕೊಳ್ಳಿ. ಇದನ್ನು ನೆತ್ತಿಯ ಮೇಲೆ ಹಚ್ಚಿ. 30 ನಿಮಿಷ ಬಿಟ್ಟು ನೀರಿನಿಂದ ತೊಳೆಯಿರಿ.

ದಿನ ಭವಿಷ್ಯ

ಮೇಷ: ಉದ್ಯಮಿಯಾಗಿದ್ದರೆ ಇಂದು ನೀವು ಹೆಚ್ಚು ಶ್ರಮಿಸಬೇಕಾಗುತ್ತದೆ, ಆಗ ಮಾತ್ರ ನೀವು ಯಶಸ್ಸನ್ನು ಸಾಧಿಸಲು ಸಾಧ್ಯವಾಗುತ್ತದೆ.

ವೃಷಭ: ಸರ್ಕಾರಿ ಉದ್ಯೋಗಗಳಿಗೆ ಸಂಬಂಧಿಸಿದ ಜನರು ಇಂದು ಹಿರಿಯ ಅಧಿಕಾರಿಗಳ ಕೋಪವನ್ನು ಎದುರಿಸಬೇಕಾಗಬಹುದು. ಇದರಿಂದಾಗಿ ಮನಸ್ಸಿಗೆ ಗೊಂದಲ.

ಮಿಥುನ: ನೀವು ಇಂದು ಹೆಚ್ಚಿನ ಲಾಭ್ನ ನಿರೀಕ್ಷಿಸಿದ್ದರೆ, ನಿರಾಶೆಗೊಳ್ಳು ವಿರಿ. ಉದ್ಯೋಗಿಗಳು ಮೇಲಾಧಿಕಾರಿ ಕೋಪ ಎದುರಿಸಬೇಕಾಗಬಹುದು.

ಕಟಕ: ಸಾಮಾಜಿಕ ಸಂಬಂಧಗಳು ಪ್ರಯೋಜನಕಾರಿ. ಇಂದು ನೀವು ನಿಮ್ಮ ವ್ಯಾಪಾರಕ್ಕಾಗಿ ಕೆಲವು ಹೊಸ ಯೋಜನೆಗಳತ್ತ ಗಮನ ಹರಿಸುವಿರಿ.

ಸಿಂಹ: ವಿದ್ಯಾರ್ಥಿಗಳು ಹೊಸ ಕೋರ್ಸ್‌ಗೆ ಸೇರಲು ಬಯಸಿದರೆ ಉತ್ತಮ ದಿನ. ಹಸಿದವರಿಗೆ ಆಹಾರ ನೀಡಿ.

ಕನ್ಯಾ: ನೀವು ನಿಮ್ಮ ಕೆಲಸದಲ್ಲಿ ಕಳೆದುಹೋಗುತ್ತೀರಿ, ಯಾರ ಬಗ್ಗೆ ಕಾಳಜಿ ವಹಿಸುವುದಿಲ್ಲ. ಇದನ್ನು ನೋಡಿ ಶತ್ರುಗಳು ಸಹ ಅಸಮಾಧಾನಗೊಳ್ಳಬಹುದು.

ತುಲಾ: ಎದುರಾಳಿಯ ಟೀಕೆಗಳಿಗೆ ಗಮನ ಕೊಡಬೇಕಾಗಿಲ್ಲ,ನಿಮ್ಮ ಕೆಲಸವನ್ನು ಮುಂದುವರಿಸಿ, ಆಗ ಮಾತ್ರ ಭವಿಷ್ಯದಲ್ಲಿ ಯಶಸ್ಸು ಪಡೆಯುತ್ತೀರಿ.

ವೃಶ್ಚಿಕ: ಸಾಮಾಜಿಕ ವಲಯದಲ್ಲಿ ಸಂವಹನವನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ, ಇದರಿಂದಾಗಿ ಹೊಸ ಸ್ನೇಹಿತರನ್ನು ಸಹ ಮಾಡಿಕೊಳ್ಳುತ್ತೀರಿ.

ಧನು: ಸಮಾಜ ಸೇವೆಯಲ್ಲಿ ತೊಡಗಿರುವವರಿಗೆ ಗೌರವ ಸಿಗಬಹುದು. ನಿಮ್ಮ ಸ್ನೇಹಿತರೊಂದಿಗೆ ದೂರದ ಪ್ರಯಾಣ.

ಮಕರ: ಹಿರಿಯ ಅಧಿಕಾರಿಯೊಂದಿಗೆ ವಿವಾದ ಹೊಂದಿರಬಹುದು. ಇದರಲ್ಲಿ ನಿಮ್ಮ ಮಾತನ್ನು ನಿಯಂತ್ರಿಸಬೇಕಾಗುತ್ತದೆ, ಇಲ್ಲದಿದ್ದರೆ ದೊಡ್ಡ ನಷ್ಟ.

ಕುಂಭ: ದಾಂಪತ್ಯ ಜೀವನದಲ್ಲಿ ಮಧುರತೆ ಇರುತ್ತದೆ. ಸಂಗಾತಿಯಿಂದ ಉಡುಗೊರೆ. ಹೊಸ ಯೋಜನೆಗಳ ಮೇಲೆ ಮನಸ್ಸನ್ನು ಕೇಂದ್ರೀಕರಿಸುತ್ತೀರಿ.

ಮೀನ: ನೀವು ಹಠಾತ್ ಆರ್ಥಿಕ ಲಾಭವನ್ನು ಪಡೆಯುವಿರಿ. ಇದು ಆರ್ಥಿಕ ಸ್ಥಿತಿಯನ್ನು ಬಲಪಡಿಸುತ್ತದೆ. ಬ್ರಾಹ್ಮಣರಿಗೆ ದಾನ ಮಾಡಿ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1985- ನಟಿ ಕಾಜಲ್ ಅಗರ್‌ವಾಲ್ ಜನನ
- 1970- ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿ ಜನನ.
- 1871- ಸ್ವಾತಂತ್ರ್ಯ ಹೋರಾಟಗಾರ, ಸಮಾಜ ಸೇವಕ, ಬರಹಗಾರ ಮಾಧವರಾವ್ ಸಪ್ರೆ ಜನನ
- 1981: ಭಾರತವು ಭೂಸ್ಥಿರ ಉಪಗ್ರಹ ಆಪಲ್‌ನ್ನು ಯಶಸ್ವಿಯಾಗಿ ಉಡಾವಣೆ ಮಾಡಿತು.

ಚಿತ್ರಸ್ಫೂರ್ತಿ



ಬೇಸರ ಸರಿಸಿ ನೇಸರ ಮರೆಗೆ, ಅಂತರ ಮರೆಸುವ ಆ ಘಳಿಗೆ, ಉತ್ತರವಿಲ್ಲದ ಕಾತರ ಬುವಿಗೆ, ಹತ್ತಿರವಾಗುವ ಆತುರ ಮಳೆಗೆ.

ಚಿತ್ರಕೃಪೆ; ಸೌಮ್ಯಾ ಬೀನಾ

ಸ್ತ್ರೀ ಮೋಹದಿಂದ ಶಾಪಗ್ರಸ್ತನಾದ ನಹುಷ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ನಹುಷ ಚಂದ್ರವಂಶದ ಅರಸ. ಇವನ ತಂದೆ ಆಯು ಮಹಾರಾಜ. ನಹುಷನು ಪ್ರಜೆಗಳನ್ನು ಅತಿ ಉತ್ತಮ ರೀತಿಯಲ್ಲಿ ಪಾಲಿಸಿ ಪ್ರಜಾ ರಂಜಕನೆನಿಸಿದ್ದನು. ಮಾತ್ರವಲ್ಲದೆ ಅನೇಕ ಯಜ್ಞ ಯಾಗಾದಿಗಳನ್ನು ಮಾಡಿ ಅಪಾರವಾದ ಪುಣ್ಯವನ್ನು ಸಂಪಾದಿಸಿದ್ದನು.

ಒಮ್ಮೆ ದೇವಲೋಕದಲ್ಲಿ ದೇವೇಂದ್ರನು ಬ್ರಾಹ್ಮಣನಾದ ವೃತ್ರಾಸುರನನ್ನು ಕೊಂದುದರಿಂದ ಬ್ರಹ್ಮಹತ್ಯೆಯು ಅವನನ್ನು ಬೆನ್ನಟ್ಟಿಕೊಂಡು ಬರುತ್ತಿತ್ತು. ಅವನು ತನ್ನ ಪೀಠವನ್ನು ಬಿಟ್ಟು ತಪ್ಪಿಸಿಕೊಂಡು ಎಲ್ಲೆಲ್ಲಿಯೋ ಓಡುತ್ತಿದ್ದುದರಿಂದ ದೇವಲೋಕದಲ್ಲಿ ದೇವೇಂದ್ರನ ಸ್ಥಾನ ರಿಕ್ತವಾಗಿತ್ತು. ಆಗ ಸಪ್ತರ್ಷಿಗಳೆಲ್ಲಾ ಸೇರಿ ದೇವೇಂದ್ರನ ಪೀಠದಲ್ಲಿ ಪುಣ್ಯಾತ್ಮನಾದ ನಹುಷನನ್ನು ಕುಳ್ಳಿರಿಸುವುದಾಗಿ ತೀರ್ಮಾನಿಸುತ್ತಾರೆ. ನಹುಷನು ದೇವೇಂದ್ರನ ಪೀಠದಲ್ಲಿ ಕುಳಿತುಕೊಂಡು ಆಡಳಿತ ನಡೆಸುತ್ತಿರುವಾಗ ಒಮ್ಮೆ ದೇವೇಂದ್ರನ ಮಡದಿಯಾದ ಶಚೀದೇವಿ ಅವನ ಕಣ್ಣಿಗೆ ಬೀಳುತ್ತಾಳೆ.

ಅವಳ ರೂಪ ಲಾವಣ್ಯಗಳಿಂದ ಆಕರ್ಷಿತನಾದ ನಹುಷ ಅವಳನ್ನು ತನ್ನ ಪತ್ನಿಯಾಗಬೇಕೆಂದು ಕೇಳಿಕೊಳ್ಳುತ್ತಾನೆ. ಆದರೆ ಅವಳು ಒಪ್ಪುವುದಿಲ್ಲ. ಕೊನೆಗೆ ನಹುಷ ತುಂಬಾ ಒತ್ತಾಯಿಸಿದಾಗ, ಬೃಹಸ್ಪತಿಯು ಅವಳಿಗೆ ಗುಪ್ತವಾಗಿ ಸೂಚಿಸಿದಂತೆ, ನಹುಷನು ಸಪ್ತರ್ಷಿಗಳು ಹೊತ್ತಂತಹ ಪಲ್ಲಕ್ಕಿಯಲ್ಲಿ ಬಂದರೆ ಆತನನ್ನು ಸ್ವೀಕರಿಸುವುದಾಗಿ ಹೇಳುತ್ತಾಳೆ. ಅಂತೆಯೇ ನಹುಷನು ಸಪ್ತರ್ಷಿಗಳಿಂದ ಪಲ್ಲಕ್ಕಿಯನ್ನು ಹೊರಿಸಿ ಕೊಂಡು ಶಚಿಯ ಅರಮನೆಗೆ ಹೋಗುತ್ತಿರುವಾಗ, ಸಪ್ತರ್ಷಿಗಳಲ್ಲಿ ಒಬ್ಬರಾದ ಅಗಸ್ತ್ಯರು ನಿಧಾನವಾಗಿ ನಡೆಯುತ್ತಿರುವುದನ್ನು ನೋಡಿ, ಸರ್ಪ ಸರ್ಪ (ವೇಗವಾಗಿ ನಡೆ) ಎನ್ನುತ್ತಾ ಅವರ ತಲೆಗೆ ತನ್ನ ಕಾಲಿನಿಂದ ತುಳಿಯುತ್ತಾನೆ.

ಇದರಿಂದ ಕ್ರುದ್ಧರಾದ ಅಗಸ್ತ್ಯರು ಅವನಿಗೆ ಸರ್ಪವಾಗುವಂತೆ ಶಾಪ ಕೊಡುತ್ತಾರೆ. ಆಗ ತನ್ನ ಅಪರಾಧವನ್ನು ಮನಗಂಡ ನಹುಷ ಅವರಲ್ಲಿ ತನಗೆ ಶಾಪವಿಮೋಚನೆಯನ್ನು ಕೊಡುವಂತೆ ಬೇಡಿಕೊಳ್ಳುತ್ತಾನೆ. ಆಗ ಆಗಸ್ತ್ಯರು ಮುಂದೆ ಅವನದೇ ವಂಶದಲ್ಲಿ ಹುಟ್ಟಿದ ಧರ್ಮರಾಯನೊಂದಿಗೆ ಸಂಭಾಷಿಸಿದಾಗ ಶಾಪ ವಿಮೋಚನೆಯಾಗುತ್ತದೆ ಎಂದು ಹೇಳುತ್ತಾರೆ.

ಹೀಗೆ ಬಹುಕಾಲ ಹೆಬ್ಬಾವಾಗಿ ಒಂದು ಗುಹೆಯಲ್ಲಿ ನಹುಷ ಬಿದ್ದಿರುತ್ತಾನೆ. ಒಮ್ಮೆ ಪಾಂಡವರು ವನವಾಸದಲ್ಲಿದ್ದಾಗ ಬೇಟೆಗೆ ಹೋದ ಭೀಮ ಆ ಹೆಬ್ಬಾವಿನ ಹಿಡಿತಕ್ಕೆ ಸಿಕ್ಕಿಬೀಳುತ್ತಾನೆ. ಭೀಮನನ್ನು ಆ ಹೆಬ್ಬಾವು ಬಲವಾಗಿ ಸುರುಳಿ ಸುತ್ತಿ ಹಿಡಿದಿಟ್ಟುಕೊಳ್ಳುತ್ತದೆ. ಆಗ ಭೀಮನನ್ನು ಹುಡುಕಿಕೊಂಡು ಬಂದ ಧರ್ಮರಾಯ ಆ ಹೆಬ್ಬಾವು ಕೇಳಿದ ಧರ್ಮಸೂಕ್ಷ್ಮದ ಪ್ರಶ್ನೆಗಳಿಗೆ ಉತ್ತರಿಸಿ ಭೀಮನನ್ನು ಬಿಡಿಸುತ್ತಾನೆ. ನಹುಷ ತನ್ನ ದಿವ್ಯ ದೇಹವನ್ನು ಧರಿಸಿ ಮತ್ತೆ ಸ್ವರ್ಗಕ್ಕೆ ಹೋಗುತ್ತಾನೆ.

ಇಂದಿನ ದಿನಗಳಲ್ಲೂ ನಾವು ಈ ರೀತಿಯ ಅನೇಕ ಉದಾಹರಣೆಗಳನ್ನು ನಮ್ಮ ಸುತ್ತಮುತ್ತಲು ನೋಡುತ್ತೇವೆ. ದೊಡ್ಡ ದೊಡ್ಡ ನಾಯಕರು, ಅಧಿಕಾರಿಗಳು, ರಾಜಕಾರಣಿಗಳು ಯಾವುದೋ ಒಂದು ಮೋಹಕ್ಕೆ ಸಿಲುಕಿ ತಮ್ಮ ಅಧಿಕಾರ, ವರ್ಚಸ್ಸು ಎಲ್ಲವನ್ನೂ ಹಾಳು ಮಾಡಿಕೊಳ್ಳುತ್ತಾರೆ. ಹಲವಾರು ವರ್ಷ ಕಷ್ಟಪಟ್ಟು ಗಳಿಸಿದ ಹೆಸರು, ಗೌರವ ಎಲ್ಲವೂ ಅವರ ಕೆಟ್ಟ ನಡವಳಿಕೆಯಿಂದ ಮಣ್ಣು ಪಾಲಾಗುತ್ತದೆ. ಯಶಸ್ಸು ಗೌರವ ಗಳಿಸುವುದಷ್ಟೇ ಅಲ್ಲ ಅದನ್ನು ಉಳಿಸಿಕೊಂಡು ಹೋಗುವ ಯೋಗ್ಯತೆಯನ್ನೂ ಗಳಿಸಬೇಕು. ಯಶಸ್ಸಿನ ತುತ್ತ ತುದಿಯಲ್ಲಿರುವಾಗ ಇಡೀ ಪ್ರಪಂಚವೇ ನಮ್ಮನ್ನು ಗಮನಿಸುತ್ತಿರುತ್ತದೆ. ಆಗ ಮಾಡುವ ಪ್ರತಿ ಒಳ್ಳೆಯ ಕೆಲಸವೂ ಅನುಕರಣೀಯವಾಗುತ್ತದೆ. ಜತೆ ಜತೆಗೆ ಕೆಟ್ಟ ಕೆಲಸವನ್ನು ಸಾವಿರಾರು ಜನ ಅನುಕರಿಸುತ್ತಾರೆ ಎಂದು ಇವರಿಗೆ ತಿಳಿದಿರಬೇಕು.

ಅಷ್ಟೇ ಅಲ್ಲ ಸಾಮಾನ್ಯ ಜನರು ಮಾಡಿದ ತಪ್ಪು, ಪ್ರಪಂಚದ ಅರಿವಿಗೆ ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ ಆದರೆ ಬಹಳ ಹೆಸರು ಮಾಡಿ ಯಶಸ್ಸಿನ ಉತ್ತುಂಗದಲ್ಲಿರುವವರು ಮಾಡಿದ ತಪ್ಪು, ಜಗತ್ ಜಾಹೀರಾ ಆಗಿಬಿಡುತ್ತದೆ. ಆಗ ಎಷ್ಟು ಮೇಲೆ ಏರಿರುತ್ತಾರೋ ಅಷ್ಟೇ ಕೆಳಗೆ ಬೀಳುವ ಸಾಧ್ಯತೆಯೂ ಇರುತ್ತದೆ. ಯಶಸ್ಸು ಎನ್ನುವುದು ಎರಡಲುಗಿನ ಕತ್ತಿಯಂತೆ. ಸಾಮಾಜಿಕ ಮತ್ತು ಕೌಟುಂಬಿಕ ಬದುಕು ಎರಡನ್ನೂ ಸಂಭಾಳಿಸಿಕೊಂಡು, ಗೌರವಯುತವಾಗಿ ನಡೆದುಕೊಳ್ಳುವುದನ್ನು ದಿನಂಪ್ರತಿ ಪಾಲಿಸಬೇಕು. ಒಮ್ಮೆ ಎಡವಿದರೂ ಹಾನಿ ಖಂಡಿತ. ಜತೆಗೆ ಸರಿಪಡಿಸಲಾರದಷ್ಟು ನಷ್ಟ ಅನುಭವಿಸಬೇಕಾಗುತ್ತದೆ. ಮನಸ್ಸು ಮರ್ಕಟದಂತೆ ಅದನ್ನು ಹಿಡಿತದಲ್ಲಿರಿಸಿಕೊಂಡವರೇ ಸಾಧಕರು.

ಪ ದ ಬಂ ಧ



ಎಡದಿಂದ ಬಲಕ್ಕೆ:

1. ಇನಿಯನಿಗೆ ಇಷ್ಟವಾದೀತೇ ಮಂಜಿನ ಹನಿ (3)
3. ಅವನೇ ನೀಡಿದ ಭರವಸೆ (4)
5. ಸಮುದ್ರದ ಅಂಚಿನಲ್ಲಿರುವ ಕಾಡು (4)
6. ನೀರು ತುಂಬಿದ ಮೋಡ (3)
7. ಕೈಮುಗಿದು ಮಾಡಿದ ವಂದನೆ (4)
9. ನಮ್ಮದೇ ಛಾಯೆ (3)
11. ಸೊಕ್ಕು ಅಥವಾ ಅಮಲು (2)
13. ಎಡರಕ್ಷರದ ಮಜಲು (2)
16. ಸರಸವಲ್ಲ, ವೈಮನಸ್ಯ (3)
18. ಸಾಕ್ಷಿ ಹೇಳಲು ಬಂದು ನಿಂತಿರುವ ಕಟಕಟೆ (4)
20. ಮರದ ಮಧ್ಯೆ ಸಿಲುಕಿತೇ ನವಿಲು (3)
21. ಗರ ಬಡಿದಂತಿದೆ ಕಾಲ ಸೂಚಕ ಯಂತ್ರ (4)
22. ಕೆಂಪು ಕಣಗಿಲೆ ಹೂವು (4)
23. ಗುಂಪಿಗೆ ಮತ್ತೊಂದು ಹೆಸರು (3)

ಮೇಲಿನಿಂದ ಕೆಳಕ್ಕೆ:

2. ವೇದನೆಯಿಲ್ಲದ ಅರಿಕೆ (4)
3. ಮುಖಕ್ಕೆ ಪರ್ಯಾಯ ಪದ (3)
4. ನೇರವಾಗಿ ಬಂದಿರುವ ಸೂರ್ಯ ಆರಂಭದಲ್ಲಿ ಹ್ರಸ್ವವಾಗಿದ್ದಾನೆ (3)
6. ವಿರಳವಾಗಿ ಬಂದಿರುವ ಹುಟ್ಟು (3)
8. ಮೂಳೆಯಲ್ಲಿರುವ ಕೊಬ್ಬಿನ ಪದಾರ್ಥ (2)
10. ದೇಹದಲ್ಲಿ ಹರಿಯುವ ನೆತ್ತರು (2)
12. ಬಾಗಿಲು ಎರಡಕ್ಷರದಲ್ಲಿ (2)
14. ಇದೊಂದು ಬಗೆಯ ಲೋಹ (3)
15. ಮತ್ತೊಂದು ಆಡು (2)
17. ಬದುಕಿನಲ್ಲಿರಬೇಕಾದ ಹೊಂದಾಣಿಕೆ (4)
18. ಪ್ರಾಣಿಗಳನ್ನು ಕತ್ತರಿಸುವವನು ಕ್ರೂರಿ (3)
19. ದೊಡ್ಡದಾದ ಪಟ್ಟಣ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಆವಿ 3. ನೂಪುರ 4. ಹಾಸ 8. ಯಮಕ 10. ಮಜಲು 12. ಅಸುರ 14. ಮಮಕಾರ 15. ಮನೆತನ 16. ಗುರಾಣಿ 18. ಅಳುಕು 20. ಮಾಗಧ 22. ಮಿಥ್ಯೆ 23. ಗೋಲಕ 24. ಗಾಳ

ಮೇಲಿನಿಂದ ಕೆಳಕ್ಕೆ: 1. ಆಶ್ರಯ 3. ಪುಡಿಗಾಸು 5. ಸವಾಲು 6. ಅಂಕ 7. ನಾಮ 9. ಮದುಮಗಳು 11. ಜಲತರಂಗ 12. ಅರಗು 13. ರಮಣಿ 17. ರಾಜ್ಯಪಾಲ 18. ಅಷ್ಟಮಿ 19. ಕುಶ 20. ಮಾಲಿ 21. ಧವಳ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಕಡಲ ಮೇಲೊಂದು ರೆಸ್ಟೋರೆಂಟ್

ಈ ವಿಶ್ವ ವಿಖ್ಯಾತ ರಾಕ್ ರೆಸ್ಟೋರೆಂಟ್ ಜಾಂಜಿಬಾರ್‌ನ ಮಿಚಾನ್ವಿ ಪಿಂಗ್ವೆ ಕಡಲ ತೀರದಲ್ಲಿದೆ. ಏಳು ಮೀಟರ್ ಎತ್ತರದ ಬಂಡೆಯ ಮೇಲೆ ಇದನ್ನು ಕಟ್ಟಲಾಗಿದೆ. ರಾಕ್ ರೆಸ್ಟೋರೆಂಟ್ ಇರುವುದು ಹಿಂದೂ ಮಹಾ ಸಾಗರದ ಮಧ್ಯದಲ್ಲಿ. ದೊಡ್ಡ ಬಂಡೆಯ ಮೇಲೆ ಇದು ನೆಲೆಗೊಂಡಿರುವುದರಿಂದ ಇದಕ್ಕೆ ಈ ಹೆಸರು. ಇದನ್ನು ಜಾಂಜಿಬಾರ್‌ನ ಸಂಪತ್ತು ಎಂದು ಕರೆಯಲಾಗುತ್ತದೆ. ಈ ರೆಸ್ಟೋರೆಂಟಿನ ಮತ್ತೊಂದು ವಿಶೇಷವೆಂದರೆ, ಕಡಲಿನ ಅಲೆಗಳು ತೀರಾ ಇಳಿಮುಖವಾದಾಗ, ಇದು ಬಂಡೆಯ ಮೇಲೆ ಇದ್ದಂತೆ ಕಂಡು ಬರುತ್ತದೆ. ಅಲೆಗಳು ಹೆಚ್ಚಾದಾಗ, ಕಲ್ಲಿನ ಭಾಗ ನೀರಿನಲ್ಲಿ ಮುಳುಗಿ, ಇಡೀ ರೆಸ್ಟೋರೆಂಟ್ ದ್ವೀಪವಾಗಿ ಕಂಡು ಬರುತ್ತದೆ.

ಪುಸ್ತಕ ಲೋಕ

ಬಾನಂಚಿನ ಆಚೆ



ಲೇಖಕಿ ಶಾಂತಲಾ ಅವರ ಕಥಾ ಸಂಕಲನ ಕೃತಿ ಬಾನಂಚಿನ ಆಚೆ. ಇಲ್ಲಿರುವ ಕತೆಗಳನ್ನು ನಮ್ಮ ದಿನನಿತ್ಯದ ಜೀವನದಲ್ಲಿ ನಡೆಯುವ ವಿಜ್ಞಾನದ ಹಲವು ಕೂತುಹಲಕಾರಿ ಪರಿಕಲ್ಪನೆಗಳನ್ನು ಸೇರಿಸಿ ಹೆಣೆಯಲಾಗಿದೆ. ಪುಸ್ತಕದ ಬೆನ್ನುಡಿಯಲ್ಲಿ ಲೇಖಕರು ಹೇಳುವಂತೆ, ವೈಜ್ಞಾನಿಕ ಕತೆಗಳನ್ನು ಹಲವರು ಕಟ್ಟುಕತೆ, ಭ್ರಮಾಲೋಕದ ವೃತ್ತಾಂತಗಳು ಎಂದು ನಿರ್ಧರಿಸಿರುತ್ತಾರೆ. ಇನ್ನು ಕೆಲವರಿಗೆ ವಿಜ್ಞಾನವನ್ನು ಕಲಿತವರಿಗೆ ಮಾತ್ರ ಈ ಕಥೆಗಳು ಅರ್ಥವಾಗುತ್ತವೆ ಎಂಬ ತಪ್ಪು ಪರಿಕಲ್ಪನೆ ಇದೆ. ಆದರೆ ಅವುಗಳನ್ನು ಬಹಳ ಸಹಜವೆಂದು, ಅದರ ಹಿಂದಿನ ಶ್ರಮ, ಬೆವರು, ತ್ಯಾಗಗಳನ್ನು ಮರೆತೇ ಹೋಗಿದ್ದೇವೆ! ವಿಜ್ಞಾನದ ಸಾಧ್ಯತೆ ಅಗಾಧ. ಪ್ರತಿದಿನವೂ ಹೊಸ ಪರಿಕಲ್ಪನೆ, ಹೊಸ ಆವಿಷ್ಕಾರ ಆಗುತ್ತಲೇ ಇರುತ್ತದೆ. ಅಂತಹ ಕೆಲವು ಕಲ್ಪನೆಗಳ ಬಗ್ಗೆ ಮತ್ತಷ್ಟು ಚಿಂತಿಸಿ, ಇನ್ನಷ್ಟು ಓದಿ, ತಿಳಿದುಕೊಂಡು, ಕತೆಗಳ ರೂಪದಲ್ಲಿ ತಿಳಿಸಲಾಗಿದೆ.

ಟ್ವೀಟ್‌ಮೆಂಟ್

ಅನನ್ಯ ಬಿರ್ಲಾ: ನಿಮ್ಮ ಹಾಗೇ ನೀವು ಇರಿ!
ಪ್ರೀತಂ ಪ್ರೀತ್: ಹೌದು. ಏಕೆಂದರೆ, ಎಲ್ಲರೂ ಅನನ್ಯ ಬಿರ್ಲಾ ಥರ ಇರೋದಕ್ಕೆ ಆಗೋಲ್ಲ!

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಶ್ರೀ ಮಾಧವ ಪೆರುಮಾಳ್ ದೇವಸ್ಥಾನವು ಯಾವ ರಾಜ್ಯದಲ್ಲಿದೆ?

- ಎ. ತಮಿಳುನಾಡು.
- ಬಿ. ಕರ್ನಾಟಕ.
- ಸಿ. ಆಂಧ್ರಪ್ರದೇಶ.
- ಡಿ. ಕೇರಳ.

ಉತ್ತರ: ಎ. ತಮಿಳುನಾಡು.

ಮಾಹಿತಿ

ಶ್ರೀ ಮಾಧವ ಪೆರುಮಾಳ್ ದೇವಸ್ಥಾನವು 1,000 ವರ್ಷಗಳ ಹಿಂದಿನ ಐತಿಹಾಸಿಕ ವ್ಯಾಪಾರ ಮಾರ್ಗವನ್ನು ಬಹಿರಂಗಪಡಿಸುತ್ತದೆ. ಭವಾನಿಸಾಗರ ಅಣೆಕಟ್ಟಿನಲ್ಲಿ ಮುಳುಗಿ, ಕಡಿಮೆಯಾದ ನೀರಿನ ಮಟ್ಟವು ಈಗ ತಮಿಳುನಾಡಿನ ಈರೋಡ್ ಜಿಲ್ಲೆಯಲ್ಲಿನ ಈ ದೇವಾಲಯವನ್ನು ಅನಾವರಣಗೊಳಿಸಿದೆ. ಹೊಯ್ಸಳ ರಾಜ ವೀರ ಬಲ್ಲಾಳ III,680 ವರ್ಷಗಳ ಹಿಂದೆ ದಂಡನಾಯಕನ ಕೋಟೆಯನ್ನು ನಿರ್ಮಿಸಿದ ಮಾಧವ ಪೆರುಮಾಳ್ ದಂಡನಾಯಕನನ್ನು ಆಡಳಿತಕ್ಕೆ ನೇಮಿಸಿದನು. ಅವನ ಮಗ ವೀರ ಸಿದ್ಧ ಕೆತ್ತತೆಯ ದಂಡನಾಯಕನು ಈ ದೇವಾಲಯವನ್ನು ನಿರ್ಮಿಸಿದನು. ನಂತರ ವಿಜಯನಗರ ಸಾಮ್ರಾಜ್ಯ, ಉಮ್ಮತ್ತೂರು ಮುಖ್ಯಸ್ಥರು ಮತ್ತು ಟಿಪ್ಪು ಸುಲ್ತಾನ್ ಆಳ್ವಿಕೆ ನಡೆಸಿದ ಈ ಕೋಟೆಯು 1790 ರಲ್ಲಿ ಸತ್ಯಮಂಗಲಂ ಕದನಕ್ಕೆ ಸಾಕ್ಷಿಯಾಯಿತು.

ಬ್ರಹ್ಮಾಂಡದ ಹೊಸ ಕತೆ ಕಾಸ್ಮೋಸ್ ಫಾಗ್!

ವಿಜ್ಞಾನ ವಿಸ್ಮಯ
ಕೆ. ನಟರಾಜ್

ವಿಶ್ವದ ಸೃಷ್ಟಿಯ ಆದಿಯಲ್ಲಿ 'ಬಿಗ್ ಬ್ಯಾಂಗ್'ನಿಂದ (ಬಿಗ್ಬ್ಯಾಂಗ್ ಅಂದರೆ ಮಹಾಸ್ಫೋಟ) ಗ್ಯಾಲಕ್ಸಿಗಳು ಉಂಟಾಗಿವೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಈಗ ನಮ್ಮ ಗ್ಯಾಲಕ್ಸಿ 'ಆಕಾಶಗಂಗೆ'ಯನ್ನೇ ತೆಗೆದುಕೊಳ್ಳಿ. ಅದರಲ್ಲೂ ನಮ್ಮ ಸೌರಮಂಡಲದ ವ್ಯಾಪ್ತಿಯಲ್ಲಿ ಗ್ರಹಗಳ ನಡುವೆ ಅಥವಾ ಗ್ಯಾಲಕ್ಸಿಯಲ್ಲಿ ನಕ್ಷತ್ರಗಳ ಮಧ್ಯೆ 'ಶೂನ್ಯಾಕಾಶ' ಎಂದೇ ನಾವು ವಿವರಿಸುತ್ತಿರುತ್ತೇವೆ. ಅಂದರೆ ನಕ್ಷತ್ರಗಳ ಅಥವಾ ಗ್ರಹಗಳ ಮಧ್ಯೆ ವಸ್ತು ಮಾಧ್ಯಮವಿಲ್ಲ. ಅದು ಬರೀ 'ಶೂನ್ಯ' ಎಂಬ ತೀರ್ಮಾನಕ್ಕೆ ಬಂದಿದ್ದೇವೆ. ಆದರೆ ಇತ್ತೀಚಿನ ಸಂಶೋಧನೆಗಳಿಂದ ಹೊಸ ವಿಚಾರವೊಂದು ತಿಳಿದುಬಂದಿದೆ.

ಹಾಗಾದರೆ ನಮ್ಮ ಗ್ಯಾಲಕ್ಸಿಯಲ್ಲಿ ಅಥವಾ ಸೌರ ಮಂಡಲದಲ್ಲಿ ಈ ಕಾಸ್ಮಾಸ್ ಫಾಗ್ ಇರಬೇಕಿತ್ತಲ್ಲವೆ ?

ಖಂಡಿತ ಇತ್ತು ! ಆದರೆ ದೊಡ್ಡ ದೊಡ್ಡ ನಕ್ಷತ್ರಗಳು ಹೊರಹೊಮ್ಮಿಸುವ ವಿಕಿರಣಗಳು ಅಂದರೆ ಅಲ್ಟ್ರಾವಯಲೆಟ್ ಕಿರಣಗಳು ಹಾಗೂ ಬೆಳಕಿನ ಕಿರಣಗಳು, ಈ ಕಾಸ್ಮಾಸ್ ಫಾಗ್‌ನ ಮೂಲಕ ಹಾದುಹೋದಾಗ ಪ್ರಕ್ರಿಯೆಗಳು ನಡೆದು ಇಡೀ 'ಕಾಸ್ಮಾಸ್ ಫಾಗ್' ಮಾಯವಾಗಿ ಈಗಿರುವಂತೆ ಶೂನ್ಯಾವಕಾಶ ನಿರ್ಮಾಣಗೊಂಡಿದೆ ಎಂದು ತಿಳಿದುಬಂದಿದೆ. ಅಂದರೆ ಶೂನ್ಯಾವಕಾಶ ನಿರ್ಮಾಣಗೊಂಡಿದೆ ಎಂದು ತಿಳಿದುಬಂದಿದೆ. ಅಂದರೆ ಶೂನ್ಯಾವಕಾಶ ಸಂಪೂರ್ಣ ಪಾರದರ್ಶಕ ಮಾಧ್ಯಮವಾಗಿ ಪರಿವರ್ತಿತಗೊಂಡಿದೆ. ಆದರೆ ಇನ್ನೂ ಕೆಲವು ಗ್ಯಾಲಕ್ಸಿಗಳ ಮಧ್ಯೆ ಈ ಫಾಗ್‌ನ ಇರುವಿಕೆಯನ್ನು ವಿಜ್ಞಾನಿಗಳು ಗುರುತಿಸಿದ್ದಾರೆ.

ನಕ್ಷತ್ರಗಳನ್ನು ನುಂಗಿ ಹಾಕುವ 'ಬ್ಲ್ಯಾಕ್ ಹೋಲ್'!

ತುಂಬಾ ದೊಡ್ಡ ದೊಡ್ಡ ನಕ್ಷತ್ರಗಳ ಕೊನೆಯ ಹಂತವೇ ಬ್ಲ್ಯಾಕ್ ಹೋಲ್ ಅಥವಾ 'ಕಪ್ಪು ರಂಧ್ರ'. ಇದಕ್ಕೆ ಕಪ್ಪುಕುಳಿ ಮತ್ತು ಕೃಷ್ಣರಂಧ್ರ ಎಂಬ ಸುಂದರವಾದ ಹೆಸರುಗಳೂ ಇವೆ. ಈ ಹಂತದಲ್ಲಿ ಪ್ರತಿಯೊಂದು ನಕ್ಷತ್ರವೂ ತನ್ನಿಂದ ಹೊರಹೊಮ್ಮುವ ಬೆಳಕನ್ನೇ ನುಂಗಿ ಹಾಕಿಬಿಡಬಲ್ಲದು. ತನ್ನ ಬಳಿ ಬಂದ ಯಾರನ್ನೂ ಬಿಡದು! ಇನ್ನು ಅದರ ಬಳಿ ನಕ್ಷತ್ರ ಹೋದರೆ, ಗುಳುಂ ಅಂತೂ ಖಂಡಿತ ! ಇತ್ತೀಚೆಗೆ ಭೌತ ವಿಜ್ಞಾನಿಗಳು ಗ್ಯಾಲಕ್ಸಿಯಲ್ಲಿ ಅಂತಹ ಒಂದು 'ಬ್ಲ್ಯಾಕ್ ಹೋಲ್'ನ್ನು ಪತ್ತೆ ಹಚ್ಚಿದ್ದಾರೆ. ಇದರ ಇರುವಿಕೆಯನ್ನು ನ್ಯೂಯಾರ್ಕ್ ವಿಶ್ವವಿದ್ಯಾಲಯದ ಖಭೌತ ವಿಜ್ಞಾನಿಗಳು ದೃಢಪಡಿಸಿದ್ದಾರೆ.

ಬ್ಲಾಕ್ ಹೋಲ್‌ನ್ನು ಪತ್ತೆಹಚ್ಚಿದ್ದಾದರೂ ಹೇಗೆ ?

ಕಣ್ಣಿಗೆ ಕಾಣದ ಈ 'ಬ್ಲಾಕ್ ಹೋಲ್' ಅನ್ನು ಪತ್ತೆ ಹಚ್ಚಿರುವುದೇ ಒಂದು ವಿಸ್ಮಯ! ಸಾಮಾನ್ಯವಾಗಿ ವಿಜ್ಞಾನಿಗಳು ನಕ್ಷತ್ರ ವೀಕ್ಷಣೆಯಲ್ಲಿ ನಿರ್ದಿಷ್ಟ ನಕ್ಷತ್ರವನ್ನು ನಿರಂತರವಾಗಿ ಗಮನವಿಟ್ಟು ವೀಕ್ಷಿಸುತ್ತಿರುತ್ತಾರೆ. ಅಂತಹ ವೀಕ್ಷಣೆಯಿಂದಲೇ ಇಂದು ಆ 'ಬ್ಲ್ಯಾಕ್ ಹೋಲ್' ಪತ್ತೆಯಾಗಿರುವುದು ! ನಿರ್ದಿಷ್ಟ ನಕ್ಷತ್ರದ ದ್ರವ್ಯರಾಶಿಯಲ್ಲಿ ಏನಾದರೂ ಸೆಳೆತದ ಪರಿಣಾಮವಿದೆಯಾ ಅಥವಾ ನಕ್ಷತ್ರದ ಆಕಾರದಲ್ಲಿ ಏನಾದರೂ ಸೆಳೆತದ ಪರಿಣಾಮವಿದೆಯಾ ಅಥವಾ ನಕ್ಷತ್ರದ ಆಕಾರದಲ್ಲಿ ಏನಾದರೂ ನಿರಂತರ ಏರುಪೇರುಗಳು ಕಾಣಿಸುತ್ತಿದೆಯಾ ಎಂದು ಅವರು ಗಮನಿಸುತ್ತಿರುತ್ತಾರೆ. ಇಂತಹ ತೊಳಲಾಟಗಳೇನಾದರೂ ಕಂಡುಬಂದಿರುವುದು ಖಚಿತಗೊಂಡಿದೆ. ಇದರಿಂದ ಸುತ್ತಮುತ್ತಲಿನ ನಕ್ಷತ್ರಗಳಿಗಂತೂ ಪ್ರಾಣ ಸಂಕಟ ತಪ್ಪಿದ್ದಲ್ಲ! ಇತ್ತೀಚೆಗೆ ಸಂಶೋಧಿಸಿದ ಅಂತಹ ಒಂದು ಕಪ್ಪುಕುಳಿಯು ಸೂರ್ಯದ ದ್ರವ್ಯರಾಶಿಗಿಂತ ಸುಮಾರು 500 ಪಟ್ಟು ದ್ರವ್ಯರಾಶಿಯನ್ನು ಹೊಂದಿದೆ ಎನ್ನಲಾಗಿದೆ.

ಆರೋಗ್ಯದ ಐಶ್ವರ್ಯಕ್ಕೆ ಕಲ್ಲುಪ್ಪು!

ಆಹಾರವೇ ವೈದ್ಯ
ಬೆಂ. ಮು. ಮಾರುತಿ

ಕಲ್ಲುಪ್ಪು ನೈಸರ್ಗಿಕವಾದ ಒಂದು ಅಮೂಲ್ಯ ಪದಾರ್ಥ. ಆದರೆ ಅಯೋಡಿನ್ ಭರಿತ ಉಪ್ಪನ್ನೇ ಸೇವಿಸಿ ಎಂಬ ಘೋಷಣೆಯ ಹೊಡೆತಕ್ಕೆ ಸಿಲುಕಿ ಕಲ್ಲುಪ್ಪು ಕಾಣೆಯಾಗಿದೆ. ಸಕ್ಕರೆಗಿಂತ ಕಲ್ಲು ಸಕ್ಕರೆ ಹೆಚ್ಚು ಆರೋಗ್ಯಕಾರಿಯಾಗಿರುವಂತೆ, ಪುಡಿ ಉಪ್ಪಿಗಿಂತ ಕಲ್ಲುಪ್ಪು ಉತ್ತಮವಾಗಿದೆ. ಕಲ್ಲುಪ್ಪಿನ ಆರೋಗ್ಯಕರ ಗುಣಗಳ ಬಗ್ಗೆ ತಿಳಿಯೋಣ.

ಅನಾದಿ ಕಾಲದಿಂದಲೂ ಉಪ್ಪು ಬಳಕೆಯಲ್ಲಿದೆ. ಇದಿಲ್ಲದೆ ಅಡುಗೆಯೇ ಅಪೂರ್ಣ. ರುಚಿ ಎಂಬ ಪದಕ್ಕೆ ಹೆಸರು ಬಂದಿದ್ದೆ ಈ ಉಪ್ಪಿನಿಂದ, ಇದರ ಮೊದಲ ಉಪಯೋಗ ಆಹಾರದಲ್ಲಿ. ಪ್ರತಿವ್ಯಕ್ತಿಯೂ ವರ್ಷಕ್ಕೆ 54.5 ಕೆ.ಜಿ.ಯಷ್ಟು ಉಪ್ಪನ್ನು ಸೇವಿಸುತ್ತಾನೆ. ಪುರಾತನ ಕಾಲದಿಂದಲೂ ಉಪ್ಪು ವ್ಯಾಪಾರದ ಪ್ರಧಾನವಸ್ತು. ಇಂದು ಇದನ್ನು ರಾಸಾಯನಿಕ ಕಾರ್ಖಾನೆಗಳಲ್ಲಿ ನೂರಾರು ವಸ್ತುಗಳ ತಯಾರಿಕೆಗೆ ಬಳಸಲಾಗುತ್ತಿದೆ. ಜಾನುವಾರುಗಳ ಆಹಾರ, ಕೃತಕಗೊಬ್ಬರ, ಕೀಟನಾಶಕ, ಕಳೆನಾಶಕ, ಮಣ್ಣು ಸಾರವಸ್ತುಗಳು, ಔಷಧಗಳು, ಬಾಹ್ಯ ಮತ್ತು ಆಂತರಿಕ ನಿರ್ಮಲೀಕರಣಗಳು ಇತ್ಯಾದಿಗಳ ತಯಾರಿಕೆಯಲ್ಲಿ ಉಪ್ಪಿನ ಉಪಯೋಗ ಹೇರಳವಾಗಿದೆ.

ಪ್ರತಿ ವರ್ಷ 77 ರಾಷ್ಟ್ರಗಳು ಸುಮಾರು 3,55,60,000 ಮೆಟ್ರಿಕ್ ಟನ್ನುಗಳಷ್ಟು ಉಪ್ಪನ್ನು ಉತ್ಪಾದಿಸುತ್ತವೆ. ಅಮೆರಿಕದ ಸಂಯುಕ್ತಸಂಸ್ಥಾನ, ಬ್ರಿಟನ್, ಚೀನ, ಜರ್ಮನಿ, ಫ್ರಾನ್ಸ್ ಮತ್ತು ಭಾರತ ದೇಶಗಳು 1,016,000,000 ಮೆಟ್ರಿಕ್ ಟನ್ನುಗಳಿಗೂ ಹೆಚ್ಚು ಉಪ್ಪನ್ನು ಉತ್ಪಾದಿಸುತ್ತವೆ. ಕಲ್ಲುಪ್ಪಿನ ಗಣಿಗಳಲ್ಲಿ ಸುರಂಗ ತೋಡಿ ಉಪ್ಪನ್ನು ಹೊರತೆಗೆಯುತ್ತಾರೆ. ಕೆಲವು ವೇಳೆ ಲವಣಸ್ತರಗಳಿಗೆ ನೀರನ್ನು ಹಾಯಿಸಿ ಉಪ್ಪು ಕರಗಿದ ನೀರನ್ನು (ಬ್ರೈನ್) ಭೂಮಿಯ ಮೇಲಕ್ಕೆ ಪಂಪಿನ ಸಹಾಯದಿಂದ ಹೊರತೆಗೆದು ಸಣ್ಣ ಮಡಿಗಳಲ್ಲಿ ಬಿಟ್ಟು ಇಂಗಿಸಿ ಉಪ್ಪನ್ನು ತಯಾರಿಸುವುದೂ ಉಂಟು.

ಕಲ್ಲುಪ್ಪಿನ ಪ್ರಯೋಜನಗಳು

1. ಕಲ್ಲುಪ್ಪಿನಲ್ಲಿ ಕ್ಯಾಲ್ಸಿಯಂ ಮತ್ತು ಮ್ಯಾಗ್ನಿಷಿಯಂ ಅಧಿಕವಾಗಿ ಇರುವುದರಿಂದ ದೇಹವು ಸರಿಯಾಗಿ ಕಾರ್ಯ ನಿರ್ವಹಿಸಲು ಸಾಕಾಗುವಷ್ಟು ಆಮ್ಲಜನಕವನ್ನು ಪೂರೈಕೆ ಮಾಡುತ್ತದೆ.
2. ಕಲ್ಲುಪ್ಪು ದೇಹದ ಅಂಗಗಳು ಚಟುವಟಿಕೆಯಿಂದ ಕಾರ್ಯನಿರ್ವಯಿಸುವಂತೆ ಮಾಡುತ್ತದೆ.
3. ಕಲ್ಲುಪ್ಪು ಸೇವಿಸಿದರೆ ದೇಹವು ನೀರನ್ನು ಹೀರಿಕೊಂಡು ಜೀರ್ಣಕ್ರಿಯೆ ಸರಾಗವಾಗಿ ನಡೆಯುವಂತೆ ಮಾಡುತ್ತದೆ.
4. ನಾನು ಉಸಿರಾಡುವ ಗಾಳಿಯಲ್ಲಿರುವ ಹಾನಿಕಾರಕ ಕಣಗಳನ್ನು ಹೋಗಲಾಡಿಸಲು ಸಹಾಯ ಮಾಡುತ್ತದೆ.
5. ಅಸ್ತಮಾ ಅಥವಾ ಉಸಿರಾಟದ ತೊಂದರೆ ಇರುವವರು ಅಡುಗೆಯಲ್ಲಿ ಕಲ್ಲುಪ್ಪು ಬಳಸುವುದು ಒಳ್ಳೆಯದು.
6. ಉಪ್ಪಿನಲ್ಲಿರುವ ಖನಿಜಾಂಶಗಳು ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.
7. ಕಲ್ಲುಪ್ಪಿನಲ್ಲಿರುವ ಖನಿಜಾಂಶಗಳು ಮಾನಸಿಕ ಒತ್ತಡವನ್ನು ಕಡಿಮೆ ಮಾಡುತ್ತದೆ.

ಬಿ ಪಾಸಿಟಿವ್

ವೈರತ್ವದಿಂದ ಸ್ನೇಹತ್ವದೆಡೆಗೆ

ಪ್ರತಿನಿತ್ಯ ಒಂದಲ್ಲ ಒಂದು ಕಲಹದ ನಿದರ್ಶನವನ್ನು ಕೇಳುತ್ತಲೇ ಇರುತ್ತೇವೆ. ರಾಜಕೀಯ ಪಕ್ಷ, ಧರ್ಮಗಳ ಸಂಘರ್ಷ, ಮೇಲಾಧಿಕಾರಿಗಳೊಂದಿಗೆ ಕಲಹದಲ್ಲಿ ಕಾಲ ವ್ಯಯವಾಗುತ್ತಿದೆ. ಇತ್ತೀಚೆಗಂತೂ ಟಿವಿಯಲ್ಲಿ ಬರುವ ಧಾರವಾಹಿಗಳು ಜಗಳಕ್ಕೆ ಉತ್ತೇಜನ ನೀಡುತ್ತಿವೆ. ಇದರಿಂದ ಎಷ್ಟೊ ಸಂಸಾರಗಳು ಒಡೆದುಹೋಗುತ್ತಿವೆ. ಒಂದು ಸಲ ಶ್ರೀರಾಮನ ಆಳ್ವಿಕೆ ಕಾಲದಲ್ಲಿ ಗೌತಮ ಋಷಿಗಳ ಸಮ್ಮುಖದಲ್ಲಿ ರಾಗಿ ಮತ್ತು ಭತ್ತದ ನಡುವೆ ಸಂಘರ್ಷ ಪ್ರಾರಂಭವಾಗಿ ಅದು ತಮ್ಮಷ್ಟಕ್ಕೆ ಮುಗಿಯದೆ ಶ್ರೀರಾಮನ ಹತ್ತಿರ ಜಗಳದ ವಿಷಯ ಪ್ರಸ್ತಾಪವಾಯಿತು. ಭತ್ತವು ನಾನು ಸರ್ವ ಕಾರ್ಯಗಳಲ್ಲಿ ನಾನೆ ಬೇಕು ನಾನಿಲ್ಲದಿದ್ದರೆ ಮಂಗಳ ಕಾರ್ಯವೆ ಆಗುವುದಿಲ್ಲ ಎಂದು ಬಿಗುಮಾನದಿಂದ ಹೇಳಿತು.

ರಾಗಿಯು ರೋಗಿಗೆ ಹಾಗೂ ಬಾಣಂತಿಗೆ ಪಥ್ಯವಾಗಿರುವೆ. ಬರಗಾಲದ ಸಮಯದಲಿ ಎಲ್ಲಿ ಅಡಗಿದ್ದೆ? ಎಂದು ಕ್ರೋಧದಿಂದ ಹೇಳಿತು. ಮಾತಿಗೆ ಮಾತು ಬೆಳೆದು ರಾಮನು ಅಹಂಕಾರ ತುಂಬಿದ ಈ ಧಾನ್ಯಗಳಿಗೆ ಆರು ತಿಂಗಳ ಸೆರೆವಾಸದ ಶಿಕ್ಷೆ ವಿಧಿಸಿದ. ಆರು ತಿಂಗಳ ನಂತರ ಭತ್ತ ಹುಳಗಳಿಂದ ತುಂಬಿ ಅಹಂಕಾರ ಇಳಿದು ಹೋಗಿತ್ತು ರಾಗಿ ಮಾತ್ರ ಹಾಗೆ ಇತ್ತು. ರಾಗಿ ಗೆದ್ದುದರ ಪರಿಣಾಮವಾಗಿ ಶ್ರೀರಾಮ ರಾಘವ ಎಂಬ ಹೆಸರು ಧರಿಸಿದ. ಜತೆಗೆ ಬಡವರ ಪರ ಇದ್ದನೆಂಬುದು ಜಗತ್ತಿಗೆ ಗೊತ್ತಾಯಿತು. ಹೀಗೆ ಜಗಳ ಅಂದಿನಕಾಲದಿಂದಲೂ ಇದೆ. ಇತ್ತೀಚಿಗಂತೂ ಜಗಳಗಳಲ್ಲಿ ಮಾರಾಮಾರಿ ನಡೆದು ಅಂಗಾಂಗಗಳನ್ನು ಕಳೆದುಕೊಂಡು ಜೈಲುಸೇರಿದವರು ಉಂಟು. ಇಂತಹ ಜಗಳ ನಮಗೆ ಬೇಕೆ ಅಷ್ಟಕ್ಕೂ ಇದರಿಂದ ಸಿಕ್ಕಿದ್ದೇನು? ಕೊನೆಗೆ ದಕ್ಕಿದ್ದೇನು? ಒಂದೆ ನೆಲದಲ್ಲಿ ಹುಟ್ಟಿ ಬಾಳುವ ನಾವು ಅಣ್ಣ ತಮ್ಮಂದಿರಂತೆ ಇರುವ ಬರುವ ಕಚ್ಚಾಟ ಕಿತ್ತಾಟ ಮಾಡುತ್ತ ವೈರಿಗಳಾಗಿ ಕಾಲ ಕಳೆಯುವ ಬದಲು ಇರುವಷ್ಟು ದಿನ ಸಮಾಜದಲ್ಲಿ ಒಂದಾಗಿ ಬಾಳೋಣ.

● ಶಂಕರಾನಂದ ಹೆಬ್ಬಾಳ

ಲವ್‌ಎವೆರಿ ಬಾಡಿ

ಅಳತೆ-ಅಂದಾಜಿಲ್ಲದೆ ಎಷ್ಟೋ ತಿಂಡಿ ತಯಾರಿಸಿ ಆನಂತರ ಅದನ್ನೇ ರೆಫ್ರೀಜರೇಟರ್‌ನಲ್ಲಿಟ್ಟು ಎರಡು ದಿನದ ನಂತರವೂ ತಿನ್ನುತ್ತಿರುವುದು ಇತ್ತೀಚೆಗೆ ಮಾಮೂಲೆನ್ನಿಸಿದೆ. ಅದರಲ್ಲೂ ಬೇಸಿಗೆ ಬಂತೆಂದರೆ ಸಾಕು ಕುಡಿಯುವುದಕ್ಕೂ ಫ್ರಿಡ್ಜ್‌ನಲ್ಲಿರುವ ತಣ್ಣಗಿನ ನೀರೇ ಆಗಬೇಕು. ಎಷ್ಟೋ ಜನ ಫ್ರಿಡ್ಜನಲ್ಲಿರುವ ಆಹಾರವನ್ನು ಬಿಸಿ ಮಾಡದೆ ಹಾಗೆಯೇ ತಿನ್ನುವುದನ್ನೂ ಕಾಣಬಹುದು. ಆದರೆ ವಾಸ್ತವವೆಂದರೆ ಹೀಗೆ ಆಹಾರವನ್ನು ಸೇವಿಸುವುದು ಆರೋಗ್ಯದ ದೃಷ್ಟಿಯಿಂದ ಖಂಡಿತ ಒಳ್ಳೆಯದಲ್ಲ. ೯ ರೆಫ್ರೀಜರೇಟರ್‌ನಲ್ಲಿಟ್ಟ ಆಹಾರದಲ್ಲಿ ಉಂಟಾಗುವ ರಾಸಾಯನಿಕ ಕ್ರಿಯೆ ನಾವು ತಿನ್ನುವ ಆಹಾರವನ್ನು ವಿಷಪೂರಿತವಾಗುವಂತೆ ಮಾಡಬಹುದು. ಅಥವಾ ಅದು ತನ್ನ ಮೂಲ ಸತ್ವವನ್ನು ಕಳೆದುಕೊಳ್ಳುವುದಕ್ಕೆ ಕಾರಣವಾಗಬಹುದು. ಆದ್ದರಿಂದ ತಂಗಳು ಪೆಟ್ಟಿಗೆಯಲ್ಲಿಟ್ಟ ಆಹಾರವನ್ನು ಸೇವಿಸಬೇಡಿ ಎಂದು ವೈದ್ಯರೂ ಸಲಹೆ ನೀಡುತ್ತಾರೆ.

● ದೇಹಭಿ'ಮಾಣಿ'

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, ಮೊದಲ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಮಳೆಯಲಿ ಜತೆಯಲಿ ರೈನಥಾನ್

ಮಳೆಗಾಲವೆಂದರೆ ಮನಸು ಅರಳುವ ಸಮಯ. ಹೊರಗೆ ಧೋ ಎಂದು ಸುರಿವ ಮಳೆಗೆ ಒಳಗೆ ಬೆಚ್ಚನೆ ಕುಳಿತು ಮಳೆಯನ್ನು ನೋಡುವ, ಧ್ಯಾನಿಸುವ ಮನಸ್ಸು ಮಳೆಯಲ್ಲಿ ಒಂದಿಡೀ ದಿನ ನೆನೆದು ನಡೆದು ಸಂಭ್ರಮಿಸುವವರನ್ನು ಹುಚ್ಚರೆಂದಾರೆಯೇ? ಹೌದು ಇದು ಒಂದು ತರಹದ ಹುಚ್ಚು ಸ್ವಲ್ಪ ಹೆಚ್ಚು ಅನ್ನುವ ರೀತಿಯಲ್ಲಿ ರೈನಥಾನ್ ಎಂಬ ಮಳೆ ನಡಿಗೆ ಕಾರ್ಯಕ್ರಮ ಮುಂಗಾರು ಮಳೆಯಲ್ಲಿ ಕುಣಿದು ಕುಪ್ಪಳಿಸಿ ಸಂಭ್ರಮಿಸುತ್ತದೆ.

ಮರಳಿ ಮಣ್ಣಿಗೆ
● ರಶ್ಮಿ ಗೋಖಲೆ

ಬೆಂಗಳೂರಿನ ಮಂದಿಗೆ ಮಲೆನಾಡು ಅಥವಾ ಕರಾವಳಿಯ ಮಳೆ ಕೊಂಚ ಹೊಸದೇ. ಬೆಂಗಳೂರಿನಲ್ಲಿ ಒಂದೆರಡು ತಾಸು ಮಳೆ ಬಂದರೂ ಅದು ಸಾಧಾರಣದಿಂದ ಭಾರೀ ಹಾಗೂ ಭಾರಿಯಿಂದ ಅತೀಭಾರಿ ಮಳೆಯೆಂದು ಪರಿಗಣಿಸಲಾಗುತ್ತದೆ. ಆದರೆ ಕರಾವಳಿ ಹಾಗೂ ಮಲೆನಾಡ ಮಳೆ ಜೂನ್ ನಲ್ಲಿ ಶುರುವಾದ ಮಳೆ ಅಕ್ಟೋಬರ್ ತಿಂಗಳವರೆಗೂ ಊರ್ಧ್ವಗತಿಯಲ್ಲೇ ಸಾಗುತ್ತದೆ. ಈ ಸಮಯದಲ್ಲಿ ಒಂದು ಕ್ಷಣ ಬಿಡದೆ ಸತತ ಮಳೆ ಸುರಿಯುತ್ತಲೇ ಇರುತ್ತದೆ. ಹಾಗಾಗಿ ಈ ರೈನಥಾನ್ ನಡೆಯುವುದು ಅಂತಹ ಹೆಚ್ಚು ಮಳೆ ಬರುವ ಪ್ರದೇಶಗಳಲ್ಲಿ ಮಾತ್ರ. ವರ್ಷಕ್ಕೆರಡು ಬಾರಿ ರೈನಥಾನ್ ತಂಡ ಮಳೆನಡಿಗೆ ಕಾರ್ಯಕ್ರಮವನ್ನು ಕಳೆದ 13 ವರ್ಷಗಳಿಂದ ಆಯೋಜಿಸಿಕೊಂಡು ಬರುತ್ತಿದೆ.

ಸುಮಾರು 100 ಜನ ಉತ್ಸಾಹಿ ಸಮಾನ ಮನಸ್ಕ ಆಸಕ್ತರ ತಂಡ ಮಳೆನಡಿಗೆಯಲ್ಲಿ ಹೆಜ್ಜೆ ಹಾಕುತ್ತಿದೆ.

ರೈನಥಾನ್ ಎಂದರೆ ಒಂದಿಡೀ ದಿನ ಕೊಡೆ, ರೈನ್ ಕೋಟ್, ಟೋಪಿ ಮುಂತಾದ ಯಾವುದೇ ಮಳೆ ರಕ್ಷಕಗಳನ್ನು ಬಳಸದೇ ಸುಮಾರು 15-20 ಕಿಮೀ ನಷ್ಟು ದೂರವನ್ನು ಒಂದಿಡೀ ದಿನ ಆಡುತ್ತಾ, ಕುಣಿಯುತ್ತಾ, ಕೇಕೆ ಹಾಕುತ್ತಾ ನಡೆಯಬೇಕು. ಇದರಲ್ಲಿ ಚಾರಣ ಇರುವುದಿಲ್ಲ, ಪೂರ್ವ ನಿಗದಿಯಾದ ಜನನಿಬಿಡವಲ್ಲದ ರಸ್ತೆಯಲ್ಲಿ ನಡೆಯುವಾಗ ಒಮ್ಮೊಮ್ಮೆ ಜಡಿ ಮಳೆ ಬರುತ್ತದೆ , ಆ ಮಳೆಯಲ್ಲಿ ನೆನೆದು ನಡೆಯುವಾಗ ಬೇರೆಲ್ಲ ಸಂಕಷ್ಟಗಳನ್ನು, ಚಿಂತೆಗಳನ್ನು ಪಕ್ಕಕ್ಕಿಟ್ಟು ಎಲ್ಲರೊಂದಿಗೆ ಬೆರೆತು ಹೋಗುವಾಗ ಒಂದು ದಿನದ ಮಟ್ಟಿಗಾದರೂ ನಾವು ನಮ್ಮ ಸ್ಥಾನಮಾನ ಮರೆತು ಎಲ್ಲರೂ ಒಂದೇ ಎಂಬ ಭಾವ ಬರುವಂತಹ ಅವಕಾಶವಿರುತ್ತದೆ.

ಕಲ್ಪನೆ ಹುಟ್ಟಿದ್ದಾದರೂ ಹೇಗೆ?

ಈ ಹಿಂದೆ 2011ರಲ್ಲಿ ಬೆಂಗಳೂರಿನ ಉದ್ಯಮಿ ಕಿಶೋರ್ ಪಟವರ್ಧನ್ ಅವರು ಬೈಕ್‌ನಲ್ಲಿ ನೆನೆದು ಮನೆಗೆ ಬರುವಾಗ ಹುಟ್ಟಿದ ಆಲೋಚನೆ ಇದು. ಮನೆ ಸೇರಿದ ಕೂಡಲೇ ತನ್ನ ಸ್ನೇಹಿತ ವಲಯಕ್ಕೆ ಒಂದಿಡೀ ದಿನ ಮಳೆಯಲ್ಲಿ ನೆನೆಯುತ್ತಾ ನಡೆದುಕೊಂಡು ಹೋಗುವ ಯೋಜನೆಯನ್ನು ಪ್ರಸ್ತಾಪಿಸಿದಾಗ ಒಂದು ಟಿಟಿ ತುಂಬುವಷ್ಟು ಜನ ತಯಾರಾದರು. ತಕ್ಷಣ ಕಿಶೋರ್ ಅವರು ತಮ್ಮ ತಂಡ ಕಟ್ಟಿಕೊಂಡು ರೈನಥಾನ್ ಎಂಬ ಹೆಸರಿನಿಂದ ಜೂನ್ 14, 2012 ರಂದು ಚಾರ್ಮಾಡಿ ಘಾಟಿಯ 23 ಕಿಮೀ ದೂರವನ್ನು ನಡೆದು ಕ್ರಮಿಸಿದರು. ಮುಂದೆ ಪ್ರತೀ ವರ್ಷ ಮಳೆಗಾಲದ ಸಮಯದಲ್ಲಿ ವರ್ಷಕ್ಕೆ ಎರಡು ಬಾರಿ ಬೇರೆ ಬೇರೆ ಸ್ಥಳಗಳಲ್ಲಿ ರೈನಥಾನ್ ಮಾಡುತ್ತಾ ಬಂದಿದ್ದಾರೆ.

ಪ್ರಕೃತಿಯ ಬಹು ಸಮೀಪದ ಸಾಂಗತ್ಯ ನಮಗೆ ಸಿಗುತ್ತದೆ. ಗದ್ದೆಗಳಲ್ಲಿ ಬಿತ್ತುವ ಮೊದಲು ಭೂಮಿ ಹದಗೊಳಿಸುವ ಪದ್ಧತಿಯಿರುತ್ತದೆ. ತಂಡ ಒಮ್ಮೆ ಗದ್ದೆಗಿಳಿದರೆ ಬಹುತೇಕ ಉಳುಮೆ ಪೂರೈಸಿದಂತೆಯೇ. ಕೆಸರುಗದ್ದೆಯ ಪಂದ್ಯಗಳು, ಆಟೋಟ ಅಪರಿಮಿತ ಸಂತೋಷವನ್ನು ನೀಡುತ್ತದೆ. ರೈನಥಾನ್‌ಗೆ ನೋಂದಣಿ ಮಾಡಿಕೊಳ್ಳುವವರ ಪಟ್ಟಿಯಲ್ಲಿ ಹೆಚ್ಚಿನವರು ಮಲೆನಾಡಿಗರು ಹಾಗೂ ಕರಾವಳಿ ವಾಸಿಗಳು.

ಪುಷ್ಕಳ ವನ ಭೋಜನ

ಬೆಳಗ್ಗೆ ಒಂದೆಡೆ ಸೇರಿ ಒಂದು ಚಿಕ್ಕ ಸಭಾ ಕಾರ್ಯಕ್ರಮವೂ ಇರುತ್ತದೆ. ಅಲ್ಲಿನ ಪ್ರತಿಭೆಗಳನ್ನು, ಸಾಮಾಜಿಕ ಕಾರ್ಯಕರ್ತರನ್ನು ಸನ್ಮಾನಿಸಿ ಗೌರವಿಸುವ ಒಂದು ಕಾರ್ಯಕ್ರಮವೂ ಇರುತ್ತದೆ. ನಂತರ ಬೆಳಗ್ಗಿನ ಉಪಹಾರ ಸೇವಿಸಿ ನಾವು ತಂಗಿದ ದೇವಸ್ಥಾನದ ಆವರಣದಲ್ಲಿ ಗಿಡಗಳನ್ನು ನೆಟ್ಟು ನಡಿಗೆ ಪ್ರಾರಂಭವಾಗುತ್ತದೆ. ನಂತರ ಚಹಾ ತಿಂಡಿ, ಮಧ್ಯಾಹ್ನ ಸಾತ್ವಿಕ ಪುಷ್ಕಳ ಭೋಜನ ವನದ ಮಧ್ಯದಲ್ಲಿ ಒದಗಿಸಲಾಗುತ್ತದೆ. ಎಲ್ಲರೂ ತಮ್ಮ ತಮ್ಮ ತಟ್ಟೆ ಲೋಟ ತಂದಿರಬೇಕು ಅದನ್ನು ರೈನಥಾನ್ ಒದಗಿಸುವ ಸಣ್ಣ ಚೀಲದಲ್ಲಿ ಕೊಂಡೊಯ್ಯಬೇಕು. ಏಕಬಳಕೆಯ ತಟ್ಟೆ ಲೋಟಗಳು ರೈನಥಾನ್‌ನಲ್ಲಿ ನಿಷಿದ್ಧ. ಮಳೆಯಲ್ಲಿ ನೆನೆದು ತೊಪ್ಪೆಯಾದಾಗ ಹೊಟ್ಟೆ ಕೂಡ ಹೆಚ್ಚೇ ಚುರುಗುಟ್ಟುತ್ತಿರುತ್ತದೆ. ಅಂತಹ ಸಮಯದಲ್ಲಿ ಪೂರೈಕೆಯಾಗುವ ಬಿಸಿ ಬಿಸಿ ಊಟ ಆಹಾ ಬಲ್ಲವರೇ ಬಲ್ಲರು ಅದರ ಮಜಾ!

ಪ್ರಕೃತಿಯ ಸಾಮೀಪ್ಯ

ನಡೆಯುವ ದಾರಿಯಲ್ಲಿ ಜಿಗಣೆಗಳು ಕೂಡ ರಕ್ತ ಹೀರಲು ಕಾಯುತ್ತಿರುತ್ತವೆ. ಅದಕ್ಕೆ ನಿಷ್ಕ್ರಿಯ ದಳವಾಗಿ ಪ್ರತಿಯೊಬ್ಬರಿಗೂ ಉಪ್ಪಿನ ಪೊಟ್ಟಣ ಕೊಡಲಾಗುತ್ತದೆ. ಪ್ರಕೃತಿಯಲ್ಲಿ ಸಿಗುವ ಕಲ್ಲು, ಬಿದ್ದಿರುವ ಮರದ ಎಲೆಗಳು, ಕೊಂಬೆಗಳು ಇವುಗಳೇ ಆಟದ ವಸ್ತುಗಳು. ಎಂದೋ ಆಡಿ ಮರೆತು ಹೋಗಿರುವ ಬಾಲ್ಯದ ಆಟಗಳು ಇಲ್ಲಿ ಮರುಜೀವ ಪಡೆಯುತ್ತವೆ. ನಡೆದು ಹೋಗುವ ದಾರಿ ಅರಣ್ಯಕ್ಕೆ ಸಮೀಪವಿರುವುದರಿಂದ ಆನೆ ಎದುರಾಗುವ ಅಪಾಯವಿರುತ್ತದೆ. ಅರಣ್ಯ ಇಲಾಖೆಗೆ ನಾವು ಮೊದಲೇ ಮಾಹಿತಿ ನೀಡಿರುತ್ತೇವೆ. ಹಾಗಾಗಿ ಅರಣ್ಯ ಇಲಾಖೆಯ ಸಿಬ್ಬಂದಿ ಕೂಡ ರೈನಥಾನ್ ಯಶಸ್ವಿಯಾಗಿ ನಡೆಯಲು ಕಾರಣರಾಗುತ್ತಾರೆ. ತಂಡದ ಉದ್ದೇಶ ಪ್ರಕೃತಿಯ ಸಾಮೀಪ್ಯ, ಮಳೆಯನ್ನು ಆನಂದಿಸಿ ಅನುಭವಿಸುವುದು. ಇದರ ಜೊತೆಗೆ ಬೀಜದುಂಡೆಗಳನ್ನು ಬಿತ್ತುವ ಒಂದು ಮುಖ್ಯ ಚಟುವಟಿಕೆ ರೈನಥಾನ್ ನಡೆಸುತ್ತದೆ. ತಂಡದಲ್ಲಿ ಶಿಸ್ತು ಬಹಳ ಮುಖ್ಯ.

ಒಂದು ಒಳ್ಳೆಯ ಹಿತ ಭಾವವನ್ನು ಒಳ್ಳೆಯ ಗುಂಪಿನೊಂದಿಗೆ ಬೆರೆತ ಅನುಭವವನ್ನು ರೈನಥಾನ್ ಒದಗಿಸುತ್ತದೆ. ಈ ಬಾರಿ ಜೂನ್ 22 ರಂದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ನೆರಿಯ ಗ್ರಾಮದ ಸಮೀಪ ಕೋಲೋಡಿ ಎಂಬ ಸ್ಥಳದಲ್ಲಿ ರೈನಥಾನ್ ನಡೆಯಲಿದೆ.

ಚಿಕ್ಕ ಸಂಗತಿಯೆಂದು ಬದಿಗೆ ಸರಿಸದಿರಿ

● **ಕೆ.ಟಿ .ಮಲ್ಲಿಕಾರ್ಜುನಯ್ಯ**, ಕೊರಟಗೆರೆ.

ನಮ್ಮ ಜೀವನದಲ್ಲಿ ಬಹು ಮುಖ್ಯ ಸಂಗತಿ ಯಾವುದೆಂದು ಹುಡುಕ ಹೊರಟರೆ ಹಲವಾರು ಸಂಗತಿಗಳು ನಮ್ಮ ಮನದಲ್ಲಿ ಮೂಡಿ ಮರೆಯಾಗುತ್ತವೆ. ಮಗ ಅಥವಾ ಮಗಳು ದುಬಾರಿ ಬೆಲೆಯ ಉಡುಗೊರೆಯನ್ನು ನೀಡಿದಾಗ ಉಂಟಾದ ಸಂತೋಷಕ್ಕಿಂತ, ಅದೇ ಮಕ್ಕಳು ಚಿಕ್ಕವರಿದ್ದಾಗ ಸ್ವತಂತ್ರವಾಗಿ ನಡೆಯಲು ಕಲಿತಾಗ, ತೊದಲು ನುಡಿಯಲ್ಲಿ ನಿಮ್ಮನ್ನು ಕರೆಯಲು ಪ್ರಾರಂಭಿಸಿದಾಗ, ಒಬ್ಬನೇ ಸ್ವತಂತ್ರವಾಗಿ ಈಜಲು ಅಣಿಯಾದಾಗ, ಉಂಟಾದ ಸಂತೋಷವನ್ನು ಯಾವುದೇ ಪದಗಳಲ್ಲಿ ಹಿಡಿದಿಡಲು ಸಾಧ್ಯವಿಲ್ಲ. ದೊಡ್ಡ ಸಂಗತಿಗಳಿಗಿಂತ ಚಿಕ್ಕ ಸಂಗತಿಗಳೇ ಬದುಕಿನ ಚಿರಸ್ಥಾಯಿ ನೆನಪುಗಳು.

ಪ್ರತಿದಿನದ ಚಿಕ್ಕ ಚಿಕ್ಕ ಸಕಾರಾತ್ಮಕ ಸಂಗತಿಗಳು, ಭವಿಷ್ಯತ್ಕಾಲದಲ್ಲಿ ಬದುಕನ್ನು ಕಟ್ಟಿಕೊಳ್ಳಲು ರೂಪಿಸಿಕೊಂಡ ಅಡಿಗಲ್ಲುಗಳಾಗಿರುತ್ತವೆ. ಚಿಕ್ಕ ಚಿಕ್ಕ ನಕಾರಾತ್ಮಕ ಸಂಗತಿಗಳು ತೊಂದರೆಗಳನ್ನು ಉಂಟುಮಾಡಿದರೂ ಅನುಭವದ ವ್ಯಾಪ್ತಿಯನ್ನು ವಿಸ್ತರಿಸುತ್ತವೆ. ಹಾಗೆ ಸುಮ್ಮನೆ ಯೋಚಿಸಿ, ಆಯಾ ದಿನದ ಅಡುಗೆ ಪಾತ್ರೆಗಳನ್ನು ತೊಳೆಯದೆ ಹಾಗೆ ಬಿಟ್ಟರೆ ಏನಾಗುತ್ತದೆ? ನಿತ್ಯ ಮನೆಯ ಕಸ ಹೊಡೆಯದೆ ಇದ್ದರೆ ಹೇಗಿರುತ್ತದೆ? ಅಷ್ಟೇ ಏಕೆ, ಹಲ್ಲುಜ್ಜದೆ ದಿನಪೂರ್ತಿ ಕಳೆಯಲಾದೀತೆ.. ಇವುಗಳೆಲ್ಲ ಹೆಚ್ಚಿನ ಸಮಯವನ್ನು ಕೇಳುವುದಿಲ್ಲ. ಐದ್ಹತ್ತು ನಿಮಿಷಗಳಲ್ಲಿ ಮುಗಿಯುವ ಕಾರ್ಯಗಳು. ನಿತ್ಯ ತಪ್ಪದೇ ಇವುಗಳನ್ನು ಅಚ್ಚುಕಟ್ಟಾಗಿ ಮಾಡಿದರೆ ದಿನಪೂರ್ತಿ ಮನಸ್ಸು ಪ್ರಫುಲ್ಲ.

ಉಪೇಕ್ಷೆ ಸಲ್ಲದು

ಚಿಕ್ಕ ಸಂಗತಿಗಳನ್ನು ಯಾವತ್ತೂ ಉಪೇಕ್ಷೆ ಮಾಡಬಾರದು. ಮನೆಯ ಯಾವುದೋ ನಲ್ಲಿಯಲ್ಲಿ ನೀರು ತೊಟ್ಟಿಕ್ಕುತ್ತಿರುವುದು, ಬಾಗಿಲ ಚಿಲಕ ಸರಿಯಾಗಿ ಬೀಳದೆ ಇರುವುದು, ಸ್ವಿಚ್ ಒತ್ತಿದರೆ ಸಾಕು ಗಿರ್ ಗಿರ್ ಎನ್ನುವ ಫ್ಯಾನ್, ನಿತ್ಯ ಜಂಜಡದಲ್ಲಿ ಅವನ್ನು ರಿಪೇರಿ ಮಾಡಿಸುವುದನ್ನು ಮುಂದೂಡುತ್ತಿರುತ್ತೇವೆ. ಇವುಗಳೆಲ್ಲ ಸರಿ ಹೋಗಲು ತಿಂಗಳು ವರ್ಷಗಳೇನು ಬೇಕಿರುವುದಿಲ್ಲ. ವಾರದ ರಜಾದಿನದಲ್ಲೊಮ್ಮೆ ಅಥವಾ ಯಾವುದಾದರೂ ಒಂದು ದಿನ ರಿಪೇರಿ ಮಾಡಿಕೊಳ್ಳಬಹುದಾದ ಸಂಗತಿಗಳು. ಆದರೆ ಮನಸ್ಸು ಮಾತ್ರ ಕುಂಟು ನೆಪಗಳನ್ನು ಒಡ್ಡುತ್ತಾ ಮುಂದೂಡುತ್ತಿರುತ್ತದೆ. ನೆಪಗಳನ್ನು ಬದಿಗೆ ಸರಿಸಬೇಕಷ್ಟೆ. ಒಮ್ಮೆ ರಿಪೇರಿಯಾದವೋ ಮನಸ್ಸಿಗೆ ಏನೋ ನೆಮ್ಮದಿ.

ಅದೇ ರೀತಿ ಚಿಕ್ಕ ಚಿಕ್ಕ ಕೆಟ್ಟ ದಿನಚರಿಗಳು, ಸಂಗತಿಗಳು, ನಮಗೆ ದೊಡ್ಡ ಮೊತ್ತದ ಕೆಡುಕನ್ನೇ ಉಂಟುಮಾಡಬಲ್ಲವು. ಬೆಳಿಗ್ಗೆ ತಡವಾಗಿ ಎದ್ದೇಳುವುದು, ಚಾದರಗಳನ್ನು ಹಾಗೆ ಬಿಡುವುದು, ಕನಿಷ್ಠ ದೈಹಿಕ ವ್ಯಾಯಾಮಗಳನ್ನು ಮಾಡದಿರುವುದು, ಪ್ರಾರಂಭದಲ್ಲಿ ದಿನವೊಂದಕ್ಕೆ ಎರಡು ಮೂರು ಬೀಡಿ ಅಥವಾ ಸಿಗರೇಟ್‌ಗಳ ಸಂಖ್ಯೆ ಮುಂದೆ ಚಟವಾಗಿ ಪರಿಣಮಿಸುವುದು, ಮನೆಯಲ್ಲಿ ಚಿಕ್ಕ ಪುಟ್ಟ ವಸ್ತುಗಳನ್ನು ಅಸ್ತವ್ಯಸ್ತವಾಗಿ ಹಾಗೆ ಬಿಡುವುದು.. ಪ್ರಾರಂಭದಲ್ಲಿ ಇವುಗಳ ಪರಿಣಾಮ ಏನೂ ಅನಿಸದಿರಬಹುದು. ಆದರೆ ಮುಂದೆ ಇವುಗಳಿಂದ ದೊಡ್ಡ ಹೊಡೆತವನ್ನೇ ತಿನ್ನಬೇಕಾಗಬಹುದು. ಜೀವನದಲ್ಲಿ ಇಂತಹವುಗಳ ಬಗ್ಗೆ ಜಾಗ್ರತೆಯಿಂದ ಇರುವುದು ಒಳಿತು.

ಗೆದ್ದಾಗ ಹತ್ತು ಕೈಗಳು ಚಪ್ಪಾಳೆ ತಟ್ಟುವುದಕ್ಕಿಂತ, ಸೋತಾಗ ಮೇಲೆತ್ತುವ ಎರಡು ಕೈಗಳು ಉತ್ತಮ ಎನ್ನುವಂತೆ ಯಾರೋ ಜೀವನದಲ್ಲಿ ಸೋತಾಗ, ಅವರಿಗೆ ಬೆನ್ನು ತಟ್ಟಿ ಪ್ರೋತ್ಸಾಹ ನೀಡುವುದು, ಹಸಿದವರಿಗೆ ಒಂದು ಹೊತ್ತಿನ ಊಟ ನೀಡುವುದು, ಗಿಡ ಮರಗಳಿಗೆ ನೀರುಣಿಸುವುದು, ವಿಕಲಚೇತನರನ್ನು ಸಮಾನವಾಗಿ ಕಾಣುವುದು, ದೂರದಲ್ಲಿರುವ ತಂದೆ ತಾಯಿಗಳೊಂದಿಗೆ ನಿತ್ಯ ಫೋನ್‌ನಲ್ಲಿ ಕ್ಷೇಮ ಸಮಾಚಾರಗಳನ್ನು ವಿಚಾರಿಸುವುದು, ಇವುಗಳಿಗೆಲ್ಲ ಆಗರ್ಭ ಶ್ರೀಮಂತರೇ ಆಗಬೇಕೆಂದೇನೂ ಇಲ್ಲ, ಹೆಚ್ಚಿನ ಸಮಯವೂ ಬೇಕಾಗಿಲ್ಲ. ಮಿಡಿಯುವ ಮನಸೊಂದಿದ್ದರೆ ಸಾಕು.

ಸಣ್ಣ ಬದಲಾವಣೆ ಗಮನಾರ್ಹ ಸುಧಾರಣೆ

ಅಭ್ಯಾಸಗಳು ಮತ್ತು ದಿನಚರಿಗಳಲ್ಲಿನ ಸಣ್ಣ ಬದಲಾವಣೆಗಳು ಆರೋಗ್ಯ ಮತ್ತು ಯೋಗಕ್ಷೇಮದಲ್ಲಿ ಗಮನಾರ್ಹ ಸುಧಾರಣೆಗಳಿಗೆ ಕಾರಣವಾಗುತ್ತದೆ.

ಒಳಿತು ಮಾಡು ಮನುಷ, ನೀನಿರೋದು ಮೂರು ದಿವಸ
ಉಸಿರು ನಿಂತ ಮೇಲೆ ನಿನ್ನ ಹೆಸರು ಹೇಳುತಾರ
ಹೆಣ ಅನ್ನುತಾರ ಮಣ್ಣಾಗ ಹೂಳುತಾರ
ಚಟ್ಟ ಕಟ್ಟುತಾರ ನಿನ್ನ ಸುಟ್ಟು ಹಾಕುತಾರ

ಎನ್ನುವ ಸಾಲುಗಳು, ಇರುವಷ್ಟು ದಿನ ಒಳ್ಳೆಯ ಕೆಲಸಗಳನ್ನು ಮಾಡುತ್ತಾ, ಹುಟ್ಟಿನಿಂದ ಚಟ್ಟದವರೆಗೆ ಸಾಧ್ಯವಾದಷ್ಟು ಪರಸ್ಪರ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತಾ ಜೀವನದ ಸಾರ್ಥಕತೆಯನ್ನು ಪಡೆಯುವಂತೆ ಪ್ರೇರೇಪಿಸುತ್ತವೆ.

ಹೋಲಿಕೆ ಎಂಬ ಕುಣಿಕೆ

ಇತರರೊಂದಿಗಿನ ಹೋಲಿಕೆ ಬಹುತೇಕ ಸಲ ನೋವನ್ನೇ ತರುವುದು. ಇದರಿಂದ ಹೊರ ಬರುವುದು ಹೇಗೆ ಎಂಬುದು ಹಲವರನ್ನು ಕಾಡುವ ಸಮಸ್ಯೆ.

ಮನಸ್ಸು ಮರ್ಕಟ
● ಜಯಶ್ರೀ.ಜೆ. ಅಬ್ಬಿಗೇರಿ

'ಪಕ್ಕದ ಮನೆ ಪದ್ಮ ಕೋಗಿಲೆ ತರ ಹಾಡುತ್ತಾಳೆ. ನೀನೂ ಇದ್ದಿಯಾ. ಹಾಡು ಭಾಷಣ ಇರದಿದ್ದರೆ ಅಷ್ಟೇ ಹೋಯ್ತು, ಅವನ ಥರಾ ಕ್ಲಾಸಿಗೆ ರ್‍ಯಾಂಕ್ ಬರೋಕು ಆಗಲ್ಲ. ಯಾವಾಗ ನೋಡಿದರೂ ಮನೆ ಮುಂದೆ, ಮೈದಾನದಲ್ಲಿ ಕ್ರಿಕೆಟ್ ಬ್ಯಾಟ್ ಹಿಡಿದು ಆಡ್ತಿಯಾ ಇದು ರಾಜುನ ಪೋಷಕ ಮಾತುಗಳು. ರಾಜುಗೂ ಇದನ್ನು ಕೇಳಿ ಕೇಳಿ ರೋಸಿ ಹೋಗುತ್ತದೆ. ನಾನು ಆಟದಲ್ಲಿ ಮುಂದಿರೋದು ಇವರಿಗೆ ಕಾಣುವುದೇ ಇಲ್ಲ ಎಂದು ಗೊಣಗಿಕೊಳ್ಳುತ್ತಾನೆ. ಮನಸ್ಥಿತಿ ಸರಿ ಇರದಿದ್ದಾಗ, ಹೌದಲ್ಲ ನನಗೆ ಚೆನ್ನಾಗಿ ಹಾಡೋಕೆ ಬರಲ್ಲ. ಭಾಷಣ ಮಾಡೋಕೆ ಬರಲ್ಲ. ಅಂಕ ಜಾಸ್ತಿ ಗಳಿಸಲು ಆಗಿಲ್ಲ. ನಾನು ಕೆಲಸಕ್ಕೆ ಬಾರದವನು ಎಂದೆನಿಸುತ್ತದೆ. ಇದು ನಮ್ಮಲ್ಲಿ ಬಹುತೇಕ ಜನ ಪಾಲಕರ ಮತ್ತು ಮಕ್ಕಳ ಸಮಸ್ಯೆ.

ಶಕ್ತಿಯಲ್ಲಿ ಅಶ್ವ ಶಕ್ತಿ ಪ್ರಸಿದ್ಧವಾದುದು. ಆದರೆ ಅದಕ್ಕೆ ಮರ ಹತ್ತುವ ಸ್ಪರ್ಧೆ ಇಟ್ಟರೆ ಅದು ನಪಾಸಾಗುತ್ತದೆ. ಸಲೀಸಾಗಿ ಈಜುವ ಮೀನಿಗೆ ಭೂಮಿಯ ಮೇಲೆ ಓಡುವ ಸ್ಪರ್ಧೆ ಇಟ್ಟರೆ ಸತ್ತೇ ಹೋಗುತ್ತದೆ. ನಮ್ಮಲ್ಲಿಯೂ ಪ್ರತಿಯೊಬ್ಬರೂ ಒಂದೊಂದರಲ್ಲಿ ವಿಶೇಷ ಪ್ರತಿಭೆಯನ್ನು ಹೊಂದಿರುತ್ತೇವೆ. ಈಗಾಗಲೇ ಗೆಲುವು ಸಾಧಿಸಿದವರನ್ನು ಕಂಡು ಅವರಂತಾಗಲು ಹೋದರೆ ಅವರಿಗೆ ಹೋಲಿಸಿಕೊಂಡು ಕೀಳರಿಮೆಯಿಂದ ಬಳಲುತ್ತೇವೆ. ಒಬ್ಬರಂತೆ ಒಬ್ಬರಿಲ್ಲ. ಹೀಗಾಗಿ ಪ್ರತಿಯೊಬ್ಬರಲ್ಲಿ ಹುದುಗಿರುವ ಪ್ರತಿಭೆಗಳು ಭಿನ್ನ ಭಿನ್ನ ಎಂಬುದನ್ನು ಮನದಟ್ಟು ಮಾಡಿಕೊಂಡರೆ ಹೋಲಿಕೆಯಾಚೆ ಬರುವುದು ಸುಲಭ.

ಕೊರತೆಯ ಭಯ ಬೇಡ

ಬೇರೆಯವರಲ್ಲಿರುವ ಪ್ರತಿಭೆ ನನ್ನಲ್ಲಿಲ್ಲ. ನನ್ನಲ್ಲಿ ಕೊರತೆಗಳ ಆಗರವೇ ಇದೆ. ಈ ಕೊರತೆಗಳ ಕಾರಣದಿಂದ ನನಗೇನೂ ಸಾಧಿಸಲಾಗುವುದಿಲ್ಲ ಎನ್ನುವ ಭ್ರಮೆಯಿಂದ ಹೊರ ಬನ್ನಿ. ಇತರರ ಜಾಣ್ಮೆ, ಸೌಂದರ್ಯ, ಸಿರಿವಂತಿಕೆಗೆ ಹೋಲಿಸಿಕೊಂಡು ಕೊರಗುವುದನ್ನು ನಿಲ್ಲಿಸಿ. ನಮ್ಮ ನಮ್ಮ ಮನೋವೃತ್ತಿಯಂತೆ ನಮ್ಮ ಇಚ್ಛೆಗಳಿರುತ್ತವೆ ಎನ್ನುತ್ತಾರೆ ಬಲ್ಲವರು. ಕೊರತೆಯ ನೀಗಿಸಿಕೊಳ್ಳುವುದರಲ್ಲಿ ತೊಡಗಿಕೊಂಡರೆ ಅದು ಸ್ವಾರ್ಥ ಎಂಬ ತಪ್ಪು ಕಲ್ಪನೆಯಲ್ಲಿ ಕಾಲ ಕಳೆಯಬೇಡಿ. 'ತನ್ನ ತನವನ್ನು ನೋಡಿಕೊಳ್ಳುವುದು ಸ್ವಾರ್ಥವಲ್ಲ. ಇತರರ ತನಕ್ಕೆ ದಕ್ಕೆ ತರುವುದೇ ಸ್ವಾರ್ಥ.' ಎಂಬುದನ್ನು ಅರಿತು ಮುನ್ನಡೆಯಿರಿ.

ಆಸಕ್ತಿ ಗುರುತಿಸಿಕೊಳ್ಳಿ

'ಒಂದೇ ಒಂದು ದೋಷವು ಎಲ್ಲ ಗುಣಗಳನ್ನು ಕೆಡಿಸಿಬಿಡುತ್ತದೆ' ಎಂಬ ವಾತ್ಸಾಯನ ಮುನಿಯ ನುಡಿಯಂತೆ. ಹೋಲಿಕೆಯಲ್ಲಿ ಬಿದ್ದು ಬಿಟ್ಟರೆ ನಮ್ಮೆಲ್ಲ ಸಾಮರ್ಥ್ಯ ಸರ್ವ ಶಕ್ತಿ ನಾಶವಾದಂತೆಯೇ ಸರಿ. ನಿಮಗೆ ಯಾವ ರಂಗದಲ್ಲಿ ಆಸಕ್ತಿ ಇದೆ ಎಂಬುದನ್ನು ಗುರುತಿಸಿ. ಬಡತನದ ಕಾರಣದಿಂದ ಶಾಲಾ ಶಿಕ್ಷಣ ಪಡೆಯದ ಬಾಲಕನೊಬ್ಬ ಹೊಟ್ಟೆ ಪಾಡಿಗಾಗಿ ಬುಕ್ ಬೈಂಡಿಂಗ್ ಕೆಲಸ ಮಾಡುತ್ತಿದ್ದ. ಬೈಂಡಿಂಗಿಗೆ ಬಂದ ಪುಸ್ತಕಗಳನ್ನು ಓದುವ ಗೀಳು ಬೆಳೆಸಿಕೊಂಡ. ಬರ ಬರುತ್ತ ಜ್ಞಾನದಲ್ಲಿ ತನಗಿರುವ ಆಸಕ್ತಿಯನ್ನು ಗುರುತಿಸಿಕೊಂಡು, ಕೊನೆಗೆ ಜಗತ್ತಿನ ಸುಪ್ರಸಿದ್ಧ ಜ್ಞಾನಿಯಾದ ಆತನೇ ಮೈಕೆಲ್ ಫಾರಡೆ. ಆಸಕ್ತಿಯನ್ನು ಗುರುತಿಸಿಕೊಳ್ಳಬೇಕೆಂದರೆ ನಿಮ್ಮನ್ನು ನೀವು ಅರ್ಥೈಸಿಕೊಳ್ಳಿ. ನಿಮ್ಮಲ್ಲಿರುವ ಬಲ ಮತ್ತು ಬಲೀನತೆಗಳನ್ನು ತಿಳಿದುಕೊಳ್ಳಿ. ನಿಮ್ಮ ನಿಜವಾದ ಆಸಕ್ತಿ ಏನು ಎಂದು ಕಂಡುಕೊಂಡು ಗುರಿ ನಿರ್ಧರಿಸಿ.

ನೀವು ನೀವಾಗಿರಿ

ಬೇರೆಯವರು ನಿಮ್ಮನ್ನು ಇಷ್ಟಪಡಬೇಕೆಂದು, ನಿಮ್ಮ ವ್ಯಕ್ತಿತ್ವಕ್ಕೆ ಹೊಂದದ ಬದಲಾವಣೆಗಳಿಗೆ ಮುಂದಾಗಬೇಡಿ. ನಿಮ್ಮ ಕುಟುಂಬದ ಆಚರಣೆಗಳು, ಪದ್ದತಿಗಳು, ಸತ್ಸಂಪ್ರದಾಯಗಳು, ಹಬ್ಬ ಹರಿದಿನಗಳು, ವ್ರತಾಚರಣೆಗಳು ಮೌಢ್ಯತೆಯಿಂದ ಮುಕ್ತವಿದ್ದಾಗ ಅವುಗಳನ್ನು ಬದಲಾಯಿಸುವುದರಿಂದ ಅರ್ಥವಿಲ್ಲ. ನಿಮ್ಮ ದೇಹಕ್ಕೆ ಕಾಲಮಾನಕ್ಕೆ ಏನು ಸೂಕ್ತವೋ ಅದನ್ನೇ ಧರಿಸಿ. ಎಲ್ಲೆಲ್ಲಿ ಯಾವುದು ಒಳ್ಳೆಯದಿದೆಯೋ ಅದನ್ನು ನಿಮ್ಮದಾಗಿಸಿಕೊಳ್ಳಿ. ಆದರೆ ಸಂಪೂರ್ಣವಾಗಿ ನಿಮ್ಮತನವನ್ನು ಬಿಟ್ಟುಕೊಡಬೇಡಿ.

ಅವಮಾನಗಳಿಗೆ ಹೆದರದಿರಿ

ಬಹು ಅಂಗವೈಕಲ್ಯವನ್ನು ಹೊರೆ ಎಂದುಕೊಳ್ಳದೇ ಸಾಧನೆಗೈದ ಹೆಲೆನ್ ಕೆಲ್ಲರ್, ಬಡತನವನ್ನು ಬೆನ್ನಿಗಂಟಿಸಿಕೊಂಡು ಹುಟ್ಟಿದ ಅಬ್ರಹಾಂ ಲಿಂಕನ್ ಅಧ್ಯಕ್ಷನಾಗಲು ಪಟ್ಟ ಅವಮಾನಗಳು ಅಷ್ಟಿಷ್ಟಲ್ಲ. ಆದರೂ ತನ್ನಂತೆ ಇರುವವರ ಜತೆ ತಮ್ಮನ್ನು ಹೋಲಿಸಿಕೊಂಡು ಅಮೂಲ್ಯ ಜೀವನ ವ್ಯರ್ಥವಾಗಿಸಿಕೊಳ್ಳಲಿಲ್ಲ. ಬದಲಾಗಿ ಅವಮಾನಗಳಿಗೆ ಸೆಡ್ಡು ಹೊಡೆದು ಗೆದ್ದರು. ಹೆನ್ರಿ ಫೋರ್ಡ್ ಕಾರು ಕಂಡು ಹಿಡಿಯುವ ಸಂದರ್ಭದಲ್ಲಿ, ಒಬ್ಬ ಹಳ್ಳಿಗ ಆತನನ್ನು ಉದ್ದೇಶಿಸಿ,'ಕುದುರೆಗಳೇ ಇಲ್ಲದ ಚಕ್ರದ ರಥವನ್ನು ಎಳೆಯಬೇಕು ಅಂದುಕೊಂಡಿದ್ದಿಯಾ? ಶ್ರೀಮಂತ ಆಗೋ ಹುಚ್ಚು ಕನಸು ಕಾಣ್ತಿದಿಯಾ?' ಎಂದು ವ್ಯಂಗ್ಯವಾಗಿ ಕೇಳಿದನಂತೆ. ಅದಕ್ಕೆ ಫೋರ್ಡ್ 'ನಾನಷ್ಟೇ ಅಲ್ಲ ಸಾವಿರಾರು ಜನರನ್ನು ಶ್ರೀಮಂತರನ್ನಾಗಿ ಮಾಡಬೇಕು ಅಂತ ಕನಸು ಕಾಣ್ತಿದಿನಿ.' ಅಂತ ಗಟ್ಟಿಯಾದ ಧ್ವನಿಯಲ್ಲಿ ಉತ್ತರಿಸಿದನಲ್ಲದೇ ತಾನು ಅಂದಂತೆ ಸಾಧಿಸಿದ.

ಹೋಲಿಕೆಯ ಗೋರಿಯಲ್ಲಿ ಹೂತುಕೊಳ್ಳದೇ ನೈಜತೆಯನ್ನು ಅರ್ಥೈಸಿಕೊಂಡು ನಡೆದರೆ ಚೆಂದದ ಜೀವನವೊಂದು ನಾವು ನಡೆಯುವ ದಾರಿಯಲ್ಲಿ ಮುಗುಳ್ನಗುತ್ತದೆ.